# ಬೊಳುವಾರು ಮಹಮದ್ ಕುಂಞಿ

ಕರಾವಳಿ ಕರ್ನಾಟಕದ ಪುತ್ತೂರು ಪಟ್ಟಣದ ಭಾಗವೇ ಆಗಿರುವ 'ಬೊಳುವಾರು' ಎಂಬಲ್ಲಿ ಅಕ್ಟೋಬರ್ 1951 ರಂದು ಹುಟ್ಟಿದ ಬೊಳುವಾರು ಮಹಮದ್ ಕುಂಞಯವರು, ಮೈಸೂರು ವಿಶ್ವವಿದ್ಯಾಲಯದಿಂದ ಕುವೆಂಪು ಬಂಗಾರದ ಪದಕದೊಂದಿಗೆ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಇತಿಹಾಸದಲ್ಲಿ, ಯಾವುದೇ ಭಾಷೆಯ ಸೃಜನಶೀಲ ಗದ್ಯ ಕೃತಿಗಳಿಗಾಗಿ ಎರಡು ಬಾರಿ ಪ್ರಶಸ್ತಿ ಪಡೆದ ದೇಶದ ಏಕೈಕ ಸಾಹಿತಿಯೆಂಬ ದಾಖಲೆ ಬರೆದವರು. ಕನ್ನಡದ ಮಕ್ಕಳ ಸಾಹಿತ್ಯಕ್ಕೆ 'ಕೇಂದ್ರ ಸಾಹಿತ್ಯ ಅಕಾಡೆಮಿ'ಯಿಂದ ಮೊತ್ತಮೊದಲ ಪ್ರಶಸ್ತಿಯನ್ನು ತಂದುಕೊಟ್ಟವರೂ ಇವರೇ, ಮಾತ್ರವಲ್ಲ; ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಗೌರವ ಪ್ರಶಸ್ತಿಯೊಂದಿಗೆ ಮೂರು ಪ್ರಶಸ್ತಿಗಳನ್ನು ಗಳಿಸಿದ ಇವರು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯಿಂದಲೂ ಸನ್ಮಾನಿತರು. ಕಲ್ಕತ್ತಾದ ಭಾರತೀಯ ಭಾಷಾ ಸನ್ಮಾನ್, ದೆಹಲಿಯ ಕಥಾ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಕಾರಂತ ಬಾಲವನ ಪ್ರಶಸ್ತಿ, ಬಸವರಾಜ ಕಟ್ಟೀಮನಿ ಪ್ರಶಸ್ತಿ..., ಹೀಗೆ ಹತ್ತಾರು ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟವರು. ಇವರ ಕತೆ, ಚಿತ್ರಕತೆಗಳಿಗೆ ರಾಷ್ಟ್ರ ಮತ್ತು ರಾಜ್ಯಮಟ್ಟದ ಚಲನಚಿತ್ರ ಪ್ರಶಸ್ತಿಗಳು ಲಭಿಸಿವೆ. 'ಹೂಂಕರಿಸಿ ಓದುವವುಗಳ ಆಣೆ, ಕಿಡಿ ಹಾರಿಸುತ್ತಾ ಹೋಗುವವುಗಳ ಆಣೆ, ಪ್ರಾತಃಕಾಲದಲ್ಲೆ ಹಲ್ಲೆ ನಡೆಸುವವುಗಳ ಆಣೆ, ಭೂಮಿಯ ಮೇಲೆ ಒಡೆತನ ಮತ್ತು ಅಧಿಕಾರಕ್ಕಾಗಿ ಕಣ್ಣು ಕಿವಿಗಳನ್ನಷ್ಟೇ ಪ್ರಮಾಣವಾಗಿರಿಸಿಕೊಂಡು ನಿನ್ನ ದಿವ್ಯವಾಣಿಯನ್ನು ಅವಿವೇಕದಿಂದ ವಿಚಾರರಹಿತವಾಗಿ ಉದ್ಧರಿಸುವವರನ್ನು ನರಕದ ಕೆಂಡರಾಶಿಯ ಮೇಲೆ ನಿಲಿಸು' ಎಂಬ ಹಕ್ಕೊತ್ತಾಯದೊಂದಿಗೆ ಕನ್ನಡ ಗದ್ಯ ಸಾಹಿತ್ಯಕ್ಕೆ ಮುಸ್ಲಿಮ್ ಬದುಕನ್ನು ಮೊತ್ತ ಮೊದಲ ಬಾರಿಗೆ ಪರಿಚಯಿಸಿದ ಇವರ ಬರಹಗಳಲ್ಲಿ, ಮನುಷ್ಯನಿರ್ಮಿತ ಎಲ್ಲ ಧರ್ಮಗಳ ಎಲ್ಲೆ ಮೀರುವ ಚಿಂತನೆಗಳಿರುತ್ತವೆ.

ಅಂಕಿತ ಪುಸ್ತಕದ 827ನೆಯ ಪ್ರಕಟಣೆ

# ಆಕಾಶಕ್ಕೆ ನೀಲಿ ಪರದೆ

ಕತೆಗಳು

**ಬೊಳುವಾರು ಮಹಮದ್ ಕುಂಞಿ**

ಅಂಕಿತ ಪುಸ್ತಕ
(ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು)
53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ
ಬೆಂಗಳೂರು – 560 004. ☎ 080 – 2661 7100 / 2661 7755
Email: ankitapustaka@gmail.com | Website: www.ankitapustaka.com

**AKASHAKKE NEELI PARADE** — A collection of Short Stories by Bolwar Mahamad Kunhi, 'Monu' B-4-016, Kavery Block, NGV Koramangala, Bengaluru - 560 047, Mob.: 87628 00786, Published by Ankita Pustaka, 53, Gandhi Bazar Main Road, Basavanagudi, Bangalore - 560 004.
☎ 080 - 2661 7100 / 2661 7755

Size : Demy 1/8 Pages: 152

Paper Used: 70 GSM N.S. Maplitho

© ಜುಬೇದಾ

ಪ್ರಥಮ ಮುದ್ರಣ : 1992
ದ್ವಿತೀಯ ಮುದ್ರಣ : 1995
ತೃತೀಯ ಮುದ್ರಣ : 1999
ನಾಲ್ಕನೆಯ ಮುದ್ರಣ : 2021

ಬೆಲೆ : ರೂ. 150/–

ಮುಖಪುಟ : ಅರುಣ್ ಕುಮಾರ್

ಅಕ್ಷರ ಜೋಡಣೆ : ಸತ್ಯಮ್ ಗ್ರಾಫಿಕ್ಸ್

ISBN : 978–93–92230–05–9

ಪ್ರಕಾಶಕರು

ಅಂಕಿತ ಪುಸ್ತಕ
(ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು)
53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ
ಬೆಂಗಳೂರು – 560 004. ☎ 080 – 2661 7100 / 2661 7755
Email: ankitapustaka@gmail.com | Website: www.ankitapustaka.com

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080 - 26742233

ಪ್ರೀತಿಯ ಕಾಮಧೇನು
**ಡಿ.ಕೆ. ಶ್ಯಾಮಸುಂದರರಾಯ**ರಿಗೆ

## ಕೃತಜ್ಞತೆಗಳು

'ಮಾರುಕಟ್ಟೆಯಲ್ಲಿ ಈ ಕೃತಿಯ ಪ್ರತಿಗಳು ಸಿಗುತ್ತಿಲ್ಲ' ಎಂದು ಆರೋಪಿಸುತ್ತಿರುವವರನ್ನು ಸಂತೈಸಲು, ನಾಲ್ಕನೇ ಬಾರಿಗೆ ಪ್ರಕಟಿಸುತ್ತಿರುವ 'ಅಂಕಿತ ಪುಸ್ತಕ'ದ ಗೆಳೆಯ ಕಂಬತ್ತಳ್ಳಿ – ಅವರಿಗೆ,

ಸುಂದರವಾದ ಮುಖಚಿತ್ರ ಬರೆದ ಕಲಾವಿದ ಅರುಣ್ ಕುಮಾರ್ ಅವರಿಗೆ,

ಚಂದವಾಗಿ ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್‌ನ ಕೃಷ್ಣಮೂರ್ತಿ ಗೆಳೆಯರಿಗೆ ಹಾಗೂ ನನ್ನನ್ನು ಇನ್ನೂ ಓದಬಯಸುವ ನಿಮಗೆ...

## ಕಥೆಗಳು

**11 / ಆಖಿರತ್**

**28 / ಜನ್ನತ್**

**48 / ಇದ್ದತ್**

**69 / ದೃಷ್ಟಿ**

**84 / ಇಮಾರತ್**

**96 / ಇಬಾದತ್**

**128 / ಆಕಾಶಕ್ಕೆ ನೀಲಿ ಪರದೆ**

# ಆಖಿರತ್

**'ಸಂಶಯಾತೀತವಾದ ಆ ಒಂದು ದಿವಸ**
**ಅವರೆಲ್ಲರನ್ನೂ ನಾವು ಒಟ್ಟುಗೂಡಿಸುವಾಗ**
**ಅಂದಿನ ಸ್ಥಿತಿ – ಅವಸ್ಥೆ ಏನಿರಬಹುದು!**
**ಅಂದು ಪ್ರತಿಯೊಬ್ಬರ ಆತ್ಮಕ್ಕೂ**
**ಅದರ ದುಡಿತದ ಪುಣ್ಯಫಲವನ್ನು**
**ಪೂರ್ಣವಾಗಿ ಕೊಡಲಾಗುವುದು.**
**ಏನೇನೂ ಅನ್ಯಾಯವಾಗದು.'**

**ದಿವ್ಯವಾಣಿ – 3 : 25**

ಕೊನೆಗೊಮ್ಮೆ 'ಸೂರ್' ಮೊಳಗಿತು. ಭೂಮಿ ಆಕಾಶಗಳು ತತ್ತರಿಸಿ ಹೋಗುವಷ್ಟು ಭೀಕರ ಸಪ್ಪಳದೊಂದಿಗೆ ಸೂರ್ಯ ಚಂದ್ರರು ಒಂದಾದರು. ಮೊದಲೇ ತೀರ್ಮಾನ ವಾಗಿದ್ದಂತೆ ಗಾಳಿಯು ತನ್ನ ಚಲನೆಯನ್ನು ನಿಲ್ಲಿಸಿತು. ಭೂಮಿ ಮತ್ತು ಆಕಾಶಗಳಲ್ಲಿ ಇದ್ದವರೆಲ್ಲರೂ ಕ್ಷಣಮಾತ್ರದಲ್ಲಿ ಪ್ರಜ್ಞಾಶೂನ್ಯರಾದರು.

ಪ್ರಭುವಿನ ಕರುಣೆ ಅಪಾರವಾದದ್ದು, ಮತ್ತೊಮ್ಮೆ 'ಸೂರ್' ಮೊಳಗಿತು. ಬಿದ್ದಿದ್ದ ವರೆಲ್ಲರೂ ಎದ್ದು ಕುಳಿತರು; ಎದ್ದು ನಿಂತು ಕಣ್ಣು ಹೊಸೆದುಕೊಳ್ಳುತ್ತಾ ಕೆಳಗೆ ನೋಡಿದರು. ಅವರು ಪ್ರೀತಿಸಿದ್ದ, ಜಗಳಾಡಿದ್ದ ಭೂಮಿ ಇದೀಗ ಸ್ವಯಂ ಪ್ರಕಾಶದಿಂದ ಪ್ರಜ್ವಲಿಸುತ್ತಿತ್ತು. ಅದಷ್ಟರಲ್ಲಿಯೇ ಎಲ್ಲರೂ ತಮ್ಮ ಸಮಾಧಿಗಳಿಂದ ಎದ್ದು ಪ್ರಳಯ ಕ್ಷೇತ್ರಕ್ಕೆ ಬಂದು ತಲುಪಿದ್ದರು. ಕೊಳೆತು ಮಣ್ಣಾದವರು. ಉರಿದು ಬೂದಿಯಾದವರು, ಒಣಗಿ ಪುಡಿ

ಯಾದವರು, ಸೀದು ಕರಕಲಾದವರು, ಕರಗಿ ದ್ರವವಾದವರು ಎಲ್ಲರೂ ಮತ್ತೊಮ್ಮೆ ಎದ್ದು ಬಂದಿದ್ದರು.

'ಸರ್ವ ಸ್ತುತಿಗಳೂ ಸರ್ವಲೋಕಗಳ ಪ್ರಭುವಿಗೆ' ಎಂಬ ಜಯಘೋಷ ಏಳು ದಿಕ್ಕುಗಳಿಂದಲೂ ಕೇಳಿ ಬರುತ್ತಿತ್ತು. ಜಯಘೋಷ ಹೇಳುತ್ತಿದ್ದ ಮಲಾಯಿಕರು ವಿಶ್ವ ಸಿಂಹಾಸನದ ಎದುರು ಅರ್ಧ ಚಂದ್ರಾಕೃತಿಯಲ್ಲಿ ನಿಂತಿದ್ದರು. ವಿಶ್ವಸಿಂಹಾಸನವು ನಕ್ಷತ್ರದಂತೆ ಹೊಳೆಯುತ್ತಿತ್ತು.

ಭೂಮಿಯ ಮೇಲೆ ಜನಿಸಿದ ಮೊದಲ ಮಾನವನಿಂದ ಆರಂಭಗೊಂಡು ಅಂತಿಮ ಪ್ರಳಯದ ದಿನದವರೆಗೆ ಬದುಕಿದ್ದ ಎಲ್ಲರೂ ಏಳು ತಂಡಗಳಾಗಿ ಒಡೆದು ನಿಂತಿದ್ದರು. ಹೊಸದಾಗಿ ಬಂದು ಸೇರುತ್ತಲೇ ಇದ್ದ ಮನುಷ್ಯರ ಗುಂಪುಗಳನ್ನು ಮಲಾಯಿಕರ ಸ್ವಯಂಸೇವಕ ಪಡೆಯವರು ಕ್ಷಣಮಾತ್ರದಲ್ಲಿ ವಿಂಗಡಿಸಿ ವಿಶ್ವಸಿಂಹಾಸನದತ್ತ ಮುಖಮಾಡಿ ನಿಲ್ಲಿಸುತ್ತಿದ್ದರು. ಬಂದು ಸೇರಿದವರಲ್ಲಿ ಎಳೆಯ ಮಕ್ಕಳಿದ್ದರು, ಬೆಳೆದ ಬಾಲಕರಿದ್ದರು, ಕನ್ಯೆಯರಿದ್ದರು, ಮದುವಣಿಗರಿದ್ದರು, ವಿಧವೆಯರಿದ್ದರು, ಮುದಿಯರಿದ್ದರು. ಪ್ರತಿಯೊಬ್ಬ ಮನುಷ್ಯನ ಜತೆಯಲ್ಲೂ ಅವರು ಭೂಮಿಯಲ್ಲಿ ಮಾಡಿದ್ದ ಸರ್ವಕಾರ್ಯಗಳನ್ನು ಬರೆದಿರಿಸಿಕೊಂಡಿದ್ದ ಇಬ್ಬಿಬ್ಬರು ಮಲಾಯಿಕರು ನಿಂತಿದ್ದರು. ಎಳೆಯ ಮಕ್ಕಳ ಬಲ–ಎಡಗಳಲ್ಲಿ ನಿಂತಿರುವ ಮಲಾಯಿಕರು ಬರವಣಿಗೆಯ ಕಡತಗಳನ್ನು ತಮ್ಮ ಕೈಗಳಲ್ಲಿ ಹೂಗೊಂಚಲುಗಳಂತೆ ಹಿಡಿದುಕೊಂಡಿದ್ದರೆ, ಕೆಲವು ಮುದಿಯರ ಜತೆಯಲ್ಲಿ ನಿಂತಿದ್ದ ಮಲಾಯಿಕರ ಬೆನ್ನ ಮೇಲೆ ಕೆಂಪು ಕಡತಗಳ ಸುರುಳಿ, ಹೆಬ್ಬಾವಿನಂತೆ ಕಾಣಿಸುತ್ತಿದ್ದವು.

ಸುಮಾರು ಏಳು ದಶಲಕ್ಷ, ಏಳು ಸಹಸ್ರಕೋಟಿ ವರ್ಷಗಳಿಗೂ ಹಿಂದೆ ಮುತ್ತುಪ್ಪಾಡಿ ಅಂಚೆ ಕಚೇರಿಯ ಹಿಂಭಾಗದ ಹಂಚಿನ ಮನೆಯೊಂದರಲ್ಲಿ ವಾಸಿಸಿದ್ದ 'ಸಂಜೀವ', ಮತ್ತವನ ಹೆಂಡತಿ 'ಗಿರಿಜ'; ಸಂಜೀವನ ಹಿತ್ತಲಲ್ಲಿ ಬಾಡಿಗೆ ಮನೆಯಲ್ಲಿ ಬದುಕಿದ್ದ ಕಲ್ಲುಹೊಳೆಯ ಅತ್ತರ್ ವ್ಯಾಪಾರಿ 'ಅದ್ದು' ಮತ್ತವನ ಪತ್ನಿ 'ಸಲ್ಮಾ' ಹಾಗೂ ಗುಡ್ಡೆ ಶಾಲೆಯ ರಸ್ತೆಯಲ್ಲಿ ಜೀನಸು ಭಂಡಸಾಲೆ ನಡೆಸುತ್ತಿದ್ದ 'ಸೀದಿ' ಸಾಹುಕಾರರು – ಈ ಐದೂ ಮನುಷ್ಯರು ಸಹಜವಾಗಿ ಒಂದೇ ಗುಂಪಿನಲ್ಲಿ ನಿಂತಿದ್ದರು. ಇವರೆಲ್ಲರ ಬಲ–ಎಡ ಭುಜಗಳ ಬಳಿ ನಿಂತಿದ್ದ ಐದು ಜೋಡಿ ಮಲಾಯಿಕರು, ಕಡತಗಳನ್ನು ಬೆನ್ನ ಮೇಲೆ ಹೊತ್ತುಕೊಂಡು ತಮ್ಮ ಸರದಿಗಾಗಿ ಕಾಯುತ್ತಿದ್ದರು.

ಎಲ್ಲರ ಕಣ್ಣುಗಳೂ ಮೋಡಗಳತ್ತ ನೆಟ್ಟಿದ್ದವು. ಯಾವುದೇ ಕ್ಷಣದಲ್ಲೂ ಮೋಡಗಳ ನಡುವೆ ದಿವ್ಯಜ್ಯೋತಿ ಕಾಣಿಸಬಹುದಾಗಿತ್ತು. ಪ್ರಜ್ವಲವಾದ ಹಸುರು ಬೆಳಕಿನ ನಡುವಿನಿಂದ ಮೋಡಗಳ ಕೊಡೆಯೊಡನೆ, ಯಾವುದರ ಸಹಾಯವಿಲ್ಲದೆಯೂ ಇಳಿದು ಬರಲಿರುವ ಪ್ರಭುವನ್ನು ಕಾಣುವ ಮಹಾ ಸೌಭಾಗ್ಯಕ್ಕಾಗಿ ಎಲ್ಲರೂ ಕಾತರಿಸುತ್ತಿದ್ದರು.



ಧರ್ಮಗ್ರಂಥದಲ್ಲಿ ಮುಂದಾಗಿಯೇ ತಿಳಿಸಲಾಗಿತ್ತು : ಅಂತಿಮ ಪ್ರಳಯದ ಬಳಿಕ, ಪ್ರಜ್ಞಾಶೂನ್ಯರಾಗುವ ಪ್ರತಿಯೊಬ್ಬರನ್ನೂ ಪುನರುತ್ಥಾನಗೊಳಿಸಿ ಅವರು ಭೂಮಿಯಲ್ಲಿ ನಡೆಸಿರುವ ಕೃತ್ಯಗಳಿಗೆಲ್ಲ ಪ್ರಭು ತೀರ್ಮಾನ ಹೇಳುವವನಿದ್ದನು. ಹಾಗೆಂದು ತನ್ನ ಸೃಷ್ಟಿಯ ಚರಾಚರ ಜೀವಿಗಳ ಎಲ್ಲ ಕೃತ್ಯಗಳೂ ಅವನಿಗೆ ಮುಂದಾಗಿಯೇ ತಿಳಿದಿರುವುದಿಲ್ಲವೆಂದು ಭಾವಿಸಬಾರದು. ಆತನಿಗೆ ಎಲ್ಲವೂ ತಿಳಿದಿರುವುದಾದರೂ ಅಂತಿಮ ತೀರ್ಮಾನ ಪ್ರಕಟಿಸಿದ ಬಳಿಕ ಯಾರೊಬ್ಬರೂ 'ತನಗೆ ನ್ಯಾಯ ಸಿಗಲಿಲ್ಲ' ಎಂದು ದೂರುವುದನ್ನು ಆತ ಬಯಸಲಾರ. ಅದಕ್ಕಾಗಿಯೇ ಪ್ರತಿಯೊಬ್ಬ ಮನುಷ್ಯನಿಗೂ ಜೀವ ತುಂಬಿ ಭೂಮಿಗೆ ಕಳುಹಿಸುವಾಗಲೇ, ಜತೆಯಲ್ಲಿ ತಲಾ ಇಬ್ಬರು ಮಲಾಯಿಕರನ್ನೂ ಕಳುಹಿಸಿದ್ದನು. ಭೂಮಿಯ ಮೇಲೆ ಜೀವಿಸುವ ಪ್ರತಿಯೊಬ್ಬ ಮನುಷ್ಯನ ಬಲ–ಎಡ ಭುಜಗಳ ಬಳಿಯಲ್ಲಿ ಸದಾ ಕಾವಲು ನಡೆಸುವ ಈ ಜೋಡಿ ಮಲಾಯಿಕರು, ಮನುಷ್ಯನು ಭೂಮಿಯಲ್ಲಿ ಮಾಡುವ ಪ್ರತಿಯೊಂದು ಕೃತ್ಯವನ್ನೂ ತಮ್ಮ ಕಡತಗಳಲ್ಲಿ ಬರೆದಿರಿಸಿಕೊಳ್ಳುತ್ತಿದ್ದರು.

ಪ್ರತಿಯೊಬ್ಬರನ್ನೂ ಪ್ರಭು ಪ್ರತ್ಯೇಕವಾಗಿ ವಿಚಾರಣೆಗೆ ಗುರಿಪಡಿಸಲಿದ್ದನು. ಆಗ 'ಬಲ' ಮತ್ತು 'ಎಡ' ಮಲಾಯಿಕರು ತಮ್ಮ ಕಡತಗಳಲ್ಲಿ ದಾಖಲಿಸಿರುವ ಎಲ್ಲ ವಿವರಗಳನ್ನೂ ಓದಬೇಕಾಗುತ್ತದೆ. ಅವುಗಳನ್ನು ಯಾರೂ ಸುಳ್ಳು ಎನ್ನಲು ಸಾಧ್ಯವಿರಲಿಲ್ಲ. ಎಲ್ಲ ಸಾಕ್ಷಿಗಳೂ ಕ್ಷಣಮಾತ್ರದಲ್ಲಿ ವಿಶ್ವಸಿಂಹಾಸನದ ಎದುರು ಪ್ರತ್ಯಕ್ಷವಾಗಲಿದ್ದವು. ಮನುಷ್ಯನನ್ನು ದಾರಿ ತಪ್ಪಿಸಲು ಪ್ರಯತ್ನಿಸಿದ ಸೈತಾನನೂ ಅಲ್ಲಿಯೇ ನಿಲ್ಲುವವನಿದ್ದನು. ಸೈತಾನನಿಗೆ ಗೊತ್ತಿರುತ್ತದೆ : ಪಾಪಿಗಳನ್ನೆಲ್ಲ ನರಕಕ್ಕೆ ಎಸೆದ ಬಳಿಕ ಪ್ರಶ್ನಿಸಲಾಗುತ್ತದೆ – 'ತುಂಬಿದೆಯಾ ನೀನು?' – ಆಗ ನರಕ ಗಹಗಹಿಸಿ ನಗುತ್ತಾ ಹೇಳುತ್ತದೆ, 'ಇನ್ನೂ ಇದೆಯಾ?'

ಪ್ರಭುವಿನ ಭಯದಿಂದ ಸುಕೃತ್ಯಗಳನ್ನು ಮಾಡಿದವರಿಗಾಗಿ ಸ್ವರ್ಗದ ಬಾಗಿಲು ತೆರೆದುಕೊಳ್ಳಲು ತವಕಿಸುತ್ತಿತ್ತು. ಬಿಳಿಯ ಹೂವುಗಳ ಶ್ವೇತ ಉದ್ಯಾನವನದ ನಡುವೆ ಹರಿಯುತ್ತಿದ್ದ ಸ್ಫಟಿಕ ಸ್ವಚ್ಛ ನೀರಿನ ನದಿಯ ತಟದಲ್ಲಿ, ಹೊಳೆಯುವ ಹೊಂಬಣ್ಣದ ಮರಳರಾಶಿಯ ಮೇಲೆ ನಾಚಿಕೆಯ ಭಾರದಿಂದ ತಲೆ ತಗ್ಗಿಸಿ ಕೂತಿರುವ ಸುರಸುಂದರಿಯರು ಸ್ವರ್ಗದ ಸ್ವರ್ಣಬಾಗಿಲು ದಾಟಿ ಒಳಬರುವವರನ್ನು ನಿರೀಕ್ಷಿಸುತ್ತಾ ಕಡೆಗಣ್ಣಿನಿಂದ ಪರಸ್ಪರ ನೋಡಿಕೊಳ್ಳುತ್ತಿದ್ದರು. ಅಂತಿಮ ತೀರ್ಮಾನದ ಬಳಿಕ, ಕೂದಲಿನ ಏಳು ಸೀಳುಗಿಂತ ಸಪೂರವೂ, ಕತ್ತಿಯ ಅಲಗಿನಂತೆ ಹರಿತವೂ ಆದ 'ಸಿರಾತ್' ಎಂಬ ದಿವ್ಯ ಸೇತುವೆಯನ್ನು ದಾಟಿ ಬರಲಿರುವ ಪುಣ್ಯವಂತರಿಗಾಗಿ ಅದುವರೆಗೆ ಮನುಷ್ಯರಾಗಲೀ ಮಲಾಯಿಕರಾಗಲೀ ಸ್ಪರ್ಶಿಸಿರದ ಸುರಕನ್ಯಾಮಣಿಗಳು ಕಾಯುತ್ತಿದ್ದರು.

ಸೀದಿ ಸಾಹುಕಾರರ ಬಲ ಮತ್ತು ಎಡಗಳಲ್ಲಿ ನಿಂತಿದ್ದ ಮಲಾಯಿಕರ ಮುಖಗಳಲ್ಲಿ ಧನ್ಯತೆಯ ಹೊಳಪಿತ್ತು. ತುಟಿಯಂಚುಗಳಲ್ಲಿ ಹೆಮ್ಮೆಯ ಕಿರುನಗು ಬಿರಿಯುತಲಿತ್ತು. ಸುಮಾರು ಎಂಭತ್ತಾರು ವರ್ಷಗಳ ಕಾಲ, ಸೀದಿ ಸಾಹುಕಾರರ ಕೃತ್ಯಗಳನ್ನು ದಾಖಲಿಸಿಕೊಂಡಿದ್ದ ಮಲಾಯಿಕರಿಬ್ಬರೂ, ಅಂತಿಮ ತೀರ್ಮಾನದ ಬಳಿಕ 'ಸಿರಾತ್' ಸೇತುವೆಯನ್ನು ಸಲೀಸಾಗಿ ದಾಟುತ್ತಾ ಸ್ವರ್ಗ ಸೇರಲಿರುವ ಅವರಿಗೆ ಅಭಿನಂದನೆ ಸಲ್ಲಿಸಲು ಉತ್ಸುಕರಾಗಿ ಎದೆಯುಬ್ಬಿಸಿ ನಿಂತಿದ್ದರು. ಆದರೆ ಮಿಕ್ಕುಳಿದ ನಾಲ್ಕು ಜೋಡಿ ಮಲಾಯಿಕರ ಕಣ್ಣುಗಳಲ್ಲಿ ನಿರಾಸೆಯ ಛಾಯೆಯಿತ್ತು. ಸೈತಾನನ ಆಟಕ್ಕೆ ಬಲಿಯಾಗಿದ್ದ ಸಂಜೀವ, ಗಿರಿಜ, ಅದ್ದು ಮತ್ತು ಸಲ್ಮಾ ನರಕದ ಸುಡುವ ಕೆಂಡದ ಮೇಲೆ ಅನಂತವಾಗಿ ಚಡಪಡಿಸುತ್ತಲೇ ಇರಲು ಕಾರಣವಾಗುವಷ್ಟು ಪಾಪಕೃತ್ಯಗಳನ್ನು ಮಾಡಿಬಿಟ್ಟಿದ್ದರು.

ಅಂತಿಮ ತೀರ್ಮಾನದ ದಿವ್ಯ ವೇಳೆ ಹತ್ತಿರವಾಗುತ್ತಿದ್ದಂತೆ, ದೂರದೂರದಲ್ಲಿ ಚೆದುರಿ ನಿಂತಿದ್ದವರೆಲ್ಲರೂ ವಿಶ್ವ ಸಿಂಹಾಸನದತ್ತ ಸರಿಯತೊಡಗಿದರು. ಏಳು ದಿಕ್ಕುಗಳಿಂದಲೂ ಒಂದೇ ಸಮನೆ ಮುಂದೊತ್ತಿ ಬರುತ್ತಿರುವ ಹೊಸ ಹೊಸ ತಂಡಗಳಿಗೆ ಜಾಗ ಒದಗಿಸುವ ಸಲುವಾಗಿ ಮುತ್ತುಪ್ಪಾಡಿಯಿಂದ ಬಂದಿದ್ದ ತಂಡವು 'ಸಿರಾತ್' ಸೇತುವೆಯ ಬಲಕ್ಕಿದ್ದ ಸ್ವರ್ಗ–ನರಕಗಳ ಹೆಬ್ಬಾಗಿಲತ್ತ ಸರಿಯುವುದು ಅನಿವಾರ್ಯವಾಯಿತು.

ಬಂಗಾರದ ಬೀಸಣಿಗೆಗಳನ್ನು ಹಿಡಿದುಕೊಂಡು ಸ್ವರ್ಗದ ಹೆಬ್ಬಾಗಿಲ ಹೊರಗೆ ಕಾವಲು ನಡೆಸುತ್ತಿದ್ದ ಮಲಾಯಿಕನೊಬ್ಬ ತನ್ನ ಪಕ್ಕದಲ್ಲಿ ಬಂದು ನಿಂತ ಜೋಡಿ ದಂಪತಿಗಳನ್ನು ಕಂಡು ಕಣ್ಣರಳಿಸಿ ನಗುತ್ತಾ 'ನಿಮ್ಮ ಮೇಲೆ ಶಾಂತಿಯಿರಲಿ. ನೀವು ನಾಲ್ವರೂ ಪುಣ್ಯಾತ್ಮರು, ನಿಮಗೆ ಒಳ್ಳೆಯ ಸ್ವರ್ಗವಾಸ ಮೀಸಲಾಗಿದೆ' ಎಂದು ಹೇಳಿದ್ದನು! ಈ ಮಾತನ್ನು ಕೇಳಿಸಿಕೊಂಡ ಸಂಜೀವನ ಬಲಗಡೆಯಿದ್ದ ಮಲಾಯಿಕನ ತಲೆಯ ಮೇಲೆ ಭೂಮಿಯೇ ಕಳಚಿಬಿದ್ದಂತಾಗಿತ್ತು! ಭಯಾಶ್ಚರ್ಯಗಳಿಂದ ನಡುಗುತ್ತಾ 'ಅಸ್ತಗ್ ಫಿರುಲ್ಲಾಹ್, ನನ್ನ ಕಿವಿಗಳಿಗೆ ಏನನ್ನು ಕೇಳಿಸುತ್ತಿರುವಿ ಪ್ರಭುವೇ!' ಎಂದು ಉದ್ಗರಿಸುತ್ತಾ ತನ್ನ ಜತೆಗಾರನತ್ತ ಯಾತನೆಯ ನೋಟ ಬೀರಿದ್ದ. ಸಂಜೀವನ ಎಡ ಮಲಾಯಿಕನಿಗೆ ಸ್ವರ್ಗದ ಕಾವಲುಗಾರನ ಮಾತು ಸರಿಯಾಗಿ ಕೇಳಿಸಿದ್ದಿರಲಿಲ್ಲ. 'ಯಾಕೆ! ಏನಾಯಿತು ನಿನಗೆ? ಅಷ್ಟೇಕೆ ನಡುಗುತ್ತಿರುವೆ?' ಎಂದು ಕುತೂಹಲದಿಂದ ಪ್ರಶ್ನಿಸಿದ್ದ. ಆ ತಂಡದಲ್ಲಿದ್ದ ಎಲ್ಲ ಮಲಾಯಿಕರಿಗೂ ಹೆಚ್ಚು ಹಿರಿಯನೂ ಅನುಭವಸ್ಥನೂ ಆಗಿದ್ದ ಸಂಜೀವನ ಬಲ ಮಲಾಯಿಕನ ವರ್ತನೆ ನಿಜಕ್ಕೂ ಎಡ ಮಲಾಯಿಕನಿಗೆ ಗಾಭರಿಯನ್ನುಂಟುಮಾಡಿತ್ತು.

ಅದ್ದುವಿನ ಬಲ–ಎಡ ಮಲಾಯಿಕರಿಗೂ ಸ್ವರ್ಗದ ಕಾವಲುಗಾರನ ಮಾತು ಕೇಳಿಸಿತ್ತಾದರೂ, ಯಾವುದೇ ಕಾರಣದಿಂದಲೂ ಅದ್ದುವಿಗೆ ನರಕ ತಪ್ಪದು ಎಂದು ತೀರ್ಮಾನಿಸಿದ್ದ ಅವರಿಬ್ಬರಿಗೂ ಕಾವಲುಗಾರನ ನುಡಿ ಅಸಂಬದ್ಧ ಎನಿಸಿತ್ತು. ಆದರೆ ಸ್ವರ್ಗದ ಕಾವಲುಗಾರ ಸುಳ್ಳು ಹೇಳುವುದು ಸಾಧ್ಯವಾದೀತೆ? ಎಂಬ ಪ್ರಶ್ನೆ ಗಿರಿಜ ಮತ್ತು ಸಲ್ಮಾಳ ಜತೆಗಿದ್ದ ನಾಲ್ಕು ಮಲಾಯಿಕರುಗಳನ್ನೂ ಕಾಡಲಾರಂಭಿಸಿತ್ತು. ಎಲ್ಲೋ–ಏನೋ ತಪ್ಪು ಕಲ್ಪನೆಯಾಗಿದ್ದಿರಬಹುದೆಂದು ಯೋಚಿಸುತ್ತಿರುವಷ್ಟರಲ್ಲಿ ಸೀದಿ ಸಾಹುಕಾರರ ಬಲ–ಎಡ ಮಲಾಯಿಕರಿಬ್ಬರೂ ಭಯದಿಂದ ಚೀರಿಕೊಂಡಿದ್ದರು! ಅವರ ಮುಖದಲ್ಲಿ ಹೊಳೆಯುತ್ತಿದ್ದ ಹೆಮ್ಮೆ ಕಣ್ಣುಗಳಲ್ಲಿದ್ದ ಹೊಳಪು ಎಲ್ಲವೂ ಹಾರಿ ಹೋಗಿದ್ದವು! ಮೊದಲೇ ಗಾಭರಿಗೊಂಡಿದ್ದ ಉಳಿದ ಮಲಾಯಿಕರು ಏನಾಯಿತು ಎಂದು ಪ್ರಶ್ನಿಸಿದಾಗ, ಅವರಿಬ್ಬರೂ ಒಂದೇ ಉಸಿರಿನಲ್ಲಿ ಉತ್ತರಿಸಿದ್ದರು. 'ಸೀದಿ ಸಾಹುಕಾರರನ್ನು ಕೆಂಡದ ಕುಂಡ ಹಿಡಿದುಕೊಂಡಿದ್ದ ನರಕದ ಕಾವಲುಗಾರನೊಬ್ಬ 'ಈಗ ಬಂದಿಯಾ–ಬೇಗ ಬಾ' ಎಂದು ಕರೆಯುತ್ತಿದ್ದಾನೆ!'

ಪ್ರಳಯ ಕ್ಷೇತ್ರದಲ್ಲಿ ಗುಸು ಗುಸು ಆರಂಭವಾಗಿತ್ತು. ಪ್ರಭುವಿನ ಪವಿತ್ರ ಜಯಘೋಷದ ನಡುವೆ ಕೇಳಿಸಿದ ಚೀತ್ಕಾರದ ಅಪಸ್ವರ ಎಲ್ಲರನ್ನೂ ದಿಗ್ಭ್ರಮೆಗೊಳಿಸಿತ್ತು. ಎಲ್ಲರೂ ಇವರತ್ತ ನೋಡಲಾರಂಭಿಸಿದ್ದರು. ಮುತ್ತುಪ್ಪಾಡಿಯ ತಂಡದ ಮಲಾಯಿಕರು ಆಕಾಶವೇ ಬಾಯಿಬಿಟ್ಟು ನುಂಗಬಾರದೇ ಎನ್ನುವಷ್ಟು ಮುಜುಗರಪಡುತ್ತಿರುವಂತೆಯೇ, ಸಂಜೀವನ ಬಲ ಮಲಾಯಿಕನು ಜಾಗೃತನಾದ. ಇನ್ನು ಸ್ವಲ್ಪ ತಡಮಾಡಿದರೂ ಬಹು ದೊಡ್ಡ ಅನಾಹುತವಾಗಲಿದೆಯರೆಂಬ ಭಯ ಆತನನ್ನು ತಿವಿಯಿತು. ತನ್ನ ಜತೆಗಿದ್ದ ಇತರ ಮಲಾಯಿಕರಿಗಷ್ಟೇ ಕೇಳಿಸುವಷ್ಟು ಕ್ಷೀಣಸ್ವರದಲ್ಲಿ ಹೇಳಿದ, 'ಭೂಮಿಯನ್ನು ಆರು ದಿವಸದಲ್ಲಿ ನಿರ್ಮಿಸಿ, ಇದೀಗ ಭೂಮಿಯನ್ನು ಉರಿಯುವ ಗೋಳವನ್ನಾಗಿ ಮಾಡಿದ ಪ್ರಭು–ನಮ್ಮನ್ನೆಲ್ಲ ಕ್ಷಮಿಸಲಿ. ಪಾಪ ಪುಣ್ಯಗಳನ್ನು ಬರೆದುಕೊಂಡ ನಮ್ಮ ಕಡತಗಳಲ್ಲಿ ಹೊಲಿಗೆ ಬಿಟ್ಟು ಹೋಗಿದೆ. ನಾವು ಬರೆದ ಅಕ್ಷರಗಳು ನರಳುವ ಸದ್ದು ಕೇಳಿಬರುತ್ತಲಿದೆ. ಮೋಡಗಳ ನಡುವೆ ಹಸುರು ಬೆಳಕು ಮೂಡುವ ಮೊದಲೇ ನಾವು ನಮ್ಮನ್ನು ಸಮರ್ಥಿಸಿಕೊಳ್ಳಬೇಕಾಗಿದೆ. ನಾವು ಬರೆದು ತಂದಿರುವ ಪಾಪ ಪುಣ್ಯಗಳು, ನ್ಯಾಯದ ತಟ್ಟೆಯಿಂದ ಹಾರಿಹೋಗುವ ಮುನ್ನವೇ ನಮ್ಮ ಕಡತಗಳನ್ನು ಮರುಪರಿಶೀಲನೆ ನಡೆಸಬೇಕಾಗಿದೆ'.

'ಹೌದು...ಹೌದು!' ಉಳಿದ ಒಂಬತ್ತು ಮಲಾಯಿಕರೂ ತಲೆಯಾಡಿಸಿದರು. ಸಂಜೀವನ ಬಲ ಮಲಾಯಿಕು ಹೇಳಿದ, 'ಬನ್ನಿ ನಾವು ದೂರದಲ್ಲಿ ಕಾಣಿಸುತ್ತಿರುವ ಬೆಳ್ಳಿಬೆಟ್ಟಕ್ಕೆ ಹೋಗುವ. ಬೆಳ್ಳಿ ಬೆಟ್ಟದ ಗರ್ಭದಲ್ಲಿ ಒಂದು ಕತ್ತಲ ಗವಿಯಿದೆ. ನಾವು ಅದರೊಳಗೆ ಕುಳಿತು ನಮ್ಮ ಕಡತಗಳಲ್ಲಿ ಬರೆದುಕೊಂಡಿರುವುದನ್ನು ಪರಿಶೀಲನೆ ಮಾಡುವ. ಬನ್ನಿರಿ... ತಡಮಾಡಬೇಡಿರಿ'.

ಪ್ರಳಯ ಕ್ಷೇತ್ರದ ಎಡಕೊನೆಯಲ್ಲಿ ಭೂಮಿಯ ಪ್ರಜ್ವಲ ಬೆಳಕಿನಿಂದ ಪಳಪಳನೆ ಪ್ರತಿಫಲಿಸುತ್ತಿದ್ದ ಆ ಬೆಟ್ಟವು ಎಪ್ಪತ್ತ ಏಳು ಮಲಾಯಿಕು ಎತ್ತರವಿತ್ತು. ಮುತ್ತುಪ್ಪಾಡಿಯಿಂದ ಎಬ್ಬಿಸಿಕೊಂಡು ಕರೆತಂದಿದ್ದ ಐದು ಮನುಷ್ಯರನ್ನು ಇದ್ದಲ್ಲಿಯೇ ಇರುವಂತೆ ನಿರ್ಬಂಧಿಸಿದ ಹತ್ತು ಮಲಾಯಿಕರೂ, ಮಿಂಚು–ಗುಡುಗುಗಳ ನಡುವಿನ ಅವಧಿಯೊಳಗೆ ಬೆಳ್ಳಿ ಬೆಟ್ಟದ ಗರ್ಭದಲ್ಲಿದ್ದ ಗವಿಯನ್ನು ಹೊಕ್ಕರು. ಕೊಡಲಿಯಲ್ಲಿ ಕಡಿದು ಸೀಳು ಮಾಡಬಹುದಾದಷ್ಟು ದಟ್ಟಕತ್ತಲಿನ ಗವಿಯೊಳಕ್ಕೆ ಮಿಂಚಿನಂತೆ ನುಗ್ಗಿದ ಐದು ಜೋಡಿ ಮಲಾಯಿಕರು, ತಮ್ಮ ಬೆನ್ನ ಮೇಲೆ ಹೊತ್ತು ತಂದಿದ್ದ ಕಡತಗಳನ್ನು, ಗವಿಯ ಕೇಂದ್ರ ಭಾಗದಲ್ಲಿದ್ದ ಎತ್ತರದ ಪೀಠದ ಮೇಲೆ ಇರಿಸಿ, ಅದರ ಸುತ್ತ ವೃತ್ತಾಕಾರದಲ್ಲಿ ಕುಳಿತರು.

ಸೀದಿ ಸಾಹುಕಾರರ ಬಲಮಲಾಯಿಕನ ಗಾಬರಿ ಇನ್ನೂ ಕಡಿಮೆಯಾಗಿರಲಿಲ್ಲ. 'ಮೊದಲು ನಾನು ಬರೆದಿರುವುದನ್ನು ಪರಿಶೀಲಿಸಬೇಕು' ಎಂದವನೇ 'ಪ್ರಭುವಿನ ಕರುಣೆಯಿರಲಿ, ಹಿಜರಿ ಶಕ ಸಾವಿರದ ನಾಲ್ಕು ನೂರ ಹನ್ನೊಂದನೆಯ ರಜಬ್ ಮಾಸದ ಇಪ್ಪತ್ತನಾಲ್ಕನೆಯ ಜುಮ್ಮಾ ಅಸ್ತಮಿಸುವ ರಾತ್ರಿ ಕಳೆದು ಶನಿವಾರ ಸೂರ್ಯೋದಯದ ಎರಡನೆಯ ಜಾವದಲ್ಲಿ ಜನನವಾಯಿತು. ಆ ರಾತ್ರಿಯಿಡೀ ಮಗು ಅಳುತ್ತಲೇ ಇತ್ತು. ರಜಬ್‌ಮಾಸದ ಇಪ್ಪತ್ತೈದನೆಯ ಶನಿವಾರ ಅಸ್ತಮಿಸುವ..'

'ಸಾಕು, ನಿಲ್ಸು' ಗಿರಿಜಳ ಎಡ ಮಲಾಯಿಕು ಅಬ್ಬರಿಸಿದ್ದ! 'ಈ ರೀತಿ ಪ್ರತಿಯೊಂದು ದಿನದ ವಿವರಗಳನ್ನು ಓದುತ್ತಾ ಹೋದರೆ, ಇನ್ನೊಂದು ಪ್ರಳಯ ಕಾಲದವರೆಗೆ ಅಂತಿಮ ತೀರ್ಮಾನ ಪಡೆಯಲು ಸಾಧ್ಯವಾಗದು. ನಾವು ಮುಖ್ಯವಾಗಿ ಪರಿಶೀಲನೆಗೆ ಗುರಿಪಡಿಸಬೇಕಾಗಿರುವುದು ಸೀದಿ ಸಾಹುಕರರನ್ನು ಸ್ವರ್ಗಕ್ಕೇರಿಸಬಲ್ಲ ದಾಖಲೆಗಳನ್ನು ಹಾಗೂ ಉಳಿದ ನಾಲ್ವರು ಮಾಡಿರುವ ಪಾಪಕರ್ಮಗಳನ್ನು ಮಾತ್ರ. ಪ್ರಸ್ತುತ ಈ ಐದು ಮನುಷ್ಯರ ಬಗ್ಗೆ ನಮ್ಮಲ್ಲಿರುವ ಸಾಕ್ಷಿಗಳಿಗೆ ಸಂಪೂರ್ಣ ವಿರೋಧವಾದ ಅಭಿಪ್ರಾಯಗಳನ್ನು ಸ್ವರ್ಗ ನರಕಗಳ ಕಾವಲುಗಾರರು ಪ್ರಕಟಿಸಿರುವುದರಿಂದಾಗಿ, ಈ ಐದು ಮನುಷ್ಯರು ಪರಸ್ಪರ ವ್ಯವಹರಿಸಿದ ಘಟನೆಗಳ ಮರುಪರಿಶೀಲನೆಯಲ್ಲೇ ನಮ್ಮ ಸಮಸ್ಯೆಗಳ ಉತ್ತರ ಅಡಗಿದೆಯೆಂದು ನಾನು ಭಾವಿಸುತ್ತೇನೆ. ಸರ್ವೋತ್ಕೃಷ್ಟನೂ, ವಿಶ್ವಸಿಂಹಾಸನಾರೂಢನೂ, ನ್ಯಾಯಮೂರ್ತಿಯೂ ಆದ ಪ್ರಭು ನಮಗೆ ಸಹಾಯ ಮಾಡಲಿ'.

'ಆಮೆನ್'

'ಹಾಗಾದರೆ ನಮಗೆಲ್ಲರಿಗಿಂತ ಹೆಚ್ಚು ಅನುಭವಸ್ಥನಾದ ಸಂಜೀವನ ಬಲ ಮಲಾಯಿಕು, ಈ ಎಲ್ಲ ಕಡತಗಳನ್ನು ಜತೆಯಾಗಿ ನೇಯ್ದು ತನ್ನ ಅಭಿಪ್ರಾಯ ನುಡಿಯಲಿ' – ಗಿರಿಜಳ ಎಡ ಮಲಾಯಿಕು ಸಲಹೆ ನೀಡಿದ.



'ಹೌದು... ಹೌದು...' ಎಲ್ಲರೂ ಸಮ್ಮತಿಸಿದರು.

ಹಿರಿಯ ಮಲಾಯಿಕನು ಹತ್ತು ಕಡತಗಳನ್ನೂ ಪೀಠದ ನಡುವೆ ವೃತ್ತಾಕಾರದಲ್ಲಿರಿಸಿ, ಬಳಿಕ ತನ್ನೆರಡೂ ಅಂಗೈಗಳನ್ನು ಅವುಗಳ ಮೇಲೆ ಊರುತ್ತಾ ಗಂಭೀರವಾದ ಧ್ವನಿಯಲ್ಲಿ ಘೋಷಿಸತೊಡಗಿದನು.

**'ಹೂಂಕರಿಸಿ ಓಡುವವುಗಳ ಆಣೆ;<br>
ಕಿಡಿ ಹಾರಿಸುತ್ತಾ ಹೋಗುವವುಗಳ ಆಣೆ;<br>
ಪ್ರಾತಃಕಾಲದಲ್ಲಿ ಹಲ್ಲೆ ನಡೆಸುವವುಗಳಾಣೆ;<br>
ಅಲ್ಲಿ ಧೂಳೆಬ್ಬಿಸುವವುಗಳ<br>
ಅಲ್ಲಿ ಸೈನ್ಯವ್ಯೂಹದೊಳಗೆ ಮುನ್ನುಗ್ಗುವವುಗಳ ಆಣೆ;<br>
ನಿಸ್ಸಂದೇಹವಾಗಿ ಮನುಷ್ಯ ಪ್ರಭುವಿಗೆ ಕೃತಘ್ನನು,<br>
ಅವನೇ ಇದಕ್ಕೆ ಸಾಕ್ಷಿಯು.<br>
ಮೋಡಕ್ಕೆ ಮಹಾ ಆಕರ್ಷಣೆಯುಳ್ಳವನು ಅವನು.<br>
ಅವನಿಗರಿವಿಲ್ಲದೇ ಸಮಾಧಿಯಿಂದ<br>
ಎದೆಗುಂಡಿಗೆಯಲ್ಲಿರುವುದನ್ನು<br>
ಹೊರತೆಗೆಯಲಾದಾಗ, ಪ್ರಕಟಗೊಳಿಸಲಾದಾಗ<br>
ನಿಸ್ಸಂದೇಹ ಅಂದು ಅವರ ಪ್ರಭು<br>
ಅವರ ಬಗ್ಗೆ ಪೂರ್ಣ ತಿಳಿದವನಿರುತ್ತಾನೆ.'**

'ನಾನು ಪಠಿಸುತ್ತಿರುವೆ.'

'ಮುತ್ತುಪ್ಪಾಡಿ ಗುಡ್ಡೆಶಾಲೆಯ ಜವಾನನಾಗಿ ಕೆಲಸ ಮಾಡುತ್ತಿದ್ದವನು ಸಂಜೀವನು. ಅವನ ಮನೆಗೆ ಮಳೆಗಾಲದ ಕೊನೆಯ ದಿನಗಳ ಒಂದು ಸಂಜೆ ತೆಳ್ಳಗೆ, ಬೆಳ್ಳಗೆ, ಎತ್ತರಕ್ಕಿದ್ದ ಕೋಲಿನಂತಹ ಮುಖದ ಒಬ್ಬ ಮನುಷ್ಯನು ಬಂದನು. ತಾನು ಪಕ್ಕದ 'ಕಲ್ಲು ಹೊಳೆ' ಮಸೀದಿಯಲ್ಲಿ ಕೆಲಸಕ್ಕಿರುವವನು ಎಂದು ಪರಿಚಯ ಹೇಳಿಕೊಂಡನು. ಅದ್ದು ಎಂಬ ಹೆಸರಿನ ಆ ಮನುಷ್ಯನು ಸಂಜೀವನ ಹಿತ್ತಲಿನಲ್ಲಿದ್ದ ಮುಳಿಮಾಡಿನ ಗುಡಿಸಲೊಂದನ್ನು ತಿಂಗಳಿಗೆ ಆರು ಹಿಂದೂಸ್ತಾನೀ ರೂಪಾಯಿ ಬಾಡಿಗೆಗೆ ಕರಾರು ಮಾಡಿಕೊಂಡನು. ಒಂದು ವಾರದ ಬಳಿಕ ಹತ್ತೊಂಬತ್ತು ವರ್ಷ ಪ್ರಾಯದ ಸಲ್ಮಾ ಎಂಬ ಹೆಂಡತಿ ಹಾಗೂ ಒಂದು ವರ್ಷ ಪ್ರಾಯದ ಗಂಡುಮಗುವನ್ನು ಕರೆದುಕೊಂಡು ಬಂದು ತನ್ನ ಸಂಸಾರವನ್ನು ಮುಂದುವರೆಸಿದನು.'

'ಬಳಿಕ ಅದ್ದು ಎಂಬ ಮನುಷ್ಯನು ಸಂಜೀವನ ಕಣ್ಣಿಗೆ ಬಿದ್ದವನಲ್ಲ. ವಾರ

ಅಥವಾ ತಿಂಗಳಿಗೊಮ್ಮೆ ಚಂದ್ರೋದಯದ ಬಳಿಕ ಬರುವವನು, ಚಂದ್ರಾಸ್ತಮಾನವಾಗುತ್ತಿದ್ದಂತೆಯೇ ಹೊರಟು ಹೋಗುತ್ತಿದ್ದನು. ಪ್ರತಿತಿಂಗಳ ಬಾಡಿಗೆಯನ್ನು ಗಿರಿಜಳೇ ವಸೂಲು ಮಾಡಿ ತಂದುಕೊಡುತ್ತಿದ್ದುದರಿಂದ ಸಂಜೀವನು ತನ್ನ ಬಾಡಿಗೆದಾರ ಕುಟುಂಬದ ಬಗ್ಗೆ ಅನಗತ್ಯ ಆಸಕ್ತಿ ವಹಿಸಿದ್ದಿರಲಿಲ್ಲ.

'ಮದುವೆಗೆ ಮೊದಲೆಲ್ಲ ನೀನು ಎಂದರೆ ನಿನ್ನಪ್ಪ' ಎನ್ನುತಲಿದ್ದು ಎಲ್ಲರೊಡನೆಯೂ ಜಗಳಕ್ಕೆ ಸಿದ್ಧವಾಗುತ್ತಿದ್ದ ಸಂಜೀವನು ಊರೊಳಗೆ ನಡೆಯುತ್ತಿದ್ದ ಎಲ್ಲ ಹಗರಣಗಳ ಮೂಲದಲ್ಲಿ ಇದ್ದೇ ಇರುತ್ತಿದ್ದನು. ಒಬ್ಬನೇ ಮಗನಎಂದು ಮುದ್ದಿನಿಂದ ಬೆಳೆಸಿದ್ದ ಮಗನು ಹದ್ದುಮೀರಿ ಸಮಸ್ಯೆಯೆನ್ನಿಸಿದಾಗ, ತಂದೆ ನಾರಣಪ್ಪನವರು ಕಂಗಾಲಾಗಿದ್ದರು. ಬೇರೇನೂ ದಾರಿಕಾಣದೆ, ಕೊನೆಗೆ ತಮ್ಮ ಹೆಂಡತಿಯ ಸೋದರ ಸಂಬಂಧಿ ಗಿರಿಜ ಎಂಬ ಕನ್ಯೆಯನ್ನು ಸಂಜೀವನ ಕೊರಳಿಗೆ ಕಟ್ಟಿ ಅಂಚೆಕಚೇರಿಯ ಪಕ್ಕದಲ್ಲಿದ್ದ ಒಂದುವರೆ ಎಕರೆ ಜಾಗವನ್ನು ಗಿರಿಜಳ ಹೆಸರಿಗೆ ಬರೆದುಕೊಟ್ಟು ಹೆಂಡತಿಯ ತವರು ಸೇರಿದ್ದರು.

'ಹತ್ತು ದಿಕ್ಕುಗಳಲ್ಲಿ ಸೋರಿಹೋಗುತ್ತಿದ್ದ ಸಂಜೀವನ ಬಿಸಿನೆತ್ತರಿನ ಹುಮ್ಮಸ್ಸನ್ನು ಬಾಚಿ ತಬ್ಬಿ ಹೊಸದೊಂದು ಹಾದಿಯಲ್ಲಿ ಹರಿಯಗೊಟ್ಟ ಗಿರಿಜಳು ತನ್ನ ಪತಿಯನ್ನು ಹೊಸ ಮನುಷ್ಯನನ್ನಾಗಿ ಮಾಡಿಬಿಟ್ಟಳು. ಗಿರಿಜಳ ಚೂಪುಕಣ್ಣುಗಳಲ್ಲಿ ಚಿಮ್ಮುವ ಪ್ರೀತಿಗೆ ಸಂಪೂರ್ಣವಾಗಿ ಸೋತುಹೋದ ಸಂಜೀವನು. ಅಪ್ಪ ಕೊಟ್ಟ ಕಾಸು ಮುಗಿಯುವ ಮೊದಲೇ ಗುಡ್ಡೆಶಾಲೆಯ ಜವಾನನ ಕೆಲಸ ಗಳಿಸಿದ್ದನು'.

'ಈ ರೀತಿ ಹೇಳುತ್ತಾ ಇದ್ದರೆ ತಡವಾಗುವುದಿಲ್ಲವೆ?' ಎಂದು ಪ್ರಶ್ನಿಸಿದ್ದ ಸೀದಿ ಸಾಹುಕಾರರ ಎಡ ಮಲಾಯಿಕು ಕಡತಗಳ ಮೇಲೆ ಕೈ ಊರುತ್ತಾ ಹೇಳಲಾರಂಭಿಸಿದ. 'ಒಬ್ಬನೇ ಮನುಷ್ಯನ ಎಲ್ಲ ವಿವರಗಳು ಅನಗತ್ಯವಾಗುತ್ತವೆ. ಮನುಷ್ಯನ ಬದುಕಿನಲ್ಲಿ ನಿಜವಾದ ಸಮಸ್ಯೆ ಎದುರಾದಾಗ ಅವನು ಯಾವ ರೀತಿಯಲ್ಲಿ ವರ್ತಿಸುತ್ತಾನೆ ಎಂಬುದನ್ನಷ್ಟೇ ಗಮನಿಸಿದರೆ ಸಾಕಾಗುತ್ತದೆ. ನಿನ್ನ ಸಂಜೀವನು ತನ್ನ ಹಿತ್ತಲಲ್ಲಿ ಉದ್ಭವವಾದ ಸಮಸ್ಯೆಯೊಂದನ್ನು ಹೊತ್ತುಕೊಂಡು ನನ್ನ ಸೀದಿ ಸಾಹುಕಾರರ ಮನೆಗೆ ಬಂದ ದಿವಸ ಏನಾಯಿತು ಎಂಬುದನ್ನು ಹೇಳುತ್ತೇನೆ'.

'ಅಂದು ಮುಸ್ಸಂಜೆಯ ವೇಳೆ, ಮಗರಿಬು ನಮಾಜು ಮಾಡುವ ಸಲುವಾಗಿ ವಲು ನಡೆಸುತ್ತಿದ್ದ ಸೀದಿ ಸಾಹುಕಾರರು ತಮ್ಮ ಮನೆಯಂಗಳದಲ್ಲಿ ಅನಿರೀಕ್ಷಿತವಾಗಿ ಪ್ರತ್ಯಕ್ಷನಾಗಿದ್ದ ಸಂಜೀವನನ್ನು ಕಂಡು ಹೌಹಾರಿದ್ದರು. ಇದಕ್ಕೆ ಕಾರಣವೂ ಇದೆ. ಸಂಜೀವನ ಪರಿಚಯವು ಅವರಿಗೆ ಬಹಳ ಚೆನ್ನಾಗಿ ಇತ್ತು. ಮುತ್ತುಪ್ಪಾಡಿಯ ಎಲ್ಲ ತರಲೆಗಳ ಬೀಜವಾಗಿದ್ದ ಹುಡುಗ, ಕೆಲವು ವರ್ಷಗಳ ಹಿಂದೆ ಸಾಹುಕಾರರ ಭಂಡಸಾಲೆಯ



ಜಗಲಿಯಲ್ಲಿ ಇರಿಸಲಾಗಿದ್ದ ಉಪ್ಪು ತುಂಬಿದ ಮರದ ಗುಹಾಣವನ್ನು ಚಂದ್ರ ಉದಯಿಸದ ಒಂದು ರಾತ್ರಿಯಲ್ಲಿ, ತನ್ನ ಗೆಳೆಯರ ಸಹಾಯದಿಂದ ಹೊತ್ತೊಯ್ದು, ಮೂರು ರಸ್ತೆ ಸೇರುವಲ್ಲಿದ್ದ ಸರಕಾರಿ ಬಾವಿಗೆ ಎಸೆದುದನ್ನು ಅವರು ಮರೆತಿರಲಿಲ್ಲ'.

'ವಲು ಮಾಡುವುದನ್ನು ನಿಲ್ಲಿಸಿದ ಸಾಹುಕಾರರು. ತಂಬಿಗೆಯನ್ನು ಅಲ್ಲಿಯೇ ಮೆಟ್ಟಿಲ ಮೇಲಿರಿಸಿ, ಮುಂಬಾಗಿಲಿಗೆ ಅಡ್ಡವಾಗಿ ನಿಂತು 'ಏನು ಅಪರೂಪದ ಸವಾರಿ? ಶಾಲೆಯಲ್ಲಿ ಏನಾದರೂ ಕುಸ್ತಿಯಾಯಿತಾ?' ಎಂದು ಪ್ರಶ್ನಿಸಿದ್ದರು. ಸಾಹುಕಾರರ ಮಾತಿನಲ್ಲಿ ಹುದುಗಿದ್ದ ವ್ಯಂಗ್ಯ ಸಂಜೀವನ ಕಣ್ಣನ್ನು ಕೆಂಪು ಮಾಡಿತ್ತು. ಆದರೂ ಗಿರಿಜಳ ಮಾತನ್ನು ನೆನಪಿಸಿಕೊಂಡು ತಾಳ್ಮೆ ವಹಿಸಿದ ಸಂಜೀವನು 'ನಮ್ಮ ಹಿತ್ತಲಲ್ಲಿ ಬಾಡಿಗೆಗೆ ಇದ್ದ ಅದ್ದು, ಕಳೆದ ಒಂದು ತಿಂಗಳಿನಿಂದ ಮನೆಗೆ ಬರಲಿಲ್ಲವಂತೆ. ಅವನ ಹೆಂಡತಿ ಸಲ್ಮಾ ಒಂದು ತಿಂಗಳ ಬಾಣಂತಿ. ಬೀಡಿ ಕಟ್ಟಲೂ ಅವಳಿಂದ ಸಾಧ್ಯವಾಗುವುದಿಲ್ಲ. ಎರಡು ಮಕ್ಕಳು ಮತ್ತು ತಾಯಿ ಕಂಗಾಲಾಗಿದ್ದಾರೆ. ಏನು ಮಾಡುವುದೆಂದು ತೋಚುವುದಿಲ್ಲ' ಎಂದು ಹೇಳಿ ಸಾಹುಕಾರರ ಉತ್ತರ ನಿರೀಕ್ಷಿಸಿದ್ದನು'.

'ಸಂಜೀವನು ವಿವರಿಸಿದ ವಿಷಯದ ಬಗ್ಗೆ ಸಾಹುಕಾರರಿಗೆ ಸಹಾನುಭೂತಿ ಹುಟ್ಟಿದ್ದು ನಿಜವಾದರೂ, ಸಂಜೀವನ ಬಗ್ಗೆ ಸಾಹುಕಾರರು ಇಟ್ಟುಕೊಂಡ ದ್ವೇಷದಿಂದಾಗಿ ಅವರು ಆ ಘಟನೆಯ ಬಗ್ಗೆ ನಿರ್ಲಕ್ಷ್ಯ ವಹಿಸಿದರು. ಅದೂ ಅಲ್ಲದೆ, ಕೆಲವು ವರುಷಗಳ ಹಿಂದೆ ಪೋಲಿ ಅಲೆಯುತ್ತಿದ್ದ ಹುಡುಗನೊಬ್ಬ, ಸಾಮಾಜಿಕ ಸಮಸ್ಯೆಯೊಂದನ್ನು ಎತ್ತಿಕೊಂಡು ಸುಧಾರಕನಂತೆ ವರ್ತಿಸುವುದು ಅವರಿಗಿಷ್ಟವಾಗಲಿಲ್ಲ. ಆದ್ದರಿಂದ ವಿಷಯದ ತೀವ್ರತೆಯನ್ನು ಅಲ್ಲಗಳೆಯುವ ಆಸೆಯಿಂದ, 'ಓಹ್! ಇಷ್ಟೇನಾ ಸಂಜೀವಾ? ಇದನ್ನೇ ಆನೆ – ಕುದುರೆ ಮಾಡುತ್ತೀಯಲ್ಲಾ? ಇಂಥದ್ದು ವಾರಕ್ಕೆಂಟು ನಡೀತಾ ಉಂಟು. ನೀನು ನನ್ನ ಹತ್ತಿರ ಬಂದು ಯಾಕೆ ಹೇಳುತ್ತಿರುವಿ? ನಾನೇನು ಸುಪ್ರೀಂ ಕೋರ್ಟಿನ ಜಡ್ಜಾ?' ಎಂದು ಪ್ರಶ್ನಿಸಿದ್ದರು.

'ಸಂಜೀವನಿಗೆ ಬಹಳ ಅವಮಾನವಾಗಿತ್ತು. ಗಿರಿಜಳ ಒತ್ತಾಯವಿಲ್ಲದೇ ಹೋಗಿರುತ್ತಿದ್ದರೆ ಅವನು ಖಂಡಿತವಾಗಿ ಸೀದಿ ಸಾಹುಕಾರರ ಅಂಗಳಕ್ಕೆ ಕಾಲಿಡುತ್ತಿರಲಿಲ್ಲ. 'ಒಮ್ಮೆ ಸಾಹುಕಾರರ ಹತ್ತಿರ ಹೇಳಿ ಬನ್ನಿ. ಅವರು ಮನಸ್ಸು ಮಾಡಿದರೆ ಸಲ್ಮಾಳ ಗಂಡನನ್ನು ಕಲ್ಲುಹೊಳೆಯಿಂದ ಕರೆದು ತಂದಾರು' ಎಂದು ಹತ್ತು ಬಾರಿ ಗಿರಿಜ ಗೋಗರೆದ ಬಳಿಕವಷ್ಟೇ ಸಂಜೀವನು ಮನಸ್ಸು ಮಾಡಿದ್ದು, ಅವನಿಗೆ ನಾಚಿಕೆಯಿಂದ ಬಾಯಿ ಕಟ್ಟಿಹೋಗಿತ್ತು'.

'ಸಂಜೀವನು ತುಟಿ ಎರಡು ಮಾಡದೆ ನಿಂತಿರುವುದನ್ನು ಕಂಡು ಸೀದಿ

ಸಾಹುಕಾರರಿಗೆ ಸಂತೋಷವಾಗಿತ್ತು. ಅವನನ್ನು ಸಮಾಧಾನಪಡಿಸುವವರಂತೆ ಒಂದು ಹೆಜ್ಜೆ ಮುಂದೆ ಬಂದು, ನೀರಿನ ತಂಬಿಗೆಯನ್ನು ಎತ್ತಿಕೊಳ್ಳುತ್ತಾ ಸಾವಕಾಶ ಸ್ವರದಲ್ಲಿ, 'ನೋಡು ಇವನೇ, ಹೆಣ್ಣಾಗಿ ಹುಟ್ಟಿದ ಮೇಲೆ ಇಂಥದ್ದನ್ನೆಲ್ಲ ಅನುಭವಿಸಲೇ ಬೇಕಾಗುತ್ತದೆ. ಅವರವರ ಹಣೆಯಲ್ಲಿ ಏನು ಬರೆದಿದೆಯೋ ಅದೆಲ್ಲವೂ ನಡೆಯಲೇಬೇಕು. ಅದನ್ನು ತಪ್ಪಿಸಲು ನಿನಗೆ – ನನಗೆ ಸಾಧ್ಯವುಂಟಾ? ಉದಾಹರಣೆಗೆ ಹೇಳ್ತೇನೆ, ಮೊನ್ನೆ ನಮ್ಮ ಲಾರಿ ಆಕ್ಸಿಡೆಂಟ್ ಆಗಿ ನನಗೆ ಇಪ್ಪತ್ತು ಸಾವಿರ ಲುಕ್ಸಾನು ಆಯ್ತು. ನಾನು ಯಾರ ಹತ್ತಿರ ಹೇಳಬೇಕು? ನಿನ್ನ ಮನೆಗೆ ಬಂದು, ಸಂಜೀವಾ – ನನಗೆ ಹೀಗೆ – ಹೀಗೆ ಆಯ್ತು ಅಂತ ಏಳುವುದಾ? ಏನಾದ್ರೂ ಮುಕ್ಕಾಲಿನ ಫಾಯಿದೆ ಉಂಟಾ? ಒಟ್ರಾಸಿ ಇಂಥದ್ದನ್ನೆಲ್ಲ ಅವರವರೇ ಸುಧಾರಿಸಿಕೊಳ್ಳಬೇಕು. ಅದರಲ್ಲೂ ಹೆಂಗಸರ ಇಂಥ ರಗಳೆಗಳನ್ನೆಲ್ಲ ಸರಿ ಮಾಡ್ತೇನೆ ಅಂತ ಹೊರಟರೆ, ನಾವು ಗಂಡಸರು ಹಗ್ಗ ತೆಗೆದು ಕೊಳ್ಳಬೇಕಾದೀತು. ಇರಲಿ, ನನಗೀಗ ನಮಾಜಿಗೆ ಹೊತ್ತಾಯಿತು. ದೇವರ ಕೆಲಸಕ್ಕೆ ತಡಮಾಡಬಾರದು. ಅಲ್ವಾ?' ಎಂದು ಹೇಳಿ ಮತ್ತೆ ವಲು ಮಾಡಲಾರಂಭಿಸಿದರು'.

'ಆ ಬಳಿಕ ಏನು ನಡೆಯಿತು ಎಂಬುದನ್ನು ನಾನು ಹೇಳುತ್ತೇನೆ' ಎಂದ ಸಂಜೀವನ ಬಲ ಮಲಾಯಿಕ ಹೇಳತೊಡಗಿದ. 'ಸಂಜೀವನ ರಕ್ತವೆಲ್ಲವೂ ನರಕದ ಬೆಂಕಿಯಂತೆ ಸುಡಲಾರಂಭಿಸಿತು. ಆದರೆ ಅವನು ಅಸಹಾಯಕನಾಗಿದ್ದನು. ಅದ್ದು ತನ್ನ ಹೆಂಡತಿಯನ್ನು ತ್ಯಜಿಸಲು ಸೀದಿ ಸಾಹುಕಾರರು ಕಾರಣರಲ್ಲ – ಎಂಬ ಸತ್ಯ ಸಂಜೀವನಿಗೆ ಅರಿತಿತ್ತು. ಪರಸ್ಪರ ಸಹಾಯ ಮಾಡುವುದನ್ನು ಮನುಷ್ಯರು ಪುಣ್ಯದ ಕೆಲಸವೆಂದು ನಂಬುತ್ತಾರಾದರೂ, ಹಾಗೆ ಸಹಾಯ ಮಾಡಲೇಬೇಕು ಎಂಬ ನಿರ್ಬಂಧ ವಿದ್ದಿರಲಿಲ್ಲ.

'ಆದ್ದರಿಂದ ಮರುದಿನವೇ ಸಂಜೀವನು ಕಲ್ಲುಹೊಳೆಗೆ ಹೋಗುವ ಕೆಂಪು ವಾಹನವನ್ನು ಏರಿದ್ದನು. ಸಂಜೀವನು ಕಲ್ಲುಹೊಳೆಗೆ ಹೊರಡುವಾಗ ಗಿರಿಜಳು ಹೆದರಿದ್ದಳು. ಸಂಜೀವನ ಸಿಟ್ಟು ಅವಳಿಗೆ ಗೊತ್ತಿತ್ತು. ಆದರೂ ಸಲ್ಮಾಳ ಅಳುಮುಖ ನೋಡಲಾಗದೆ ಗಂಡನಿಗೆ ನೂರು ಸಮಾಧಾನದ ಮಾತು ಹೇಳಿ ಬೀಳ್ಕೊಟ್ಟಿದ್ದಳು. ಸೀದಿ ಸಾಹುಕಾರರ ನಿರ್ಲಕ್ಷ್ಯದ ಮಾತುಗಳು ಸಂಜೀವನ ಗಂಡಸುತನಕ್ಕೇ ಸವಾಲು ಎಸೆದಿದ್ದವು. ಏನೇ ಆದರೂ ಅದ್ದುವನ್ನು ಕರೆದು ತಂದು ಸಲ್ಮಾಳ ಕಾಲಬುಡದಲ್ಲಿ ಎಸೆಯಬೇಕೆಂಬ ನಿರ್ಧಾರ ಮಾಡಿದ್ದನು. ತನ್ನ ಹಟ ಸಾಧನೆಗಾಗಿ ಎಂತಹ ಕಷ್ಟಗಳನ್ನು ಎದುರಿಸಲೂ ಅವನು ಸಿದ್ಧನಾಗಿದ್ದನು.

'ಕಲ್ಲುಹೊಳೆ ಬಸ್ ನಿಲ್ದಾಣದ ಪಕ್ಕದಲ್ಲಿ ಒಂದು ತರಕಾರಿ ಅಂಗಡಿ ಇದ್ದಿತು. ಕಾಸಿಂ ಎಂಬ ಯುವಕನು ಅದರ ಮಾಲಕನಾಗಿದ್ದನು. ಅವನು ಸಂಜೀವನ ಗೆಳೆಯ



ನಾಗಿದ್ದನು. ಸಂಜೀವನಿಂದ ಎಲ್ಲ ವಿವರಗಳನ್ನೂ ತಿಳಿದ ಅವನು ಬಳಿಕ ಕಲ್ಲುಹೊಳೆ ಮಸೀದಿಗೆ ಗೆಳೆಯನನ್ನು ಕರೆದೊಯ್ದನು.

'ಮಸೀದಿಯಲ್ಲಿ ಅದ್ದು ಇರಲಿಲ್ಲ. ಕಲ್ಲುಹೊಳೆ ಮಸೀದಿಯಲ್ಲಿ ತನಗೆ ಕೆಲಸವಿದೆ ಯೆಂದು ಪರಿಚಯ ಹೇಳಿಕೊಂಡು ಬಾಡಿಗೆಗೆ ಮನೆ ಪಡೆದುಕೊಂಡಿದ್ದ ಅದ್ದು, ಸಂಜೀವನ ಜತೆ ಪೂರ್ಣ ಸುಳ್ಳನ್ನೇನೂ ಹೇಳಲಿಲ್ಲವಾದರೂ ಅವನಿಗೆ ಮಸೀದಿಯಲ್ಲಿ ಖಾಯಂ ಉದ್ಯೋಗವಿದ್ದಿರಲಿಲ್ಲ. ಅತ್ತರ್, ಸುರ್ಮಾ, ಹಲ್ಲುಪುಡಿಗಳನ್ನು ಕನ್ನಡಿಯ ಪೆಟ್ಟಿಗೆಯೊಂದರೊಳಗೆ ಇರಿಸಿಕೊಂಡು ಊರೂರು ವ್ಯಾಪಾರ ಮಾಡುತ್ತಾ ಅಲೆಯುತ್ತಿದ್ದ ಅದ್ದು, ಕಲ್ಲು ಹೊಳೆಯಲ್ಲಿ ಇರುತ್ತಿದ್ದ ದಿನಗಳಲ್ಲಿ ಮಸೀದಿಯನ್ನು ಗುಡಿಸಿ–ತೊಳೆಯುವ ಕೆಲಸ ಮಾಡುತ್ತಿದ್ದದ್ದೇನೂ ಸುಳ್ಳಲ್ಲ. ಕೆಲವೊಂದು ದಿನಗಳಲ್ಲಿ ನಮಾಜಿನ 'ಬಾಂಗ್' ಕರೆ ಕೊಟ್ಟದ್ದೂ ಉಂಟು.

ಮಸೀದಿಯ ಮೌಲವಿಯವರು ನಡೆದ ಸಂಗತಿಯನ್ನೆಲ್ಲ ಅತ್ಯಂತ ಸಹಾನುಭೂತಿ ಯಿಂದಲೇ ಆಲಿಸಿದ್ದರು. ಆದರೆ ತಲಾಕ್ ಕೊಟ್ಟ ಬಳಿಕ ಮತ್ತೆ ಜತೆಗೂಡುವುದು ಧರ್ಮನಿಷಿದ್ಧ ಎಂಬ ಮಾತನ್ನು ಮಾತ್ರ ಖಚಿತವಾಗಿಯೇ ಹೇಳಿದ್ದರು. ಧರ್ಮಗ್ರಂಥದಲ್ಲಿ ಹೇಳಲಾಗಿತ್ತು; 'ಅವನು ಅವಳಿಗೆ ತಲಾಕ್ ನೀಡಿದರೆ ಆಮೇಲೆ ಅವಳು ಮತ್ತೊಬ್ಬ ಪುರುಷನನ್ನು ವರಿಸಿ, ಆ ಬಳಿಕ ಎರಡನೆಯ ಪತಿಯಿಂದ ತಲಾಕ್ ಪಡೆಯುವವರೆಗೆ ಮೊದಲಿನ ಪತಿಯನ್ನು ವಿವಾಹವಾಗಬಾರದು.

'ಆದರೂ ಸಂಜೀವನು ತನ್ನ ಹಟ ಬಿಡಲಿಲ್ಲ. ಅದ್ದು ಕಲ್ಲುಹೊಳೆಗೆ ಮರಳಿ ಬಂದರೆ ಸೂಚನೆ ನೀಡಬೇಕೆಂಬುವುದಾಗಿ ಕಾಸಿಂಗೆ ಸಲಹೆ ಮಾಡಿದ್ದನು. ಅಂತೆಯೇ ಮುಂದಿನ ಶನಿವಾರ ಮುಂಜಾನೆ ಕಾಸಿಂ ಮುತ್ತುಪ್ಪಾಡಿಗೆ ಬಂದು ಸಂಜೀವನನ್ನು ಕರೆದುಕೊಂಡು ಹೋಗಿದ್ದನು. ಆ ದಿವಸ ಸಂಜೆಯ ಹೊತ್ತು ಅದ್ದುವನ್ನು ಉಪಾಯದಿಂದ ಅಲ್ಲಿಯ ಶಾಲೆಯ ಬಳಿ ಕರೆದುಕೊಂಡು ಬಂದು ಸಂಜೀವನ ಎದುರು ನಿಲ್ಲಿಸಿದ್ದನು. ಗಿರಿಜಳ ತಲೆಯ ಮೇಲೆ ಕೈಯಿರಿಸಿ ಭಾಷೆ ನೀಡದೆ ಹೋಗಿರುತ್ತಿದ್ದರೆ ಅದ್ದುವನ್ನು ಕಂಡ ಕೂಡಲೇ ಮೈಮೇಲೆ ಹಾರಲು ಸಂಜೀವನು ಸಿದ್ಧನಿದ್ದನು.

'ತಾನು ತಲಾಕ್ ನೀಡಿರುವುದಕ್ಕೆ ಬಲವಾದ ಕಾರಣವಿದೆಯೆಂದೇ ಅದ್ದು ವಾದ ಮಾಡಿದ್ದನು. ದೇವರಲ್ಲಿ ನಂಬಿಕೆ ಇಡುವ ಯಾವನೇ ಗಂಡಸು ಮಕ್ಕಳಾಗದಂತೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಪತ್ನಿಗೆ ತಲಾಕ್ ಕೊಡದಿರಲಾರ ಎಂದೇ ಅವನು ಹಟ ಹಿಡಿದಿದ್ದನು. ಕುಟುಂಬ ಯೋಜನೆಯೆಂದು ಭೂಮಿಯ ಜನರು ಕರೆಯುವ ಆ ಶಸ್ತ್ರ ಚಿಕಿತ್ಸೆಯು ಧರ್ಮಬಾಹಿರವೆಂದು ಅದ್ದು ಪ್ರಾಮಾಣಿಕವಾಗಿ ನಂಬಿದ್ದನು'.

‘ಅದ್ದು ಹೇಳಿದ್ದರಲ್ಲಿ ನ್ಯಾಯವಿದೆ’ ಅದ್ದುವಿನ ಬಲ ಮಲಾಯಿಕು ತನ್ನ ಅಭಿಪ್ರಾಯ ಹೇಳತೊಡಗಿದ್ದ, ‘ಅದ್ದುವಿನ ಅಚಲ ನಿರ್ಧಾರದಿಂದ ಸಂಜೀವ ಕಂಗಾಲಾದನು. ಅವನಿಗೆ ಮುಂದೇನು ಮಾಡಬೇಕೆಂಬುದೆ ಹೊಳೆಯಲಿಲ್ಲ. ಆದರೆ ಕಾಸಿಂ, ಅದ್ದುವನ್ನು ಕುಳ್ಳಿರಿಸಿಕೊಂಡು ಸಮಾಧಾನ ಹೇಳತೊಡಗಿದನು. ಕುಟುಂಬಯೋಜನೆಯನ್ನು ಮಾಡಿಕೊಳ್ಳುವುದನ್ನು ಕೆಲವಾರು ಧರ್ಮಗುರುಗಳು ಬೆಂಬಲಿಸುತ್ತಾರೆ ಎಂಬುದನ್ನು ಕೆಲವಾರು ಉದಾಹರಣೆಗಳ ಸಹಿತ ವಿವರಿಸಿದನು. ಆದರೆ ಯಾವುದೇ ಮಾತುಗಳಿಗೂ ಅದ್ದು ಸಮ್ಮತಿಸದೇ ಹೋದಾಗ ಸಂಜೀವನ ತಾಳ್ಮೆ ತಪ್ಪಿಹೋಯಿತು. ಕುಳಿತ ಜಾಗದಿಂದಲೇ ಚಂಗನೆ ನೆಗೆದು ಅದ್ದುವನ್ನು ಅಂಗಾತ ಬೀಳಿಸಿ, ಎದೆಯ ಮೇಲೆ ಕುಳಿತು ಮೂಗು–ಬಾಯಿ ಎಂದು ನೋಡದೆ ಮುಷ್ಟಿಯಲ್ಲಿ ಗುದ್ದಲಾರಂಭಿಸಿದನು.

‘ಕಾಸಿಂ’ನ ಬುದ್ಧಿವಾದವನ್ನು ಕಡೆಗಣಿಸಿದ್ದ ಅದ್ದು, ಸಂಜೀವನ ಏಟಿನ ಭಯದಿಂದ ಮುತ್ತುಪ್ಪಾಡಿಗೆ ಮರಳಲು ಒಪ್ಪಿಕೊಂಡನು.

‘ಮುಂದಿನದೆಲ್ಲವೂ ಭೂಮಿಯ ಮೇಲೆ ಸಾಮಾನ್ಯವಾಗಿ ನಡೆಯುವಂಥದ್ದೇ’. ಗಿರಿಜಳ ಬಲ ಮಲಾಯಿಕು ಹೇಳಿದ್ದ, ‘ಅದ್ದುವಿನ ಜತೆ ಸಂಜೀವ ಮನೆಗೆ ಮರಳಿದಾಗ ಮಧ್ಯರಾತ್ರಿಯಾಗಿತ್ತು. ಆ ರಾತ್ರಿ ಯಾರೂ ಹೆಚ್ಚು ಮಾತನಾಡಲಿಲ್ಲ. ಮರುದಿನ ಬೆಳಿಗ್ಗೆ ಮನೆಯ ಅಂಗಳದಲ್ಲಿ ನಿಂತಿದ್ದ ಅದ್ದುವಿನ ಎರಡೂ ಕೈಗಳನ್ನು ಹಿಡಿದುಕೊಂಡ ಗಿರಿಜಳು, ‘ನೀನು ನನಗೆ ಅಣ್ಣ ಇದ್ದ ಹಾಗೆ, ನೀನು ನಿನ್ನ ತಂಗಿಗೊಂದು ಮಾತು ಕೊಡಬೇಕು. ಇನ್ನೆಂದೂ ಸಲ್ಮಾಳನ್ನು ಬಿಟ್ಟುಹೋಗುವುದಿಲ್ಲವೆಂದು ಮಕ್ಕಳ ತಲೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಬೇಕು...’ ಇತ್ಯಾದಿ ಹೇಳಲಾರಂಭಿಸಿದಾಗ, ಅದ್ದು ಗಳಗಳನೆ ಅತ್ತುಬಿಟ್ಟನು. ಆ ಬಳಿಕ ಗಂಡ ಹೆಂಡಿರು ಸುಖವಾಗಿ ಸಂಸಾರ ನಡೆಸಿದ್ದರು.

‘ಪೂರ್ತಿ ಸುಖವಾಗಿಯೇನೂ ಅಲ್ಲ’, ಸಲ್ಮಾಳ ಬಲ ಮಲಾಯಿಕು ಪ್ರತಿಭಟಿಸುವವನಂತೆ ಹೇಳಿದ್ದ. ‘ಮುಂದಿನ ಸುಮಾರು ಒಂದು ತಿಂಗಳ ಕಾಲ ಸಲ್ಮಾ ಕಣ್ಣೀರಿನಲ್ಲಿಯೇ ಕೈತೊಳೆಯುತ್ತಿದ್ದಳು. ಗಿರಿಜಳ ಸಮಾಧಾನದ ಮಾತುಗಳಿಲ್ಲದೇ ಹೋಗಿರುತ್ತಿದ್ದರೆ, ಅವಳು ತನ್ನಿಬ್ಬರು ಮಕ್ಕಳ ಜತೆಗೆ ಬಾವಿಗೆ ಹಾರಿಬಿಡುತ್ತಿದ್ದಳು. ಅದ್ದು ಕೂಡಾ ಬದುಕಿನಲ್ಲಿ ಉತ್ಸಾಹವನ್ನೇ ಕಳೆದುಕೊಂಡವನಂತೆ ವರ್ತಿಸತೊಡಗಿದ್ದನು. ತಾನು ಧರ್ಮ ವಿರೋಧವಾದದ್ದೇನನ್ನೋ ಮಾಡಿದ್ದೇನೆ ಎಂಬ ಪಾಪಪ್ರಜ್ಞೆ ಅವನನ್ನು ಚಿತ್ರಹಿಂಸೆ ಮಾಡತೊಡಗಿತ್ತು. ಯಾಕೆಂದರೆ ಸಂಜೀವನ ಜತೆ ಮುತ್ತುಪ್ಪಾಡಿಗೆ ಮರಳಿ ಬಂದಿದ್ದ ಮುಂದಿನ ಶುಕ್ರವಾರ, ನಮಾಜು ಮಾಡಲು ಮಸೀದಿಗೆ ಹೋಗಿದ್ದವನನ್ನು ಸೀದಿ ಸಾಹುಕಾರರು ಅವಮಾನಿಸಿದ್ದರು. ಒಮ್ಮೆ ತಲಾಕ್ ನೀಡಿ ತ್ಯಜಿಸಲಾದ ಪತ್ನಿಯನ್ನು



ಮತ್ತೆ ಕೂಡುವುದು ವ್ಯಭಿಚಾರವಾಗುತ್ತದೆಯೆಂದು ಅಬ್ಬರಿಸಿದ್ದರು. ಇಂತಹ ಧರ್ಮದ್ರೋಹ ಮಾಡಿದವನನ್ನು ಮಸೀದಿಯೊಳಗೆ ಬರಲು ಅನುಮತಿಸಿದರೆ ಮಸೀದಿಯೇ ಅಪವಿತ್ರವಾಗುತ್ತದೆ ಎಂಬುದಾಗಿ ವಾದ ಮಾಡುತ್ತಾ ಅಲ್ಲಿ ಸೇರಿದ್ದ ಎಲ್ಲರ ಸಮ್ಮುಖದಲ್ಲೇ ಅದ್ದುವಿನ ಅಂಗಿಯನ್ನು ಜಗ್ಗುತ್ತಾ ಮಸೀದಿಯಿಂದ ಹೊರಗೆ ತಳ್ಳಿಬಿಟ್ಟಿದ್ದರು. ಸೀದಿ ಸಾಹುಕಾರರ ಮಾತುಗಳೆಲ್ಲವೂ ಧರ್ಮಗ್ರಂಥದ ಆದೇಶಗಳಿಗೆ ಬದ್ಧವಾಗಿಯೇ ಇದ್ದುದರಿಂದ ಸಾಹುಕಾರರ ನಿಲುವುಗಳನ್ನು ಯಾರೂ ವಿರೋಧಿಸಿದ್ದಿರಲಿಲ್ಲ. ಆ ಬಳಿಕ ಅದ್ದು, ಶುಕ್ರವಾರಗಳಲ್ಲಿ ಮುತ್ತುಪ್ಪಾಡಿಗೆ ಕಾಲಿಡುತ್ತಲೇ ಇರಲಿಲ್ಲ. ಕಲ್ಲಹೊಳೆ ಮಸೀದಿಯಲ್ಲೋ ಅಥವಾ ತನ್ನ ವ್ಯಾಪಾರ–ಪ್ರವಾಸದಲ್ಲಿ ಸಿಗುತ್ತಿದ್ದ ಯಾವುದಾದರೊಂದು ಮಸೀದಿಯಲ್ಲೋ ತನ್ನ ಜುಮ್ಮಾ ನಮಾಜನ್ನು ಪೂರೈಸುತ್ತಿದ್ದನು’.

‘ಸೀದಿ ಸಾಹುಕಾರರ ಕೃತ್ಯ ಧರ್ಮಸಮ್ಮತವಾಗಿಯೇ ಇದೆ’. ಸೀದಿ ಸಾಹುಕಾರರ ಬಲ ಮಲಾಯಿಕು ಸಮರ್ಥಿಸುವ ಧ್ವನಿಯಲ್ಲಿ ಹೇಳಿದ್ದ, ‘ಯಾವುದೇ ಕೆಲಸ ಕಾರ್ಯಗಳಿದ್ದರೂ ಅವುಗಳನ್ನೆಲ್ಲವನ್ನೂ ಕಡೆಗಣಿಸಿ, ಹೊತ್ತು ಹೊತ್ತಿಗೆ ಸರಿಯಾಗಿ ನಮಾಜು ನಿರ್ವಹಿಸುತ್ತಿದ್ದ ಸಾಹುಕಾರರು, ಮಸೀದಿಯ ಪಾವಿತ್ರ್ಯದ ಬಗ್ಗೆ ನಿಷ್ಠುರವಾಗಿ ವರ್ತಿಸುವುದು ನ್ಯಾಯವೇ ಆಗುತ್ತದೆ. ಹೀಗಿರುವಾಗ, ಧರ್ಮಗ್ರಂಥದ ಮಾತುಗಳನ್ನು ಇಷ್ಟೊಂದು ನಿಷ್ಠೆಯಿಂದ ಪಾಲಿಸಿದ್ದ ಸೀದಿ ಸಾಹುಕಾರರನ್ನು ನರಕದ ಕಾವಲುಗಾರನೇಕೆ ಸ್ವಾಗತಿಸಬೇಕು?’.

‘ನನಗೂ ಹಾಗೆಯೇ ಅನ್ನಿಸುತ್ತೆ’. ಸಂಜೀವನ ಎಡ ಮಲಾಯಿಕು ಎತ್ತರದ ಸ್ವರದಲ್ಲಿ ಹೇಳಿದ, ‘ಪ್ರಭುವಿನ ಆದೇಶಗಳನ್ನು ಮೀರಿ ಅದ್ದು ಮತ್ತು ಸಲ್ಮಾಳನ್ನು ಮತ್ತೆ ಒಂದುಗೂಡಿಸಲು ಕಾರಣರಾದ ಸಂಜೀವ ಮತ್ತು ಗಿರಿಜ ಇಬ್ಬರೂ, ಅದ್ದು ಮತ್ತು ಸಲ್ಮಾಳನ್ನು ಎಸೆಯಬೇಕಾದ ಅಗ್ನಿಕುಂಡದಲ್ಲೇ ಬೀಳಬೇಕಾದವರು. ಸತ್ಯವು ಇಷ್ಟೊಂದು ಸ್ಪಷ್ಟವಿರುವಾಗ ಸ್ವರ್ಗದ ಕಾವಲುಗಾರನೇಕೆ ಈ ನಾಲ್ವರನ್ನೂ ಕಂಡು ನಗುತ್ತಾ ಅಭಿನಂದಿಸಿದನು?’

‘ಯಾಕೆ, ಏನು ಎಂಬುದನ್ನು ಚರ್ಚಿಸುತ್ತಾ ತೀರ್ಮಾನಿಸಲು ಈಗ ಸಮಯಾವಕಾಶವಿಲ್ಲ’, ಸಂಜೀವನ ಬಲ ಮಲಾಯಿಕು ಗಂಭೀರವಾದ ಸ್ವರದಲ್ಲಿ ಹೇಳಿದ್ದ. ಹಿರಿಯ ಮಲಾಯಿಕನ ಮಾತಿಗೆ ಅವಾಕ್ಕಾದ ಉಳಿದೆಲ್ಲ ಮಲಾಯಿಕರು ಅವನತ್ತ ತಿರುಗಿ ಕುಳಿತರು. ಹಿರಿಯ ಮಲಾಯಿಕನು ನಿರ್ಧಾರದ ದನಿಯಲ್ಲಿ ಹೇಳಲಾರಂಭಿಸಿದ. ‘ಸ್ವರ್ಗ ನರಕಗಳ ಕಾವಲುಗಾರರು ಪ್ರಭುವಿಗೆ ಬಹಳ ಸಮೀಪದಲ್ಲಿರುವವರು. ಜಗದೊಡೆಯನಿಗೆ ಹೆಚ್ಚು ಪ್ರಿಯರಾದವರು. ಅವರು ಯಾವುದೇ ಕಾರಣದಿಂದಲೂ ತಪ್ಪು ಹೆಜ್ಜೆ

ಇಡುವವರಲ್ಲ. ನಾವೋ, ಆ ಭೂಮಿಯ ಮೇಲೆ ಸೈತಾನರುಗಳ ಪ್ರಭಾವದಿಂದ ತಪ್ಪು ದಾರಿಗೆ ಎಳೆಯಲ್ಪಡುವ ಮನುಷ್ಯರ ನಡುವೆ ಇದ್ದವರು. ಸೈತಾನರ ಆಟ ನಮ್ಮ ಮೇಲೆ ನಡೆಯದಾದರೂ ಮನುಷ್ಯರ ಸುಖ ದುಃಖಗಳನ್ನು ಬಲು ಸನಿಹದಿಂದ ಕಾಣುವ ನಾವು ತಪ್ಪು ಮಾಡಿರಲೇಬಾರದೆಂದಿಲ್ಲ. ಪಶ್ಚಾತ್ತಾಪ ಪಡುವವನನ್ನು ಕ್ಷಮಿಸುವ ಪ್ರಭುವೇ ನಮ್ಮ ಮೇಲೆ ದಯೆ ತೋರು'.

'ಮಕ್ಕಳಾಗದಂತೆ ಶಸ್ತ್ರ ಚಿಕಿತ್ಸೆ ಮಾಡುವುದನ್ನು ಧರ್ಮಗ್ರಂಥವು ವಿರೋಧಿಸುತ್ತದೆಯೆಂದು ನಾನು ಭಾವಿಸುವುದಿಲ್ಲ. 'ಗಿರಿಜಳ ಬಲ ಮಲಾಯಿಕು ಇದ್ದಕ್ಕಿದ್ದಂತೆ ತನ್ನ ಅನುಮಾನವನ್ನು ಪ್ರಕಟಪಡಿಸಿದ್ದ! 'ಭೂಮಿಯ ಮನುಷ್ಯರು ಆಚರಿಸುತ್ತಿದ್ದ ಕುಟುಂಬ ಯೋಜನೆಯನ್ನು ಅಧರ್ಮವೆನ್ನುವ ಯಾವ ಆದೇಶವನ್ನೂ ಧರ್ಮಗ್ರಂಥದಲ್ಲಿ ನಾನು ಓದಿರುವುದಿಲ್ಲ. ಅಂತಹ ಶಸ್ತ್ರಚಿಕಿತ್ಸೆಗಳಲ್ಲಿ ಜೀವಹತ್ಯೆಯಾಗುತ್ತಿದ್ದರೆ ಆ ಕೃತ್ಯವನ್ನು ಅಧರ್ಮವೆನ್ನಬಹುದಾಗಿತ್ತು!'

'ನಿಜ! ಆ ದಿವಸದಲ್ಲಿ ಜೀವಹತ್ಯೆಯಾಗಿರಲಿಲ್ಲ!' ಸಲ್ಮಾಳ ಬಲ ಮಲಾಯಿಕು ಉದ್ಗರಿಸಿದ್ದ! ಎಲ್ಲರೂ ಅವನತ್ತ ಅಚ್ಚರಿಯ ನೋಟ ಬೀರಿದಾಗ ಅವನು ಪೀಠದ ಮೇಲಿರಿಸಿದ್ದ ಕಡತಗಳ ಮೇಲೆ ಎರಡೂ ಕೈ ಊರುತ್ತಾ ಹೇಳಿದ, 'ಸಲ್ಮಾ ತನ್ನ ಎರಡನೆಯ ಮಗುವನ್ನು ಹೆತ್ತ ಎಂಟನೆಯ ದಿನ ಅವಳಿಗೆ ಶಸ್ತ್ರ ಚಿಕಿತ್ಸೆ ನಡೆಸಿದ್ದರು. ಈ ನಡುವಿನ ಅವಧಿಯಲ್ಲಿ ಆಕೆಯಿದ್ದ ಆಸ್ಪತ್ರೆಗೆ ಗಂಡಸರಾರೂ ಪ್ರವೇಶಿಸಿರಲಿಲ್ಲ. ಆದ್ದರಿಂದ ಆಕೆಯ ಗರ್ಭವನ್ನು ಹೊಸ ಜೀವ ಪ್ರವೇಸಿಸುವ ಆಸ್ಪದವಿರಲಿಲ್ಲ'.

'ಹಾಗಾದರೆ..!' ಸಂಜೀವನ ಬಲ ಮಲಾಯಿಕು ಉತ್ಸಾಹದಿಂದ ಹೇಳಿದ್ದ, 'ಹಾಗಾದರೆ, ಸಲ್ಮಾಳ ಈ ಕೃತ್ಯವನ್ನು ಅವಳ ಪಾಪದ ಕಡತದಿಂದ ಅಳಿಸಿ ಹಾಕಬಹುದಲ್ಲವೆ?'

'ಹೌದು, ಹೌದು!'

'ಅಳಿಸುವುದಾದರೆ ನನ್ನ ಆಕ್ಷೇಪವೇನೂ ಇಲ್ಲ'. ಅದ್ದುವಿನ ಎಡ ಮಲಾಯಿಕು ಅನುಮಾನಿಸುತ್ತಾ ಹೇಳಿದ, 'ಆದರೆ, ಅದ್ದುವಿನ ಪಾಪದ ಕಡತದಲ್ಲಿ, ತಪ್ಪು ಕಾರಣ ನೀಡಿ ತಲಾಕ್ ನೀಡಿದ ಪಾಪ ಕೃತ್ಯವನ್ನು ಹೊಸದಾಗಿ ಸೇರಿಸಬೇಕಾಗುತ್ತದೆ'.

ಹಿರಿಯ ಮಲಾಯಿಕನು ಅಸಹಾಯಕನಂತೆ ಉಳಿದವರತ್ತ ಯಾಚನೆಯ ದೃಷ್ಟಿ ಬೀರಿದ.

ಅಷ್ಟರಲ್ಲಿ ಗವಿಯೊಳಗೆ ಒಮ್ಮಿಂದೊಮ್ಮೆಗೆ ಕೋಲ್ಮಿಂಚು ಬೆಳಗಿತು! ತತ್‌ಕ್ಷಣವೇ ಕಿವಿಗಪ್ಪಳಿಸುವ ಗುಡುಗು ಆರ್ಭಟಿಸಿತು! ಬೆಳ್ಳಿ ಬೆಟ್ಟವೇ ನಡುಗಿದಂತಾಯಿತು! ಗಾಭರಿಗೊಂಡ ಮಲಾಯಿಕರು ಕಣ್ಣರಳಿಸಿ ನೋಡುತ್ತಿರುವಂತೆಯೇ ತಂಪಾದ ಗಾಳಿಯ ಜತೆ ಬರತೊಡಗಿದ್ದ ಬೆಳಕಿನ ಹಳದಿ ರೇಖೆಯೊಂದು ಕಡತಗಳನ್ನಿರಿಸಿದ್ದ ಪೀಠವನ್ನು ವೃತ್ತಾಕಾರವಾಗಿ ಪ್ರದಕ್ಷಿಣೆ ಮಾಡಿ, ಕಡತಗಳ ಮೇಲೆ ಪ್ರಭಾವಳಿಯೊಂದನ್ನು ನಿರ್ಮಿಸಿತು. ಪ್ರಭಾವಳಿಯ ಬೆಳಕಿನಲ್ಲಿ ಕಡತಗಳೆಲ್ಲವೂ ಬಂಗಾರದ ಬೆಟ್ಟದಂತೆ ಹೊಳೆಯತೊಡಗಿದವು. ಪ್ರಭುವಿನ ಶಕ್ತಿಯನ್ನು ಅದು ಹೀಗೆಯೇ ಎಂದು ತೀರ್ಮಾನಿಸಲು ಸಾಧ್ಯವಿಲ್ಲ. ಪ್ರಭಾವಳಿ ಮತ್ತು ಕಡತಗಳನ್ನು ಹೊರತುಪಡಿಸಿದರೆ ಗವಿಯೊಳಗಿನ ಕರಿಗತ್ತಲಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ.



'ಕೇಳಿರಿ, ಕೇಳಿರಿ...!' ಅದ್ದುವಿನ ಬಲ ಮಲಾಯಿಕು ಆವೇಶ ಬಂದವನಂತೆ ಗಟ್ಟಿಯಾದ ಧ್ವನಿಯಲ್ಲಿ ಹೇಳಲಾರಂಭಿಸಿದ್ದ!, 'ತಮ್ಮ ಪತ್ನಿಯರನ್ನು ತ್ಯಜಿಸಿದೆವೆಂದು ಶಪಥ ಹಾಕುವವರಿಗೆ ನಾಲ್ಕು ತಿಂಗಳ ಅವಧಿಯುಂಟು. ತಲಾಕ್ ಧರ್ಮ ಬದ್ಧವಾಗಬೇಕಾದರೆ ಪ್ರತಿಯೊಂದು ತಲಾಕ್ ಘೋಷಣೆಯ ನಡುವೆಯೂ ಸ್ತ್ರೀಯ ಆರ್ತವ ಕಾಲವಾಗಿರುವ ಮೂವತ್ತು ದಿನಗಳ ಅಂತರವಿರಬೇಕು. ಆ ಅವಧಿಯೊಳಗೆ ಅವರು ಮರಳಿದರೆ ಪ್ರಭು ಕ್ಷಮಿಸುವನು. ತಲಾಕ್ ಪಡೆದ ಸ್ತ್ರೀ ಮೂರು ಆರ್ತವ ಕಾಲದವರೆಗೂ ತಡೆದುಕೊಳ್ಳಬೇಕು. ಈ ಕಾಲಾವಧಿಯಲ್ಲಿ ಅವರ ಪತಿ ಸಂಬಂಧವನ್ನು ಸುಗಮಗೊಳಿಸಲು ಬಯಸಿದರೆ, ಪತಿಯನ್ನು ಸ್ವೀಕರಿಸಲು ಹಕ್ಕುಳ್ಳವರಾಗುತ್ತಾರೆ, ಮಹಾಬಲಿಷ್ಠನಾದ ಪ್ರಭು ವಿವೇಕಪೂರ್ಣನೂ ಆಗಿರುತ್ತಾನೆ'.

'ಸರ್ವ ಸ್ತುತಿಗಳು ಸರ್ವ ಲೋಕಗಳ ಪ್ರಭುವಿಗೆ' – ಸಂಜೀವನ ಬಲ ಮಲಾಯಿಕು ಗೆಲುವಿನ ಸ್ವರದಲ್ಲಿ ಹೇಳಿದ, 'ಕೇಳಿದಿರಾ? ಈಗ ನೀವು ಕೇಳಿದಿರಾ? ಅದ್ದು ನೀಡಿದನೆಂದು ಭಾವಿಸಲಾಗಿರುವ ತಲಾಕ್ ಪರಿಪೂರ್ಣವಲ್ಲ. ಅವನು ಒಂದೇ ಉಸಿರಿನಲ್ಲಿ ಮೂರು ಬಾರಿ ತಲಾಕ್ ಉಚ್ಚರಿಸಿ ಹೋದವನು. ಅವನು ತಲಾಕ್ ಉಚ್ಚಾರಣೆಯ ನಡುವೆ ಸ್ತ್ರೀಯ ಆರ್ತವ ಕಾಲದ ಬಿಡುವು ನೀಡಿರಲೇ ಇಲ್ಲ. ಆದ್ದರಿಂದ, ಅವನು ತಪ್ಪು ಕಾರಣ ನೀಡಿ ಪತ್ನಿಗೆ ತಲಾಕ್ ನೀಡಿದನು ಎಂಬ ಪಾಪದಿಂದ ಮುಕ್ತನಾಗುತ್ತಾನೆ'.

'ಮುಕ್ತನಾಗುತ್ತಾನೆ, ಮುಕ್ತನಾಗುತ್ತಾನೆ!' ಎಲ್ಲರೂ ದನಿ ಸೇರಿಸಿದರು.

'ಅದ್ದು ಮತ್ತು ಸಲ್ಮಾ ತಲಾಕಿನ ಪರಿಪೂರ್ಣ ವಿಧಿಗಳನ್ನು ಪೂರೈಸುವ ಮುನ್ನವೇ ಜತೆಗೂಡಿರುವುದು ಧರ್ಮಸಮ್ಮತವಾಗಿಯೇ ಇದೆಯಲ್ಲವೆ?' ಸಲ್ಮಾಳ ಬಲಮಲಾಯಿಕು ಪ್ರಶ್ನಿಸಿದ್ದ.

'ಹೌದು, ಹೌದು!'

ಸಂಜೀವನ ಬಲ ಮಲಾಯಿಕು ನಿಧಾನವಾಗಿ ಹೇಳತೊಡಗಿದ್ದ, 'ಸೀದಿ ಸಾಹುಕಾರರು ಧರ್ಮಶಾಸ್ತ್ರವನ್ನು ಸರಿಯಾಗಿ ತಿಳಿದುಕೊಂಡಿರುತ್ತಿದ್ದರೆ, ಅವರು ಅದ್ದು

ನೀಡಿದ ತಲಾಕ್ ಪರಿಪೂರ್ಣ ತಲಾಕ್ ಅಲ್ಲವೆಂದು ಪರಿಗಣಿಸಬೇಕಾಗಿತ್ತು. ಆದರೆ ಸಂಜೀವನ ಬಗ್ಗೆ ಅವರಿಗಿದ್ದ ದ್ವೇಷವು ಅವರ ವಿವೇಕವನ್ನು ಕುರುಡು ಮಾಡಿತ್ತು. ಸಂಜೀವನ ವಿನಂತಿಯಂತೆ ಅದ್ದುವನ್ನು ಕರೆಸಿ ವಿಚಾರಿಸಿರುತ್ತಿದ್ದರೆ ಪತಿ ಪತ್ನಿಯರನ್ನು ಒಂದುಗೂಡಿಸಿದ ಪುಣ್ಯಕ್ಕೆ ಅವರು ಹಕ್ಕುದಾರರಾಗುತ್ತಿದ್ದರು.

'ಆದ್ದರಿಂದ ಧರ್ಮಸಮ್ಮತವಾಗಿದ್ದ ದಾಂಪತ್ಯವನ್ನು ತಮ್ಮ ಅಜ್ಞಾನದ ಕಾರಣದಿಂದ ಅಕ್ರಮವೆಂದು ತೀರ್ಮಾನಿಸಿದ ಮತ್ತು ತಮ್ಮ ತಪ್ಪು ತೀರ್ಮಾನದ ಸಮರ್ಥನೆಗಾಗಿ ದಿವ್ಯವಾಣಿಯನ್ನು ಉದ್ಧರಿಸುವ ಮೂಲಕ ಜಮಾತಿನ ಇತರ ಸದಸ್ಯರ ವಿವೇಕವನ್ನು ಕುರುಡು ಮಾಡಿದ ಅವರ ಈ ಕೃತ್ಯವನ್ನು ಪಾಪದ ಕಡತದಲ್ಲಿ ಸೇರಿಸಬೇಕು'.

'ಸೇರಿಸಬೇಕು ಸೇರಿಸಬೇಕು!'

ಸಲ್ಮಾಳ ಬಲ ಮಲಾಯಿಕು ಉತ್ಸಾಹದಿಂದ ಹೇಳಿದ್ದ, 'ಹಾಗಾದರೆ ಅದ್ದು, ಮತ್ತು ಸಲ್ಮಾರನ್ನು ಜತೆಗೂಡಿಸಿದ ಸಂಜೀವ ಮತ್ತು ಗಿರಿಜ ಪುಣ್ಯವಂತರಾಗುತ್ತಾರೆ, ಪರಿಪೂರ್ಣವಾದ ತಲಾಕ್ ನೀಡದೆ ಪತ್ನಿಯರನ್ನು ನಡುನೀರಿನಲ್ಲಿ ಕೈಬಿಡುವ ಘೋರ ಪಾಪದಿಂದ ಪತಿಯನ್ನು ಪಾರು ಮಾಡಿದ ಮಹಾಪುಣ್ಯಕ್ಕೂ ಬಾಧ್ಯಸ್ಥರಾಗುತ್ತಾರೆ'.

'ಅದಷ್ಟೇ ಅಲ್ಲ' ಸಂಜೀವನ ಮಲಾಯಿಕನು ಹೇಳಿದ, 'ಪತಿಯಿಂದ ಪರಿಪೂರ್ಣವಾದ ತಲಾಕ್ ಪಡೆಯದೆ, ತಲಾಕ್ ಪಡೆದಿರುವೆನೆಂದು ಭ್ರಮಿಸಿ ಬೇರೆ ಪತಿಯನ್ನು ವಿವಾಹವಾಗುವ, ಅಂದರೆ ವ್ಯಭಿಚಾರದ ಪಾಪದಿಂದ ಸ್ತ್ರೀಯೊಬ್ಬಳನ್ನು ಮುಕ್ತಗೊಳಿಸಿದ ಪುಣ್ಯಕ್ಕೂ ಅವರಿಬ್ಬರೂ ಹಕ್ಕುದಾರರಾಗುತ್ತಾರೆ'.

'ಹೌದು, ಹೌದು!'

'ಆದ್ದರಿಂದ ನಮ್ಮ ಕಡತಗಳನ್ನು ಧರ್ಮಸಮ್ಮತಗೊಳಿಸುವ ಶಕ್ತಿಯನ್ನು ದಯಪಾಲಿಸುವಂತೆ ಪ್ರಭುವನ್ನು ಸ್ತುತಿಸೋಣ' ಹಿರಿಯಾತ ಹೇಳಿದ,

'ಆಮೆನ್' ಎಲ್ಲರೂ ಪ್ರಾರ್ಥಿಸತೊಡಗಿದರು.

**'ಹಕ್ಕಿಗಳನ್ನು ಬೀಳದಂತೆ ಹಾರಲು ಅನುಗ್ರಹಿಸಿದವನೇ,**<br>
**ಮೀನುಗಳು ಮುಳುಗಿದರೂ ಸಾಯದಂತೆ**<br>
**ಕಣ್ಣು ಕಿವಿಗಳ ಜತೆ**<br>
**ಮನುಷ್ಯನಿಗೆ ವಿಚಾರಶಕ್ತಿಯನ್ನೂ**<br>
**ದಯಪಾಲಿಸಿದವನೇ,**<br>
**ನಿನ್ನ ದಿವ್ಯ ವಾಣಿಯನ್ನು ವಿವೇಕಪೂರ್ಣವಾಗಿ ಅರ್ಥೈಸುವ,**<br>
**ಲೋಕಕಲ್ಯಾಣಕ್ಕಾಗಿ ಧರ್ಮಗ್ರಂಥವನ್ನು**<br>
**ಬಳಸುವಾತನಿಗೆ**<br>
**ನಿನ್ನ ಸ್ವರ್ಗ ಮೀಸಲಿರಲಿ,**<br>
**ಭೂಮಿಯ ಮೇಲಿನ ಒಡೆತನ ಮತ್ತು ಅಧಿಕಾರಕ್ಕಾಗಿ**<br>
**ಕಣ್ಣು ಕಿವಿಗಳನ್ನಷ್ಟೇ ಪ್ರಮಾಣವಾಗಿಸಿಕೊಂಡು**<br>
**ನಿನ್ನ ದಿವ್ಯವಾಣಿಯನ್ನು ಅವಿವೇಕದಿಂದ**<br>
**ವಿಚಾರರಹಿತವಾಗಿ ಉದ್ಧರಿಸುವ ಮೂಲಕ**<br>
**ಅಶಕ್ತರನ್ನು ದುಃಖಕ್ಕೆ ದೂಡಿದವನನ್ನು ನರಕದ**<br>
**ಕೆಂಡದ ರಾಶಿಯ ಮೇಲೆ ನಿಲ್ಲಿಸು'.**



ಅಷ್ಟರಲ್ಲಿ ಪೀಠದ ಮೇಲೆ ಹೊಳೆಯುತ್ತಿದ್ದ ಪ್ರಭಾವಳಿಯು ಸಿಡಿದು ಸಹಸ್ರ ನಕ್ಷತ್ರಗಳಾದವು. ನೋಡುನೋಡುತ್ತಿರುವಂತೆಯೇ ಆ ಎಲ್ಲ ನಕ್ಷತ್ರಗಳು ಪರಸ್ಪರ ಜತೆಗೂಡಿ ಪೀಠದ ಮೇಲೆ ಉತ್ತರದಲ್ಲಿ ಬೆಳಕಿನ ಗೊಂಚಲೊಂದನ್ನು ನಿರ್ಮಿಸಿದವು.

ಈಗ ಗವಿಯೊಳಗೆ ಕತ್ತಲಿರಲಿಲ್ಲ. ಕಣ್ಣು ಕುಕ್ಕುವ ಬೆಳಕು ಹರಡಿತ್ತು. ಜಾಜ್ವಲ್ಯಮಾನವಾಗಿ ಹೊಳೆಯುತ್ತಿದ್ದ ನಕ್ಷತ್ರಗಳ ಗೊಂಚಲಿನ ಬೆಳಕಿನಲ್ಲಿ ಹತ್ತು ಮಲಾಯಿಕರು ತಮ್ಮ ತಮ್ಮ ಕಡತಗಳ ಸುರುಳಿ ಬಿಚ್ಚಿ ಮತ್ತೆ ಬರೆಯಲಾರಂಭಿಸುತ್ತಿದ್ದಂತೆ, ಬೆಳ್ಳಿ ಬೆಟ್ಟವು ಸ್ಫಟಿಕದಂತೆ ಪಾರದರ್ಶಕವಾಯಿತು. ಈಗ ಪ್ರಳಯ ಕ್ಷೇತ್ರದಲ್ಲಿ ವಿಶ್ವಸಿಂಹಾಸನದ ಎದುರು ನಿಂತು ದೇವಸ್ತುತಿ ನಡೆಸುತ್ತಿದ್ದವರೆಲ್ಲರೂ ಗವಿಯೊಳಗಿದ್ದವರಿಗೆ ಸ್ಪಷ್ಟವಾಗಿ ಕಾಣಿಸುತ್ತಿದ್ದರು; ಅವರ ಸ್ತುತಿಗಾನ ಇಂಪಾಗಿ ಕೇಳಿಸುತ್ತಿತ್ತು. ಎಲ್ಲವನ್ನೂ ಬರೆದು ಮುಗಿಸಿದ ಮಲಾಯಿಕರು ತಮ್ಮ ಕಡತಗಳನ್ನು ಬೆನ್ನಿಗೇರಿಸಿಕೊಂಡು ಹೊರಟು ನಿಂತಾಗ ಅವರ ಮುಖಗಳಲ್ಲಿ ತೃಪ್ತಿಯಿತ್ತು.

ಪ್ರಳಯ ಕ್ಷೇತ್ರದ ನಡುವೆಯಿದ್ದ ವಿಶ್ವಸಿಂಹಾಸನದತ್ತ ಪಾರಿವಾಳಗಳಂತೆ ಹಾರಿಬಂದ ಮಲಾಯಿಕರು ಗಿರಿಜ, ಸಲ್ಮಾ, ಸಂಜೀವ, ಅದ್ದು ಮತ್ತು ಸೀದಿ ಸಾಹುಕಾರರ ಬಲ ಎಡಗಳಲ್ಲಿ ನಿಂತುಕೊಂಡು, ಪ್ರಭುವಿನ ಸ್ತುತಿ ಮಾಡುತ್ತಾ, ಮೋಡಗಳ ನಡುವ ದಿವ್ಯ ಜ್ಯೋತಿ ಮೂಡುವುದನ್ನೇ ನಿರೀಕ್ಷೆ ಮಾಡತೊಡಗಿದರು.

---

ಅಖಿರತ್ = ಅಂತಿಮ ನ್ಯಾಯತೀರ್ಮಾನದ ದಿವಸ (ಪುನರುತ್ಥಾನದ ದಿವಸ)<br>
ಸೂರ್ = ಅಂತಿಮ ಕಹಳೆ.<br>
ಮಲಾಯಿಕ = ದೇವದೂತ<br>
ಮಗರಿಬು = ಮುಸ್ಸಂಜೆ<br>
ವಲು = ನಮಾಜಿಗಾಗಿ ದೇಹಶುದ್ಧಿ.

# ಜನ್ನತ್

**'ನರಕದವರು ಸ್ವರ್ಗದವರಿಗೆ ಕೂಗಿ ಹೇಳಿದರು:**
**ನಮ್ಮ ಮೇಲೆ ಒಂದಿಷ್ಟು ನೀರನ್ನು ಹನಿಸಿ ಬಿಡಿರಿ:**
**ಇಲ್ಲವೆ ಅಲ್ಲಾಹು ನಿಮಗೆ ಕರುಣಿಸಿರುವ**
**ಆಹಾರದಿಂದ ಏನನ್ನಾದರೂ (ಕೊಡಿರಿ)'**

**ಕುರಾನು : ಅಲ್ ಅರಾಫ್ : 50**

## 1

ಮುತ್ತುಪ್ಪಾಡಿ ಜುಮ್ಮಾ ಮಸೀದಿಯಲ್ಲಿ ಬಾಂಗ್ ಮೊಳಗಿದರೆ 'ಜನ್ನತ್ ಮಹಲಿ'ಗೆ ಕೇಳಿಸುವುದಿಲ್ಲ. ಅಷ್ಟೊಂದು ದೂರ : ನಡುವೆ ಗುಡ್ಡವೊಂದು ಅಡ್ಡ.

ಎಂಟು ಸಾಲು ಕರಿಗಲ್ಲು ಮೆಟ್ಟಲುಗಳ ಮೇಲೆ ಅಗಲವಾಗಿ ನಿಂತಿರುವ ಸುಲೇಮಾನ್ ಹಾಜಿಯವರ 'ಜನ್ನತ್ ಮಹಲ್'ನ ಎದುರಿನ ಅಂಗಳದಲ್ಲಿ ಈದ್ ನಮಾಜು ನೆರವೇರಿಸಬಹುದು; ಅಷ್ಟು ವಿಶಾಲವಾಗಿದೆ. ಒಂದು ಬದಿಯಲ್ಲಿ – ಗೇಟು ಹಾದು ಬರುವಾಗ ಬಲಕ್ಕೆ – ನಾಲ್ಕು ನೂರು ಮಂದಿ ಊಟಕ್ಕೆ ಕುಳಿತುಕೊಳ್ಳಬಹುದಾದಷ್ಟು ನೆಲಕ್ಕೆ ಸಿಮೆಂಟು ಹೊದಿಕೆ ಹಾಸಿದೆ. ಅಡಕೆ ಒಣಗಿಸಲು ಅಂಗಳದ ಸುತ್ತ ಆಳೆತ್ತರದ ಕೆಂಪುಕಲ್ಲಿನ ಕೋಟೆ. ಎರಡಾಳು ಎತ್ತರದ ಕಬ್ಬಿಣದ ಕಮಾನು ಬಾಗಿಲು ತೆರೆದರೆ ಎರಡು ಆನೆಗಳು ಜತೆ ಜತೆಯಾಗಿ ನಡೆದಾವು. ಪಕ್ಕದಲ್ಲೇ ಒಂದು ಚಿಕ್ಕ ಬಾಗಿಲು : ಜುಮ್ಮಾ ಮಸೀದಿಯ ಇಮಾಂ ಜನಾಬ್ ಮೂಸಾ ಮುಸ್ಲಿಯಾರರು ಹೋಗಿಬರಲು ಈ ಬಾಗಿಲು ಸಾಕು.



ನಂಬಿಕೆಯೊಂದೇ ಆಧಾರ. ಅವರಲ್ಲಿ ಎಳ್ಳಿನಷ್ಟೂ ಅನುಮಾನ ಅವರಲ್ಲಿಲ್ಲ. ಆಹಾರ ಮತ್ತು ನೀರನ್ನು ಅಲ್ಲಾಹು ನಿರಾಕರಿಸುವುದು ಸತ್ಯ ನಿಷೇಧಿಗಳಿಗೆ ಮಾತ್ರ : ತಮ್ಮಂತಹ ನಿಷ್ಠಾವಂತರಿಗಲ್ಲ ಎಂಬ ನಂಬಿಕೆಯೊಂದು ಗಟ್ಟಿಯಾಗಿ ಇಲ್ಲದೇ ಹೋಗಿದ್ದರೆ ಮೂಸಾ ಮುಸ್ಲಿಯಾರರ ಕಡ್ಡಿಯಂತಹ ಕಪ್ಪು ಕಾಲುಗಳಲ್ಲಿ ಇಷ್ಟೊಂದು ಬಲ ಉಳಿದಿರುತ್ತಿರಲಿಲ್ಲ. ದಿನಕ್ಕೆ ಮೂರು ಬಾರಿಯಂತೆ ಮಸೀದಿಯ ಬೆನ್ನ ಹಿಂದಿನ ಗುಡ್ಡ ಏರಿ ಪಂಚಾಯತು ಕಚೇರಿಯನ್ನು ಬಲದಿಂದ ಬಳಸಿಕೊಂಡು ಹುಣಸೆಮರಗಳ ನಡುವೆ ಇಳಿದು ಮುಂದಿನ ಒಂದೂವರೆ ಮೈಲುದ್ದದ ಹಾದಿಯಲ್ಲಿ – ನೆರಳೇ ಇಲ್ಲದ ಬಟ್ಟಬಯಲು – ಕಳೆದ ಕೆಲವು ದಿನಗಳಿಂದ ದಾಪುಗಾಲು ಹಾಕುವುದು ಮುಸ್ಲಿಯಾರರ ಈ ಐವತ್ತರ ಇಳಿವಯಸ್ಸಿನಲ್ಲಿ ಯಾರೂ ನಂಬದಂತಹ ಮಾತು.

ಮುಸ್ಲಿಯಾರರು ಇರುವುದೇ ಹಾಗೆ. ಕಪ್ಪು ಕೋಲಿಗೆ ಬಿಳಿ ಪತಾಕಎ ಸುತ್ತಿದಂತೆ ಜೋರಾಗಿ ಗಾಳಿ ಬೀಸಿದರೆ ಹಾರಿಯೇ ಹೋದಾರು : ಅಂತಹ ಕೋಲು ಶರೀರ. ಬೋಳು ತಲೆಯನ್ನು ಸುತ್ತಿಕೊಂಡಿರುವ ಬಿಳಿ ಮುಂಡಾಸು. ಅದರ ತುದಿಯೊಂದು ಬೆನ್ನ ಮೇಲೆ ಸದಾ ಹಾರುತ್ತಿರುತ್ತದೆ. ಗಲ್ಲದ ತುಂಬಾ ಬೆಳೆದು ಎದೆತನಕ ಇಳಿದು ಹೊಳೆಯುವ ಬೆಳ್ಳಿ ಗಡ್ಡ. ಉರುಟು ಚಕ್ರದಂತಿರುವ ಎರಡು ಕಣ್ಣುಗಳ ನಡುವೆ ಉದ್ದವಾಗಿ ಇಳಿದ ಮೂಗು, ಸದಾ ನಗುವ ಕೆಂಪು ತುಟಿಗಳು. ಇವುಗಳಷ್ಟೇ ಇಮಾಂ ಮೂಸಾ ಮುಸ್ಲಿಯಾರರ ಗಾಂಭೀರ್ಯವನ್ನು ಕಾಯುತ್ತಿರುವುದು.

ಇವತ್ತೇ ಕೊನೆ; ಇಂದು ಕೂಡಾ ಹಾಜಿಯವರು ಮಾತನಾಡಲು ಸಿಗದೇ ಹೋದರೆ ಮತ್ತೆಂದೂ ಈ ಮನೆಯ ಹೊಸ್ತಿಲು ತುಳಿಯಲಾರೆ ಎಂದು ಶಪಥ ಹಾಕಿಕೊಂಡೇ ಮುಸ್ಲಿಯಾರರು ಮೆಟ್ಟಲು ಹತ್ತಿದ್ದು. ರಾತ್ರಿಯ ನಮಾಜು ಮುಗಿಸಿಕೊಂಡು ಹೆಚ್ಚು ಕಮ್ಮಿ ಓಡುತ್ತಲೇ ಬಂದದ್ದರಿಂದ ಎದೆ ಸಣ್ಣಗೆ ನೋಯುತ್ತಿತ್ತು. ಗಬಗಬನೆ ಎರಡು ತುತ್ತು ಅನ್ನವನ್ನು ಬಾಯಿಗೆಸೆದುಕೊಂಡು ಕೈತೊಳೆದು ಬಂದು ಚಾವಡಿಯ ಮರದ ಸೋಫಾದ ಮೇಲೆ ಕುಳಿತಿದ್ದ ಮುಸ್ಲಿಯಾರರು ಅಸಹನೆಯಿಂದ ಕೈ ಹಿಚುಕಿಕೊಂಡರು. ಮನೆ ತುಂಬಾ ಮೌನ. ಹಾಜಿಯವರು ಮನೆಯಲ್ಲಿಲ್ಲದಿದ್ದರೆ ಗೋಡೆ ಗಡಿಯಾರದ ಸದ್ದು ಗೇಟಿನವರೆಗೂ ಕೇಳಿಸೀತು.

ಹಾಜಿಯವರು ತಮ್ಮ ಆಫೀಸು ರೂಮಿನಿಂದ ಮಲಗುವ ಮನೆಗೆ ಹೋಗಬೇಕಾದರೆ ಚಾವಡಿಯನ್ನು ದಾಟಲೇಬೇಕು. ಈ ಬಾರಿ ಒಳಬಾಗಿಲಿಗೆ ಅಡ್ಡವಾಗಿ ನಿಂತೇ ಮಾತನಾಡಿಸಬೇಕು. 'ಏನಾದರೊಂದು ತೀರ್ಮಾನ ಮಾಡುತ್ತೀರೊ ಇಲ್ಲವೋ' ಎಂದು ಸ್ವಲ್ಪ ಜೋರಾಗಿಯೇ ಪ್ರಶ್ನಿಸಬೇಕು. ಕೋಪ ಬಂದರೆ ಬರಲಿ. ನಾಳೆಯ

ಜಮಾತ್ ಮೀಟಿಂಗ್‌ಗೆ ಹಾಜಿಯವರು ಬಾರದೆ ಹೋದರೆ ತಾನು ವಿಷ ತಿನ್ನ ಬೇಕಾದೀತು. ಎಷ್ಟು ದಿನ ಅಂತ ಬೇರೆಯವರ ಹಂಗಿನಲ್ಲಿ ಹೊಟ್ಟೆ ತುಂಬಿಸಬಹುದು? ಛೆ! ಇದೆಂಥದ್ದು! ರಾತ್ರಿ ಒಂಭತ್ತು ಹೊಡೆದು ಬಹಳ ಹೊತ್ತಾಯಿತು. ಬೆಂಗಳೂರಿಗೆ ಫೋನ್ ಹಚ್ಚಿದರೆ ಏನಾಯಿತು? ಕೋಣೆಯೊಳಗೆ ಕೂತು ತಪ್ಪಿ ಹೇಳಲಿಕ್ಕುಂಟಾ? ಒಂದು ನಿಮಿಷದ ಮಟ್ಟಿಗಾದರೂ ಹೊರಗೆ ಬಂದು ಮಾತನಾಡಿಸಿ. ಹೋದರಾಗುವು ದಿಲ್ಲವೆ? ರಾತ್ರಿ ಹೊತ್ನಲ್ಲಿ ಈ ಮುದುಕನಿಗೆ ಎರಡು ಮೈಲು ನಡೀಲಿಕ್ಕುಂಟು ಎಂಬುದು ಅವರಿಗೆ ಗೊತ್ತಿಲ್ಲದ ವಿಷಯವಾ?

ಹಾಜಿಯವರು ಊರಿಗೆ ಬಂದಿದ್ದ ಸುದ್ದಿ ಮುಸ್ಲಿಯಾರರಿಗೆ ಬೆಳಗ್ಗೆಯೇ ಸಿಕ್ಕಿತ್ತು. ರಾತ್ರಿಯೆಲ್ಲ ನಿದ್ರೆಗೆಟ್ಟು ಬಂದಿರುತ್ತಾರೆ. ಮಧ್ಯಾಹ್ನ ಹೋಗಿ ಕಂಡರಾಯಿತು ಎಂದು ನಿರ್ಧರಿಸಿದ್ದೇ ತಪ್ಪಾಯಿತು. ಮಧ್ಯಾಹ್ನ ಬಂದು ವಿಚಾರಿಸಿದಾಗ 'ಮಿಲ್ಲಿಗೆ ಹೋಗಿದ್ದಾರೆ, ಸಂಜೆ ಬಂದಾರು' ಎಂಬ ಉತ್ತರ ಸಿಕ್ಕಿತ್ತು.

ಸುಲೇಮಾನ್ ಹಾಜಿಯವರದ್ದು ಬಹಳ ಗಡಿಬಿಡಿಯ ಬದುಕು. ಊರ ಹೊರ ಗೊಂದು 'ಸಾ–ಮಿಲ್ಲು', ಸ್ವಂತದ್ದು. ಊರೊಳಗಿನ ಕಾಮತ್ ರೈಸ್ ಮಿಲ್ಲಿನಲ್ಲಿ ಎಂಟಾಣೆ ಪಾರ್ಟ್ನರ್ ಶಿಪ್ಪು. ಎರಡು ಲೇಲ್ಯಾಂಡ್ ಲಾರಿ, ಒಂದು ಜೀಪು. ಹೊಸ ಮಾರುತಿ ಮುಂದಿನ ತಿಂಗಳು ಬಂದೀತು. ಈ ಬಾರಿ ಬಂದದ್ದೆಲ್ಲ ಕಡು ಕೆಂಪು ಬಣ್ಣದ್ದು. ಹಾಜಿ ಯವರಿಗೆ ಹಸಿರು ಬಣ್ಣದ್ದೇ ಆಗಬೇಕು. ಮುಂದಿನ ಸಲ ಖಂಡಿತ ತರಿಸಿಕೊಡುತ್ತೇವೆ ಅಂತ ಬರೆದುಕೂಡಾ ಕೊಟ್ಟಿದ್ದಾರೆ. ಆರ್.ಟಿ.ಓ. ಆಫೀಸಿನಲ್ಲಿ 786 ನಂಬರಿಗಾಗಿ ಸ್ಪೆಶಲ್ ಫೀಸು ಕಟ್ಟಿ ನಾಲ್ಕು ತಿಂಗಳು ದಾಟಿದೆ. ಸಕಲೇಶಪುರದ ಹತ್ತಿರ ನಲ್ವತ್ತೆರಡು ಎಕರೆ ಕಾಫಿ ತೋಟ ಕೊಳ್ಳುವ ಬಗ್ಗೆ ಒಂದು ವರ್ಷದಿಂದ ಮಾತು ನಡೆಯುತ್ತಿದೆ. ಬ್ಯಾಂಕ್‌ನವರದ್ದೇ ತಕರಾರು. ವಾರಕ್ಕೆರಡು ಬಾರಿ ಬೆಂಗಳೂರು ಓಡಾಟ. ಸ್ಟೇಟ್ ಫೈನಾನ್ಸ್ ಕಾರ್ಪೊರೇಶನ್‌ನ ಹಿರಿಯ ಅಧಿಕಾರಿಯೊಬ್ಬರ ಹೆಂಡತಿ ತಮ್ಮನೊಬ್ಬ ಇಪ್ಪತ್ತು ಸಾವಿರ ತೆಗೆದುಕೊಂಡವನು ಈಗ ಆಟ ಆಡುತ್ತಿದ್ದಾನೆ. ಕೊಟ್ಟದ್ದನ್ನು ವಾಪಾಸು ಕೇಳುವುದಾ ಬಿಡುವುದಾ ಎಂಬ ಗೊಂದಲ. ಒಟ್ಟಿನಲ್ಲಿ ಹಾಜಿಯವರಿಗೆ ಪುರುಸೊತ್ತು ಎಂಬುದು ಇಲ್ಲ. ಫೋನು ಬುಕ್ ಮಾಡಿ ಒಂದು ತಾಸಾದರೂ ಲೈನು ಸಿಗುತ್ತಿಲ್ಲ. ಯಾವಾಗ ವಿಚಾರಿಸಿದರೂ 'ಲೈನು ಫಾಲ್ಟ್ ಇರಬೇಕು. ಟ್ರೈ ಮಾಡ್ತಾ ಇದ್ದೇವೆ' ಎಂಬ ಉತ್ತರ. ಲೈಟ್ನಿಂಗ್ ಕಾಲೇ ಮಾಡಬೇಕಿತ್ತು. ಇದಿಷ್ಟು ಹೊತ್ತು ಕಾದ ಬಳಿಕ ಈಗ ಲೈಟ್ನಿಂಗ್ ಮಾಡಲು ಇಷ್ಟವಿಲ್ಲ. ದುಡ್ಡು ದಂಡ. ಹಾಜಿಯವರದ್ದು ಅದ್ಭುತ ತಾಳ್ಮೆ. ಬಿಸಿನೆಸ್‌ಗೆ ಬೇಕಾದದ್ದೇ ಅದು. ಕಾದು ಎಂಪಾಗಿ ಮೆತ್ತಗಾಗುವ ತನಕ ಕಾಯಲೇಬೇಕು. ಗಟ್ಟಿ ಇರುವಾಗ ತಲೆ ಹೊಡೆದರೆ ತಲೆಯೇ ಚಟ್ನಿಯಾದೀತು. ಏನೇ ಆಗಲಿ ಆ



ಕಾಮತ ಕಾಫಿರ್ ಆದ್ರೆ ಏನಾಯಿತು? ಬಿಸಿನೆಸ್ ಎಂದರೆ ಏನು ಅಂತ ಅವನ ಹತ್ರ ಕಲೀಬೇಕು. ಅವನ ಸಪೋರ್ಟು ಇಲ್ಲ ಅಂತ ಆಗಿದ್ರೆ ತಾನು ತಂದೆಯವರ ಹಾಗೆ ಐದು ಹೊತ್ತು ನಮಾಜು ಮಾಡ್ತಾ ಗದ್ದೆ ಉಳಬೇಕಿತ್ತು; ಅಷ್ಟೆ ಒಕ್ಕಲು ಮಸೂದೆಯಿಂದಾಗಿ ಕೈಯಲ್ಲಿ ಉಳಿದದ್ದರಲ್ಲಿ ಫೋನು ಬಿಲ್ಲು ಕಟ್ಟಲಿಕ್ಕೂ ಸಾಧ್ಯವಿರುತ್ತಿರಲಿಲ್ಲ. ಚೆನ್ನಪ್ಪ ಗೌಡರು ಮಾಡಿಕೊಂಡ ಹಾಗೆ ಎಂಡ್ರೆಕ್ಸ್ ಕುಡೀಬೇಕಾಗುತ್ತಿತ್ತು. ಹದಿನೆಂಟು ಸಾವಿರದ ಫರ್ನಿಚರ್ರು ಹಾಕಿ ಯಾವ ಮಗ ಅವನ ಮನೆಯಲ್ಲಿ ಆಫೀಸು ರೂಮು ಮಾಡಿದ್ದಾನೆ? ಏ.ಸೀ. ಹಾಕಲು ಆ ಕಾಮತನದ್ದೇ ವಿರೋಧ. 'ನಿಮ್ಗೆ ಗೊತ್ತಿಲ್ಲ. ಹಾಜಾರ್ರೇ, ನಿಮ್ಮಲ್ಲಿ ಉಂಟು ಅಂತ ಮಾಡ್ತಾ ಹೋದ್ರೆ ಆ ಟ್ಯಾಕ್ಸಿನವರು ನಮ್ಮ ಅಂಡರ್‌ವೇರು ಕೂಡಾ ಕಿತ್ತು ಕೊಳ್ತಾರೆ'. ಏನು ಮಾಡುವುದಾದರೂ ಹಾಜಿಯವರಿಗೆ ಕಾಮತರ ಐಡಿಯಾ ಬೇಕು. ಆಫೀಸು ರೂಮಿಗೆ ರೋಸ್ ವುಡ್ಡಿನದ್ದೇ ಗೋಡೆ. ನೆಲದಗಲ ಮೆತ್ತನೆಯ ಕಾರ್ಪೆಟ್ಟು.

ಅಪ್ಪಣೆಯಿಲ್ಲದ ಪ್ರವೇಶವಿಲ್ಲ : ಬೋರ್ಡು ಹಾಕಲಿಲ್ಲವೇನೋ ನಿಜ. ಆದರೆ ಹಾಜಿಯವರ ತಾಯಿ ಕೂಡಾ ಆಫೀಸು ರೂಮಿನೊಳಗೆ ಕಾಲಿಟ್ಟವರಲ್ಲ. ಆ ಕೋಣೆಯ ಬಣ್ಣ ಎಂಥದ್ದು ಎನ್ನುವುದು ಕೂಡಾ ಮೂಸಾ ಮುಸ್ಲಿಯಾರರಿಗೆ ಗೊತ್ತಿಲ್ಲ. ಅವರು ಚಾವಡಿಯಲ್ಲಿ ಕತ್ತು ಉದ್ದ ಮಾಡಿ ಕೊಕ್ಕರೆಯಂತೆ ಆಫೀಸು ರೂಮಿನ ಮುಚ್ಚಿದ್ದ ಬಾಗಿಲು ನೋಡಿದ್ದೇ ಬಂತು.

ಹೊರಗಡೆ ನಾಯಿಗಳನ್ನು ಬಿಟ್ಟಿದ್ದಿರಬಹುದು. ಶಂಕರಪ್ಪ ಇರುತ್ತಾನೆನ್ನುವುದೇ ಸಮಾಧಾನ. ಇಲ್ಲದೇ ಹೋದರೆ ರಕ್ಕಸರಂತಹ ನಾಯಿಗಳಿಂದ ಬಚಾವಾಗುವುದುಂಟಾ? ಅದಕ್ಕೆ ಅಲ್ಲವೇ ಹೊರಗೆ ಗೇಟಿಗೆ ಬೋರ್ಡು ಹಾಕಿದ್ದು? ಕೆಂಪು ಬಣ್ಣದಲ್ಲಿ ಬರೆದಿರುವ ಪರಂಗಿ ಭಾಷೆಯ ಬೋರ್ಡು; ನಾಯಿಯೊಂದರ ತೆರೆದ ಬಾಯಿಯ ಚಿತ್ರ ಅದರಲ್ಲಿಲ್ಲದೇ ಹೋಗಿದ್ದರೆ ಮುಸ್ಲಿಯಾರರಿಗೆ ಅದೇನೆಂದೇ ಗೊತ್ತಾಗುತ್ತಿರಲಿಲ್ಲ. ಎರಡು ವರ್ಷಗಳ ಕೆಳಗೆ ಬೆಂಗಳೂರಿಂದ ತಂದಿದ್ದಾಗ ಕಪ್ಪು ಬೆಕ್ಕುಗಳಂತಿದ್ದ ನಾಯಿಗಳೆರಡೂ ಈಗ ಮುಸ್ಲಿಯಾರರ ಸೊಂಟದ ಎತ್ತರಕ್ಕೆ ಬೆಳೆದು ನಿಂತಿವೆ. ಸಣ್ಣ ಗೇಟಿನ ಬಳಿಯೇ ಅವುಗಳಿಗಾಗಿ ಕಟ್ಟಿದ ಪುಟ್ಟ ಮನೆ. ಹಗಲೆಲ್ಲ ಒಳಗೆಯೇ ಇರುತ್ತವೆ. ಗೇಟಿನ ಮೇಲೆ ನೊಣ ಕೂತರೂ ಸಾಕು; ಕಿವಿಕುತ್ತ ಮಾಡುತ್ತಾ ಕಂಬಿಗಳ ಒಳಗೆಯೇ ಇರುತ್ತವೆ. ಮೊದ ಮೊದಲೆಲ್ಲ ಬಹಳಷ್ಟು ಹುಡುಗರು ಅವುಗಳನ್ನು ಕರಡಿಮರಿಗಳೆಂದೇ ನಂಬಿದ್ದು, ಆದರೆ ಬುದ್ಧಿವಂತನೊಬ್ಬ 'ಕರಡಿಗಾದರೆ ಮೈತುಂಬ ರೋಮವಿರಲೇಬೇಕು' ಎಂದು ಪಂಥ ಕಟ್ಟಿದ್ದರಿಂದ ಸಾಕಷ್ಟು ಚರ್ಚೆ ನಡೆದು ಕೊನೆಗೊಮ್ಮೆ ಮುತ್ತುಪ್ಪಾಡಿಯ ಎಲ್ಲರಿಗೂ ಆ ನಾಯಿಗಳ ಜಾತಿ, ಹೆಸರು ಕಂಠಪಾಠವಾಗಿತ್ತು.

ಡಬ್ಬರ್‌ಮೆನ್ನುಗಳನ್ನು ಹಗಲು ಹೊತ್ತಿನಲ್ಲಿ ಹೊರಗೆ ಬಿಡುವುದಿಲ್ಲವೆಂಬುದು ಮುಸ್ಲಿಯಾರರಿಗೆ ಚೆನ್ನಾಗಿ ಗೊತ್ತು. ಕೆಲವೊಮ್ಮೆ ರಾತ್ರಿಯ ಊಟ ಬಡಿಸುವ ಹುಡುಗ ತಡ ಮಾಡಿದರೆ ಮುಸ್ಲಿಯಾರರಿಗೆ ಅಂಗಳ ದಾಟುವತನಕ ಉಸಿರಾಟವೂ ಮರೆತು ಹೋಗುತ್ತಿತ್ತು. ನಾಯಿಗಳ ವಾಚ್‌ಮೆನ್ ಶಂಕರಪ್ಪ ಎರಡೂ ನಾಯಿಗಳ ಕೊರಳು ಪಟ್ಟಿಗಳನ್ನು ಹಿಡಿದುಕೊಂಡದ್ದು ಬಿಗಿಯಾಗಿದೆ ಎಂಬುವುದನ್ನು ಖಾತರಿಪಡಿಸಿಕೊಂಡೇ ಅವರು ಹೊಸಿಲು ದಾಟುತ್ತಿದ್ದರು.

ಹಿಂದೆ ಇದ್ದ ಟಾಮಿಗಾದರೆ ಮುಸ್ಲಿಯಾರರ ಗುರುತು ಇತ್ತು. ಮುಸ್ಲಿಯಾರರನ್ನು ಮುಟ್ಟಬಾರದು ಎಂಬ ನಿಯಮವೂ ಅದಕ್ಕೆ ಗೊತ್ತಿತ್ತು. ಎಷ್ಟಾದರೂ ಅದು ಮುತ್ತುಪ್ಪಾಡಿಯಲ್ಲೇ ಹುಟ್ಟಿ ಬೆಳೆದದ್ದು. ಈ ಪರದೇಶೀ ನಾಯಿಗಳಿಗೆ ಅದೊಂದೂ ಇಲ್ಲ. ಸೈತಾನನ ಸಂತಾನ. ಕಳೆದ ಎರಡು ವರ್ಷಗಳಿಂದ ಬಂದು ಹೋಗುತ್ತಿರುವ ಮುಸ್ಲಿಯಾರರಿಗೆ ಗುರುತು ಹೋಗಲಿ, ಸ್ವತಃ ತಮಗೆ ಅನ್ನ ನೀಡುವ ಧಣಿ ಸುಲೇಮಾನ್ ಹಾಜಿಯವರನ್ನೂ ಅನುಮಾನದಿಂದ ದಿಟ್ಟಿಸುವ ಜಾತಿ. ವಾರದಲ್ಲಿ ಆರು ದಿನ ಕಾಸರಗೋಡು, ಬೆಂಗಳೂರು ಅಂತ ಓಡಾಡುತ್ತಿರುವ ಹಾಜಿಯವರು ಜನ್ನತ್ ಮಹಲ್‌ನಲ್ಲಿ ಇರುವುದೇ ಅಪರೂಪ; ನಾಯಿಗಳದ್ದಾದರೂ ಏನು ತಪ್ಪು?

ಅವರವರ ತಾಪತ್ರಯ ಅನುಭವಿಸಿದವರಿಗೇ ಗೊತ್ತು. ನೋಡುವವರು ಏನು ಬೇಕಾದರೂ ಹೇಳಿಯಾರು; ಹಾಜಾರ್‍ರು ಊಟ ಮಾಡುವುದೋ ಬಂಗಾರದ ಪ್ಲೇಟಿನಲ್ಲಿ ಅಂತ. ಆದರೆ ಹೊತ್ತಿಗೆ ಸರಿಯಾಗಿ ಒಮ್ಮೆಯಾದರೂ ರೋಸುವುಡ್ಡಿನ ಡೈನಿಂಗ್ ಟೇಬಲಿನ ಎದುರು ಕೂತುಕೊಳ್ಳುವ ಭಾಗ್ಯವನ್ನು ಅಲ್ಲಾಹು ಬರೆದದ್ದಿಲ್ಲ. ಮುಸ್ಲಿಯಾರರ ಸಮಸ್ಯೆಯ ಬಗ್ಗೆ ಹಾಜಿಯವರಿಗೆ ಸಂಪೂರ್ಣವಾದ ಸಹಾನುಭೂತಿಯುಂಟು. ಆದರೆ ಯಾವುದನ್ನು ಮಾಡುವುದಕ್ಕೂ ಪುರುಸೊತ್ತು ಅಂತ ಒಂದು ಬೇಕಲ್ಲ? ಜಮಾತ್ ಮೀಟಿಂಗ್ ಉಂಟು ಅಂತ ಮಿಲ್ಲು ಬಂದ್ ಮಾಡಲಿಕ್ಕೆ ಆಗ್ತದಾ? ಬಿಸಿನೆಸ್ ಅಂದರೆ ಅದೇನು ಕುಶಾಲಾ? ಇನ್ನೊಂದು ಆರೇಳು ವರ್ಷದಲ್ಲಿ ಮಗ ಇಂಜಿನಿಯರಾಗಿ ಕೈಗೆ ಸಿಕ್ಕಿದ ಬಳಿಕ ಸ್ವಲ್ಪ ಭಾರ ಕಡಿಮೆಯಾದೀತು.

ಹಾಜಿಯವರನ್ನು ಕಾಣಲಿರುವ ಆತುರದಲ್ಲಿ ಸರಿಯಾಗಿ ಊಟವನ್ನು ಮಾಡದ ಮುಸ್ಲಿಯಾರರಿಗೆ ಈಗ ಹಸಿವಾಗಲಾರಂಭಿಸಿತ್ತು. ಅರ್ಧ ತಾಸು ಕಾದರೂ ಹಾಜಿಯವರು ಹೊರಗೆ ಬರುವ ಲಕ್ಷಣವಿಲ್ಲ. ಹೊಟ್ಟೆಯೊಂದು ಇಲ್ಲದೇ ಹೋಗಿದ್ದರೆ ಯಾರನ್ನು ಕೇರ್ ಮಾಡುವ ಅಗತ್ಯವಿದ್ದಿರಲಿಲ್ಲ. ಮುತ್ತುಪ್ಪಾಡಿಯ ಸಹವಾಸಕ್ಕೇ ದೊಡ್ಡ ಸಲಾಮು ಹೇಳಬಹುದಿತ್ತು. ಚೊಚ್ಚಲ ಹೆರಿಗೆಯಲ್ಲಿ ಹೆಂಡತಿ ಮಗುವಿನ ಜತೆ ತೀರಿಕೊಂಡ ವರ್ಷದಲ್ಲೇ ಗಂಟು ಮೂಟೆ ಕಟ್ಟಿದ್ದವರು ಊರವರ ಒತ್ತಾಯಕ್ಕೆ ಕರಗಿ ನಿಂತದ್ದೇ



ತಪ್ಪಾಯಿತು. ಆಗ ದೇಹದಲ್ಲಿ ಶಕ್ತಿಯಿತ್ತು. ಮೀನು ಬುಟ್ಟಿ ಹೊತ್ತಾದರೂ ನಾಲ್ಕಾಣೆ ಸಂಪಾದಿಸಬಹುದಿತ್ತು. ಈಗ ಎಲ್ಲಿಗೆಂತ ಹೋಗುವುದು? ಯಾರಿದ್ದಾರೆ ತಮಗೆ?

'ಹುಡುಗನಿಗೆ ಹಸಿವಾಗುತ್ತದಾ?' ಮುತ್ತುಪ್ಪಾಡಿ ಜುಮ್ಮಾ ಮಸೀದಿಯ ಹೊರಗೆ ಮೆಟ್ಟಿಲುಗಳ ಮೇಲೆ ಮುಂಜಾನೆಯ ಚಳಿಗೆ ಮುದುಡಿ ನಡುಗುತ್ತಾ ಕೂತಿದ್ದ ಹುಡುಗ ಮೂಸಾನನ್ನು ಕೈಹಿಡಿದು ಎಬ್ಬಿಸಿ ಕೆರೆಯಲ್ಲಿ – ಆಗ ಕೆರೆಗೆ ಈಗಿನಂತೆ ಕಲ್ಲಿನ ಮೆಟ್ಟಿಲು ಗಳಿದ್ದಿರಲ್ಲಿಲ್ಲ – ಕೈಕಾಲು ತೊಳೆಸಿ ಮಸೀದಿಯ ಒಳಗಡೆ ಕರೆದುಕೊಂಡು ಬಂದಿದ್ದ ಆಗಿನ ಇಮಾಂ ರಹಮಾನ್ ಕೋಯಾರವರು ಮೊತ್ತ ಮೊದಲು ಕೇಳಿದ್ದ ಪ್ರಶ್ನೆ ಇದು. ಮುಸ್ಲಿಯಾರರಿಗೆ ಮತ್ತೆ ಮತ್ತೆ ನೆನಪಾಗುವ ನಲುವತ್ತು ವರ್ಷಗಳಷ್ಟು ಹಳೆಯ ಪ್ರಶ್ನೆ 'ಹುಡುಗನಿಗೆ ಹಸಿವಾಗ್ತದಾ?'. ರಹಮಾನ್ ಕೋಯಾರವರು ಬದುಕಿರುತ್ತಿದ್ದರೆ ಈವತ್ತೂ ಕೇಳುತ್ತಿದ್ದರು; 'ಹುಡುಗನಿಗೆ ಹಸಿವಾಗ್ತದಾ?'

ತನ್ನ ತಂದೆ ಈ ಪ್ರಶ್ನೆ ಕೇಳಿದ್ದಿರಬಹುದೆ? ತಂದೆಯನ್ನು ಕಂಡ ನೆನಪೂ ಮೂಸಾ ಮುಸ್ಲಿಯಾರರಿಗಿಲ್ಲ. ಅವರಿಗೆ ಸ್ವಂತ ದೋಣಿಯಿತ್ತಂತೆ. ಕೆಲವೊಮ್ಮೆ ಮಸುಕಾಗಿ ನೆನಪಾಗುವುದು ಇಷ್ಟು ಮಾತ್ರ. ಕುಂದಾಪುರದ ಬಳಿಯ ಯಾವುದೋ ಹೊಳೆ ಬದಿಯಲ್ಲಿದ್ದ ಸೋಗೆ ಸೂರಿನ ಗುಡಿಸಲು. ಶಾಲೆಯ ಹಿಂದಿನ ಊರ ದೇವಸ್ಥಾನ, ಬೇಸಿಗೆಯ ರಾತ್ರಿಯೆಲ್ಲ ನಡೆಯುತ್ತಿದ್ದ ಯಕ್ಷಗಾನದ ಬಯಲಾಟ. ಆಟದ ಮಾರನೆಯ ದಿನ ನಸುಕಿನಲ್ಲೇ ಎದ್ದು ಗದ್ದೆಯಲ್ಲಿ ಹುಡುಕಿದರೆ ಸಿಗುತ್ತಿದ್ದ ನೆಲಗಡಲೆ ಬೀಜಗಳು. ಇಬ್ಬನಿಗೆ ತುಸು ಮೆತ್ತಗಾದರೂ ರುಚಿ ಕಳೆದುಕೊಂಡಿರದ ಬೀಜಗಳು. ಮನೆಯೊಳಗೆ ಕಾಲಿಡುವಂತೆಯೇ ಸದಾ ಪಿರಿಪಿರಿ ಮಾಡುವ ದೊಡ್ಡಪ್ಪ. ಅಮ್ಮನ ಗೂರಲು ಕೆಮ್ಮು. ಎಲ್ಲದರಿಂದಲೂ ತಪ್ಪಿಸಿಕೊಳ್ಳಲು ಯಾವುದೋ ಲಾರಿ ಹತ್ತಿ, ಮತ್ತೆಲ್ಲಿಯೋ ಇಳಿದು ಮೂಗಿನ ನೇರಕ್ಕೆ ನಡೆದ ಪೀಚಲು ಹುಡುಗ – ಹತ್ತು ವರ್ಷ ತುಂಬಿದ್ದರೂ ಎಂಟರಂತೆ ಕಾಣಿಸುತ್ತಿದ್ದವನು ಮುತ್ತುಪ್ಪಾಡಿ ಜುಮ್ಮಾ ಮಸೀದಿಯ ಮೆಟ್ಟಲುಗಳ ಬಳಿಗೆ ಬಂದಿದ್ದಾಗ ಹುಣ್ಣಿಮೆಯ ಚಂದ್ರ ನಡು ಆಕಾಶದಲ್ಲಿದ್ದ.

ಸೂರ್ಯ ಕಣ್ಣು ಬಿಡುವ ಮೊದಲೇ ಎದ್ದು ಮಸೀದಿಯ ಕೆರೆಯತ್ತ ಹೊರಟಿದ್ದ ಹಳೆಯ ಇಮಾಂ ರಹಮಾನ್ ಕೋಯಾರವರ ಕಣ್ಣುಗಳಿಗೆ ಬಿದ್ದ ಹುಡುಗ, ಮುಂದೆ ಇಪ್ಪತ್ತು ವರ್ಷಗಳ ಕಾಲ ಅವರ ಕಣ್ಣು ಗೊಂಬೆಯೇ ಆಗಿ ಬೆಳೆದ. ತಮಗೆ ತಿಳಿದಿದ್ದ ಎಲ್ಲ ಧಾರ್ಮಿಕ ವಿಧಿವಿಧಾನಗಳನ್ನೂ ಅರೆದರೆದು ಮೂಸಾರ ತಲೆಯೊಳಗೆ ತುರುಕಿದ್ದ ರಹಮಾನ್ ಕೋಯಾರವರ ಆಸೆ ಹುಸಿಯೇನೂ ಆಗಲಿಲ್ಲ. ಅಲ್ಲಾಹುವಿನ ಅನುಗ್ರಹವೇ ಸರಿ. ಮಸೀದಿಯ ನೆಲವನ್ನು ಗುಡಿಸಿ ತೊಳೆಯುವ ಹುಡುಗ ಮೂಸಾ ಆರೇ ವರ್ಷಗಳ ಒಳಗೆ ಇಡಿಯ ಕುರಾನು ಗ್ರಂಥವನ್ನು ಕಂಠಪಾಠ ಒಪ್ಪಿಸಬಲ್ಲ ಶಕ್ತಿಯನ್ನು

ಪಡೆದುಕೊಂಡಿದ್ದ. ರಹಮಾನ್ ಕೋಯಾರಿಗೆ ಈ ಧರ್ಮ ಸೂಕ್ಷ್ಮಗಳೆಲ್ಲ ಚೆನ್ನಾಗಿ ಗೊತ್ತು. ಅಲ್ಲಾಹು ತನ್ನ ದಾಸರಿಗೆಲ್ಲ ಅವರ ಜೀವನದ ಅವಶ್ಯಕತೆಗಳನ್ನೆಲ್ಲ ಹೆಚ್ಚು ಹೆಚ್ಚಾಗಿ ನೀಡಿರುತ್ತಿದ್ದರೆ ಅವರು ಖಂಡಿತವಾಗಿ ಭೂಮಿಯಲ್ಲಿ ಬಂಡಾಯ ಹೂಡುತ್ತಿದ್ದರು. ಅದರಲ್ಲಿ ಸಂದೇಹವೇನೂ ಇಲ್ಲ. ಆತನು ತನ್ನ ದಾಸರನ್ನು ಸದಾ ಪರೀಕ್ಷಿಸುತ್ತಿರುವವನೂ ಆಗಿರುತ್ತಾನೆ. ಬಾಲಕ ಮೂಸಾ ಅಲ್ಲಾಹುವಿನ ಅನುಗ್ರಹಕ್ಕೆ ಪಾತ್ರನಾದುದರಿಂದಲೇ ಇಮಾಂ ಕೋಯಾರವರಿಗೆ ಆತನ ಬಗ್ಗೆ ವಿಶೇಷ ಮೋಹ.

ಕೋಯಾರವರಿಗೆ ದಿನಕ್ಕೊಂದು ಮನೆಯಿಂದ ಊಟ. ಸರದಿಯಂತೆ ಮೂವತ್ತು ಆರಿಸಿದ ಮನೆಗಳಿಗೆ ಈ ಹೊಣೆ ಕಡ್ಡಾಯ. ಕೋಯಾರವರ ಜತೆಯಲ್ಲಿ ಮೂಸಾನಿಗೂ ಮೂರು ಹೊತ್ತು ಊಟ. ಚಿಗುರು ಮೀಸೆಯ ತೆಳ್ಳಗಿನ ಕಪ್ಪು ಹುಡುಗ, ನೀಲ ಚೌಕಳಿಯ ಬಿಳಿ ಪಟ್ಟೆಪಟ್ಟೆಯ ಮೌಲಾನಾ ಮುಂಡು ಸುತ್ತಿಕೊಂಡು, ಬಿಳಿ ಅಂಗಿ ಧರಿಸಿ, ತಲೆಗೆ ಟುವಾಲು ಕಟ್ಟಿಕೊಂಡು ಮುತ್ತುಪ್ಪಾಡಿಯ ಬೀದಿಗಳಲ್ಲಿ ಹಿತ್ತಾಳೆಯ ಊಟದ ಬುತ್ತಿ ಹಿಡಿದು ಹೊರಟರೆ ಹತ್ತು ಹೆಜ್ಜೆಗೊಂದು ಸಲಾಮು ಸಿಕ್ಕೀತು.

ಜನ್ನತ್ ಮಹಲ್‌ಗೆ ಆಗ ಕೆಂಪು ಕೋಟೆಯಿದ್ದಿರಲಿಲ್ಲ. ಆಗ ಜಮಾತ್ ಅಧ್ಯಕ್ಷರಾಗಿದ್ದ ಅಬ್ದುಲ್ಲ ಸಾಹುಕಾರರು ನಾಯಿಗಳನ್ನು ಸಾಕುತ್ತಿರಲಿಲ್ಲ. ಎರಡು ಅಂಕಣದ ಅವರ ಹಂಚಿನ ಮನೆಗೆ ಆಗ 'ಜನ್ನತ್ ಮಹಲ್' ಎಂಬ ಹೆಸರೂ ಇದ್ದಿರಲಿಲ್ಲ. ಬೆಲ್ಲದ ಮನೆ ಎಂದೇ ಆಗ ಜನರೆಲ್ಲ ಹೇಳುತ್ತಿದ್ದುದು. ಸಾಹುಕಾರರು ಬೆಲ್ಲದ ಗಾಣ ಇಟ್ಟಿದ್ದರು. ಮನೆಯೆದುರು ಯಾರೇ ಹೋಗಲಿ – ಯಾವುದೇ ಜಾತಿಯಾದರೂ ಸರಿ, ಅವರಿಗೆಲ್ಲ ಬೆಲ್ಲ ನೀರು ಗ್ಯಾರಂಟಿ. ಮುಸ್ಲಿಯಾರರು ಏನಿಲ್ಲ ಅಂದರೂ, ಈ ಮನೆಯಲ್ಲಿ ಇದುವರೆಗೆ ಒಂದು ಲಾರಿ ಬೆಲ್ಲ ತಿಂದಿದ್ದಿರಬಹುದು. ನಾಲ್ಕು ನೂರು ಮುಡಿ ಗೇಣಿ ಬರುತ್ತಿದ್ದರೂ ದಿನದ ಒಂದು ಹೊತ್ತಿನ ನಮಾಜೂ ತಪ್ಪಿಸಿದವರಲ್ಲ. ತಮ್ಮ ಉತ್ಪತ್ತಿಯಲ್ಲಿ ಐದನೇ ಒಂದು ಪಾಲು 'ಜಕಾತ್'ಗಾಗಿಯೇ ಮೀಸಲು. ಸಾಹುಕಾರರು ತೀರಿಕೊಳ್ಳುವ ತನಕ ಮೂಸಾ ಮುಸ್ಲಿಯಾರರು ಸ್ವಂತಕ್ಕೆಂದು ಬಟ್ಟೆ ಕೊಳ್ಳಬೇಕಾಗಿರಲಿಲ್ಲ. ರಂಜಾನ್, ಬಕ್ರೀದ್‌ಗಳಲ್ಲಿ ಎರಡೆರಡು ಜೊತೆ ಬಟ್ಟೆ ಸಿಗುತ್ತಿತ್ತು.

ರಹಮಾನ್ ಕೋಯಾರವರು ತೀರಿಕೊಂಡಾಗ ಮೂಸಾ ಮುಸ್ಲಿಯಾರ್‌ರನ್ನು ಇಮಾಂ ಆಗಿ ನೇಮಿಸಿದ್ದೂ ಅಬ್ದುಲ್ಲ ಸಾಹುಕಾರರು. ಮೂರು ನೂರು ರೂಪಾಯಿ ಸಂಬಳ ಕೊಟ್ಟು ಕೇರಳದಿಂದ ಪಂಡಿತರನ್ನು ತಂದು ನೇಮಕ ಮಾಡಲು ಮಸೀದಿಗೆ ಆದಾಯವಾದರೂ ಏನಿತ್ತು? ಜಾರುವ ಕೆರೆಗೆ ಮೆಟ್ಟಲುಗಳಾಗಬೇಕಾದರೂ ನಲವತ್ತು ವರುಷ ಕಾಯಬೇಕಾಯಿತು. ಸುಲೇಮಾನ್ ಹಾಜಿಯವರು ಬೆಂಗಳೂರಿನಿಂದ ಜೀಪಿನಲ್ಲಿ



ನಾಯಿಮರಿಗಳನ್ನು ತಂದ ದಿವಸವಲ್ಲವೇ ಕೆರೆಗೆ ಕಲ್ಲು ಕಟ್ಟುವ ಕೆಲಸ ಆರಂಭಿಸಿದ್ದು? ಗೋಡೆ ಗಡಿಯಾರ ಒಂದು ಬಾರಿ ಹೊಡೆಯಿತು; ಒಂಭತ್ತೂವರೆ.

## 2

ಸುಲೇಮಾನ್‌ಹಾಜಿಯವರು ಸ್ಪೆಶಲ್ಲಾಗಿ ಕಟ್ಟಿಸಿರುವ ಆಫೀಸು ರೂಮಿನ ಒಳಗೆ ಎಷ್ಟೇ ಗಟ್ಟಿಯಾಗಿ ಮಾತನಾಡಿದರೂ ಹೊರಗೆ ಕೇಳಿಸುವುದಿಲ್ಲ. ಕಾಮತರದ್ದೇ ಪ್ಲಾನು. ಅಷ್ಟೊಂದು ಬಂದೋಬಸ್ತು. ತಮ್ಮ ನೂರು ವಹಿವಾಟುಗಳ ಗುಟ್ಟನ್ನು ತಮ್ಮ ಹೆಂಡತಿಗೂ ಬಿಟ್ಟುಕೊಟ್ಟವರಲ್ಲ ಅವರು. ಹೇಳಿದ್ದರೂ ಅರ್ಥಮಾಡಿಕೊಳ್ಳುವ ಜಾತಿ ಅವರದ್ದಲ್ಲ. ಕಳೆದ ಇಪ್ಪತ್ತು ವರ್ಷಗಳ ಕೆಳಗೆ ಈ ಮನೆಗೆ ಸೊಸೆಯಾಗಿ ಬಂದಿದ್ದ ಅವರನ್ನು ಮುಸ್ಲಿಯಾರರೂ ಇದುವರೆಗೆ ಕಂಡು ಮಾತನಾಡಿಸಿದ್ದಿಲ್ಲ. ಆಕೆ ಹೊರಗೆ ಬಂದರೆ ಅಲ್ವಾ ಮಾತನಾಡಿಸುವುದು?

ಚಾವಡಿಯಲ್ಲಿ ಕಿವಿ ತೆರೆದು ಕೂತಿದ್ದ ಮುಸ್ಲಿಯಾರರಿಗೆ ಗೋಡೆಗಡಿಯಾರದ ಟಕಟಕದ ನಡುವೆಯೊಮ್ಮೆ ಫೋನಿನ ಕ್ರೀಂ ಕ್ರೀಂ ಕೇಳಿಸಿದಂತಾಗಿತ್ತು. ಹಾಗಾದರೆ ಬೆಂಗಳೂರು ಫೋನು ಸಿಕ್ಕಿದ್ದಿರಬಹುದು. ಊಟ ತಂದಿರಿಸಿದ್ದ ಹುಡುಗ ಹೇಳಿದ್ದ 'ಹಾಜಾರ್‍ರು ಬೆಂಗ್ಳೂರಿಗೆ ಟ್ರಂಕಾಲ್ ಬುಕ್ ಮಾಡಿದ್ರೆ. ಅದು ಸಿಗುವ ತನ್ಕ ಹೊರಗೆ ಬರಲಿಕ್ಕಿಲ್ಲ. ನೀವು ಬೆಳಿಗ್ಗೆ ಬಂದ್ರೆ ವಾಸಿ'. ನಾಳೆ ಜುಮ್ಮಾದ ದಿನ. ಮಧ್ಯಾಹ್ನ ನಮಾಜು ಮುಗಿದ ಕೂಡಲೇ ಮೀಟಿಂಗ್ ಇದೆ. ಗಡಿಬಿಡಿ ಮಾಡಿಕೊಂಡು ಬೆಳಿಗ್ಗೆ ಬಂದು ಹೇಳಿಕೊಂಡರೂ ಹಾಜಿಯವರು ಸರಿಯಾಗಿ ಕೇಳಿಸಿಕೊಳ್ಳುತ್ತಾರೆ ಎಂಬ ಗ್ಯಾರಂಟಿ ಇಲ್ಲ. ಹತ್ತು ದಿನಗಳ ಹಿಂದೆ ಬೆಳಿಗ್ಗೆ ಬಂದಿದ್ದಾಗ ಹಾಜಿಯವರೂ ಗಡಿಬಿಡಿಯಲ್ಲಿದ್ದರು. ತಮ್ಮ ಮಾತುಗಳಿಗೆ ಹಾಜಾರ್‍ರು ಸರಿಯಾದ ಗಮನವನ್ನೇ ಕೊಡುತ್ತಿಲ್ಲ ಎಂಬುದು ಮುಸ್ಲಿಯಾರರಿಗೆ ತಿಳಿದಿತ್ತು. ಸರಿಯಾಗಿ ವಿವರಿಸಬೇಕೆನ್ನುವ ಉತ್ಸಾಹವೇ ಅಡಗಿ ಹೋಗಿತ್ತು.

ಆ ದಿನ ಮುಸ್ಲಿಯಾರರು ಚಿಕ್ಕ ಗೇಟು ತೆರೆದು ಒಳಗೆ ಕಾಲಿಟ್ಟಾಗ ಹಾಜಿಯವರು ಅಂಗಳದಲ್ಲೇ ಇದ್ದರು. ನಡುನೆತ್ತಿಯ ಮೇಲೆ ಸೂರ್ಯ ಕೆಂಡ ಸುರಿಸುವ ಹೊತ್ತು. ಮನೆಯ ಮುಖಮಂಟಪದ ನೆರಳಲ್ಲಿ ನಿಂತಿದ್ದ ಹಾಜಿಯವರು – ನಾಯಿಗಳನ್ನು ಆ ಕಾಲದಲ್ಲಿ ಹೊರಗೆ ಬಿಟ್ಟಿದ್ದ ಶಂಕರಪ್ಪ ಹೊರಗಡೆಯೇ ಇದ್ದ – ನಾಯಿಗಳಿಗೆ ಬಿಸ್ಕೀಟು ಎಸೆಯುವ ಉತ್ಸಾಹದಲ್ಲಿ ಮುಸ್ಲಿಯಾರರನ್ನು ಸರಿಯಾಗಿ ನೋಡಲೂ ಇಲ್ಲ. ಮುಸ್ಲಿಯಾರರಿಗೆ ಉಭಯ ಸಂಕಟ. ಹಾಜಿಯವರೂ ಅಸಹಾಯಕರು; ಅಪರೂಪಕ್ಕೊಮ್ಮೆ

ಮನೆಗೆ ಬರುವ ತಮ್ಮ ಗುರುತು ನಾಯಿಗಳಿಗೂ ಅಷ್ಟಷ್ಟೇ ಎಂಬುದು ಅವರಿಗೂ ಗೊತ್ತು. ಮುಖ ಮಂಟಪದ ಕಟ್ಟೆ ಹಾರುವುದು ದಿನಕ್ಕೆ ನಾಲ್ಕು – ನಾಲ್ಕು ಮೊಟ್ಟೆ ತಿನ್ನುವ ನಾಯಿಗಳಿಗೆ ಕಷ್ಟದ ಕೆಲಸವೇನೂ ಅಲ್ಲ. ಶಂಕರಪ್ಪ ಇದ್ದಾನೆ ಎನ್ನುವುದೊಂದೇ ಇಬ್ಬರೂ ಧೈರ್ಯ ತಂದುಕೊಳ್ಳಬಹುದಾದ ಸಂಗತಿ.

'ಕಮ್, ಕಮ್' ಎನ್ನುತ್ತಾ ಬಿಸ್ಕೀಟಿನ ಪ್ಯಾಕೇಟುಗಳನ್ನು ಒಡೆದು ಒಂದೊಂದಾಗಿ ಎಸೆಯುವಾಗ ನಾಯಿಗಳು ಎರಡು ಕಾಲುಗಳಲ್ಲೇ ನಿಂತು ಬಿಡುತ್ತಿದ್ದುದನ್ನು ಮುಸ್ಲಿಯಾರರು ಅರೆತೆರೆದ ಚಿಕ್ಕಗೇಟಿನ ಬಳಿಯಿಂದಲೇ ನೋಡಿ ದಂಗಾಗಿದ್ದರು. ಹಾಜಿಯವರು ಎಸೆಯುವುದಕ್ಕಿಂತ ಹೆಚ್ಚಿನ ವೇಗದಲ್ಲಿ ಬಿಸ್ಕೀಟುಗಳನ್ನು – ಒಂದಕ್ಕೆ ನಾಲ್ಕಾಣೆಯಾದರೂ ಇದ್ದೀತು – ಗಳಕ್, ಗರಕ್ ಎಂದು ಗುಳುಂಕರಿಸುತ್ತಾ ಕೋಣನ ಮರಿಯಂತಹ ನಾಯಿಗಳೆರಡು 'ಇಷ್ಟೆಯಾ; ಇನ್ನಿಲ್ಲವಾ' ಎನ್ನುವಂತೆ ಹಾಜಿಯವರತ್ತ ನಾಲಗೆ ಚಾಚುತ್ತಿರುವುದನ್ನು ಕಂಡ ಮುಸ್ಲಿಯಾರರಿಗೆ ತಾವು ಹೇಳಬೇಕಾಗಿದ್ದ ಮಾತುಗಳೆಲ್ಲ ಬಹಳಷ್ಟು ಮರೆತೇ ಹೋಗಿದ್ದವು.

ಶಂಕರಪ್ಪ ನಾಯಿಗಳನ್ನು ಅವುಗಳ ಮನೆಯೊಳಗೆ ಸೇರಿಸುತ್ತಿರುವಂತೆಯೇ ಅಂಗಳ ಹಾರಿ ಚಾವಡಿಯನ್ನು ನುಗ್ಗಿದ್ದ ಮುಸ್ಲಿಯಾರರು ಏದುಸಿರು ಬಿಡುತ್ತಾ, ಮಾತು ಆರಂಭಿಸುತ್ತಿದ್ದಂತೆಯೇ ಹಾಜಿಯವರು, 'ನೋಡುವ, ಈಗ ಊಟ ಮಾಡಿ ಕೊಂಡು ಹೋಗಿ' ಎಂದಷ್ಟೇ ಹೇಳಿ ಒಳಗೆ ಸೇರಿಕೊಂಡು ಬಿಟ್ಟಿದ್ದರು.

ಆದ್ದರಿಂದಲೇ ಮುಸ್ಲಿಯಾರರು ಈ ಬಾರಿ ಸಂಪೂರ್ಣ ತಯಾರಿ ಮಾಡಿಕೊಂಡೇ ಬಂದಿದ್ದರು. ಹೇಳುವುದನ್ನೆಲ್ಲಾ ಖಡಕ್ಕಾಗಿ ಹೇಳಿಯೇ ಬಿಡುವುದು. ಈವತ್ತು ಕೂಡ ತಪ್ಪಿಸಿಕೊಳ್ಳಲಿಕ್ಕೆ ನೋಡಿದ್ರೆ, ಮತ್ತೆ ಈ ಮನೆಯ ನೀರು ಮುಟ್ಟಬಾರದು. ಈ ಮನೆ ಮಾತ್ರ ಯಾಕೆ, ಮುತ್ತುಪ್ಪಾಡಿಯ ನೀರೇ ಬಂದ್, ಉಪವಾಸ ಕೂತು ಸತ್ತು ಹೋಗಬೇಕು. ಆಗ ಜನರಿಗೆ ಗೊತ್ತಾದೀತು! ಮುಸ್ಲಿಯಾರರ ಹಠ ಅಂದರೆ ಏನು ಅಂತ, ಕೋಪದಿಂದ ಹಲ್ಲುಕಚ್ಚಿ ಕೂತ ಮೂಸಾ ಮುಸ್ಲಿಯಾರರ ಎಡದವಡೆಯ ನಾಲ್ಕನೆಯ ಹಲ್ಲಿನ ಬುಡದ ಬಳಿ ಚಳಕ್; ನೋವು ಮೊದಲಿಟ್ಟಿತು. ಒಂದಿಷ್ಟು ಎಲೆ ಅಡಿಕೆ ಹಾಕಿಕೊಂಡು ಒಂದು ತುಂಡು ಹೊಗೆ ಸೊಪ್ಪು ಜಗಿದರೆ ಸ್ವಲ್ಪವಾದರೂ ಸಮಾಧಾನವಾಗುತ್ತಿತ್ತು. ಆದರೆ 'ಜನ್ನತ್ ಮಹಲ್'ನ ಚಾವಡಿಯಲ್ಲಿ ಎಲೆಯಡಿಕೆ ಜಗಿದರೆ ಕಷ್ಟವೇ.

ಮುಸ್ಲಿಯಾರರಿಗೆ ಹತ್ತು ನಿಮಿಷದ ಹಿಂದೆ ಕೇಳಿಸಿದ್ದ ಫೋನಿನ ಸದ್ದು ಅವರ ಭ್ರಮೆಯೇನೂ ಆಗಿದ್ದಿರಲಿಲ್ಲ. ಕಾಮತರು ರೈಸ್ ಮಿಲ್ಲಿನಿಂದ ಫೋನ್ ಮಾಡಿದ್ದರು. ಫುಡ್ ಡಿಪಾರ್ಟ್‌ಮೆಂಟಿನವರು ಲೆವಿ ಬಗ್ಗೆ ಎಂಥದ್ದೊ ತಕರಾರು ಎಬ್ಬಿಸಿದ್ದಾರಂತೆ.



'ಏನಾದ್ರೂ ಒಂದು ಐದು ಸಾವಿರದ ಪೆಟ್ಟು ಹಾಜಾರ್ರೆ' ಎಂಬುದನ್ನು ನಗುತ್ತಲೇ ಹೇಳಿದ್ದರು ಕಾಮತರು. ಹಾಜಿಯವರಿಗೆ ಐದು ಸಾವಿರದ ಚಿಂತೆಗಿಂತಲೂ ಕಾಮತರ ಸಲೀಸು ವ್ಯವಹಾರವೇ ತಲೆ ತಿನ್ನುತ್ತಿತ್ತು. ಈ ಕಾಫರನ ಬ್ರೇಯ್ನ್ ತನಗೆಲ್ಲಿಯಾದರೂ ಇರಬೇಕಿತ್ತು; ಜನ್ನತ್ ಮಹಲಿಗೆ ಚಿನ್ನದ ಬಾಗಿಲು ಮಾಡಿಸಬಹುದಿತ್ತು. ಹಾಗಂತ ದಗಲ್ಬಾಜಿ ಮನುಷ್ಯನಲ್ಲ. ವ್ಯವಹಾರದಲ್ಲಿ ನೀಯತ್ತು ಎಂಬುದು ಏನು ಎಂಬುದನ್ನು ಅವನಿಂದ ಕಲಿಯಬೇಕು. ಪಾರ್ಟ್ನರ್‌ಶಿಪ್‌ನ ಪೈಸೆ ಪೈಸೆ ಲೆಕ್ಕ ಬರೆದು ತೋರಿಸ್ತಾನೆ. ಯಾವ ಡಿಪಾರ್ಟ್‌ಮೆಂಟಿನೋನೇ ಬರಲಿ, ಕಾಮತರ ಎದುರು ಅವರು ಕಂಗಾಲು. ಬೆಟ್ಟದಂತೆ ಎದುರಾಗುವ ಸಮಸ್ಯೆಗಳನ್ನೂ ಮಂಜಿನಂತೆ ಮಾಯ ಮಾಡುವ ಕಾಮತ ಲಂಚ ಕೊಡುವ ಹಣಕ್ಕೆ ರಶೀದಿ ಒಂದು ಕೇಳಲು ಆರಂಭಿಸಿಲ್ಲ; ಅಷ್ಟೆ. ಅವನ ಸಪೋರ್ಟು ಇಲ್ಲಾಂತ ಆಗಿದ್ರೆ ಒಂದೋ ತಾನು ಈಗಾಗ್ಲೇ ಗೆರಟೆ ಹಿಡೀಬೇಕಾಗ್ತಿತ್ತು. ಇಲ್ಲವೇ ಜೈಲಿನಲ್ಲಿ 'ಸಲಾತ್' ಹೇಳಬೇಕಾಗುತ್ತಿತ್ತು.

ನ್ಯಾಯವಾಗಿ ನೋಡಿದರೆ ತಮ್ಮ ತಂದೆಯ ಬಳಿಕ ಜಮಾತ್ ಅಧ್ಯಕ್ಷರಾಗಿ ಸುಲೇಮಾನ್ ಹಾಜಿಯವರೇ ಮುಂದುವರಿಯಬೇಕಾಗಿತ್ತು. ಊರವರೆಲ್ಲಾ ಸಾಕಷ್ಟು ಒತ್ತಾಯವನ್ನೂ ತಂದಿದ್ದರು.

ಐದಾರು ವರ್ಷಗಳ ಹಿಂದಿನ ಮಾತು. ಬೇರೇನೋ ಮಾತಿನ ನಡುವೆ ಪುರುಸೊತ್ತಿನ ಪ್ರಸ್ತಾಪ ಬಂದಾಗ ಹಾಜಿಯವರು ಜಮಾತ್ ಅಧ್ಯಕ್ಷತನಕ್ಕಾಗಿ ತಮ್ಮ ಮೇಲೆ ಒತ್ತಾಯ ವಿರುವುದನ್ನು ಹೀಗೆಯೇ ಹೇಳಿಬಿಟ್ಟಿದ್ದರು. 'ನಾನು ಹೇಳ್ಲಾ... ಹಾಜಾರ್ರೇ, ನಿಮ್ಗೆ ಆ ರಗಳೆ ಎಲ್ಲ ಬೇಡ. ಸಿಟ್ಟಿಂಗ್ ಫೀಸು ಉಂಟು ಅಂತ ಆದ್ರೆ ಅದು ಬೇರೆ ಮಾತು. ನನ್ನತ್ರ ಕೇಳಿದ್ರೆ ಉಂಟಲ್ಲಾ...? ನಮ್ಮಂಥವರಿಗೆ ಪೊಸಿಷನ್‌ನ ಆಸೆ ಇರ್ಲೇಬಾರ್ದು. ಬಿಸಿನೆಸ್‌ಗೆ ಇಳಿದ ಬಳಿಕ ಅದು ಮಾತ್ರ ಮಾಡಬೇಕು. ಈಗ ನನ್ನನ್ನೇ ತೆಕ್ಕೊಳ್ಳಿ. ಆ ಸಂಘ, ಈ ಸಮಾಜ ಅಂತ ತಿಂಗಳಿಗೆ ಎಂಟು ಜನ ಬಂದು ನೀವು ಅದು ಆಗಬೇಕು, ನೀವು ಇದು ಆಗಬೇಕು, ಅಂತ ತಲೆ ತಿನ್ತಾರೆ. ಆದ್ರೆ ಈ ಒಂದು ವಿಷಯದಲ್ಲಿ ನಾನು ಮಂಗ ಆಗಲಿಕ್ಕೆ ತಯಾರಿಲ್ಲ.. ನಿಮ್ಗೆ ಗೊತ್ತಿಲ್ಲ ಹಾಜಾರ್ರೇ, ಈ ಜಾತಿ ಸಂಘಗಳಿಗೆ ಒಮ್ಮೆ ಹೊಕ್ಕಿತೂ ಅಂತ ಆದ್ರೆ ಕಲಾಸ್: ಮತ್ತೆ ಬಚಾವೇ ಇಲ್ಲ. ನಮ್ಮ ರಕ್ತದೊಳಗೇ ಸೇರಿಕೊಂಡು ಬಿಡ್ತದೆ ಅದು. ಬೇಕಾದ್ರೆ ನಾಲ್ಕು ಮುಕ್ಕಾಲು ಎಸೆದು ರಸೀದಿ ತಕೊಳ್ಳಿ; ಟ್ಯಾಕ್ಸ್‌ನವರ ಮುಖಕ್ಕಾದ್ರೂ ಹಿಡೀಬಹುದು. ನಿಮಗೆ ಪೊಸಿಷನ್ನೇ ಬೇಕು ಅಂತ ಇದ್ರೆ ಪೇಟೆಯಲ್ಲಿ ರೋಟರಿ ಕ್ಲಬ್ಬಿಲ್ವಾ? ಲಯನ್ಸ್ ಕ್ಲಬ್ಬಿಲ್ವಾ? ಹೆ...ಹ್ಹೇ...' ಎಂದು ನಕ್ಕಿದ್ದ ಕಾಮತರು ಹಾಜಿಯವರ ತೊಡೆಯನ್ನು ಮತ್ತಗೆ ತಟ್ಟುತ್ತಾ, ಕಣ್ಣು ಕಿರಿದು ಮಾಡಿ

ಹೇಳಿದ್ದು, 'ಆದ್ರೆ ಒಂದು ಮಾತು ಹಾಜಾರ್ರೇ... ಆ ಅಧ್ಯಕ್ಷನೋ ಗಿಧ್ಯಕ್ಷನೋ ಆಗ್ತಾನಲ್ಲಾ; ಅವ್ನು ನಮ್ಗೆ ಸಲಾಮು ಹಾಕುವ ಜನ ಆಗಿರುವುವಂತೆ ನೋಡಿಕೊಂಡ್ರೆ ಸಾಕು'.

ತಮ್ಮ ಬಗ್ಗೆ ಸಾಕಷ್ಟು ಗೌರವವನ್ನೇ ಇಟ್ಟುಕೊಂಡಿರುವ ಜವುಳಿ ಅಂಗಡಿ ಹಸನ್ ಸಾಹೇಬರು ಜಮಾತ್ ಅಧ್ಯಕ್ಷರಾಗಿ ಆಯ್ಕೆಯಾದಾಗ ಮುಸ್ಲಿಯಾರರಿಗೆ ನಿಜವಾಗಿಯೂ ಸಂತೋಷವಾಗಿತ್ತು. ಮಸೀದಿಯ ಬಗ್ಗೆ ಏನಾದರೊಂದು ಮಾತನಾಡುವುದಿದ್ದಲ್ಲಿ ದಮ್ಮು ಕಟ್ಟಿಸುವ ಜನ್ನತ್ ಮಹಡಿಯ ಚಾವಡಿಯ ಬದಲು, ರಾಜರಸ್ತೆಯ ಬದಿಯ ಹಸನ್ ಸಾಹೇಬರ ಜವುಳಿ ಅಂಗಡಿಯಲ್ಲಿ ಕೂತು ಚರ್ಚಿಸುವುದು ಸುಲಭದ ಕೆಲಸ. ಜನ್ನತ್ ಮಹಲ್‌ನ ಚಾವಡಿಯೊಳಗೆ – ಕಾಲು ನೆಲದ ಮೇಲೇ ಊರಬೇಕು. ಹಾಗೆ ಕುಳಿತು ಕೊಳ್ಳುವುದೆಂದರೆ ಮುಸ್ಲಿಯಾರರಿಗೆ ಅದೊಂದು ಹಿಂಸೆ. ಎಲೆಯಡಿಕೆ ಜಗಿದು ಉಗುಳಲು ಪೀಕದಾನಿಯನ್ನೇ ಇಟ್ಟಿರದ ಮನೆಗೆ 'ಜನ್ನತ್ ಮಹಲ್' ಎಂದು ಹೆಸರು ಇಟ್ಟವರಿಗೆ ತಲೆ ಸರಿ ಇದ್ದಿರಲಿಕ್ಕಿಲ್ಲ. ಹಸನ್ ಸಾಹೇಬರ ಜವುಳಿ ಅಂಗಡಿಯ ಜಗಲಿಯಲ್ಲಿರುವ ಸ್ಟೂಲಿನ ಮೇಲೆ ಕುಳಿತರೆ ಮುಸ್ಲಿಯಾರರಿಗೆ ಅದೇ 'ಜನ್ನತ್', ಪಕ್ಕದಲ್ಲೇ ಚರಂಡಿ. ಎರಡೂ ಬೆರಳುಗಳನ್ನು ತುಟಿಗೊತ್ತಿ ಹಿಡಿದು ಥೂಕ್ಕೆಂದು ಉಗುಳಿದರೆ, ಕೆಂಪು ಕಾರಂಜಿ ನೇರವಾಗಿ ಚರಂಡಿಯ ತಳ ಸೇರಬೇಕು. ಮಧ್ಯಾಹ್ನದ ಊಟ ಮಾಡಿಕೊಂಡು ಬರುವಾಗ ದಾರಿಯಲ್ಲೇ ಇರುವ ಅಂಗಡಿಯ ನೆರಳಲ್ಲಿ ಒಂದರ್ಧ ತಾಸು ಕೂತು ಎಲೆ ಅಡಿಕೆ ಜಗಿದೇ ಅವರು ಮುಂದುವರಿದಾರು. ಸಂಜೆ ನಮಾಜಿಗೆ ಬಾಂಗ್ ಕೊಡುವ ತನಕ ಅವರಿಗೆ ಬೇರೇನು ಕೆಲಸವಿದೆ?

ರಾತ್ರಿ ಊಟದ ಬಳಿಕ ಅಡಿಕೆ ಜಗಿಯುತ್ತಾ ಒಂದು ತಾಸು ನಡೆದರೂ ಅವರಿಗೆ ಆಯಾಸವಾಗುತ್ತಿರಲಿಲ್ಲ. ರಾತ್ರಿಯ ಊಟ ಜನ್ನತ್ ಮಹಲಿನ ಸರದಿಯಾಗಿದ್ದಲ್ಲಿ ಮುಸ್ಲಿಯಾರರು ಕೈ ತೊಳೆದುಕೊಳ್ಳುತ್ತಿದ್ದಂತೆಯೇ ಗಡಿಬಿಡಿಯಿಂದ ಅಂಗಳದಲ್ಲಿ ದಾಪುಗಾಲು ಹಾಕುತ್ತಾ ಗೇಟು ದಾಟಿಬಿಡುತ್ತಿದ್ದರು. ಒಂದಷ್ಟು ಕವಳ ಜಗಿದ ಬಳಿಕವೇ ಸಮಾಧಾನದ ನಿಟ್ಟುಸಿರು ಹೊರಡುತ್ತಿದ್ದದ್ದು. ಗುಡಿಸಿ ಸಾರಿಸಿಟ್ಟ ಅಂಗಳದಲ್ಲಿ ಕೆಂಪು ಕಲೆಯಾದರೆ ಹಾಜಿಯವರು ಏನೆಂದುಕೊಂಡಾರು? ಕುಳಿತಲ್ಲೇ ಎಂಜಲು ನುಂಗುತ್ತಾ ಚಡಪಡಿಸಿದರು ಮೂಸಾ ಮುಸ್ಲಿಯಾರರು.

ಕಳೆದ ನಾಲ್ಕೈದು ವರ್ಷಗಳಿಂದಲೂ ಮುಸ್ಲಿಯಾರರಿಗೆ ಹಲ್ಲು ನೋವು. ಮೊದಲು ನೋವು ಶುರುವಾದದ್ದು ಎಡ ದವಡೆಯ ಮೇಲಿನ ಹಲ್ಲು ಬುಡದಲ್ಲಿ. ಕರಿ ಮೆಣಸು ಗುದ್ದಿ ಪುಡಿ ಮಾಡಿ ಹಲ್ಲು ಸೆರೆಗಳಲ್ಲಿ ಇಟ್ಟು ಕಚ್ಚಿದ್ದು, ಲವಂಗದ ಎಣ್ಣೆ ಮುಟ್ಟಿಸಿದ್ದು, ಎಲ್ಲವೂ ವ್ಯರ್ಥ. ರಾತ್ರಿ ಹೊತ್ತಿನಲ್ಲೇ ನೋವು ಜಾಸ್ತಿ; ಅದೆಷ್ಟೋ ರಾತ್ರಿ ಎದ್ದುಕೂತು ಸಂಕಟಪಟ್ಟಿದ್ದುಂಟು. ಎಲ್ಲ ನೋವಿಗೂ ಮೂಲ ಕಾರಣ ತಮ್ಮ ಎಲೆ ಅಡಿಕೆಯ



ಚಟವೆಂದು ಗೊತ್ತಿದ್ದರೂ ಅದನ್ನು ಬಿಡುವುದು ಸಾಧ್ಯವಾಗಲಿಲ್ಲ. ಎರಡು ದಿನ ಹಟದಿಂದ ಕೂತವರಿಗೆ ಹಲ್ಲು ನೋವು ಜಾಸ್ತಿಯೇ ಕಾಣಿಸಿಕೊಂಡಿತ್ತು. ಇಮಾಂ ಆಗಿ ನೇಮಕಗೊಂಡ ಮೇಲೆ ಶುರುಶುರುವಿಗೆಲ್ಲ ಕುಶಾಲಿಗೆಂದೇ ಜಗಿದದ್ದು; ಈಗ ಅದಿಲ್ಲದೆ ಆಗುವುದಿಲ್ಲ.

ಹೊಸ ಮಸೀದಿ ಕಟ್ಟಿಸಲು ಕಲ್ಲು ಬಂದು ಬಿದ್ದ ದಿನಗಳಲ್ಲಿ ಮುಸ್ಲಿಯಾರರಿಗೆ ರಾತ್ರಿ ಹಗಲು ಹಲ್ಲು ನೋವು ತೊಂದರೆ ಕೊಡತೊಡಗಿತು. ಇನ್ನು ತಡೆಯಲು ಸಾಧ್ಯ ವಿಲ್ಲವೆಂದಾದಾಗ ಪೇಟೆಯ ದೊಡ್ಡಾಸ್ಪತ್ರೆಯಲ್ಲಿ ತೋರಿಸಿದ್ದರು. ಎರಡು ಹಲ್ಲು ಕೀಳದೆ ಬೇರೆ ದಾರಿಯೇ ಇಲ್ಲವೆಂದು ಡಾಕ್ಟರು ಖಡಾಖಂಡಿತ ಹೇಳಿದ ಮೇಲೆಯೇ ಮುಸ್ಲಿಯಾರರು ಒಪ್ಪಿದ್ದು. ಎರಡು ತಿಂಗಳು ಮುಸ್ಲಿಯಾರರಿಗೆ ಸುಖದ ನಿದ್ರೆ. ಆದರೆ ಎರಡೇ ತಿಂಗಳು; ಮತ್ತೆ ಶುರು; ಆಸ್ಪತ್ರೆಗೆ ಹೋಗಲು ಭಯಪಟ್ಟ ಮುಸ್ಲಿಯಾರರು ಸಿಕ್ಕ ಸಿಕ್ಕ ಎಣ್ಣೆ ಹಚ್ಚಿ, ನೋವಿನ ಮಾತ್ರೆ ತಿಂದರು. ಒಂದು ಹಲ್ಲು ಡಾಕ್ಟರರ ಸಹಾಯ ವಿಲ್ಲದೆಯೇ ಕಳಚಿ ಬಿದ್ದಾಗ ಮುಸ್ಲಿಯಾರರು ಪುನಃ ಆಸ್ಪತ್ರೆಗೆ ಓಡಿದರು. ಈ ಬಾರಿ ನಾಲ್ಕು ಹಲ್ಲು ಕಡಿಮೆಯಾಯಿತು. ಅಷ್ಟೇ ಆಗಿದ್ದರೆ ಮುಸ್ಲಿಯಾರರಿಗೆ ನಷ್ಟವಿದ್ದಿರಲಿಲ್ಲ; ಗಟ್ಟಿಯಾದುದನ್ನು ತಿನ್ನದಿದ್ದರೆ ಆಯಿತು. ಎಲೆ ಅಡಿಕೆ ಗುದ್ದಿ ಮೆತ್ತಗೆ ಮಾಡಿಯೇ ಜಗಿದರಾಯಿತು. ಆದರೆ ಎದುರುಗಡೆಯ ಎರಡು ಹಲ್ಲುಗಳು ಇದ್ದಕ್ಕಿದ್ದ ಹಾಗೆ ಯಾವ ನೋವೂ ಇಲ್ಲದೆ ಕಳಚಿ ಬಿದ್ದಾಗ ಮುಸ್ಲಿಯಾರರಿಗೆ ಅಳುವೇ ಬಂದಿತ್ತು. ಇನ್ನು ಉಳಿದಿರುವುದಾದರೂ ಏನು? ಮುಸ್ಲಿಯಾರರು ಹಟದಿಂದ ಹೆಚ್ಚು ಹೆಚ್ಚು ಎಲೆ ಅಡಿಕೆ ಜಗಿಯಲಾರಂಭಿಸಿದ್ದರು. ವಲು ಮಾಡಿ ನಾಮಾಜು ಮುಗಿಸುವಷ್ಟು ಅವಧಿಯನ್ನು ಹೊರತುಪಡಿಸಿದರೆ ಅವರ ಬಾಯೊಳಗೆ ತಾಂಬೂಲ ಇಲ್ಲದ ಹೊತ್ತೆಂದರೆ ಜನ್ನತ್ ಮಹಲಿನಲ್ಲಿ ಅವರು ಕಳೆಯುವ ಕಾಲ ಮಾತ್ರ. ಉಳಿದೆಲ್ಲ ಕಾಲದಲ್ಲೂ ಕೆಲವೊಮ್ಮೆ ನಡುರಾತ್ರಿ ಎದ್ದು ಹಾಕಿಕೊಳ್ಳುವುದೂ ಉಂಟು. ಅವರು ಆಡಿನಂತೆ ಜಗಿಯುತ್ತಲೇ ಇದ್ದಾರು.

ಆದರೆ ಪರಿಣಾಮ?!

'ಮಿಂಬರ್' ಮೇಲೆ ನಿಂತ ಮುಸ್ಲಿಯಾರರು ಖುತುಬ ಓದಿದರೆ ಹಿಂದಿನ ಸಾಲುಗಳಲ್ಲಿ ಕೂತ ಹುಡುಗರಿಗೆ ಕೇಳಿಸುವುದಿಲ್ಲ. ಎದುರು ಕೂತವರಿಗೂ ಅರ್ಥವಾಗು ವುದಿಲ್ಲ. ಎಷ್ಟು ದಿನ ಅಂತ ಸಹಿಸಿಕೊಂಡಾರು; ಮೂರುವರೆ ಲಕ್ಷ ರೂಪಾಯಿ ಖರ್ಚು ಮಾಡಿ ಹೊಸದಾಗಿ ಕಟ್ಟಿಸಿದ ಮಸೀದಿಗೇ ಅವಮಾನ. ಪ್ರತಿ ಮಾತಿನ ನಡುವೆ 'ಸ್...' ಅಂತ ಶಬ್ದ ಮಾಡಲು ಮಸೀದಿಯ ಒಳಗೇನು ಕೋಳಿಮರಿ ಬರುತ್ತದಾ? ನಮಗೆ ಸರಿಯಾದ ಖುತುಬ ಓದುವ ಜನ ಸಿಗದಿದ್ದರೆ ಅಲ್ವಾ? ಆಗ ನೋಡುವಾ.

ಎರಡು ಶುಕ್ರವಾರಗಳ ಹಿಂದಿನ ಜುಮ್ಮಾ ನಮಾಜು ಮುಗಿದ ಬಳಿಕ 'ಜಲೀಲ್' ಹೊಸ ಕಟ್ಟಡದ ಎಲ್ಲ ಗೋಡೆಗಳೂ ನಡುಗುವಂತೆ ಬೊಬ್ಬೆ ಹೊಡೆದು ಮೂಸಾ ಮುಸ್ಲಿಯಾರರ ಕುರಾನು ಉಚ್ಚಾರದಲ್ಲಿನ ತಪ್ಪುಗಳನ್ನು ಹೆಕ್ಕಿ ಹೆಕ್ಕಿ ತೋರಿಸಿದ್ದು ಬಹಳಷ್ಟು ಜನರಿಗೆ ಇಷ್ಟವಾದ ಸಂಗತಿಯೇನೂ ಆಗಿದ್ದಿರಲಿಲ್ಲ. ನಲವತ್ತು ವರ್ಷಗಳ ಕಾಲ ತಮ್ಮೂರ ಮಸೀದಿಯ ಜತೆಗೇ ಬೆಳೆದುಕೊಂಡು ಬಂದ ಮುಸ್ಲಿಯಾರರ ಬಗ್ಗೆ ಕೆಟ್ಟ ಮಾತು ಆಡುವುದು ಅಲ್ಲಾಹು ಮೆಚ್ಚುವ ಕೆಲಸವಲ್ಲ. ಆದರೆ ಜಲೀಲನನ್ನು ಎದುರು ಹಾಕಿಕೊಳ್ಳುವುದೆಂದರೆ ಹೇಲಿಗೆ ಕಲ್ಲು ಬಿಸಾಡಿದಂತೆ. ಬೆಹರಿನ್‌ನಲ್ಲಿ ನಾಲ್ಕು ವರ್ಷಗಳ ಕಾಲ ಡ್ರೈವರ್ ಆಗಿ ದುಡಿದು ಸಾಕಷ್ಟು ಕಾಸು ಮಾಡಿಕೊಂಡು ಬಂದಿದ್ದ ಜಲೀಲ್, ಜಮಾತ್ ಅಧ್ಯಕ್ಷ ಹಸನ್ ಸಾಹೇಬರ ಖಾಸಾ ಅಕ್ಕನ ಮಗ; ಊರಿನ ಪಡ್ಡೆ ಹುಡುಗರ ಲೀಡರು.

ಮುತ್ತುಪ್ಪಾಡಿಯ ಕೆಲವು ಜಾಣ ಹುಡುಗರು ದುಬಾಯಿ ವಿಮಾನ ಹತ್ತಿದ ಬಳಿಕ, ಹಿಂದೆಯೆಲ್ಲ ನಾಲ್ಕಾಣೆಗೆ ಎರಡರಂತೆ ಬಂಗುಡೆ ಮೀನು ಮಾರಾಟ ಮಾಡುತ್ತಿದ್ದ ಅದ್ರಾಮ, ಇಮಾಂ ಮೂಸಾ ಮುಸ್ಲಿಯಾರರಲ್ಲಿ ಹೇಳಿದ್ದುಂಟು. 'ನಿಮ್ಮದು ಛಾನ್ಸು ಮುಸ್ಲಿಯಾರರೇ, ದುಡ್ಡು ಕೊಟ್ಟು ಮೀನು ತಿನ್ನುವ ಕಷ್ಟವನ್ನು ಅಲ್ಲಾಹು ನಿಮಗೆ ಬರೆದಿಲ್ಲ. ನಿಮಗೆ ಯಾರಾದರೂ ಬೇಯಿಸಿ ಹಾಕುತ್ತಾರೆ. ಇಲ್ಲದಿದ್ದರೆ ಐದು ರೂಪಾಯಿಗೆ ನಾಲ್ಕು ಬಂಗುಡೆ ಕೊಂಡು ಹೋಗುವ ಜನವಾ ನೀವು? ನೀವು ಬಿಡಿ; ನಾನು ಮೀನು ಮಾರುವ ಅದ್ರಾಮ ಅಲ್ಲದೇ ಹೋಗಿದ್ದರೆ ಹರಿವೆ ಸೊಪ್ಪು ಬೇಯಿಸಿ ಉಪ್ಪು ಹಾಕಿ ತಿಂದೇನೇ ಹೊರತು ಈ ಬಂಗಾರದ ಬೆಲೆಗೆ ಮೀನಿನ ಮುಳ್ಳು ಕೂಡಾ ಮುಟ್ಟಲಿಕ್ಕಿಲ್ಲ. ಈಗ ಇಂಥ ಜಾತಿ ಮೀನೆಲ್ಲ ನಮ್ಮಂಥವರಿಗೆ ಹೇಳಿಸಿದ್ದಲ್ಲ ಮುಸ್ಲಿಯಾರರೇ; ಒಂದೋ ದುಬೈಯಿಂದ ತಿಂಗಳು ತಿಂಗಳು ಡ್ರಾಫ್ಟು ಬರಬೇಕು; ಇಲ್ವೋ ನಮ್ಮ ಹಾಜಾರ್ರ ಹಾಗೆ ಬ್ಲೇಕಿನ ದುಡ್ಡು ಬೇಕು. ಹೌದಾ ಅಲ್ವಾ?' ಎಂದು ಅದ್ರಾಮು ಕುಶಾಲು ಮಾಡಿದ್ದ.

ತಾನು ನಕ್ಕು ಮುಸ್ಲಿಯಾರರನ್ನು ನಗಿಸಿದ್ದ ಅದ್ರಾಮ ಮುಂದಿನ ಎರಡೇ ವರ್ಷ ಗಳೊಳಗೆ ಮುಸ್ಲಿಯಾರರ ಹೊಟ್ಟೆಗೇ ಕಲ್ಲು ಹಾಕುತ್ತೇನೆಂಬ ಕಲ್ಪನೆಯನ್ನೂ ಮಾಡಿ ದವನಲ್ಲ. ಮುಸ್ಲಿಯಾರರ ವಿರುದ್ಧ ಅದ್ರಾಮನಿಗೆ ಅಂತಹಾ ಹಗೆಯಾದರೂ ಏನಿತ್ತು? ಅವನು ಈಗಲೂ ಮುಸ್ಲಿಯಾರರದ್ದೇ ಪಾರ್ಟಿ.

ಅಲ್ಲಿ ಇಲ್ಲಿ ಜೋಡಿಸಿದ್ದ ಏಳು ಸಾವಿರ ರೂಪಾಯಿಯಲ್ಲಿ ವೀಸಾ ತರಿಸಿಕೊಂಡಿದ್ದ ಅದ್ರಾಮ ತನ್ನ ಮಗ ಇಕ್ಬಾಲ್‌ನನ್ನು ದುಬಾಯಿಗೆ ಹಾರಿಸಿದವನು ಹೆಚ್ಚು ಕಮ್ಮಿ ಒಂದು



ತಿಂಗಳು ಮಂಕಾಗಿಯೇ ಇದ್ದ. ತಿಂಗಳ ಕೊನೆಗೆ ಪೋಸ್ಟುಮೇನು ಒಂದು ಸಾವಿರ ರೂಪಾಯಿಯ ಬ್ಯಾಂಕ್ ಡ್ರಾಫ್ಟನ್ನು ಮನೆ ಬಾಗಿಲಿಗೆ ತಂದು ಕೊಟ್ಟಾಗ ಅದ್ರಾಮ ಕಂಗಾಲು; ಇಷ್ಟೊಂದು ಹಣವನ್ನು ಏನು ಮಾಡುವುದು? ಕಳೆದ ಹತ್ತು ಹದಿನೈದು ವರ್ಷಗಳಿಂದ ತಾನು ತುಳಿಯುತ್ತಿದ್ದ ರ್‍ಯಾಲಿ ಸೈಕಲನ್ನು ತನ್ನ ತಂಗಿಯ ಮಗನಿಗೆ ದಾನ ಕೊಟ್ಟು ಮೀನಿನ ವ್ಯಾಪಾರದಿಂದ ಕೈತೊಳೆದುಕೊಂಡ ಅದ್ರಾಮ. ಇದ್ದಕ್ಕಿದ್ದಂತೆ ನಿಷ್ಠಾವಂತ ಧಾರ್ಮಿಕ ಮನುಷ್ಯನಾಗಿ ಬದಲಾಗಿ ಬಿಟ್ಟ. ಹಗಲಿನ ಬಹುಪಾಲು ಮತ್ತು ಕೆಲವೊಮ್ಮೆ ರಾತ್ರಿ ಕೂಡಾ ಮಸೀದಿಯಲ್ಲೇ ಕಾಲ ಕಳೆಯತೊಡಗಿದ್ದ ಅದ್ರಾಮನಿಗೆ, ತಾನು ಮಗನ ವೀಸಾದ ಕೆಲಸಗಳಿಗಾಗಿ ಮಂಗಳೂರು ಉಳ್ಳಾಲ ಅಂತ ಓಡಾಡುತ್ತಿದ್ದ ದಿನಗಳಲ್ಲಿ ರಸ್ತೆಯಂಚುಗಳಲ್ಲಿ ಹೊಸ ಹೊಸ ರೂಪು ಪಡೆಯುತ್ತಿದ್ದ ಮಸೀದಿ ಕಟ್ಟಡಗಳೇ ನೆನಪಾಗುತ್ತಿದ್ದವು. 'ಇಲ್ಲಿ ಸೈಕಲ್ಲು ಉಜ್ಜುತ್ತಿದ್ದ ಹುಡುಗರೂ ದುಬಾಯಿಯಲ್ಲಿ ಮೆಕ್ಯಾನಿಕ್ ಅಂತ ಕೆಲಸ ಮಾಡಿ ದುಡ್ಡು ಕಳಿಸುತ್ತಿರುವಾಗ ಮಸೀದಿಯೆಂಥದು. ಸ್ವರ್ಗವನ್ನೇ ಕಟ್ಟಿ ಬಿಡಬಹುದು' ಎಂದು ನಕ್ಕಿದ್ದ ಮಂಗಳೂರಿನ ಇಸ್ಮಾಲಿಯ ಮಾತು ಅದ್ರಾಮನ ತಲೆ ತಿನ್ನಲಾರಂಭಿಸಿತ್ತು. ತನ್ನೂರ ಮಸೀದಿಯನ್ನೂ ಹೊಸದಾಗಿ ಕಟ್ಟಿದರೆ ಹೇಗೆ? ಹಣಕ್ಕೇನು ಮಾಡುವುದು? ಮೂಸಾ ಮುಸ್ಲಿಯಾರರ ಜತೆ ಈ ಬಗ್ಗೆ ಅನುಮಾನದಿಂದಲೇ ಪ್ರಶ್ನಿಸಿದಾಗ ಅವರು 'ಅಲ್ಲಾಹು ಇಚ್ಛಿಸಿದರೆ ಯಾವುದೂ ಅಸಾಧ್ಯವಲ್ಲ' ಎಂದು ಬಿಟ್ಟಿದ್ದರು; ಅವರ ಮಾತೇ ಹಾಗೆ.

ಅದ್ರಾಮನ ಒಂಟಿ ಕಲ್ಪನೆ ಒಂದೇ ವಾರದೊಳಗೆ ಊರಲ್ಲೆಲ್ಲ ಸುದ್ದಿಯಾಯಿತು. ಅಲ್ಲಾಹುವಿನ ಕೆಲಸಕ್ಕೆ ನಿಷ್ಠೆಯಿಂದ ತೊಡಗುವವರದ್ದೇ ಕೊರತೆ. ಒಮ್ಮೆ ಆರಂಭವಾಯಿತು ಅಂದರೆ ಸಾಕು; ಮುಂದಿನದು ಮನುಷ್ಯರ ಕೈಯಲ್ಲಿ ಇರುವುದಿಲ್ಲ. ಎಲ್ಲದರ ಸೂತ್ರ ಧಾರನೂ ಅವನೇ ಅಲ್ಲವೆ?

ಜಮಾತ್ ಮೀಟಿಂಗ್‌ನಲ್ಲಿ ಆ ದಿನ ಅದ್ರಾಮನೇ ಹೀರೋ. ತನ್ನ ಧ್ವನಿಗೆ ತಾನೇ ಪುಳಕಗೊಂಡಿದ್ದ ಅದ್ರಾಮ, 'ಎಲ್ಲರೂ ಒಪ್ಪುವುದಾದರೆ ಮೊದಲ ಕಾಣಿಕೆಯಾಗಿ ಒಂದು ಸಾವಿರದ ಒಂದು ರೂಪಾಯಿ ನನ್ನದು' ಎಂದುಬಿಟ್ಟಾಗ ಸಭೆಯಲ್ಲಿ ಗುಸು ಗುಸು. ಅದ್ರಾಮನ ಉತ್ಸಾಹವನ್ನು ತಮ್ಮ ಅಪಮಾನವೆಂದೇ ಭಾವಿಸಿದ್ದ ಸುಲೇಮಾನ್ ಹಾಜಿ ಯವರು ಆವೇಶದಿಂದ 'ನನ್ನದು ಐದು ಸಾವಿರದ ಐದು' ಎಂದಿದ್ದರು. ಒಂದು ತಾಸಿನ ಬಿಸಿ ಬಿಸಿ ಮೀಟಿಂಗ್ ಮುಗಿದಾಗ ನೂರುಗಟ್ಟಲೆ ವಾಗ್ದಾನಗಳೂ, ಸಾವಿರಗಟ್ಟಲೆ ಸಲಹೆಗಳೂ ರಾಶಿ ಬಿದ್ದಿದ್ದವು. ಹಾಜಿಯವರು ತಾನೇನು ಮಾಡಬೇಕು ಎಂದು ಯೋಚಿಸುವ ಮೊದಲೇ ಅವರ ಅಧ್ಯಕ್ಷತೆಯಲ್ಲಿ ಸ್ಪೆಶಲ್ ಕಮಿಟಿಯೊಂದು ನೇಮಕ ಗೊಂಡುಬಿಟ್ಟಿತ್ತು. ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಎರಡು ವರ್ಷಗಳ ಗಡುವಿ

ನೊಳಗೆ ಹೊಸ ಮಸೀದಿ ನಿರ್ಮಾಣವಾಗಬೇಕು. ಕೆರೆಯ ಸುತ್ತ ಕಲ್ಲಿನ ಕಟ್ಟೆಯಾಗಬೇಕು. ಕುರಾನು ಶಾಲೆಗೆ ಟೆರೇಸು ಆಗಬೇಕು.

'ಹಾಜೀ, ಎಂ.ವಿ. ಸುಲೇಮಾನ್, ಅಧ್ಯಕ್ಷರು, ಮುತ್ತುಪ್ಪಾಡಿ ಜುಮ್ಮಾ ಮಸೀದಿ ಹೊಸ ಕಟ್ಟಡ ಸಮಿತಿ' – ಈ ಹೆಸರಿನಲ್ಲಿ ಮುದ್ರಣಗೊಂಡ ಮನವಿ ಪತ್ರಗಳು ನಾಲ್ಕು ದಿಕ್ಕಿಗೆ ಹೊರಟವು. ಅರೆಬಿಕ್ ಭಾಷೆಯಲ್ಲೇ ಮುದ್ರಿತವಾದ ಸ್ಪೆಶಲ್ ಮನವಿ ಪತ್ರಗಳು ಕಡಲು ದಾಟಿದವು. ಸಮಿತಿಯ ಲೆಕ್ಕದ ಡೀಸೆಲ್ ತುಂಬಿಕೊಂಡ ಹಾಜಿಯವರ ಮಹೀಂದ್ರ ಜೀಪಿನಲ್ಲಿ ಆರಿಸಿದ ಮುಖಂಡರು ನಾಲ್ಕೂರು ಅಲೆದರು. ಅಲ್ಲಾಹುವಿನ ಹೆಸರಿನಲ್ಲಿ ಆರಂಭಿಸಿದ ಕೆಲಸಕ್ಕೆ ಅಡ್ಡಿಯೇ ಇಲ್ಲ. ಕಾಮತರ ಸಲಹೆಯಂತೆ ಹಾಜಿಯವರು ಪೈಸೆ ಪೈಸೆ ಲೆಕ್ಕ ಬರೆದಿಟ್ಟರು. ಆಮೇಲೆ ಅಪವಾದ ಬರಬಾರದಲ್ಲಾ?

ನಿಗದಿತ ಗಡುವಿಗಿಂತ ನಾಲ್ಕು ತಿಂಗಳ ಮೊದಲೇ, ಇನ್ನೂರು ಮಂದಿ ಏಕಕಾಲದಲ್ಲಿ ನಮಾಜು ಮಾಡಬಲ್ಲಷ್ಟು ವಿಸ್ತಾರವಾದ ಮೊಸಾಯಿಕ್ ಫ್ಲೋರಿನ ಮಸೀದಿ ಸಿದ್ಧವಾಯಿತು. ನಲವತ್ತು ವರ್ಷಗಳ ಕಾಲ ಜಾರುವ ನೆಲದ ಮೇಲೆ ಭಯದಿಂದಲೇ ಕೆರೆಗೆ ಹೋಗಿ ಬರುತ್ತಿದ್ದ ಮುಸ್ಲಿಯಾರರು ಪುಟ್ಟ ಮಗುವಿನಂತೆ ಕೆರೆಯ ಕಲ್ಲು ಮೆಟ್ಟಿಲುಗಳ ಮೇಲೆ ಕುಪ್ಪಳಿಸಿ ಸಂತಸಪಟ್ಟರು. ಹೊಸ ಮಸೀದಿಯ ಪಶ್ಚಿಮದ ಗೋಡೆ ಬದಿಯಲ್ಲಿ, ಜಾಪಾನಿನಿಂದಲೇ ಪಾಲಿಶ್ ಆಗಿ ಬಂದಿದ್ದ – ಕಾಸರಗೋಡಿನ ಅದ್ದು ಹಾಜಿಯವರ ದಾನ–ಕಪ್ಪು ಶಿಲೆಯ 'ಮಿಂಬರ್' ಮೇಲೆ ಗಂಭೀರವಾಗಿ ಖಡ್ಗ ಹಿಡಿದು ನಿಂತು ಉತ್ಸಾಹದಿಂದ ಶುಕ್ರವಾರದ 'ಖುತುಬ' ಓದಲು ಆರಂಭಿಸಿದರೆ ಸಾಕು, ಮುಸ್ಲಿಯಾರರಿಗೆ ತಮ್ಮ ಹಲ್ಲು ನೋವು ನೆನಪೇ ಆಗುತ್ತಿರಲಿಲ್ಲ.

'ಯಾ ತಂಬಿರಾನೇ...' ಎನ್ನುತ್ತಾ ನೋವಿನಿಂದ ಮುಖ ಕಿವುಚಿದ ಮುಸ್ಲಿಯಾರರು ತನ್ನ ಎಡ ಅಂಗೈಯನ್ನು ದವಡೆಗೆ ಒತ್ತಿ ಹಿಡಿದು ಸಂಕಟಪಟ್ಟರು. ಸ್ವಲ್ಪ ಬಾಯಿ ಮುಕ್ಕಳಿಸಿದರೆ ಕಡಮೆಯಾಗುತ್ತಿತ್ತೇನೋ, ಆದರೆ ಚಾವಡಿಯೊಳಗೆ ನೀರಿಡುವ ಕ್ರಮವಿಲ್ಲ. ಪಕ್ಕದ ಕೋಣೆಯಲ್ಲಿ ನೀರಿನ ಟ್ಯಾಪು ಇದೆ. ಮುಸ್ಲಿಯಾರರು ಊಟದ ಬಳಿಕ ಕೈ ತೊಳೆಯುವ ಜಾಗ ಅದು. ಆದರೆ ಬಾಯಿ ಮುಕ್ಕಳಿಸಲೆಂದು ಎದ್ದು ಹೋದ ಸಮಯದಲ್ಲೇ ಹಾಜಿಯವರು ತಮ್ಮ ಆಫೀಸು ರೂಮಿನಿಂದ ಹೊರಬಂದು ಚಾವಡಿ ಹಾದು ಒಳಗೆ ಸೇರಿಕೊಂಡುಬಿಟ್ಟರೆ? ಇದಿಷ್ಟು ಹೊತ್ತು ಕಾದದ್ದೂ ಸಹ ವ್ಯರ್ಥ ವಾಗುತ್ತದೆ. ನಾಳೆಯ ಜಮಾತ್ ಮೀಟಿಂಗ್‌ನಲ್ಲಿ ಹಾಜಿಯವರು ಭಾಗವಹಿಸಿ ತಮ್ಮ ಪರವಾಗಿ ವಾದಿಸದಿದ್ದರೆ ಮುಂದೆ ಉಪವಾಸವೇ ಗತಿಯಾದೀತು. ಬರಲಿರುವ ಹೊಸ ಇಮಾಂ ಒಳ್ಳೆಯವರಿದ್ದರೆ ಆಯಿತು. ತಮಗೂ ಊಟದಲ್ಲಿ ಪಾಲು ಸಿಕ್ಕೀತು. ಇಮಾಂ ಅಲ್ಲ ಅಂತ ಆದ ಮೇಲೆ ಊರಿನ ಜನ ಎಷ್ಟು ಅಂತ ಊಟ ಕೊಟ್ಟಾರು? ಎಲ್ಲಿಂದ



ಬಂದುಬಿಟ್ಟನೋ ಆ ಸೈತಾನ ಜಲೀಲ್? ತಾನಾದರೂ ಅವನನ್ನು ಯಾವ ಘಳಿಗೆಯಲ್ಲಿ ಎದುರು ಹಾಕಿಕೊಂಡೆನೋ.

ಮಸೀದಿಯ ಕೆರೆಯಲ್ಲಿ ತನ್ನ ಗೆಳೆಯರ ದಂಡಿನೊಡನೆ ಈಜಾಡುತ್ತಿದ್ದ ಜಲೀಲ್ ಕೆರೆಯ ನೀರ ಮೇಲೆ ಪರಿಮಳದ ಸಾಬೂನಿನ ನೊರೆ ತೇಲಿಸುತ್ತಿರುವುದನ್ನು ಮಧ್ಯಾಹ್ನದ ಸುಡು ಬಿಸಿಲಿಗೆ ಒಣಗುತ್ತಾ ಎರಡು ಮೈಲು ನಡೆದು ಬಂದಿದ್ದ – ಆ ದಿನದ ಊಟದ ಸರದಿ, ಹೊಳೆ ಬದಿಯ ಈಸುಬುವಿನ ಮನೆಯಲ್ಲಿ – ಮುಸ್ಲಿಯಾರರಿಗೆ ನೋಡಲೇ ಸಾಧ್ಯವಾಗಿದ್ದಿರಲಿಲ್ಲ. ರಕ್ತವೆಲ್ಲ ಕುದಿದುಬಿಟ್ಟಿತ್ತು. ಕೆರೆಗೆ ಕಲ್ಲು ಮೆಟ್ಟಲಾಗುವ ಮೊದಲೆಲ್ಲ ಈ ಹುಡುಗರು ಮಸೀದಿಗೆ ಬರುತ್ತಿದ್ದುದೇ ಅಪರೂಪ. ಈಗ ನಾಲ್ಕು ಸುತ್ತಿನಲ್ಲಿ ಎರಡಡಿ ಅಗಲದ ಹದಿನಾರು ಸಾಲು ಕಲ್ಲು ಹಾಸುಗಳ ನಡುವೆ ಚೌಕಾಕಾರದಲ್ಲಿ ಹಸುರಾಗಿ ಕಾಣಿಸುತ್ತಿರುವ ಕೆರೆ. ಈಜು ಬಾರದವರನ್ನೂ ಸ್ನಾನಕ್ಕೆ ಕರೆಯುವಂತೆ ಆಕರ್ಷಕವಾಗಿತ್ತು. ಬರಿಯ ಈಜು ಹೊಡೆದಿದ್ದರೆ ಮುಸ್ಲಿಯಾರರದ್ದೂ ಆಕ್ಷೇಪವಿದ್ದಿರಲಿಲ್ಲ. ಸೋಪು ಹಾಕಿ ಸ್ನಾನ ಮಾಡಿದರೆ ಸಹಿಸುವುದಾದರೂ ಹೇಗೆ?

ಏಳೆಂಟು ಹುಡುಗರ ನಡುವೆ ಲೀಡರಿನ ಗತ್ತಿನಲ್ಲಿ ತೇಲುತ್ತಿದ್ದ ಜಲೀಲ, ಮುಸ್ಲಿಯಾರರ ಮಾತಿನ ಜೋರಿಗೆ ಬೆವರಿಬಿಟ್ಟಿದ್ದ. ಗೆಳೆಯರ ಎದುರಲ್ಲೆ ತಾನೊಬ್ಬ ಹಲ್ಕಾ ಅನ್ನಿಸಿಕೊಂಡದ್ದು ಅವನ ಗಂಡಸುತನಕ್ಕೆ ಸವಾಲೇ ಆಗಿಬಿಟ್ಟಿತ್ತು. 'ಅಪ್ಪನಿಗೆ ಹುಟ್ಟಿದ್ದು ಹೌದು ಅಂತ ಇದ್ರೆ ಈ ಮುದುಕ ಗಾಡಿ ಕಟ್ಟುವಂತೆ ಮಾಡ್ತೇನೆ' ಎಂದು ಶಪಥ ಹಾಕಿ ಬಿರುಗಾಳಿಯಂತೆ ಹೊರಟಿದ್ದ ಜಲೀಲ ಅದ್ರಾಮ ಹೇಳುವಂತೆ 'ದಜ್ಜಾಲಿ' ಯಲ್ಲದೆ ಮತ್ತೇನು?

ಮಸೀದಿಗೆ ಬೇರೆ ಇಮಾಂ ಬೇಕು ಎಂಬ ಮಾತನ್ನು ಬಲವಾಗಿ ವಿರೋಧಿಸಿ ದವನು ಅದ್ರಾಮ ಮಾತ್ರ. ಅವರನ್ನು ಈ ವಯಸ್ಸಿನಲ್ಲಿ ಹೋಗು ಎಂದು ಹೇಳಿದರೆ ಅವರು ಎಲ್ಲಿಗೆ ಹೋಗಬೇಕು? ಯಾರಿದ್ದಾರೆ ಅವರಿಗೆ? ಹೋಗಿ ಏನು ಮಣ್ಣು ತಿನ್ನುವುದಾ? ಅವರನ್ನು ಕಳಿಸುವುದು ಅಲ್ಲಾಹು ಮೆಚ್ಚುವ ಕೆಲಸವಲ್ಲ.

'ಮತ್ಯಾವುದು ಅಲ್ಲಾಹು ಮೆಚ್ಚುವ ಕೆಲಸಾ?' ಎನ್ನುತ್ತಾ ಒಂದು ಸಂಜೆ ಗಡಂಗಿನ ಎದುರು ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಅದ್ರಾಮನನ್ನು ತಡೆದು ನಿಲ್ಲಿಸಿ ಪ್ರಶ್ನಿಸಿದ್ದ ಜಲೀಲ್. 'ಮತ್ಯಾವುದು! ಕುರಾನನ್ನು ತಪ್ಪು ತಪ್ಪು ಓದುವುದಾ? ನಿಮಗೆ ಅರೇಬಿಕ್ ಎಂದರೆ ಏನು ಅಂತ ಗೊತ್ತುಂಟಾ? ಐದು ಹೊತ್ತು ನಮಾಜು ಮಾಡಿಬಿಟ್ಟರೆ ಆಗಿಬಿಟ್ಟಿತಾ? ಅರೆಬಿ ಉಚ್ಚಾರ ನನ್ನ ಹತ್ರ ಕೇಳಿ. ನಾಲ್ಕು ವರ್ಷ ಬೇರಿನ್‌ನಲ್ಲಿ ನಾನು ಬರೇ ಚಕ್ರ ತಿರುಗಿಸಿದ್ದಲ್ಲ. ಅರೆಬಿಯಲ್ಲಿ ಒಂದು ಗಂಟೆ ಸ್ಪೀಚು ಮಾಡುವ ತಾಖತ್ತುಂಟು

ಗೊತ್ತುಂಟಾ? ನಿಮಗೆ ಆ ಹಲ್ಲಿಲ್ಲದ ಮುದುಕ ಓದಿದ್ದೇ ಕುರಾನು. ಮುಂದಿನ ಜಮಾತ್ ಮೀಟಿಂಗ್ ಬರಲಿ. ಆಗ ಗೊತ್ತಾಗ್ತದೆ. ಯಾವುದು ಅಲ್ಲಾಹು ಮೆಚ್ಚುವ ಕೆಲಸ ಅಂತ'. ಅದ್ರಾಮನಿಗೆ ಗಾಭರಿಯಿಂದ ನಾಲಗೆ ಒಣಗಿಹೋಗಿತ್ತು.

ಮುಂದಿನ ಶುಕ್ರವಾರ ಜಲೀಲ್ ಊರಲ್ಲಿಲ್ಲದೇ ಹೋದುದರಿಂದ ಮಸೀದಿಯಲ್ಲಿ ಗದ್ದಲವೇನೂ ಆಗಲಿಲ್ಲ. ಆದರೂ ಹಿಂದಿನ ಶುಕ್ರವಾರದ ಕಹಿ ನೆನಪಿನಿಂದ ಹೆದರಿ ಹೋಗಿದ್ದ ಮೂಸಾ ಮುಸ್ಲಿಯಾರರಿಗೆ ಖುತುಬ ಪಠಿಸುವಾಗ ನಾಲಗೆಯೇ ತಡವರಿಸಿತ್ತು. ಇದರಿಂದಾಗಿ ಜಲೀಲನ ಮಾತಿನಲ್ಲಿ ಸತ್ಯಾಂಶವಿದೆಯೆಂಬುದನ್ನು ಇತರರೂ ಬಹಿರಂಗ ವಾಗಿಯೇ ಹೇಳುವಂತಾಯಿತು.

ಜಮಾತ್ ಅಧ್ಯಕ್ಷ ಹಸನ್ ಸಾಹೇಬರನ್ನು ಕಂಡು ತನ್ನ ಗೋಳನ್ನು ಹೇಳಿಕೊಳ್ಳ ಬೇಕು ಎಂದು ಪ್ರಯತ್ನಿಸಿದ್ದ ಮುಸ್ಲಿಯಾರರಿಗೆ ಅದ್ರಾಮ ವಿಷಾದದಿಂದಲೇ ಹೇಳಿದ್ದ. 'ನಿಮಗೆ ಹುಚ್ಚು ಮುಸ್ಲಿಯಾರ್ರೇ, ಅಲ್ಲಾಹುವೇ ಬಂದು ಹೇಳಿದರೂ ನಮ್ಮ ಹಸನ್ ಸಾಹೇಬ್ರು ಆ ದಜ್ಜಾಲಿಯನ್ನು ಎದುರು ಹಾಕಿಕೊಳ್ಳುವವರಲ್ಲ. ಇನ್ನೆರಡು ತಿಂಗಳಲ್ಲೇ ತಮ್ಮ ಅಳಿಯ ಆಗುವವನನ್ನು ಯಾಕೆ ಎದುರು ಹಾಕಿಕೊಂಡಾರು? ಕಳೆದ ಶುಕ್ರವಾರ ಜಲೀಲನನ್ನು ಸಾಹೇಬ್ರೇ ಅಲ್ವಾ ಕುಂಬಳೆಗೆ ಕಳಿಸಿದ್ದು? ಅದ್ಯಾರೋ ಅರೆಬಿಕ್ ಮಾತ ನಾಡುವ ತಾಕತ್ತು ಉಳ್ಳ ಮೌಲವಿಯೊಬ್ಬರು ಇದ್ದಾರಂತೆ. ಅವರನ್ನೇ ಮಾತನಾಡಿಸಲು ಜಲೀಲ್ ಹೋಗಿದ್ದದ್ದು. ನನ್ಗೆ ನಿಜವಾಗಿ ಕೋಪ ಬರ್ತಾ ಉಂಟು. ಆ ದಜ್ಜಾಲಿ ನನ್ನನ್ನು ನಡು ರಸ್ತೆಯಲ್ಲಿ ನಿಲ್ಲಿಸಿ ಜೋರು ಮಾಡಿಬಿಟ್ನಲ್ಲಾ!'

ಅದ್ರಾಮ ತಿಳಿದುಕೊಂಡಂತೆ ದಜ್ಜಾಲಿ ಎಂದರೆ ಒಬ್ಬ ಭಯಾನಕ ರಾಕ್ಷಸ. ಹಿಂದೊಮ್ಮೆ ನಡೆದ ಊರೂಸಿನಲ್ಲಿ ಪಂಡಿತರೊಬ್ಬರು ದಜ್ಜಾಲಿಯ ಕಥೆಯನ್ನು ಭಯಂಕರ ವಾಗಿ ವಿವರಿಸಿದ್ದನ್ನು ಕೇಳಿ ರೋಮಾಂಚನಗೊಂಡಿದ್ದ ಅದ್ರಾಮ. ಏಳು ಭೂಮಿಗಳ ತಳದಲ್ಲಿರುವ ಆ ರಕ್ಕಸ ದಿನಕ್ಕೊಂದು ಭೂಮಿಯನ್ನು ನಾಲಗೆಯಿಂದ ನೆಕ್ಕುತ್ತಾ ಕರಗಿಸಿ ಮೇಲೆ ಬರುತ್ತಿರುತ್ತಾನೆ. ಶುಕ್ರವಾರದ ಜುಮ್ಮಾ ನಮಾಜಿನ ವೇಳೆಗೆ ಆತನ ನಾಲಗೆ ಭೂಮಿಯ ಮೇಲ್ಪದರದ ಬುಡದಲ್ಲಿರುತ್ತದೆ. ತೆಳುವಾದ ಭೂಮಿ ಇನ್ನೇನು ಪೂರ್ತಿಯಾಗಿ ಕರಗಿಬಿಡಬೇಕು ಅನ್ನುವಷ್ಟರಲ್ಲಿ ಮಸೀದಿಗಳಲ್ಲಿ ಖುತುಬದ ಧ್ವನಿ ಕೇಳಿಸತೊಡಗುತ್ತದೆ. ಆಗ ಭಯಪಡುವ ದಜ್ಜಾಲಿ ಕೆಳಕ್ಕೆ ಜಾರಲಾರಂಭಿಸುತ್ತಾನೆ. ಖುತುಬ ಪೂರ್ತಿಯಾಗುವಷ್ಟರಲ್ಲಿ ದಜ್ಜಾಲಿ ಏಳು ಭೂಮಿಗಳ ತಳಕ್ಕೆ ದೂಡಲ್ಪಟ್ಟಿರುತ್ತಾನೆ. ಭೂಮಿಯ ಜನರೆಲ್ಲ ಸುರಕ್ಷಿತವಾಗಿ ಉಳಿಯುತ್ತಾರೆ. ಮರುದಿನದಿಂದ ದಜ್ಜಾಲಿ ಮತ್ತೆ ನೆಕ್ಕಲು ಆರಂಭಿಸುತ್ತಾನೆ. ಆದರೆ ಮಸೀದಿಗಳಲ್ಲಿ ಎಲ್ಲಿಯತನಕ ಖುತುಬ ಓದುತ್ತಿರು ತ್ತಾರೋ, ಅಲ್ಲಿಯ ತನಕ ಮನುಷ್ಯರಿಗೆ ಯಾವ ಅಪಾಯವೂ ಇಲ್ಲ.



ಆದರೆ ಈ ಜಲೀಲನಂತಹ ದಜ್ಜಾಲಿ ಯಾವ ಖುತುಬಕ್ಕೂ ಭಯ ಪಡುವವನಲ್ಲ. ಹಸನ್ ಸಾಹೇಬ್‌ರಂತೂ ಜಲೀಲನಿಗೆ ಹೆದರುವವರು. ಅವನನ್ನು ಕಂಟ್ರೋಲು ಮಾಡಲು ಸುಲೇಮಾನ್ ಹಾಜಿಯವರಿಗೆ ಮಾತ್ರ ಸಾಧ್ಯ ಎಂದುಕೊಂಡಿದ್ದ ಅದ್ರಾಮ, ತಲೆಬಿಸಿಯಲ್ಲಿದ್ದ ಮುಸ್ಲಿಯಾರರಿಗೆ ಸೂಚಿಸಿದ್ದ, 'ನೀವು ಒಂದು ಮಾಡಿ ಮುಸ್ಲಿಯಾರ್ರೇ, ಸುಲೇಮಾನ್ ಹಾಜಾರ್ರನ್ನು ಗಟ್ಟಿ ಹಿಡ್ಕೊಂಡ್ರೆ ನಿಮ್ಮ ಕೆಲ್ಸವಾಗುತ್ತದೆ. ಅವರು ಹಸನ್ ಸಾಹೇಬ್ರಿಗೆ ಒಂದು ಮಾತು ಹೇಳಿದ್ರೂ ಸಾಕು. ಮುಂದಿನ ಜಮಾತ್ ಮೀಟಿಂಗ್‌ನಲ್ಲಿ ಹಾಜಾರ್ರು ಕೂಡಾ ಇರುವ ಹಾಗೆ ನೀವು ನೋಡಿಕೊಂಡರೆ ಸಾಕು. ಈ ದಜ್ಜಾಲಿಯ ನಾಲಗೆ ಭೂಮಿಯ ಒಳಗೇ ಇರುವ ಹಾಗೆ ಮಾಡಬಹುದು'.

ಅದ್ರಾಮನ ಮಾತಿನ ಸುತ್ತ ನೂರು ಆಸೆಗಳನ್ನು ಹೆಣೆದುಕೊಂಡು ಜನ್ನತ್ ಮಹಲಿನ ಚಾವಡಿಯಲ್ಲಿ ಹಲ್ಲು ನೋವು ಅನುಭವಿಸುತ್ತಿದ್ದ ಮುಸ್ಲಿಯಾರರ ವಸಡುಗಳಲ್ಲಿ ನೂರು ಮುಳ್ಳುಗಳು ನರ್ತಿಸುತ್ತಿದ್ದವು. ಕಣ್ಣುಗಳ ಅಂಚುಗಳಲ್ಲಿ ನೀರು ಮಡುಗಟ್ಟಿತ್ತು. ಇನ್ನು ತಡೆದುಕೊಳ್ಳುವುದು ಸಾಧ್ಯವೇ ಇಲ್ಲ ಎಂದೆನಿಸಿದಾಗ ಮುಸ್ಲಿಯಾರರು ತಮ್ಮ ಅಂಗಿ ಜೇಬಿಗೆ ಕೈ ಹಾಕಿದರು. ನಾಲ್ಕು ಎಲೆ ತೆಗೆದು ಸುಣ್ಣಹಚ್ಚಿ, ಪುಡಿ ಮಾಡಿದ್ದ ಅಡಿಕೆ ಹೋಳುಗಳ ಜತೆ ಬಾಯಿಗೆ ಹಾಕಿಕೊಂಡರು. ಎರಡು ಬೆರಳಿನಷ್ಟು ಉದ್ದದ ಬೇಜುವಾಡದ ಹೊಗೆಸೊಪ್ಪನ್ನು ಬೆರಳಲ್ಲೇ ತಿಕ್ಕುತ್ತಾ ಸುಣ್ಣಸವರಿ ಹಲ್ಲುಗಳ ನಡುವೆ ಇರಿಸಿಕೊಂಡು ಜಗಿದು ರಸ ಹೀರಿದರು. ಉಗುಳದಿದ್ದರೆ ಆಯಿತು; ಅಷ್ಟೇ ಅಲ್ವಾ?

## 3

ಜನ್ನತ್ ಮಹಲಿನ ಗೋಡೆ ಗಡಿಯಾರ ತಮ್ಮ ತಲೆಯ ಮೇಲೆಯೇ ಹತ್ತು ಬಾರಿ ಟೈಂಯೋಂ ಟೈಂಯೋಂ ಎಂದು ಹೊಡೆದುಕೊಂಡದ್ದೂ ಮುತ್ತುಪ್ಪಾಡಿ ಜುಮ್ಮಾ ಮಸೀದಿಯ ಇಮಾಂ ಜನಾಬ್ ಮೂಸಾ ಮುಸ್ಲಿಯಾರರಿಗೆ ಕೇಳಿಸಲಿಲ್ಲ. ನಾಳೆ ನಡೆಯುವ ಜಮಾತ್ ಮೀಟಿಂಗ್‌ನಲ್ಲಿ ಜಲೀಲ್, ಮೂಸಾ ಮುಸ್ಲಿಯಾರರ ವಿರುದ್ಧ ಆರೋಪ ಪಟ್ಟಿ ಸಲ್ಲಿಸುತ್ತಿರುವುದನ್ನು ಕಲ್ಪಿಸುತ್ತಾ ಕಿವುಡಾಗಿ ಹೋಗಿದ್ದರು. ಸುಲೇಮಾನ್ ಹಾಜಿಯವರ ಆಫೀಸು ರೂಮಿನ ಮುಚ್ಚಿದ ಬಾಗಿಲಿನ ಹಿತ್ತಾಳೆಯ ಹಿಡಿ ಇದೀಗ ಅವರಿಗೆ ಕಾಣಿಸುತ್ತಿರಲಿಲ್ಲ; ಮೂಸಾ ಮುಸ್ಲಿಯಾರರ ಚಾಪೆ, ಬಟ್ಟೆಗಳನ್ನು ಒಂದೊಂದಾಗಿ ಎತ್ತಿ, ಎಲ್ಲರಿಗೂ ತೋರಿಸುತ್ತಾ ಕೆರೆಗೆ ಎಸೆಯುತ್ತಿರುವ ಜಲೀಲ ಅವರ ಕಣ್ಣುಗಳನ್ನು ಕುರುಡಾಗಿಸಿದ್ದ. ಕಳೆದ ನಾಲ್ಕು ವರ್ಷಗಳಲ್ಲಿ ಅವರ ನಿದ್ರೆಯನ್ನೇ ನುಂಗಿದ್ದ ಹಲ್ಲು ನೋವು ಈಗೇನೂ ಬಾಧಿಸುತ್ತಿರಲಿಲ್ಲ. ಹಲ್ಲುಗಳನ್ನು ಉಪಯೋಗಿಸಬೇಕಾದ ಯಾವುದೇ ಕೆಲಸಗಳನ್ನು ಅವರು ಇನ್ನು ಮೇಲೆ ಮಾಡುವ ಅಗತ್ಯವಿದ್ದಿರಲಿಲ್ಲ.

ಮುಸ್ಲಿಯಾರರ ಗಂಟಲು ನವಿರಾಗಿ ಕಂಪಿಸುತ್ತಿದ್ದವು. ತುಟಿಗಳು ಅದುರುತ್ತಿದ್ದವು. ರೆಪ್ಪೆಗಳು ಅಂಟಿಕೊಂಡಿದ್ದವು. ಹಲ್ಲುಗಳ ಸೆರೆಗಳಿಂದ ಕುರಾನು ಸಾಲುಗಳು ಮೆಲ್ಲನೆ ಹೊರಗೆ ನುಸುಳುತ್ತಿದ್ದವು.

'ಐಹಿಕ ಜೀವನದ ಉಪಮೆ ಇಷ್ಟು : ಆಕಾಶದಿಂದ ನಾವು ನೀರನ್ನು ಸುರಿಸಿದೆವು. ಮನುಷ್ಯರೂ, ಜಾನುವಾರುಗಳೂ ತಿನ್ನುವ ಹಸಿರು ರಾಶಿ ಭೂಮಿಯ ಮೇಲೆಲ್ಲಾ ಸಾಕಷ್ಟು ಬೆಳೆದವು. ಹಾಗೆ ಭೂಮಿ ತನ್ನ ಶ್ಯಾಮಲತೆಯಿಂದ ಅಲಂಕೃತವಾಗಿ ಶೋಭಿಸುತ್ತಿರುವಾಗ, ತಾವು ಅವುಗಳ ಮೇಲೆ ಅಧಿಕಾರವುಳ್ಳವರೆಂದು ಅವುಗಳ ಒಡೆಯರು ಮೋಹಿಸಲಾರಂಭಿಸಿದಾಗ; ರಾತ್ರಿ ಅಥವಾ ಹಗಲು ಹೊತ್ತಿನಲ್ಲಿ ನಮ್ಮ ಅಪ್ಪಣೆ ಹೊರಡುತ್ತದೆ ಮತ್ತು ನಾವು ಅದರೊಂದು ಹುಲ್ಲು ಕಡ್ಡಿಯನ್ನಾಗಿ ಮಾಡಿಬಿಟ್ಟೆವು; ನಿನ್ನೆ ಅಲ್ಲಿ ಏನು ಇದ್ದಿರಲಿಲ್ಲವೆಂಬಂತೆ...'

ಮುಸ್ಲಿಯಾರರು ಇದ್ದಕ್ಕಿದ್ದಂತೆಯೇ ಎದ್ದು ನಿಂತರು,

'ಆಗ ನೂಹರು ತಮ್ಮ ಪುತ್ರನಿಗೆ ಕೂಗಿ ಹೇಳಿದರು. 'ನನ್ನ ಪ್ರಿಯ ಮಗನೆ, ನಮ್ಮ ಜತೆಯಲ್ಲಿ ಈ ಹಡಗನ್ನು ಹತ್ತು. ಸತ್ಯ ನಿಷೇಧಿಗಳ ಜತೆ ನೀನಾಗದಿರು...'

ಮುಸ್ಲಿಯಾರರು ನಿದ್ರೆಯಲ್ಲಿ ನಡೆಯುವವರಂತೆ ಕಾಲೆಳೆಯುತ್ತಾ ಮುಂಬಾಗಿಲತ್ತ ಸರಿದರು.

'ವಿಶ್ವಾಸಿಗಳೇ! ನಿಮ್ಮ ರಕ್ಷಣೆಯ ಆಯುಧಗಳನ್ನು ಸಜ್ಜುಗೊಳಿಸಿರಿ...'

ಹೆಬ್ಬಾಗಿಲ ಬಳಿ ಗೋಡೆಗಾನಿಸಿ ನಿಲ್ಲಿಸಿದ ಬಡಿಗೆಯನ್ನು ಎತ್ತಿಕೊಂಡ ಮುಸ್ಲಿಯಾರರು ಹೊಸ್ತಿಲು ದಾಟಿದರು. ಅಂಗಳದಲ್ಲಿ ಬೆಳದಿಂಗಳ ಹಾಲು ಹರಿಯುತ್ತಿತ್ತು. ಏಳು ಸಾಲು ಮೆಟ್ಟಲುಗಳನ್ನು ಇಳಿದ ಮುಸ್ಲಿಯಾರರು ನಿಧಾನವಾಗಿ ಹೆಜ್ಜೆ ಬದಲಿಸುತ್ತಾ ಅಂಗಳ ದಾಟಿ ಚಿಕ್ಕ ಗೇಟಿನ ಬಾಗಿಲು ತೆರೆದು ಹೊರಗೆ ಕಾಲಿರಿಸಿದಾಗ ತಂಪುಗಾಳಿ ಬೀಸಿ ಬಂತು.

ಎಲ್ಲಿ ಅಡಗಿದ್ದವೋ ಏನೋ; ಗೇಟು ತೆರೆದ ಸದ್ದು ಕೇಳಿ ಧಾವಿಸಿ ಬಂದ ಎರಡು ನಾಯಿಗಳು ತೆರೆದ ಬಾಗಿಲ ಮೂಲಕ ಹೊರಗೆ ಹಾರಿದವು. ಎಚ್ಚರಗೊಂಡ ಮುಸ್ಲಿಯಾರರ ಎದೆ 'ಡಬ್' ಎಂದಿತು ಒಂದೇ ಕ್ಷಣ. ಪ್ರಾಣಭಯದಿಂದ ತತ್ತರಿಸಿ ಹೋಗಿದ್ದ ಮುಸ್ಲಿಯಾರರು ತಮ್ಮ ಬಡಿಗೆಯನ್ನೆತ್ತಿ ನಾಯಿಗಳತ್ತ ಬೀಸಿಯೇ ಬಿಟ್ಟರು!

ಮುಸ್ಲಿಯಾರರು ಬಡಿಗೆ ಬೀಸಿದ್ದೇನೋ ಹೌದು : ಆದರೆ ತಮ್ಮ ಬಡಿಗೆಯನ್ನು ಕಂಡ ನಾಯಿಗಳು ಹೆದರಿ ಓಡುತ್ತವೆ ಎಂಬ ಕಲ್ಪನೆಯನ್ನೂ ಮಾಡಿದವರಲ್ಲ. ತಾವು



ಬಡಿಗೆ ಎತ್ತಿದ ಮರುಕ್ಷಣದಲ್ಲೇ ನಾಯಿಗಳು ತಮ್ಮ ಎದೆಗೆ ಹಾರುತ್ತವೆ ಎಂದೇ ನಿರೀಕ್ಷಿಸಿದ್ದರು. ಆದರೆ ಗಾಳಿಯನ್ನು 'ಸುಂಯ್' ಎಂಬ ಸದ್ದಿನೊಡನೆ ಸೀಳಿದ ಬಡಿಗೆ, ನಾಯಿಗಳಿಗೆ ಬೆಳದಿಂಗಳ ಬೆಳಕಿನಲ್ಲಿ ಮಿಂಚಿನ ಕೋಲಿನಂತೆ ಕಾಣಿಸಿದ್ದಿರಬಹುದು. ಸರಕ್ಕನೆ ಗೇಟು ನುಸುಳಿ ಬಡಿಗೆಯ ಹೊಡೆತದಿಂದ ತಪ್ಪಿಸಿಕೊಂಡ ನಾಯಿಗಳು ಜನ್ನತ್ ಮಹಲ್‌ನ ಮುಖ ಮಂಟಪದಲ್ಲಿ ಧಾವಿಸಿ ಅಲ್ಲಿಂದಲೇ ಬೊಗಳತೊಡಗಿದ್ದವು!

ನಾಯಿಗಳ ಅನಿರೀಕ್ಷಿತ ಪುಕ್ಕಲುತನ ಮುಸ್ಲಿಯಾರರ ದೇಹದಲ್ಲಿ ನೂರು ಆನೆಗಳ ಶಕ್ತಿಯನ್ನು ತುಂಬಿಸಿಬಿಟ್ಟಿತ್ತು. ಅದುವರೆಗೂ ಬಾಯೊಳಗೆ ಮೆಲ್ಲುತ್ತಿದ್ದ ಕೆಂಪು ಕವಳವನ್ನೆಲ್ಲ ಖ್ಯಾಕರಿಸಿ ಬಲವಾಗಿ ಥೂಕ್ಕೆಂದು ಉಗುಳಿಬಿಟ್ಟರು ಮೂಸಾ ಮುಸ್ಲಿಯಾರರು.

ಸಾವಿರ ಹನಿಗಳಾಗಿ ಒಡೆದು ಜನ್ನತ್ ಮಹಲ್‌ನತ್ತ ಕೆಂಪುಮೋಡದಂತೆ ಚಿಮ್ಮಿದ ಮುಸ್ಲಿಯಾರರ ಎಂಜಲನ್ನು ತಡೆದು ನಿಲ್ಲಿಸುವ ಶಕ್ತಿ ದೊಡ್ಡ ಕಮಾನು ಗೇಟಿನ ಕಬ್ಬಿಣದ ಕಂಬಿಗಳಿಗೆ ಇರಲಿಲ್ಲ.

ನಾಳೆಯ ದಿನ ಜುಮ್ಮಾ ನಮಾಜಿನ ಬಳಿಕ ನಡೆಯಲಿರುವ ಜಮಾತ್ ಮೀಟಿಂಗ್‌ನಲ್ಲಿ ತನಗೆದುರಾಗುವ ಎಲ್ಲರನ್ನು ಏಕಾಕಿಯಾಗಿ ಗೆಲ್ಲುವ ಆತ್ಮವಿಶ್ವಾಸದಿಂದ, ಮಸೀದಿಯ ದಾರಿಯಲ್ಲಿ ದಾಪುಗಾಲು ಹಾಕತೊಡಗಿದ್ದ ಮುಸ್ಲಿಯಾರರು ಹಿಂತಿರುಗಿ ನೋಡಿರುತ್ತಿದ್ದರೆ 'ಜನ್ನತ್ ಮಹಲ್' ಕೆಂಪಗೆ ಕಾಣಿಸಬಹುದಿತ್ತು; ಕೆಂಪು ಬಟ್ಟೆ ಹೊದಿಸಿದ್ದ ಗೋರಿಯಂತೆ!

---

ಜನ್ನತ್ = ಸ್ವರ್ಗ
ತಸ್ಬಿ = ಜಪ
ಜಕಾತ್ = ಕಡ್ಡಾಯ ದಾನ
ಸಲಾತ್ = ಭಜನೆ
ವಲು = ನಮಾಜಿಗೆ ಮೊದಲಿನ ದೇಹಶುದ್ಧಿ
ಖುತುಬ = ಪ್ರವಚನ
ಮಿಂಬರ್ = ಖುತುಬ ಓದಲು ನಿಲ್ಲುವ ಎತ್ತರದ ಪೀಠ
ದಜ್ಜಾಲಿ = ರಾಕ್ಷಸ

# ಇದ್ದತ್

**'ನಿಮ್ಮಲ್ಲಿ ಯಾವನಾದರೂ ಪತ್ನಿಯನ್ನು ಬಿಟ್ಟು ತೀರಿಹೋದರೆ ನಾಲ್ಕು ತಿಂಗಳು ಹತ್ತು ದಿವಸ ತಡೆದು ನಿಲ್ಲಲಿ. ಹಾಗೆ 'ಇದ್ದತ್'ನ ಕಾಲಾವಧಿ ಮುಗಿಸಿದ ನಂತರ ವಿವಾಹ ಮಾಡಿಕೊಂಡರೆ (ವಾಡಿಕೆಯಂತೆ ನಡೆದರೆ) ನಿಮ್ಮ ಮೇಲೆ ಯಾವೊಂದು ಆಕ್ಷೇಪವೂ ಇಲ್ಲ. ನೀವು ಮಾಡುತ್ತಿರುವುದರ ಬಗ್ಗೆ ಅಲ್ಲಾಹುವು ಸೂಕ್ಷ್ಮವಾಗಿ ತಿಳಿಯುವವನೇ ಆಗಿರುತ್ತಾನೆ'.**

**–ಕುರಾನ್ ಅಲ್‌ಬಕರ – 234**

## 1

ಮೆಹರುನ್ನೀಸಾ ಸರಿಯಾಗಿಯೇ 'ಲೆಕ್ಕ'ವಿರಿಸಿದ್ದಳು. ಈ ಒಂದು ರಾತ್ರಿ ಕಳೆದು ಹಗಲಾದರೆ 'ಇದ್ದತ್' ಅವಧಿ ಮುಕ್ತಾಯವಾಗುತ್ತದೆ. ಅಬ್ಬಾ! ಅದೆಷ್ಟು ಬೇಗ ಕಳೆದು ಹೋಯಿತು! ಎಲ್ಲ, ನಿನ್ನೆ – ಮೊನ್ನೆ ನಡೆದಂತೆ.

ತನ್ನ ಮುಖ ಈಗ ಹೇಗಿರಬಹುದು? 'ಇದ್ದತ್'ನ ಅವಧಿಯಲ್ಲಿ ಕನ್ನಡಿ ನೋಡ ಬಾರದಂತೆ; ಚಿಕ್ಕಮ್ಮ ಹೇಳಿದ್ದು. ಆದರೂ ಬಚ್ಚಲಲ್ಲಿ ಮೀಯುವಾಗ ಒಮ್ಮೆ ಹಂಡೆಗೆ ಇಣುಕಿದವಳಿಗೆ ಭಯವಾಗಿತ್ತು. 'ಅಲಿಖತ್' ಇಲ್ಲದ ಬೋಳು ಕಿವಿಗಳು. ಆಭರಣಗಳೆಲ್ಲವೂ ಪೆಟ್ಟಿಗೆಯಲ್ಲಿ ಇವೆ. ಯಾರೂ ಗಮನಿಸಿರುವುದು ಸಾಧ್ಯವಿಲ್ಲದಿದ್ದರೂ ಸರ್ವಶಕ್ತನಾದ ಅಲ್ಲಾಹುವಿಗೆ ಕಾಣಿಸುವುದಿಲ್ಲವೇ? ಎಲ್ಲದರ ಸೂತ್ರಧಾರನು ಅವನು. ತಾಳ್ಮೆ ವಹಿಸಿದವರಿಗೆ ಅವರ ಒಳ್ಳೆಯ ನಡತೆಗಾಗಿ ಮುಂದೊಮ್ಮೆ ಬಹುಮಾನಗಳನ್ನೇ ನೀಡಲಿದ್ದಾನೆ. ಹಂಡೆಯ ನೀರಿನಲ್ಲಿ ಒಂದು ಕ್ಷಣ–ಒಂದೇ ಒಂದು ಕ್ಷಣ–ಮುಖದ ಬಿಂಬವನ್ನು ನೋಡಿದ್ದು ತಪ್ಪಾದರೂ – ತಕ್ಷಣವೇ 'ತೌಬಾ' ಹೇಳಿ ಪಶ್ಚಾತ್ತಾಪಪಟ್ಟಿದ್ದು, ಅಲ್ಲಾಹುವಿಗೆ ಗೊತ್ತಾಗಿರುತ್ತದೆ. ತನ್ನ ಅಪರಾಧವು ಖಂಡಿತವಾಗಿಯೂ ಕ್ಷಮಿಸಲ್ಪಟ್ಟಿರುತ್ತದೆ.



ಅಲ್ಲಾಹುವೇ ದಯವಿಟ್ಟು ನನ್ನ ತಪ್ಪುಗಳಿಗೆ ಕ್ಷಮೆ ನೀಡು. ಕಳೆದ ಕೆಲವು ದಿನಗಳಿಂದ ನಾನು ಪ್ರತಿದಿನವೂ ಓದುತ್ತಿರುವ ಪವಿತ್ರ ಕುರಾನಿನ ಪುಣ್ಯಫಲದಿಂದ ನನಗೆ ದಯೆ ತೋರು. ಓಹ್ ಅಲ್ಲಾಹುವೇ ಕುರಾನಿನ ಭಾಗಗಳಲ್ಲಿ ನಾನು ಮರೆತಿರುವುದನ್ನು ಮತ್ತೆ ನೆನಪಿಗೆ ಬರುವಂತೆ ಅನುಗ್ರಹಿಸು. ಇಡಿಯ ಜಗತ್ತಿನ ಪ್ರಭುವೇ ಈ ಗ್ರಂಥವನ್ನೇ ನನ್ನ ಜೀವನದ ಆಧಾರವನ್ನಾಗಿ ಮಾಡು. ಆಮೆನ್.

ಪ್ರಾರ್ಥನೆ ಮುಗಿಸಿ ಕುರಾನ್ ಗ್ರಂಥವನ್ನು ಮುತ್ತಿಟ್ಟು ಮಡಚಿ, ಪಕ್ಕದ ಮೇಜಿನ ಮೇಲೆ ಹಾಸಿದ್ದ ಹಸಿರು ವಸ್ತ್ರದ ಮೇಲಿರಿಸಿದ ಅವಳು, ಎರಡೂ ಅಂಗೈಗಳನ್ನು ಕಣ್ಣಿಗೊತ್ತಿಕೊಂಡಳು.

ಇನ್ನೊಂದೇ ರಾತ್ರಿ. ನಾಳೆಯ ದಿನ ಬಿಸಿಲು ಕಾದಾಗ ಬಾವಿ ಕಟ್ಟೆಯ ಬಳಿಯಿರುವ ಬಟ್ಟೆಯೊಗೆಯುವ ಕಲ್ಲಿನ ಮೇಲೆ ಕುಳಿತುಕೊಳ್ಳಲು ಅವಳು ಸ್ವತಂತ್ರಳು. ಚಾವಡಿಯ ಆರಾಮ ಕುರ್ಚಿಯಲ್ಲಿ ಒರಗಿ ರೇಡಿಯೋದ ಹಾಡು ಕೇಳುವುದು ನಾಳೆಯಿಂದ ಪಾಪವಲ್ಲ. 'ಸಮದ್' ಮಲಗುವ ಕನ್ನಡಿ ಕಪಾಟಿನ ಕೋಣೆಯಲ್ಲಿ ಕನ್ನಡಿ ನೋಡುತ್ತಾ ತಲೆ ಬಾಚಿಕೊಂಡರೆ ಕೈಜಮ್ಮನವರು ಆಕ್ಷೇಪಿಸಲಿಕ್ಕಿಲ್ಲ.

ಸಮದ್ ಈಗ ಹೇಗಿರಬಹುದು? ಒಂದೇ ಮನೆಯೊಳಗೆ ಇದ್ದರೂ ಪರಸ್ಪರ ನೋಡದೆ ಅದೆಷ್ಟೋ ವರ್ಷಗಳಾದಂತಿದೆ. ಅವನು ಚಾವಡಿಯಲ್ಲಿ ಕೈಜಮ್ಮನವರ ಜತೆ ಮಾತನಾಡುತ್ತಿರುವಾಗಲೆಲ್ಲ ಬೇಡ ಬೇಡವೆಂದರೂ ಆತನ ನಗು ಒಳಗೆ ನುಗ್ಗಿ ಬರುತ್ತದೆ. ಮಾತು ಮಾತಿಗೂ, 'ಆ ಸಂಗತಿ ಬಿಡಿ, ನಾನಿದ್ದೇನಲ್ಲಾ...' ಎಂದು ಸೇರಿಸುವುದನ್ನು ಅದೆಷ್ಟು ತಮಾಷೆ ಮಾಡಿದರೂ ಅವನು ಬಿಡಲೇ ಇಲ್ಲ. ಈ ಎರಡು ವರ್ಷದಲ್ಲಿ ಏನೆಲ್ಲ ನಡೆದುಹೋಯಿತು! ಎಲ್ಲ ಮಾಯಕದಂತೆ. ಅಲ್ಲಾಹು ಇಚ್ಚಿಸಿದರೆ ಅವನಿಗೆ ಅಸಾಧ್ಯವಾದದ್ದು ಯಾವುದು? ಆತನು ಮಹಾ ಮಾಂತ್ರಿಕನು.

ಇಷ್ಟು ದೊಡ್ಡ ಮನೆಗೆ ಯಜಮಾನಿತಿಯಾಗಿ ಬರಬಹುದೆಂದು ಕನಸು ಕಂಡವಳೂ ಅಲ್ಲ ಅವಳು. ಮೆಹರುನ್ನೀಸಾಳ ಬಡ ಕನಸುಗಳಲ್ಲಿ ಇಷ್ಟೊಂದು ದೊಡ್ಡ ಮನೆಯ ಚಿತ್ರ ಹಿಡಿಸುವುದೂ ಸಾಧ್ಯವಿರಲಿಲ್ಲ. ಅವಳೆಷ್ಟು ದೊಡ್ಡ ಅರಮನೆಯ ಚಿತ್ರ ಕಲ್ಪಿಸಿದರೂ, ಆ ಮನೆಗೆ ಕಲ್ಲುಗೋಡೆಯಿದ್ದರೂ ಮಾಡು ಸೋಗೆಯದ್ದೇ.

ಮೆಹರುನ್ನೀಸಾಳಿಗೆ ಆಗ ಹದಿನೈದೋ – ಹದಿನಾರೋ ಇದ್ದೀತು. ನಿಖರವಾಗಿ

ಹೇಳಲು ಆಕೆಯ ಜನ್ಮ ದಿನಾಂಕ ಯಾವ ಶಾಲೆಯಲ್ಲೂ ದಾಖಲಾಗಿಲ್ಲ. ಅವಳ ಮದುವೆಗಿಂತ ಎರಡು ಮಳೆಗಾಲ ಹಿಂದಿನ ಒಂದು ದಿನ; ಕೆಮ್ಮುತ್ತಾ ಸರಕಾರಿ ಆಸ್ಪತ್ರೆಗೆ ಹೋಗಿದ್ದ ಅವಳ ತಂದೆಯನ್ನು 'ಮೈಯ್ಯತ್ ಮಂಚ'ದಲ್ಲೇ ಹೊತ್ತು ತಂದಿದ್ದರು. ಆ ದಿನವಂತೂ ಅವಳು ಇಡಿಯ ಊರು ಕರಗುವಷ್ಟು ಕಣ್ಣೀರು ಹಾಕಿದ್ದಳು. ಮೆಹರುನ್ನೀಸಾಳಿಗೆ ಇಂದಿಗೂ ಚೆನ್ನಾಗಿ ನೆನಪಿದೆ; ಅಪ್ಪನ ಶವವನ್ನು ಹೊರಗೆ ಅಂಗಳದಲ್ಲಿ ಬೆಂಚುಗಳ ಮೇಲೆ ಮಲಗಿಸಿ ಕುದಿಯುವ ನೀರಿನಿಂದ ಸ್ನಾನ ಮಾಡಿಸುತ್ತಿರುವಾಗ; ಅವಳು – ಅಲ್ಲಿಗೆ ಹೋಗುವುದು ತಪ್ಪಾಗಿದ್ದರೂ – ಹುಚ್ಚು ಹಿಡಿದವಳಂತೆ ಅಲ್ಲಿಗೆ ಓಡಿ ಹೋದದ್ದು; ಕೆಸರ ನೀರಿನಲ್ಲಿ ಬಿದ್ದು ಹೊರಳಾಡಿದ್ದು; ಅದ್ಯಾರೋ ಇಬ್ಬರು ಗಂಡಸರು ಅವಳನ್ನು ಗುಬ್ಬಚ್ಚಿಯಂತೆ ಅಮುಕಿ ಹಿಡಿದೆತ್ತಿಕೊಂಡು ಒಳಗೆ ಸಾಗಿಸಿದ್ದು.

ತಾನೊಂದು ಅಷ್ಟೊಂದು ಅತ್ತು ರಂಪಾಟ ಮಾಡಿದ್ದು ಯಾಕಿದ್ದಿರಬಹುದು? ತಂದೆ ತೀರಿಕೊಂಡರೆಂದೇ, ಅಥವಾ ತನಗಿನ್ನಾರು ಗತಿ ಎಂಬ ಕಾರಣದಿಂದಿರಬಹುದೇ? ತನ್ನ ತಾಯಿಯಾದರೂ ಬದುಕಿರುತ್ತಿದ್ದರೆ ತಾನಷ್ಟು ದುಃಖಿಸುತ್ತಿದ್ದೆನೆ? ಅಥವಾ ತನ್ನೆಲ್ಲ ನೋವಿಗೆ – ಅಳುವಿಗೆ ಮುಖ್ಯ ಕಾರಣ ಚಿಕ್ಕಮ್ಮನ ಹಿಂಸೆಯಾಗಿದ್ದಿರಬಹುದೇ? ಆದರೆ ಅದೇ ಚಿಕ್ಕಮ್ಮನಲ್ಲವೇ ತನ್ನನ್ನು ಇದಿಷ್ಟು ದೊಡ್ಡ ಮನೆಗೆ ಯಜಮಾನಿತಿಯನ್ನಾಗಿ ಮಾಡಿದ್ದು? ಇಂತಹ ಅಂಗಡಿ ಸಾಹುಕಾರರಿಗೆ ಯಾರು ಕೂಡಾ ಕರೆದು ಹುಡುಗಿ ಕೊಟ್ಟಾರು.

ಮೊದಲ ರಾತ್ರಿಯಂದೇ ಪುತ್ತಬ್ಬ ಸಾಹುಕಾರರು ತಮ್ಮ ಹೊಸ ಹೆಂಡತಿಯನ್ನು ಮಂಚದ ಮೇಲೆ ಕುಳ್ಳಿರಿಸಿಕೊಂಡು ವಿವರಿಸಿದ್ದರು; 'ಈ ಮನೆಗೆ ನೀನೇ ಯಜಮಾನಿತಿ. ನಿನಗಿಲ್ಲಿ ಯಾವುದಕ್ಕೂ ಕಡಿಮೆಯಾಗುವುದಿಲ್ಲ. ಅಲ್ಲಾಹು ನನಗೆ ಬೇಕಾದಷ್ಟು ಕೊಟ್ಟಿದ್ದಾನೆ. ನೀನು ಯಾವುದಕ್ಕೂ ಇನ್ನೊಬ್ಬರ ಹತ್ತಿರ ಕೈಚಾಚಬೇಕಾಗಿಲ್ಲ'.

ಕೈಚಾಚಬೇಕೆಂದರೂ ಆ ಮನೆಯಲ್ಲಿ ಇನ್ನೊಬ್ಬರು ಇದ್ದರಲ್ಲವೇ? ಇರಲೇ ಇಲ್ಲವೆಂದಲ್ಲ; ಇಬ್ಬರಿದ್ದರು. ಇವಳಲ್ಲೇ ಯಾಚಿಸುವವರು.

ಎಲ್ಲಿಂದಲೋ ಮೀನಿನ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡೇ ಮುತ್ತುಪ್ಪಾಡಿಗೆ ಕಾಲಿಟ್ಟಿದ್ದ ಯುವಕ ಪುತ್ತಬ್ಬ. ಕ್ರಮೇಣ ತಲೆಹೊರೆಯ ಒಣ ಮೀನಿನ ವ್ಯಾಪಾರದಿಂದ ಸೈಕಲ್ಲು ಸಹಿತ ಹಸಿ ಮೀನಿನ ಮಾರಾಟಕ್ಕೆ ಬದಲಾಯಿಸಿಕೊಂಡು, ಇದ್ದಕ್ಕಿದ್ದಂತೆ ಮೀನು ವ್ಯಾಪಾರವನ್ನೇ ಕೈಬಿಟ್ಟು ಪಂಚಾಯತು ಕಚೇರಿಯ ಹತ್ತಿರ ಜೀನಸು ಅಂಗಡಿ ಆರಂಭಿಸಿ ಕೆಲವೇ ವರ್ಷಗಳಲ್ಲಿ ಮನೆ ಹಿತ್ತಲು ಮಾಡಿಕೊಂಡು 'ಪುತ್ತಬ್ಬ ಸಾಹುಕಾರ'ರಾಗಿ ಬೆಳೆದದ್ದರ ಬೆನ್ನಲ್ಲಿ ಮೂವತ್ತು ವರ್ಷಗಳ ಶ್ರಮದ ಕತೆಯಿದೆ.



ನಾಲ್ಕು ತಿಂಗಳು ಹತ್ತು ದಿನಗಳ ಹಿಂದೆ ತೀರಿಕೊಂಡ ಸಾಹುಕಾರರಿಗೆ ಸಾಯುವಂತಹ ವಯಸ್ಸೇನೂ ಆಗಿದ್ದಿರಲಿಲ್ಲ. ನಲವತ್ತು – ನಲವತ್ತೈದರಲ್ಲಿ ಅಥವಾ ಐವತ್ತೇ ಆಗಿರಲಿ – ಅವರಿಗೆ ನಾವು ತರುವಂತಹ ದೊಡ್ಡ ಕಾಯಿಲೆಯೇನೂ ಅಂಟಿಕೊಂಡಿರಲಿಲ್ಲ. ಅಲ್ಲಾಹುವಿನ ಆಟದಲ್ಲಿ ಯಾವುದನ್ನೂ ನಿಖರವಾಗಿ ಇದು ಹೀಗೆಯೇ ಇರಬೇಕು ಎಂದು ಹೇಳಲು ಸಾಧ್ಯವೇ? ದೂರದಿಂದ ನೋಡುವವರಿಗೆ ಪುತ್ತಬ್ಬನವರು ಕಲ್ಲುಗುಂಡಿನಂತಹ ಆಳು. ಮುಂಡಾಸು ಕಟ್ಟಿಕೊಂಡು ತಮ್ಮ ಜೀನಸು ಅಂಗಡಿಯಲ್ಲಿ ಕೂತರೆಂದರೆ ಗಿರಾಕಿಗಳು ತಮಗರಿವಿಲ್ಲದೇ 'ಸಾಹುಕಾರ್ರೇ' ಎಂದೇ ಕರೆಯಬೇಕು. ಮಾತೆತ್ತಿದರೆ ನೂರು ಮಾರು ಕೇಳಿಸೀತು; ಅಂತಹ ಕಂಠ, ಒಂದಿಪ್ಪತ್ತು ತಲೆಕೂದಲು ಬಿಳಿಯಾದರೂ ಕಪ್ಪು ಕಾಡಿಗೆಯಂತಹ ಹುಬ್ಬುಗಳು ಅವರದ್ದು, ಮದುವೆಗಿಂತ ಆರು ತಿಂಗಳ ಹಿಂದೆ ಹೊಸ ಆರು ಹಲ್ಲು ಜೋಡಿಸಿಕೊಂಡಿದ್ದನ್ನು ಯಾರಿಗೂ ಪತ್ತೆ ಹಚ್ಚಲು ಸಾಧ್ಯವಿಲ್ಲ. ಅಪರಿಚಿತರ ಎದುರು ಇಪ್ಪತ್ತು ವರುಷಗಳನ್ನೇ ಮರೆಮಾಚಬಲ್ಲ ನಡಿಗೆಯ ಗತ್ತು, ಹೊಟ್ಟೆಯೊಂದು ಹದತಪ್ಪಿ ಬೆಳೆಯದಿರುತ್ತಿದ್ದರೆ ಮೂವತ್ತರ ಯುವಕರನ್ನು ನಾಚಿಸಬಲ್ಲ ದಾರ್ಢ್ಯತೆ ಅವರಲ್ಲಿ ಹೊಡೆದು ಕಾಣುತ್ತಿತ್ತು.

ಇಷ್ಟೆಲ್ಲ ಇದ್ದರೂ – ಹತ್ತು ಮಂದಿಯ ನಡುವೆ ಎದ್ದು ಕಾಣುವಂತಹ ಸಾಹುಕಾರರು, ನೂರು ಜನರ ಎದುರು 'ನಿಕಾಹ್' ಆಗಿ ಕರೆದು ತಂದಿದ್ದ ಮೊದಲ ಹೆಂಡತಿ ಸಕೀನ ಮೂರು ತಿಂಗಳೂ ಅವರ ಜತೆ ಸಂಸಾರ ಮಾಡಲಿಲ್ಲ. ನಡುರಾತ್ರಿಯಲ್ಲಿ ಮಂಚದಿಂದ ಎದ್ದು ಓಡಿಹೋದವಳು, ಪುತ್ತಬ್ಬನವರು ಬೇಡ ಬೇಡವೆಂದು ಅಂಗಲಾಚಿದರೂ ಕೇಳದೆ ಹಿತ್ತಲ ಬಾವಿಗೆ ಹಾರಿದ್ದಳು. ನಾಲ್ಕು ದಿನ ಪುತ್ತಬ್ಬನವರಿಗೆ ವಿಪರೀತ ಜ್ವರ. ಅಂಗಡಿಯ ಕೆಲಸಕ್ಕಾಯಿತೆಂದು ಮನೆಯಲ್ಲೇ ಇಟ್ಟುಕೊಂಡಿದ್ದ ಗುಂಡನೆಯ ಹುಡುಗ ಸಮದ್‌ನನ್ನು ತಬ್ಬಿಕೊಂಡು ವಾರವಿಡೀ ಕಣ್ಣೀರು ಹಾಕುತ್ತಿದ್ದುದನ್ನು ಕಂಡು ಬಹಳ ಮಂದಿ ಕನಿಕರ ಸೂಚಿಸಿದ್ದರು. ಸಾಹುಕಾರರ ವರ್ತನೆಯ ಬಗ್ಗೆ ಹದಿನೈದರ ಹೊಸ್ತಿಲಲ್ಲಿದ್ದ ಸಮದ್‌ನಿಗೆ ಭಯವೇ ಆಗಿತ್ತು.

ಇನ್ನೊಂದು ಹೆಣ್ಣನ್ನು ಮನೆಗೆ ತರುವುದೇ ಇಲ್ಲವೆಂಬ ಹಠದಲ್ಲಿ ತಮ್ಮ ಬಹುದೂರದ ಅಕ್ಕ ಕೈಜಮ್ಮನವರನ್ನು ಕರೆದುಕೊಂಡು ಬಂದು, ಮುಂದೆ ಹತ್ತು ಹನ್ನೆರಡು ವರುಷ ಬದುಕು ಮುಂದುವರಿಸಿದ್ದ ಪುತ್ತಬ್ಬ ಸಾಹುಕಾರರು, ಕಳೆದ ಮಳೆಗಾಲಕ್ಕೆ ಒಂದು ತಿಂಗಳಿರುವಂತೆಯೇ – ಅದು ಯಾಕೋ ಮನಸ್ಸು ಬದಲಾಯಿಸಿ ತಮಗಿಂತ ಸುಮಾರು ಇಪ್ಪತ್ತೈದು ವರ್ಷಕ್ಕೆ ಕಿರಿಯವಳಾದ ಮೆಹರುನ್ನೀಸಾಳನ್ನು ನಿಕಾಹ್ ಮಾಡಿಕೊಂಡು ಕರೆ ತಂದಾಗ, ಸಮದ್ ತನ್ನ ಗೆರೆ ಮೀಸೆಯ ನೆರಳಲ್ಲಿ ನಗು ಅರಳಿಸಿದ್ದ.

'ಇವನ ಎದುರು ನೀನೇನೂ ಮರೆ ಮಾಡಿಕೊಳ್ಳುವ ಅಗತ್ಯವಿಲ್ಲ. ಸಮದ್ ಬಹಳ ಸಮಯದಿಂದ ನನ್ನ ಜೊತೆ ಇದ್ದಾನೆ. ತಂದೆ–ತಾಯಿ ಯಾರೂ ಇಲ್ಲದ ಯತೀಮ್ ಹುಡುಗ. ಈ ಮನೆಯಲ್ಲಿ ನಾನು ಬೇರೆಯಲ್ಲ – ಅವನು ಬೇರೆಯಲ್ಲ' ಎನ್ನುತ್ತಾ ಸಾಹುಕಾರರು ಮೆಹರುನ್ನೀಸಾಳಿಗೆ ಸಮದ್‌ನನ್ನು ಪರಿಚಯಿಸಿದಾಗ, ಸಿಡಿಯುವ ಯೌವನವನ್ನೇ ಮೈತುಂಬ ಹುದುಗಿಸಿಕೊಂಡಿದ್ದ ಯುವಕ, ಪ್ರೀತಿ–ಗೌರವ ಎರಡನ್ನೂ ಬೆರೆಸಿದ ಹೂನಗುವಿನ ಗೊಂಚಲನ್ನೇ ಮೆಹರುನ್ನೀಸಾಳಿಗರ್ಪಿಸಿದ್ದ.

ಹದಿನೆಂಟರ ಕೆಂಪು ಹುಡುಗಿ, ಅಂತಹ ನಗುವಿನ ಮುಖವನ್ನು ಕಂಡದ್ದು ಅದೇ ಮೊದಲು : ಮೈತುಂಬ ಬೆವರಿದ್ದಳು ಮೆಹರುನ್ನೀಸಾ!

ಪುತ್ತಬ್ಬ ಸಾಹುಕಾರರು ಮಧ್ಯಾಹ್ನದ ಊಟಕ್ಕೆ ಮನೆಗೆ ಬರುವ ಕ್ರಮವಿದ್ದಿರಲಿಲ್ಲ. ಮನೆಯಿಂದ ಡಬ್ಬ ಕಳುಹಿಸಬೇಕು. ಮಧ್ಯಾಹ್ನದ ನಮಾಜಿನ 'ಬಾಂಗ್' ಕೇಳಿಸಲಾರಂಭಿಸಿತೆಂದರೆ ಸಮದ್ ಬಂದನೆಂದೇ ಅರ್ಥ. ಡಬ್ಬದಲ್ಲಿ ಊಟ ತುಂಬಿಸಿಟ್ಟು, ಚಾವಡಿಯ ಕಿಟಿಕಿ ಕಂಬಿಗಳೆಡೆಯಲ್ಲಿ ಗಲ್ಲ ಹುದುಗಿಸಿ, ಸಮದ್‌ನ ಸೈಕಲ್ಲಿನ ಕಿಣಿ ಕಿಣಿಗೆ ಕಿವಿ ತೆರೆದು ಕಣ್ಣರಳಿಸಿ ನಿಲ್ಲುವುದೆಂದರೆ ಮೆಹರುನ್ನೀಸಾಳಿಗೆ ಎಲ್ಲಿಲ್ಲದ ಖುಷಿ.

ತನ್ನನ್ನು ರಾಜಕುಮಾರಿಯಂತೆಯೇ ನೋಡಿಕೊಳ್ಳುತ್ತಿರುವ ಗಂಡ ಮೊದಲ ರಾತ್ರಿಯಂದೇ ಬಿಡಿಸಿ – ಬಿಡಿಸಿ ಹೇಳಿದ್ದು ಸುಳ್ಳೇನೂ ಆಗಿದ್ದಿರಲಿಲ್ಲ. ಮೆಹರುನ್ನೀಸಾಳಿಗೆ ಯಾವುದರಲ್ಲೂ ಕೊರತೆಯಿರಲಿಲ್ಲ. ವಾರಕ್ಕೆ ಎರಡು ಬಾರಿ ಕೋಳಿ ಸಾರಿನ ಊಟ ಮಾಡುವ ಭಾಗ್ಯ ರಾಜಕುಮಾರಿಗಲ್ಲದೇ ಮತ್ಯಾರಿಗಿರಲು ಸಾಧ್ಯ? ಕೈಜಮ್ಮನವರಿಗೆ ಒಂದು ಮಾತು ಹೇಳಿಬಿಟ್ಟರಾಯಿತು; ಚಾವಡಿಯಲ್ಲಿ ರೇಡಿಯೋ ತಿರುಗಿಸುತ್ತಾ ಕೂತರೆ ಕಾಲ ಬಳಿ ಕರಿದ ಕೋಳಿಯ ತೊಡೆ ತಂದಿರಿಸುತ್ತಾರೆ ಅವರು. ಸ್ವಂತ ಅಮ್ಮ ಬದುಕಿದ್ದರೂ ಇಷ್ಟೊಂದು ಪ್ರೀತಿಸುತ್ತಿದ್ದರೋ ಇಲ್ಲವೋ.

ಅಮ್ಮನನ್ನು ಕಂಡಿದ್ದ ನೆನಪೇ ಮೆಹರುನ್ನೀಸಾಳಿಗೆ ಉಳಿದಿಲ್ಲ. ಅವಳು ಒಂದು ವರ್ಷದ ಮಗುವಿರುವಾಗಲೇ ತೀರಿಕೊಂಡಿದ್ದರಂತೆ. ಮನೆಯಲ್ಲಿರುವ ತಾಯಿ 'ತನ್ನಮ್ಮ' ನಲ್ಲವೆಂದು ಮೆಹರುನ್ನೀಸಾಳಿಗೆ ತಿಳಿದಿದ್ದು ಬಲು ಬೇಗ. ಒಂದರ ಬೆನ್ನಿಗೊಂದರಂತೆ ಮೂರು ತಂಗಿಯಂದಿರು. ಮತ್ತೊಬ್ಬ ತಮ್ಮ ಮನೆ ತುಂಬ ಕಿರುಚಲಾರಂಭಿಸಿದಾಗ ಅವಳಿಗೆ ಹಿರಿಯಕ್ಕನ ಎಲ್ಲ ಜವಾಬ್ದಾರಿಯೂ ಅಂಟಿಕೊಂಡಿತ್ತು.

ಹನ್ನೆರಡು ಹದಿಮೂರರ ಹುಡುಗಿಯೊಬ್ಬಳು ದಿನವೊಂದಕ್ಕೆ ಒಂದು ಸಾವಿರ ಬೀಡಿ ಕಟ್ಟಿದ್ದು ಮುತ್ತುಪ್ಪಾಡಿಯ ಬೀಡಿ ಬ್ರಾಂಚುಗಳ ಇತಿಹಾಸದಲ್ಲಿ ಇಂದಿಗೂ ದಾಖಲೆಯೇ. ಸೂರ್ಯ ಹುಟ್ಟುವ ಮುನ್ನವೇ ಎದ್ದು ಬಚ್ಚಲಿನ ಮಣ್ಣಿನ ಹಂಡೆಗೆ ನೀರು



ತುಂಬಿಸುವುದರಿಂದ ಆರಂಭಗೊಳ್ಳುವ ಮೆಹರುನ್ನೀಸಾಳ ದಿನಚರಿಯಲ್ಲಿ ಬೀಡಿ ಕಟ್ಟುವುದರ ಜತೆ ತಮ್ಮ – ತಂಗಿಯಂದಿರ ಊಟ – ಬಟ್ಟೆ – ಸಿಂಬಳ – ಸ್ನಾನ ಈ ತರಹದ ಹೊಣೆಗಾರಿಕೆಯೂ ಇತ್ತು, ಚಿಕ್ಕಮ್ಮನಿಗೆ ಒಂದು ತರಹದ ಸೊಂಟ ನೋವು, ಮುಂಜಾನೆ ನೋವಿನ ತೀವ್ರತೆ ಜಾಸ್ತಿ. ಹಬೆಯಾಡುವ ಬಿಸಿ ನೀರು ಬಿದ್ದಾಗ ಸ್ವಲ್ಪ ಆರಾಮವಾಗುತ್ತಿತ್ತು. ಸ್ವಲ್ಪ ಹೊತ್ತು ಅದು – ಇದು ಎಂದು ಓಡಾಡುವಾಗ ಮೆಹರುನ್ನೀಸಾ ಮಧ್ಯಾಹ್ನದ ಅಡುಗೆಯ ಕೆಲಸವನ್ನು ಮುಗಿಸಿಬಿಟ್ಟಿರುತ್ತಾಳೆ. ಊಟವಾದ ತಕ್ಷಣ ಚಿಕ್ಕಮ್ಮನಿಗೆ ನಿದ್ದೆ ಆವರಿಸಿಬಿಡುತ್ತದೆ. ಸಂಜೆ ನಾಲ್ಕಕ್ಕೆ ಎದ್ದು ಮೆಹರುನ್ನೀಸಾಳಿಗೆ ಅದು ಮಾಡಲಿಲ್ಲ ಇದು ಮಾಡಲಿಲ್ಲ, ಇದು ಇನ್ನೂ ಹಾಗೆಯೇ ಇದೆ ಇತ್ಯಾದಿ ಆರೋಪಿಸಿ ಪಕ್ಕದ ಕಲ್ಯಾಣಿಯಕ್ಕನ ಮನೆಗೆ ಪಟ್ಟಾಂಗಕ್ಕೆ ಹೋದರೆ ಮತ್ತೆ ಮನೆಯ ನೆನಪಾಗುವುದು ಹೊತ್ತು ಮುಳುಗಿ ಬಹಳ ಹೊತ್ತಾದ ಬಳಿಕವೇ. ಬೆಳಿಗ್ಗೆಯೇ ಎದ್ದು ಬಸ್‌ಸ್ಟ್ಯಾಂಡಿನ ಹತ್ತಿರದ ಕಿಣಿಯವರ ಗೋದಾಮಿಗೆ ಕೂಲಿ ಮಾಡಲು ಹೋಗುವ ಅಪ್ಪ ಮರಳುವುದು ರಾತ್ರಿ ಒಂಬತ್ತಕ್ಕೇ. ಆದರೂ ಮನೆಯಲ್ಲಿ ನಡೆಯುತ್ತಿರುವ 'ಬದರ್‌ಯುದ್ಧ' ಆತನಿಗೆ ಗೊತ್ತಿಲ್ಲದ್ದೇನೂ ಅಲ್ಲ. ಒಂದೆರಡು ಸಂದರ್ಭಗಳಲ್ಲಿ ತಂದೆ ತನ್ನ ಪ್ರೀತಿಯ ಹೆಂಡತಿಯ ಜತೆ ಈ ಬಗ್ಗೆ ಜಗಳಾಡಲು ಪ್ರಾರಂಭಿಸಿದ್ದೂ ಉಂಟು. ಆದರೆ ಅಂತಹ ದಿನಗಳಲ್ಲೆಲ್ಲ ಚಿಕ್ಕಮ್ಮನ ಸೊಂಟ ನೋವು ರಾತ್ರಿಯೂ ಕಾಣಿಸಿಕೊಳ್ಳತೊಡಗಿದ್ದರಿಂದ ಅವಳ ಸೊಂಟ ನೀಯುವುದರಲ್ಲೇ ರಾತ್ರಿಯಿಡೀ ಜಾಗರಣೆ ಮಾಡಬೇಕಾದ ಒತ್ತಾಯವಿತ್ತು. ಮೆಹರುನ್ನೀಸಾಳನ್ನು ಗುಟ್ಟಾಗಿ ದಿಟ್ಟಿಸುತ್ತಾ ನಿಟ್ಟುಸಿರುಬಿಡುವುದನ್ನು ಹೊರತಾಗಿ ಮತ್ತೇನನ್ನೂ ಮಾಡಲು ತಂದೆ ಅಸಮರ್ಥನಾಗಿದ್ದ. ಮೆಹರುನ್ನೀಸಾಳಿಗೂ ಕೇಳಿಸುವಂತೆ ಆಕೆಯ ಪರವಾಗಿ ತಂದೆ ತನ್ನ ಹೆಂಡತಿಯ ಜತೆ ಮಾತನಾಡಿದ್ದು ಕೇವಲ ಒಮ್ಮೆ ಮಾತ್ರ; ಆಸ್ಪತ್ರೆಗೆ ದಾಖಲಾಗುವ ಹಿಂದಿನ ದಿನ, 'ಮೆಹರುನ್ನೀಸಾಳಿಗೆ ಅನ್ಯಾಯ ಮಾಡಬೇಡ. ಅಲ್ಲಾಹು ಮೆಚ್ಚಲಿಕ್ಕಿಲ್ಲ. ಆಯ್ತಾ?'

ಚಿಕ್ಕಮ್ಮ ತನ್ನ ಗಂಡನ ಕೊನೆಯ ಮಾತನ್ನು ಅಕ್ಷರಶಃ ಪಾಲಿಸಿದ್ದಳು. ತಾನು ವಿಧವೆಯಾದ ಎರಡೇ ಎರಡು ವರ್ಷಗಳೊಳಗೆ ಮೆಹರುನ್ನೀಸಾಳನ್ನು ಅಂಗಡಿ ಸಾಹುಕಾರರಿಗೆ ನಿಕಾಹ್ ಮಾಡಿಸಿಕೊಟ್ಟದ್ದು ಅಲ್ಲಾಹು ಮೆಚ್ಚುವಂತಹ ಕೆಲಸವೇ ಆಗಿತ್ತು. ಮೆಹರುನ್ನೀಸಾಳಿಗೆ ಬಂಗಾರದ ಬಣ್ಣವಿರಬಹುದು. ಚಿಮಿಟಿದರೆ ರಕ್ತ ಚಿಮ್ಮು ವಂತಹ ಯೌವ್ವನವಿರಬಹುದು. ಆದರೆ ಮದುವೆ ಅಂದರೆ ಅದೇನು ಕುಶಾಲಾ? ಕನಿಷ್ಠ ಹತ್ತು ಪವನು, ಮೂರು ಸಾವಿರ ಎಲ್ಲಿಂದ ತರುವುದು? ಅಲ್ಲಾಹು ಆಕಾಶದಿಂದ ದುಡ್ಡಿನ ಮಳೆಯನ್ನೇನೂ ಸುರಿಸುವುದಿಲ್ಲವಲ್ಲ?

ಪುತ್ತಬ್ಬ ಸಾಹುಕಾರರಲ್ಲಿ ಪವನುಗಳೂ ಇದ್ದವು. ಹಣವೂ ಇತ್ತು. ಅವರಲ್ಲಿ ಇಲ್ಲದ್ದೆಲ್ಲವೂ ಮೆಹರುನ್ನೀಸಾಳಲ್ಲಿತ್ತು. ನೋಡಿದ ತಕ್ಷಣ ಗಪ್‌ಚಿಪ್ ಎನ್ನದೆ ಒಪ್ಪಿಗೆ ಕೊಟ್ಟಿದ್ದರು; ಇಂತಹ ಚಂದದ ಹೆಣ್ಣನ್ನು ತಮಗಾಗಿ ಮೀಸಲಿಟ್ಟ ಅಲ್ಲಾಹುವನ್ನು ಸಾಹುಕಾರರು ಕೃತಜ್ಞತೆಯಿಂದ ಸ್ಮರಿಸಿದ್ದರು.

**'ನಿಮ್ಮ ಸ್ತ್ರೀಯರು ನಿಮಗೆ ಹೊಲವಾಗಿರುತ್ತಾರೆ. ಅಂತಲೇ ನಿಮ್ಮ ಹೊಲದಲ್ಲಿ ನಿಮಗಿಷ್ಟ ಬಂದಂತೆ ಪ್ರವೇಶಿಸಿರಿ'.**

ಆದರೂ ಯಾಕೋ ನಿಕಾಹ್‌ಗೆ ಕೂತು ಕೈ ಚಾಚುವಾಗ ಸಾಹುಕಾರರ ಬೆರಳುಗಳು ನಡುಗುತ್ತಿದ್ದವು. ಸ್ವತಃ ಕಣ್ಣಾರೆ ಕಂಡಿದ್ದ ಸಮದ್ ಈ ವಿಷಯವನ್ನು ತಮಾಷೆಯಾಗಿ ಹೇಳಿ ಅದೆಷ್ಟೋ ಬಾರಿ ನಗಿಸಿದ್ದ.

ಸಾಹುಕಾರ ಪುತ್ತಬ್ಬನವರ ಮನೆಗೆ ಜೀಪಿನಲ್ಲಿ ಹೊರಟುನಿಂತ ಮದುಮಗಳನ್ನು ತಬ್ಬಿಕೊಂಡ ಚಿಕ್ಕಮ್ಮ ಗಳಗಳನೆ ಅತ್ತೇಬಿಟ್ಟಿದ್ದರು. ಮೆಹರುನ್ನೀಸಾಳಿಗೆ ಆ ಸಮಯದಲ್ಲೂ ಅಚ್ಚರಿಯಾಗಿತ್ತು. ನಿಜವಾಗಿ ಅಳಬೇಕಾದವಳು ತಾನು; ಚಿಕ್ಕಮ್ಮನೇಕೆ ಅಳುತ್ತಿರುವುದು? ತಂದೆಯ ಶವವನ್ನು ಹೊರಗಿಟ್ಟಾಗಲೂ ಚಿಕ್ಕಮ್ಮ ಇಷ್ಟೊಂದು ಅತ್ತಿರಲಿಲ್ಲ. 'ದೊಡ್ಡ ಮನೆಗೆ ಹೋಗುತ್ತಿದ್ದಿ ಉನ್ನೀಸಾ, ನಿನ್ನ ಚಿಕ್ಕಮ್ಮನ ಮಕ್ಕಳನ್ನು ಮರೆತುಬಿಡಬೇಡ... ಹಾಂ' ಬಿಕ್ಕಿಬಿಕ್ಕಿ ಅತ್ತಿದ್ದಳು ಚಿಕ್ಕಮ್ಮ.

ಮರೆಯಬೇಕೆಂದರೂ ಆಸ್ಪದ ಕೊಟ್ಟವಳಲ್ಲ ಈ ಚಿಕ್ಕಮ್ಮ. ವಾರ – ಎರಡು ವಾರಕ್ಕೊಮ್ಮೆ ಮೆಹರುನ್ನೀಸಾಳ ಸುಖ ದುಃಖ ವಿಚಾರಿಸಲು ಖಾಲಿ ಗೋಣಿಚೀಲದೊಂದಿಗೆ ಹಾಜರಾಗುತ್ತಿದ್ದಳು. ಮೆಹರುನ್ನೀಸಾ ಹೇಳಲಿ–ಬಿಡಲಿ, ಕೈಜಮ್ಮನವರೇ ಗೋಣಿಚೀಲದಲ್ಲಿ ಹಿಡಿಸುವಷ್ಟು ಅಕ್ಕಿ–ತೆಂಗಿನಕಾಯಿ ತುಂಬಿಸಿಕೊಡುತ್ತಿದ್ದರು, ತನ್ನ ತಮ್ಮ ದುಡ್ಡು ಕಟ್ಟಿಡುವುದಾದರೂ ಯಾರಿಗಾಗಿ? ಚಿಕ್ಕಮ್ಮನ ಮಕ್ಕಳು ಬಹಳ ದೂರದವರೇನೂ ಅಲ್ಲವಲ್ಲಾ?

ಮೆಹರುನ್ನೀಸಾಳಿಗೆ ಕೈಜಮ್ಮನವರ ಮನಸ್ಸಿನ ಆಳವೇ ಅರ್ಥವಾಗುತ್ತಿರಲಿಲ್ಲ. ಒಂದು ದಿನವಾದರೂ ತನಗೆ ಎದುರಾಡಿದವರಲ್ಲ. ತಾನೇ ಕೆಲವೊಮ್ಮೆ ಕೋಪದಲ್ಲಿ, ಅಸಹನೆಯಿಂದ ವರ್ತಿಸಿದರೆ 'ನಿನಗೆ ಗೊತ್ತಾಗುವುದಿಲ್ಲ ಹುಚ್ಚು ಹುಡುಗಿ. ನಾನು ಕುಡಿದಷ್ಟು ನೀರಲ್ಲಿ ನೀನು ಸ್ನಾನ ಮಾಡಿದ್ದಿರಲಿಕ್ಕಿಲ್ಲ' ಎಂದು ನಕ್ಕುಬಿಡುತ್ತಿದ್ದರು.

ಮಂಚದಿಂದ ಎದ್ದು ಅಡುಗೆ ಕೋಣೆಯ ಮೂಲಕ ಹಿತ್ತಲಬಾಗಿಲು ತೆರೆದು ಬಚ್ಚಲ ಒಳಗೆ ಕಾಲಿಟ್ಟವಳಿಗೆ ನೆನಪಾದದ್ದು ತನ್ನ ಪ್ರಥಮ ರಾತ್ರಿ. ಪಕ್ಕದಲ್ಲಿ ಪೇರಿಸಿಟ್ಟ ಒಣ ಕಟ್ಟಿಗೆಯ ರಾಶಿ, ಹೊರಗಿನಿಂದ ಬೆಂಕಿಹಾಕುವುದರಿಂದಾಗಿ ಹೊಗೆ ಒಳಗೆ



ಬರುವುದಿಲ್ಲ. ಒಂಟಿಯಾಗಿ ಅಳಬೇಕೆನಿಸಿದಾಗಲೆಲ್ಲಾ ಬಾಗಿಲು ಹಾಕಿಕೊಳ್ಳುತ್ತಿದ್ದಳು. ಬೇರೆಯವರಲ್ಲಿ ವಿವರಿಸಿ ಹೇಳಬಹುದಾದ ದುಃಖವಾಗಿದ್ದರೆ ಸ್ವಲ್ಪವಾದರೂ ಸಮಾಧಾನ ಸಿಗುತ್ತಿತ್ತೋ ಏನೋ. ಹಾಗೇನಾದರೂ ಆಗಿರುತ್ತಿದ್ದರೆ ಅಟ್ಟದಲ್ಲಿ ಸಾಲಾಗಿ ಇರಿಸಿದ್ದ ಅಕ್ಕಿ ಮುಡಿಗಳೆಲ್ಲವೂ ಉರುಳಿ ಬೀಳುವಷ್ಟು ಗಟ್ಟಿಯಾಗಿ ಅತ್ತು ಸಮಾಧಾನ ಮಾಡಿಕೊಳ್ಳಬಹುದಿತ್ತು. ತನ್ನ ತಂದೆಯ ವಯಸ್ಸಿನ – ಅಥವಾ ಹತ್ತು ಹೆಚ್ಚೇ ಇದ್ದೀತು – ದೇವರಂತಹ ಗಂಡನೇ ಕಾಲಿಗೆ ಬಿದ್ದು ಹೆಂಗಸರಂತೆ ಕಣ್ಣೀರು ಹಾಕುವುದನ್ನು ಹೇಳುವುದಾದರೂ ಯಾರಲ್ಲಿ? ಹೇಳಿದರೂ ಏನು ಪ್ರಯೋಜನ? ತೌಬಾ...! ತೌಬಾ...! ತಾನು ಹೀಗೆಲ್ಲ ಯೋಚನೆ ಮಾಡುವುದೂ ಪಾಪವಾಗುತ್ತದೆ.

**'ಪರಮಕರುಣಾನಿಧಿಯೂ ಆದ ಅಲ್ಲಾಹುವೇ,**  
**ನಮ್ಮ ಹೃದಯಗಳಲ್ಲಿರುವುದನ್ನು ನಾವು ಮರೆಮಾಚಿದರೂ**  
**ಅಥವಾ ಬಹಿರಂಗಗೊಳಿಸಿದರೂ ಅವೆಲ್ಲವನ್ನೂ ನೀನು**  
**ಮುಂದಾಗಿ ತಿಳಿದಿರುವವನೇ ಆಗಿರುವಿ**  
**ಭೂಮಿ ಆಕಾಶಗಳಲ್ಲಿ ಇರುವುದೆಲ್ಲವೂ ನಿನಗೆ ಗೊತ್ತು.**  
**ನನ್ನ ಮನಸ್ಸಿನಲ್ಲಿ ಕೆಟ್ಟಯೋಚನೆಗಳೇ ಹುಟ್ಟಿಕೊಳ್ಳದಂತೆ ಅನುಗ್ರಹಿಸು'.**

ಉಟ್ಟ ಸೀರೆಯೆಲ್ಲ ಒದ್ದೆಯಾಗುವಂತೆ ತಲೆಯ ಮೇಲೆ ತಪಲೆಗಟ್ಟಲೆ ನೀರು ಸುರುವಿಕೊಂಡಾಗ ಮರೆಯಬೇಕೆಂದರೂ ಕಣ್ಣಮುಂದೆ ಕುಣಿಯುವ – ಬಾವಿಕಟ್ಟೆಯ ಬಳಿ ಸಮ್ಮದ್ ಸ್ನಾನ ಮಾಡುವ ದೃಶ್ಯ; ದೊಡ್ಡ ತಾಮ್ರದ ಕೊಡ ತುಂಬ ತಣ್ಣೀರನ್ನು ಒಂದೇ ಸಮನೆ ತಲೆಯ ಮೇಲೆ ಸುರಿದುಕೊಳ್ಳುತ್ತಾ ನಡುಗುವ ಸಮದ್‌ನ ತುಂಬಿದ ದೇಹವನ್ನು ಅಡುಗೆಯ ಮನೆಯ ಕಿಟಕಿ ಸಂದಿಯಿಂದ ನೋಡಿದಾಗಲೆಲ್ಲ ಮೆಹರುನ್ನೀಸಾ 'ತೌಬಾ' ಹೇಳುತ್ತಿದ್ದಳು.

'ದಯವಿಟ್ಟು ನನಗೆ ಕೊರಡೆಯೇಟುಗಳಿಂದ ಕ್ಷಮೆಯಿರಲಿ'.

## 2

ಇನ್ನು ಬಹಳ ಹೊತ್ತೇನೂ ಇಲ್ಲ. ಚಾವಡಿಯ ಗೋಡೆಗಡಿಯಾರ ಹನ್ನೆರಡು ಹೊಡೆದು ಬಹಳ ಹೊತ್ತಾಗಿದೆ. ಸಾಹುಕಾರರು ಬದುಕಿದ್ದಾಗಲೂ ಗಡಿಯಾರಕ್ಕೆ ವಾರಕ್ಕೊಮ್ಮೆ ಕೀ ಕೊಡುತ್ತಿದ್ದವನು ಸಮದ್. ಈಗ ಗಾಢ ನಿದ್ರೆಯಲ್ಲಿದ್ದಿರಬಹುದು; ಕವುಚಿ ಮಲಗಿದ ಗೋಂಕುರು ಕಪ್ಪೆಯಂತೆ.

ನಾಲ್ಕೈದು ತಾಸು ಕಳೆದರೆ ಹಿತ್ತಲಿನ ಕೋಳಿಗೂಡುಗಳಿಂದ 'ಕೊಕ್ಕೊ....ಕ್ಕೋ...'

ಶುರುವಾಗುತ್ತದೆ ಈಗ ಕೋಳಿಗಳ ಸಂಖ್ಯೆ ಹೆಚ್ಚಾಗಿರಬಹುದು. ಪುತ್ತಬ್ಬನವರು ಬದುಕಿರುವಾಗಲಂತೂ ಗೂಡಲ್ಲಿ ಹತ್ತು ಹನ್ನೆರಡಾದರೂ ಕೋಳಿಗಳು ಇದ್ದೇ ತೀರಬೇಕು. ವಾರದಲ್ಲಿ ಎರಡು ಬಾರಿ ಕೋಳಿ ಸಾರು ಮತ್ತು ಅಕ್ಕಿರೊಟ್ಟಿಯ ಊಟ. ಪಕ್ಕದ ಮಸೀದಿಗೆ ಹೋಗಿ ಕೋಳಿಯ ಕತ್ತು ಕುಯ್ಯಿಸಿಕೊಂಡು – ಅದು ಶಾಸ್ತ್ರಪ್ರಕಾರವೇ ಆಗಬೇಕು – ತರುವ ಜವಾಬ್ದಾರಿ ಸಮದ್‌ನದ್ದು. ಅಂತೆಯೇ ಸಾಹುಕಾರರು ಅಂಗಡಿಯಲ್ಲಿ ಕೊಂಡುಕೊಳ್ಳುವ ಹೊಸ ಕೋಳಿಗಳ ಕಾಲುಗಳಿಗೆ ಹಗ್ಗದಿಂದ ಉರುಳು ಹಾಕಿ ಸೈಕಲ್ಲಿನಲ್ಲಿ ಜೋತಾಸಿಕೊಂಡು ತಂದು ಕೋಳಿಗೂಡುಗಳಿಗೆ ಸೇರಿಸುವ ಕೆಲಸವೂ ಅವನದ್ದೇ. ಇದುವರೆಗೆ ಒಂದು ಕೋಳಿಯಾದರೂ ಸಮದ್‌ನ ಹಿಡಿತದಿಂದ ತಪ್ಪಿಸಿಕೊಂಡಿದ್ದನ್ನು ಮೆಹರುನ್ನೀಸಾ ಕಂಡದ್ದಿಲ್ಲ.

ಅವನ ಕೆಲಸಗಳೆಲ್ಲವೂ ಹಾಗೆಯೇ, ಎಲ್ಲದರಲ್ಲೂ ಅಚ್ಚುಕಟ್ಟು. ನಿರುತ್ಸಾಹವೆಂಬುದೇ ಇಲ್ಲ. ಯಾವ ಕೆಲಸವನ್ನೂ ಹೇಳಿದರೂ 'ಆ ಸಂಗತಿ ಬಿಡಿ, ನಾನಿದ್ದೇನಲ್ಲಾ...' ಎನ್ನುತ್ತಲೇ ಮಾಡಿಕೊಡುತ್ತಿದ್ದನು. ಅಂಗಡಿಯಿಂದ ತಲೆಗೂದಲ ಕ್ಲಿಪ್ಪು, ಕಾಡಿಗೆಯ ಡಬ್ಬಿ, ಪಾಚೀ ಎಣ್ಣೆ – ಏನು ಬೇಕೋ ಅದು – ಹೇಳಿದ ದಿನ ಸಂಜೆಯೇ ತಂದುಕೊಡುತ್ತಿದ್ದ. ಹೇರ್‌ಪಿನ್ನು ಬೇಕು, ಪ್ಲಾಸ್ಟಿಕ್ ಬಳೆ ಬೇಕು ಎಂದು ಅಂಗಡಿ ಅಂಗಡಿ ಅಲೆಯಲು ಪುತ್ತಬ್ಬ ಸಾಹುಕಾರರಿಗಂತೂ ನಾಚಿಕೆಯಾಗುತ್ತಿತ್ತು. ಮನೆ ಮತ್ತು ಅಂಗಡಿಗಳಲ್ಲಿ ಅವರಿಗಿರುವಷ್ಟೇ ಜವಾಬ್ದಾರಿ ಸಮದ್‌ನಿಗೂ ಉಂಟು. ಅಂಗಡಿಯ ಕ್ಯಾಶ್ ಬಾಕ್ಸಿನಿಂದಾರಂಭಿಸಿ ಅಡುಗೆ ಮನೆಯ ಉಪ್ಪಿನಕಾಯಿ ಭರಣಿಯ ತನಕ ಕೈಯಾಡಿಸುವ ಸ್ವಾತಂತ್ರ್ಯ ಅವನಿಗಿದೆ.

ಆದರೆ ಅಂಗಡಿಯ ಹೆಬ್ಬಾಗಿಲಿನ ಬೀಗದ ಕೈಗೊಂಚಲು ಮಾತ್ರ ಪುತ್ತಬ್ಬನವರ ಸೊಂಟದಲ್ಲೇ ತೂಗಾಡುತ್ತಿರಬೇಕು. ಅದೊಂದು ವಿಪರೀತವೆನ್ನಿಸಬಹುದಾದ ಮೋಹ. ಅಂಗಡಿಯ ಬಾಗಿಲನ್ನು ಅವರೇ ತೆರೆಯಬೇಕು. ಅವರೇ ಸ್ವತಃ ಮುಚ್ಚಿ ಬೀಗ ಹಾಕಬೇಕು. ಬೀಗದ ಕೈಗಳನ್ನು ಇರಿಸಲೆಂದೇ ದಪ್ಪಚರ್ಮದ ಸೊಂಟ ಪಟ್ಟಿಯೊಂದನ್ನು ಮಾಡಿಸಿಕೊಂಡಿದ್ದರು. ಸಮದ್ ಒಂದು ಬಾರಿಯಾದರೂ ಬೀಗದ ಕೈಗೊಂಚಲನ್ನು ಮುಟ್ಟಿದವನಲ್ಲ. ಅವನಿಗೆ ಅದನ್ನು ಮುಟ್ಟಬೇಕು ಎಂದು ಅನ್ನಿಸಿರಲೂ ಇಲ್ಲ. ಅವನ ತುಂಟ ನಗುವಿನ ಪ್ರವೇಶಕ್ಕೆ ಬಾಗಿಲುಗಳೇನೂ ಬೇಕಾಗಿದ್ದಿರಲಿಲ್ಲ.

ಸಮದ್‌ನ ಉರುಟು ಮುಖದಲ್ಲೂ ಗಂಟು ಗಾಂಭೀರ್ಯಗಳಿಗೆ ಜಾಗವಿದೆಯೆಂಬುದನ್ನು ಮೆಹರುನ್ನೀಸಾ ಗಮನಿಸಿದ್ದು ಕೇವಲ ಎಂಟು ದಿನಗಳು ಮಾತ್ರ. ಆ ಎಂಟು ದಿನಗಳಲ್ಲೂ ಪುತ್ತಬ್ಬ ಸಾಹುಕಾರರ ಜೀನಸು ಅಂಗಡಿಯ ಮರದ ಬಾಗಿಲ ನಡುವೆ ಹಿತ್ತಾಳೆಯ ದೊಡ್ಡ ಬೀಗ ತೂಗುತ್ತಿತ್ತು.



ರಂಜಾನ್ ಹಬ್ಬ ಆಚರಿಸಿ ತಿಂಗಳೂ ಆಗಿದ್ದಿರಲಿಲ್ಲ. ಒಂದು ರಾತ್ರಿ ಎಂದಿಗಿಂತ ಸ್ವಲ್ಪ ಬೇಗನೇ ಅಂಗಡಿ ಮುಚ್ಚಿ ಮನೆಗೆ ಬಂದಿದ್ದ ಪುತ್ತಬ್ಬನವರು 'ಸ್ವಲ್ಪ ಎದೆ ನೋವು' ಎನ್ನುತ್ತಾ ಊಟವನ್ನೂ ನಿರಾಕರಿಸಿದಾಗ ಮೆಹರುನ್ನೀಸಾಳಿಗೆ ತನ್ನ ತಂದೆಯದ್ದೇ ನೆನಪು. ರಾತ್ರಿ ಇಡೀ ಎಚ್ಚರದಲ್ಲಿದ್ದು ಗಂಡನ ಎದೆ ನೀವುತ್ತಾ ಕೂತಿದ್ದವಳಿಗೆ ಮಧ್ಯ ರಾತ್ರಿಯ ತನಕ ಕನ್ನಡಿ ಕಪಾಟಿನ ಕೋಣೆಯಲ್ಲಿ ಕೈಜಮ್ಮನವರ ಜತೆ ಮಾತನಾಡುತ್ತಿರುವ ಸಮದ್‌ನ ಧ್ವನಿ ಕೇಳಿಸುತ್ತಿತ್ತು. ಒಂದೆರಡು ಬಾರಿ ಮಲಗುವ ಕೋಣೆಯ ಹೊಸ್ತಿಲಲ್ಲಿ ಕಾಣಿಸಿಕೊಂಡಿದ್ದ ಸಮದ್ 'ಡಾಕ್ಟರನ್ನು ಕರೆದುಕೊಂಡು ಬರಲಾ?' ಎಂದು ಪ್ರಶ್ನಿಸಿದಾಗ ಪುತ್ತಬ್ಬನವರು ಬೇಡವೆಂದೇ ಕೈಯಾಡಿಸಿದ್ದರು.

ಆದರೆ ಮರುದಿನ ಮುಂಜಾನೆಯೂ ಪುತ್ತಬ್ಬನವರು ಏಳುವ ಲಕ್ಷಣ ತೋರಿಸದಾದಾಗ ಸಮದ್ ಗಂಭೀರವಾಗಿ – ಮೆಹರುನ್ನೀಸಾಳಿಗೆ ಅದು ಅನಿರೀಕ್ಷಿತವಾಗಿತ್ತು – 'ಆ ಸಂಗತಿ ಬಿಡಿ. ನಾನಿದ್ದೇನಲ್ಲಾ, ಡಾಕ್ಟ್ರು ಬರಬೇಕೋ ಬೇಡವೋ ಅಂತ ತೀರ್ಮಾನ ಮಾಡುವವರು ಮಂಚದಲ್ಲಿ ಬಿದ್ದುಕೊಳ್ಳುವುದಿಲ್ಲ. ನಾನಿದ್ದೇನಲ್ಲಾ, ಡಾಕ್ಟರನ್ನು ಕರೆದುಕೊಂಡು ಬರುವವನೇ' ಎಂದು ಹೇಳಿದವನು, ಬಿರುಗಾಳಿಯಂತೆ ಹೊರಟು ಹೋಗಿದ್ದ, ಮೆಹರುನ್ನೀಸಾಳಿಗೆ ನಂಬಿಕೆಯೇ ಆಗಿದ್ದಿರಲಿಲ್ಲ. ಸಮದ್‌ನ ಮುಖದಲ್ಲಿ ಪ್ರತಿ ಕ್ಷಣವೂ ಒಡೆದು ಧುಮುಕುತ್ತಿದ್ದ ತುಂಟ ನಗುವಿಗೆ ಆ ಗಾಂಭೀರ್ಯ ಏನೇನೂ ಹೊಂದಿಕೊಳ್ಳುತ್ತಿರಲಿಲ್ಲ. ಪುತ್ತಬ್ಬನವರಲ್ಲಿ ಅವರೆಡೂ ಇದ್ದಿರಲಿಲ್ಲ. ಮೇಣದಂತಹ ಮನಸ್ಸು. ಸ್ವಲ್ಪ ನೋವಿನ ಮಾತು ಆಡಿದರೂ ಅಳುಮೋರೆ ಹಾಕುವವರು. ಹಾಗೆಂದು ಸಮದ್‌ನತ್ತ ಮೆಚ್ಚುಗೆಯ ನೋಟ ಚೆಲ್ಲಿದ ಮೆಹರುನ್ನೀಸಾಳ ಆಸೆಯನ್ನು ಅರ್ಥ ಮಾಡಿಕೊಳ್ಳುವಷ್ಟು ದಡ್ಡರೇನೂ ಅಲ್ಲ.

ಪುತ್ತಬ್ಬನವರ ಹಾಸಿಗೆ ಹೊರಗಡೆ ಚಾವಡಿಯ ಒತ್ತಿನಲ್ಲಿರುವ ಕನ್ನಡಿ ಕಪಾಟಿನ ಕೋಣೆಯ ಸ್ಥಳಾಂತರಗೊಂಡಿತು. ಒಳಗಡೆ–ಬೆಳಕು ಕಡಿಮೆ ಎಂಬ ಅವರ ಹಾದಿಬದಿಯ ನೆವ ಮಾತ್ರ. ಡಾಕ್ಟರು ಮತ್ತು ಸಮದ್ ದಿನಕ್ಕೆಂಟು ಬಾರಿ ತಮ್ಮ ಮಲಗುವ ಕೋಣೆಗೆ ನುಗ್ಗುವುದು ಅವರಿಗೆ ಬೇಡವಾಗಿತ್ತು. ಸಮದ್ ಮನೆಯೊಳಗಿದ್ದರೆ, ಕನ್ನಡಿ ಕಪಾಟಿನ ಕೋಣೆಗೆ ಮೆಹರುನ್ನೀಸಾ – ತೀರಾ ಅಗತ್ಯದ ಕೆಲಸವಿಲ್ಲದಿದ್ದರೆ – ಸಾಮಾನ್ಯವಾಗಿ ಕಾಲಿಡುತ್ತಿರಲಿಲ್ಲ.

ಬೆಳಗ್ಗಿನ ಚಹ ಮುಗಿಸಿ ಪುತ್ತಬ್ಬನವರ ಜತೆ ಅಂಗಡಿಗೆ ಹೋಗುವ ಸಮದ್ ಮತ್ತೆ ಬರುವಾಗ ಮಧ್ಯಾಹ್ನದ ಭಾಂಗ್ ಕೇಳಿಸಬೇಕು. ಸಾಹುಕಾರರಿಗೆ ಊಟದ ಡಬ್ಬ ಒಯ್ದು, ಬಳಿಕ ಇಬ್ಬರೂ ಒಟ್ಟಿಗೇ ಮರಳುವ ಕ್ರಮ. ಹಗಲಿಡೀ ಮನೆ ತುಂಬ

ಮೆಹರುನ್ನೀಸಾಳದೇ ಕಾರುಬಾರು. ಆಳೆತ್ತರದ ಕನ್ನಡಿ ಕಪಾಟಿನಲ್ಲಿ ತನ್ನನ್ನು ಮತ್ತೆ ಮತ್ತೆ ನೋಡಿಕೊಳ್ಳುವುದೇ ಅವಳ ಕೆಲಸ. ಹಳದಿ ರೇಶಿಮೆಯಂತೆ ನುಣುಪಾಗಿರುವ ತನ್ನ ಹೊಟ್ಟೆಯನ್ನು ದಿಟ್ಟಿಸುತ್ತಾ ನಿಟ್ಟುಸಿರುಬಿಡಲೂ ಕನ್ನಡಿ ಕಪಾಟಿನ ಕೋಣೆಯೇ ಆಗಬೇಕು.

ಸಮದ್‌ನ ಮಂಚದಲ್ಲಿ ಪುತ್ತಬ್ಬನವರು ತಮ್ಮ ಹಾಸಿಗೆ ಬಿಡಿಸಿಕೊಂಡು ಮಲಗಿ ಸಂಕಟಪಟ್ಟಿದ್ದು ನಾಲ್ಕೇ ದಿನ. ಗುರುವಾರ ರಾತ್ರಿಯಲ್ಲಿ ಸ್ವಲ್ಪ ಗೆಲುವಾಗಿಯೇ ವರ್ತಿಸಿದ್ದ ಸಾಹುಕಾರರು ಶುಕ್ರವಾರ ಬೆಳಿಗ್ಗೆ ಕಣ್ಣು ತೆರೆಯಲೇ ಇಲ್ಲ.

**'ಓ ಶಾಂತ ಆತ್ಮವೇ ಮರಳಿ ಹೋಗು ನಿನ್ನ ಪ್ರಭುವಿನತ್ತ.**
**ನೀನು ಆತನಿಂದ ಸಂತುಷ್ಟನಾಗಿರುವೆ**
**ಆತನು ನಿನ್ನಿಂದಲೂ ಸಂತುಷ್ಟನಾಗಿರುವನು.**
**ಈಗ ಸೇರಿಕೊಳ್ಳು ನನ್ನ ದಾಸರಲ್ಲಿ**
**ಮತ್ತು ಪ್ರವೇಶಿಸು ನನ್ನ ಸ್ವರ್ಗದೊಳಗೆ'**

ರಾತ್ರಿಯಿಡೀ ನಿದ್ರೆಗೆಟ್ಟು ಮುಂಜಾನೆಯ ತಂಪಿಗೆ ಸ್ವಲ್ಪ ತೂಕಡಿಸಿದ್ದ ಸಮದ್‌ನಿಗೆ ಎಚ್ಚರವಾದಾಗ ಮನೆಯ ಮುಂದೆ ಕಾಗೆಗಳು ಹಾರುತ್ತಿದ್ದವು.

ರಾತ್ರಿಯ ಹೊತ್ತು ಕನ್ನಡಿ ಕಪಾಟಿನಲ್ಲಿ ಕಾಣಿಸುತ್ತಿದ್ದ ಮೆಹರುನ್ನೀಸಾಳ ಕೇರೆ ಹಾವಿನಂತಹ ಉದ್ದ ಕರಿಕೂದಲನ್ನು ದಿಟ್ಟಿಸುತ್ತಾ ಪುತ್ತಬ್ಬನವರು ತುಸು ವಿಷಾದದಿಂದಲೇ ಹೇಳಿದ್ದರು. 'ನಿನಗೆ ಬಹಳ ಅನ್ಯಾಯ ಮಾಡಿಬಿಟ್ಟೆ ನಾನು. ನಿನಗಿನ್ನು ಯಾರು ಗತಿ?'

'ಆ ಸಂಗತಿ ಬಿಡಿ, ನಾನಿದ್ದೇನಲ್ಲಾ...' ಎನ್ನುತ್ತಲೆ ನುಗ್ಗಿಬಂದಿದ್ದ ಸಮದ್, 'ಸುಲಭದಲ್ಲಿ ಬಿಟ್ಟುಬಿಡುವ ಮಗ ನಾನಲ್ಲ. ರಾತ್ರಿಯ ಹೊತ್ನಲ್ಲಿ ಬರುವುದೇ ಇಲ್ಲವೆಂದು ಕೂತಿದ್ದರು. ಆದರೆ ನಾನದ್ದೇನಲ್ಲಾ, ಅವರ ಪೆಟ್ಟಿಗೆ ಎತ್ತಿಕೊಂಡೇ ಬಂದೆ. ನೀವು ಸ್ವಲ್ಪ ಒಳಗೆ ಹೋಗಿ ನೋಡುವಾ' ಎಂದು ಮೆಹರುನ್ನೀಸಾಳನ್ನು ಕೋಣೆಯಿಂದ ಹೊರಗೆ ಸಾಗಹಾಕಿ ಡಾಕ್ಟರನ್ನು ಕರೆದಿದ್ದ, ಗಂಡನ ಕೊನೆಯ ಮಾತು ಕೂಡಾ ಆರಂಭವಾಗುತ್ತಿದ್ದಂತೆಯೆ ಮುರುಟಿಹೋಗಿತ್ತು.

ಚಾವಡಿಯಲ್ಲಿ ಮಾತು... ಹೆಜ್ಜೆ... ಲೊಚಗುಟ್ಟುವಿಕೆ... ಅಳು ಹೆಚ್ಚುತ್ತಲೇ ಇದೆ. ಮಲಗುವ ಕೋಣೆಯಲ್ಲಿ ಮಂಡಿಗಳ ನಡುವೆ ಮುಖ ಹುದುಗಿಸಿ ಕುಳಿತ ಮೆಹರುನ್ನೀಸಾ ಒಂಟಿ. 'ಅವಳನ್ನು ಯಾರೂ ಮಾತಾಡಿಸುವುದು ಬೇಡ. ಚಿಕ್ಕ ಹುಡುಗಿ ಒಬ್ಬಳೇ ಅಳುತ್ತಾ ಸಾಯಲಿ'. ಕೈಜಮ್ಮನವರು ಅದ್ಯಾರಿಗೋ ಹೇಳುತ್ತಿದ್ದರು. ಪಕ್ಕದ ಮನೆಯ ಬೂಬಮ್ಮ, ಅವರ ಮಗಳು ಸಾರಮ್ಮ, ಹಿತ್ತಲ ಮನೆಯ ರಾಧಕ್ಕ ಎಲ್ಲರೂ ಬಂದು



ಬಿಟ್ಟಿದ್ದರು. ಅದು ಹೇಗೆ ಸುದ್ದಿ ತಲುಪಿತೋ... ಚಿಕ್ಕಮ್ಮ ತನ್ನ ಪುಟ್ಟ ಮಕ್ಕಳಿಬ್ಬರನ್ನು ಎಳೆದುಕೊಂಡೇ ಬಂದು ಅಳುವವರ ನಾಯಕಿಯಾಗಲು ಹಟಪಡುತ್ತಿದ್ದಳು. 'ನಿನಗಿನ್ನಾರು ಗತಿ ಉನ್ನೀಸಾ...' ಎಂದು ರಾಗವಾಗಿ ಕಿರುಚುತ್ತಿದ್ದದ್ದು ಸ್ವತಃ ಕೈಜಮ್ಮನವರಿಗೂ ಅಸಹ್ಯವಾಗಿತ್ತು.

ಮರದ ಕೊರಡಿನಂತೆ ಗಂಡನ ಎದೆಯ ಮೇಲೆ ಬಿದ್ದುಬಿಟ್ಟಿದ್ದ ಮೆಹರುನ್ನೀಸಾಳನ್ನು ತಬ್ಬಿಕೊಂಡು ಆಕೆಯ ಕೋಣೆಗೆ ಎಳೆದುಕೊಂಡು ತರುವಾಗ ಹೇಳಿದ್ದರು ಕೈಜಮ್ಮ, 'ನೀನು ಇಲ್ಲಿಂದ ಹೊರಗೆ ಬರಬೇಡ ಮೋಳೆ. ದುಃಖಿಸಿ ಮುಕ್ಕಾಲಿನ ಪ್ರಯೋಜನವಿಲ್ಲ. ಬಂದದ್ದನ್ನು ಬಂದ ಹಾಗೆಯೇ ಎದುರಿಸಬೇಕು: ಈಗ ಆದದ್ದಾದರೂ ಏನು? ಮಾತನಾಡಿಕೊಂಡಿರಲು ಒಂದು ಜನ ಕಮ್ಮಿಯಾದ ಹಾಗಾಯಿತು; ಅಷ್ಟೇ ಅಲ್ವಾ?'

ಹುಂ! ಈ ಕೈಜಮ್ಮನವರು ಎಲ್ಲವನ್ನೂ ಅದು ಹೇಗೆ ಗ್ರಹಿಸಿಬಿಡುತ್ತಾರೆ! ಈ ಮನೆಗೆ ಯಜಮಾನಿತಿಯಾಗಿ ಬಂದ ನಾಲ್ಕು ತಿಂಗಳಲ್ಲೇ ಮೆಹರುನ್ನೀಸಾಳಿಗೆ ಗೊತ್ತಾಗಿ ಹೋಗಿತ್ತು, ಈ ಮುದುಕಿಯ ಕಣ್ಣು ತಪ್ಪಿಸಿ ಯಾವ ಗುಟ್ಟನ್ನೂ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು.

ಒಂದು ದಿನ ಮಧ್ಯಾಹ್ನ ಸಮದ್ ಊಟದ ಡಬ್ಬದೊಡನೆ ಸೈಕಲ್ ಹತ್ತಿ ಹೋದ ಬಳಿಕ ಕೈಜಮ್ಮನವರು ಮೆಹರುನ್ನೀಸಾಳ ರಟ್ಟೆ ಹಿಡಿದು ಅವಳ ಭಯಭೀತ ಕಣ್ಣುಗಳಲ್ಲೇ ಕಣ್ಣು ನೆಟ್ಟು ನೇರವಾಗಿಯೇ ಹೇಳಿದ್ದಳು. 'ನೋಡು ಮೋಳೆ. ನಾನು ಕೂಡಾ ನಿನ್ನ ಹಾಗಿನ ಪ್ರಾಯವನ್ನೇ ದಾಟಿ ಬಂದವಳು. ಈ ಪುತ್ತಬ್ಬ ಇದ್ದಾನಲ್ಲ: ಅವನು ಮಗುವಿನಂತಹ ಮನಸ್ಸಿನವನು. ಒಂದು ಇರುವೆಯನ್ನು ಕೊಲ್ಲುವುದೂ ಅವನಿಂದ ಸಾಧ್ಯವಿಲ್ಲ. ಅವನು ಏನು ಎಂಬುದು ನಿನಗೂ ಗೊತ್ತಿಲ್ಲದ್ದು ಅಲ್ಲ. ಅವನನ್ನು ಹಾಲಲ್ಲಿ ಹಾಕುವುದೂ ನೀರಲ್ಲಿ ಹಾಕುವುದೂ ನಿನಗೇ ಬಿಟ್ಟಿದ್ದು'. ಮೆಹರುನ್ನೀಸಾ ಕೈಜಮ್ಮನವರ ಕಾಲಿಗೆ ಜೋತುಬಿದ್ದು ಬಿಕ್ಕಳಿಸಿ, ಬಿಕ್ಕಳಿಸಿ ಅಳಲಾರಂಭಿಸಿದಾಗ ಸ್ವತಃ ಕೈಜಮ್ಮನವರ ಕಣ್ಣ ತುಂಬಾ ನೀರು. ಮುಂದೆಂದೂ ಕೈಜಮ್ಮನವರು ಅಂತಹ ಮಾತು ಆಡಲಿಲ್ಲ; ಮೆಹರುನ್ನೀಸಾ ಅಂತಹ ಅಪರಾಧಗಳೇನನ್ನೂ ಮಾಡಿರಲೂ ಇಲ್ಲ.

ಸಮದ್‌ನಿಗೆ ನೂರಾರು ಕತೆಗಳು ಗೊತ್ತು. ಬೇರೆಯವರಿಂದ ಕಲಿತದ್ದೋ ಅಥವಾ ಅವನೇ ತಯಾರು ಮಾಡಿ ಹೇಳುತ್ತಿದ್ದನೋ; ಒಟ್ಟಿನಲ್ಲಿ ಮೆಹರುನ್ನೀಸಾ ಬಾವಿಕಟ್ಟೆಯ ಬಳಿ ಕೋಳಿಯ ಗರಿ ಕೀಳಲು ಕೈಜಮ್ಮನವರಿಗೆ ಸಹಾಯ ಮಾಡುತ್ತಿರುವಾಗಲೆಲ್ಲ ಸಮದ್ ಬಾವಿಕಟ್ಟೆಯ ಮೇಲೆ ಕುಳಿತುಕೊಂಡು ಹೊಸ ಕತೆಯನ್ನು ಆರಂಭಿಸುತ್ತಿದ್ದ. ಕೈಜಮ್ಮನವರಿಗೂ ಸಮದ್ ಹೇಳುವ ಕತೆಗಳು ತುಂಬಾ ಇಷ್ಟವಾಗುತ್ತಿದ್ದವು.

ಎಲ್ಲ ಕತೆಗಳೂ ವೀರಾಧಿವೀರರುಗಳಾದ ಸುಂದರ ರಾಜಕುಮಾರರು ಮತ್ತು ಜಗತ್ತಿನಲ್ಲೇ ಅತಿ ಸುಂದರಿಯರಾದ ರಾಜಕುಮಾರಿಯರ ನಡುವೆಯೇ ಬೆಳೆಯುತ್ತಿದ್ದವು. ಅರಮನೆಯ ಕಾವಲುಗಾರನ ವೇಷದಲ್ಲಿ ಬರುವ ರಾಜಕುಮಾರ ಏಳು ಸುತ್ತಿನ ಕೋಟೆಯನ್ನು ದಾಟಿಕೊಂಡು ರಾಜಕುಮಾರಿಯನ್ನು ಸೇರುವುದು. ಸೈನಿಕರು ಅಟ್ಟಿಸಿಕೊಂಡು ಬರುವಾಗ ಬಿಳಿಯ ಅರಬ್ಬೀ ಕುದುರೆಯನ್ನೇರಿ ಆಕಾಶದಲ್ಲೇ ಹಾರುವುದು. ರಾಜಕುಮಾರಿಗೆ ಇಷ್ಟದ ಮುತ್ತಿನ ಸರವನ್ನು ತರಲು ಕೀಲು ಕುದುರೆಯನ್ನೇರಿ ಏಳು ಸಮುದ್ರದ ಆಚೆ ಇರುವ ರಾಕ್ಷಸರ ಗುಹೆಯನ್ನು ನುಗ್ಗುವುದು. ಹಂದಿಯ ರೂಪದಲ್ಲಿ ಎದುರಾಗುವ ರಾಕ್ಷಸನ ಜತೆ ಯುದ್ಧ ಮಾಡಲು ಹೇಸಿಕೊಂಡು ಪಲಾಯನ ಮಾಡುವುದು. ಹೀಗೆ ತುಂಟ ತಮಾಷೆಗಳನ್ನು ಸೇರಿಸಿಯೇ ಕತೆ ಹೇಳುತ್ತಿದ್ದಾಗ, ಕೋಳಿಗರಿ ಕೀಳುವುದನ್ನು ಕೂಡಾ ಮರೆತು ಇಬ್ಬರೂ ಕತೆಯಲ್ಲಿ ಮುಳುಗಿಬಿಡುತ್ತಿದ್ದರು. ಸಮದ್ ಕತೆ ಮುಗಿಸಿ ಕೈ ತಿಟ್ಟಿ ನಕ್ಕಾಗ ಬೆಚ್ಚಿಬಿದ್ದು ನಾಚಿಕೊಳ್ಳುವ ಕೈಜಮ್ಮನವರು ಪ್ರತಿಬಾರಿಯೂ, 'ನೀನಿಲ್ಲಿಂದ ಹೋಗುತ್ತೀಯಾ ಅಥವಾ ಪುತ್ತಬ್ಬನಲ್ಲಿ ಹೇಳಿ ನಿನ್ನ ನಾಲಗೆ ಹೊಲಿಸಲಾ?' ಎಂದು ಹುಸಿಕೋಪ ಪ್ರದರ್ಶಿಸುತ್ತಿದ್ದರು.

ಕತೆ ಮುಗಿಸಿದ ಸಮದ್ ಅಂಗಡಿಯತ್ತ ಹೊರಟು ಹೋದ ಬಳಿಕ ರಾಜಕುಮಾರರ ಏಳು ಸುತ್ತಿನ ಕೋಟೆಯೊಳಗೇ ದಾರಿ ತಪ್ಪಿದವಳಂತೆ ಗೊಂದಲಗೊಳ್ಳುವ ಮೆಹರುನ್ನೀಸಾಳನ್ನು ಅನುಕಂಪದ ನೋಟದಿಂದಲೇ ಎಚ್ಚರಿಸುತ್ತಿದ್ದರು ಕೈಜಮ್ಮನವರು. ಮೆಹರುನ್ನೀಸಾ ಪ್ರತಿಬಾರಿಯೂ ತುಟಿಕಚ್ಚಿ ತಪ್ಪೊಪ್ಪಿಗೆ ನೀಡುತ್ತಿದ್ದಳು.

ಆದರೆ ಗಂಡ ತೀರಿಕೊಂಡ ದಿನ ಏಳುಸುತ್ತಿನ ಕೋಟೆಯೊಳಗೆ ನುಗ್ಗಿದ ರಾಜಕುಮಾರ ನೇರವಾಗಿ ಸಿಂಹಾಸನಕ್ಕೆ ಕೈಚಾಚಿ ದಾಗ ಮಾತ್ರ ಮೆಹರುನ್ನೀಸಾ ಕಂಗಾಲಾಗಿಹೋಗಿದ್ದಳು! ಮೈಯ್ಯತ್ ಸ್ನಾನ ಮುಗಿದ ಬಳಿಕ ಛಾವಡಿಯಿಂದ ಪ್ರಾರ್ಥನೆಯ ಧ್ವನಿ ಕೇಳಿ ಬರತೊಡಗಿತ್ತು. ಸ್ವಲ್ಪ ಹೊತ್ತಿನಲ್ಲಿ ಮೈಯ್ಯತ್ ಒಯ್ಯುತ್ತಾರೆ. ಆ ಬಳಿಕ ಈ ದೊಡ್ಡ ಮನೆಗೆ ಗಂಡಸರೆನ್ನುವವರು ಯಾರು ಇರುವುದಿಲ್ಲ. ಮೆಹರುನ್ನೀಸಾಳಿಗೆ ಭಯವಾಗತೊಡಗಿತ್ತು. ಅಷ್ಟರಲ್ಲಿ ಬಾಗಿಲ ಬಳಿ ಹೆಜ್ಜೆಯ ಸದ್ದು. ಮೆಹರುನ್ನೀಸಾ ತಲೆಯೆತ್ತಿದಾಗ ತೆರೆದ ಬಾಗಿಲಿಗೊರಗಿ ಸಮದ್ ನಿಂತಿದ್ದ! ಗಡಬಡಿಸಿ ಎದ್ದುನಿಂತ ಮೆಹರುನ್ನೀಸಾ ಗೋಡೆಗೊರಗಿ ತಲೆ ತಗ್ಗಿಸಿದಳು. ಎದೆಯ ಢವಢವ ಸಮದ್‌ನಿಗೂ ಕೇಳಿಸಿದ್ದಿರಬಹುದು.

'ಅಂಗಡಿಯ ಬೀಗದ ಕೈ ಬೇಕಾಗಿತ್ತು'. ಮೆಹರುನ್ನೀಸಾಳ ರಕ್ತವೆಲ್ಲ ತಣ್ಣಗಾಗಿ ಹೋಯಿತು. ತುಟಿಗಳು ಅದುರತೊಡಗಿದವು. ನಾಲಗೆ ಪೂರ್ತಿ ಒಣಗಿಹೋಯಿತು.



'ಊದುಬತ್ತಿ ತರಬೇಕಾಗಿದೆ. ಹಾಗೇ ಸ್ವಲ್ಪ ಹಣವೂ ಬೇಕು'.

ಮೆಹರುನ್ನೀಸಾಳ ಕಾಲುಗಳು ನಡುಗಲಾರಂಭಿಸಿತು. ಇನ್ನೇನು ಬಿದ್ದೇ ಬೀಳುತ್ತೇನೆನ್ನುವಷ್ಟರಲ್ಲಿ ಸಾವರಿಸಿಕೊಂಡವಳು ಮಂಚದ ಮೂಲೆಯಲ್ಲಿ ಕುಸಿದು ಕುಳಿತಳು. ಅವಳ ಬಲದಕೈ ತಲೆದಿಂಬನ್ನು ಬಲವಾಗಿ ಒತ್ತಿ ಹಿಡಿದಿತ್ತು. ದಿಂಬಿನ ಅಡಿಯಲ್ಲಿ ಬೀಗದ ಕೈಗೊಂಚಲಿದೆ. ಅದನ್ನು ಅಲ್ಲಿಯೇ ಇಡುವುದು ರಿವಾಜು.

ನಿದ್ರೆ ಮಾಡುವಾಗಲೂ ಪುತ್ತಬ್ಬ ಸಾಹುಕಾರರು ತಮ್ಮ ಪ್ರೀತಿಯ ಬೀಗದ ಕೈ ಗೊಂಚಲನ್ನು ತಲೆದಿಂಬಿನ ಅಡಿಯಲ್ಲಿಯೇ ಇಟ್ಟುಕೊಳ್ಳುತ್ತಿದ್ದರು. ಒಮ್ಮೆ ಬಾಯಿಬಿಟ್ಟು ಹೇಳಿಯೂ ಇದ್ದರು. 'ಈ ಗೊಂಚಲು ಉಂಟಲ್ಲ ನೋಡು; ಇದು ನನ್ನ ಸ್ವಂತದ್ದು. ಇದರ ಅಧಿಕಾರ ನನಗೆ ಮಾತ್ರ. ನನಗೆ ಹಿರಿಯರು ಮಾಡಿಟ್ಟದ್ದು ಏನೂ ಇಲ್ಲ, ಎಲ್ಲವೂ ನನ್ನ ಸ್ವಂತವಾಗಿ ದುಡಿದು ಸಂಪಾದಿಸಿದ್ದು. ಬೇರೆಯವರ ತಲೆ ಒಡೆದು ತಂದದ್ದೂ ಅಲ್ಲ. ಮನೆಯೊಳಗೆ ಈ ಗೊಂಚಲನ್ನು ಜಾಗ್ರತೆಯಾಗಿ ತೆಗೆದಿರಿಸುವ ಜವಾಬ್ದಾರಿ ನಿನ್ನದು.

ಮೆಹರುನ್ನೀಸಾ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿಯೇ ನಿರ್ವಹಿಸಿದ್ದಳು. ಪುತ್ತಬ್ಬ ಸಾಹುಕಾರರು ರಾತ್ರಿ ಅಂಗಡಿ ಮುಚ್ಚಿದ ಬಳಿಕ ಬೀಗದ ಕೈಗೊಂಚಲನ್ನು ತಮ್ಮ ಚರ್ಮದ ಸೊಂಟಪಟ್ಟಿಗೆ ಸೇರಿಸಿಕೊಂಡು ತಂದು ಅದನ್ನು ಹೆಂಡತಿಯ ಕೈಗೆ ಕೊಟ್ಟರೆ, ಅವಳದನ್ನು ಅವರ ತಲೆದಿಂಬಿನಡಿಯಲ್ಲಿ ಇರಿಸಬೇಕು. ಮರುದಿನ ಮುಂಜಾನೆ ಸಾಹುಕಾರರು ಅಂಗಡಿಗೆ ಹೊರಟುನಿಂತಾಗ ಅವಳೇ ಅದನ್ನು ತಲೆದಿಂಬಿನಡಿಯಿಂದ ಎತ್ತಿಕೊಂಡು ತಂದು ಅವರಿಗೆ ಒಪ್ಪಿಸಬೇಕು. ಕಳೆದ ಎರಡು ವರ್ಷಗಳಲ್ಲಿ ಪ್ರತಿದಿನವೂ ನಡೆದುಕೊಂಡು ಬಂದ ರೀತಿ ಇದು. ಕೈಜಮ್ಮನವರು ಕೂಡಾ ಈ ಗೊಂಚಲನ್ನು ಮುಟ್ಟಿದವರಲ್ಲ. ಗಂಡನ ಹಾಸಿಗೆ ಹೊರಗಡೆಯ ಕನ್ನಡಿ ಕಪಾಟಿನ ಕೋಣೆಗೆ ವರ್ಗಾವಣೆಯಾದಾಗ ಮಾತ್ರ ಬೀಗದ ಕೈಗೊಂಚಲು ಒಳಗೆಯೇ ದಿಂಬಿನ ಅಡಿಯಲ್ಲಿ ಉಳಿದುಬಿಟ್ಟಿತ್ತು.

'ತಡವಾಗುತ್ತದೆ. ಎಲ್ಲುಂಟು ಬೀದ ಕೈ?' ಈ ಬಾರಿ ಸಮದ್‌ನ ಪ್ರಶ್ನೆಯಲ್ಲಿ ಯಾಚನೆಯಿರಲಿಲ್ಲ; ಅಧಿಕಾರವಿತ್ತು!

**'ಸಕಲಾಧಿಪತ್ಯದ ಒಡೆಯನಾದ ಅಲ್ಲಾಹುವೇ**
**ನೀನು ಇಚ್ಛಿಸಿದರೆ ಅಧಿಪತ್ಯವನ್ನು ಕೊಡುತ್ತೀಯೇ**
**ನೀನಿಚ್ಛಿಸಿದವರಿಂದ ಅಧಿಪತ್ಯವನ್ನು ಕಸಿದುಕೊಳ್ಳುತ್ತೀಯೇ,**
**ನೀನು ಇಚ್ಛಿಸಿದವರಿಗೆ ಬಹುಮಾನಗಳನ್ನು ಕರುಣಿಸುತ್ತೀಯೇ**

**ನೀನು ಎಲ್ಲ ಕೆಲಸಗಳಿಗೂ ಸಮರ್ಥನಿದ್ದೀಯೇ**
**ನನ್ನ ಯೋಚನೆಗಳು ತಪ್ಪಾಗಿದ್ದರೆ ದಯವಿಟ್ಟು ಕ್ಷಮಿಸಿಬಿಡು'.**

ಕುಳಿತಲ್ಲಿಂದ ತುಟಿಕಚ್ಚಿ ಎದ್ದುನಿಂತು ಮೆಹರುನ್ನೀಸಾ ತಲೆದಿಂಬನ್ನು ಸರಿಸಿ ಬೀಗದ ಕೈಗೊಂಚಲನ್ನು ಎತ್ತಿ ಸಮದ್‌ನತ್ತ ಚಾಚಿದಳು.

## 3

ಸೂರ್ಯ ಅರಳುವ ಮೊದಲೇ ಕಾಗೆಗಳು ಕೂತಗೊಡಗುತ್ತವೆ ಎಂಬುದು ಮೆಹರುನ್ನೀಸಾಳಿಗೆ ಚಿಕ್ಕವಳಿರುವಾಗಲೇ ಗೊತ್ತಾಗಿಬಿಟ್ಟಿತ್ತು. ಇನ್ನೊಂದು ತಾಸಿನಲ್ಲಿ ಕೋಣೆಯೊಳಗೆ ಬೆಳಕು ನುಗ್ಗಲಿದೆ. ಮುಂಜಾನೆಯ ನಮಾಜಿಗೆ ಏಳುವ ಅಭ್ಯಾಸ ಆಕೆಗೆ ಚಿಕ್ಕಂದಿನಲ್ಲೇ ಇತ್ತು; ಚಿಕ್ಕಮ್ಮನ ಒತ್ತಾಯದಿಂದ ಕಲಿತದ್ದು. ಮಳೆಯಿರಲಿ ಚಳಿಯಿರಲಿ, ಮೆಹರುನ್ನೀಸಾಳಿಗೆ ಸೂರ್ಯೋದಯಕ್ಕೆ ಮೊದಲೇ ಎಚ್ಚರವಾಗುತ್ತಿತ್ತು. ತಡವಾದರೆ ಒಳಗೆ ಮಲಗಿದ್ದ ಚಿಕ್ಕಮ್ಮನಿಂದ ಬೈಗಳನ್ನು ಕೇಳಿಸಿಕೊಳ್ಳಬೇಕು. ಹಂಡೆಗೆ ನೀರು ತುಂಬಿಸಿ, ಒಲೆಗೆ ಬೆಂಕಿ ಹಾಕಿ, ಪಾತ್ರೆಗಳನ್ನೆಲ್ಲಾ ತೊಳೆದು– ಗಂಜಿಗೆ ನೀರಿಟ್ಟು ಬಟ್ಟೆಗಳನ್ನು ಒಗೆದು ಹಾಕುವಷ್ಟರಲ್ಲಿ ತಂದೆ ಎದ್ದಿರುತ್ತಾರೆ. ಅವರಿಗೆ ಚಹಕ್ಕೆ ನೀರಿಟ್ಟು ತಮ್ಮ – ತಂಗಿಯಂದಿರ ಮುಖ ತೊಳೆಯುವಾಗ ಪೂರ್ತಿ ಹಗಲಾಗುತ್ತದೆ. ಗಂಜಿ ಕುಡಿದು ಬೀಡಿಯ ಕೆಲಸ ಆರಂಭಿಸಿದರೆ ಮತ್ತೆ ಕಾಲು ನೇರ ಮಾಡುವುದು ಮಧ್ಯಾಹ್ನದ ಊಟದ ತಯಾರಿಗೆಂದು ಎದ್ದಾಗಲೇ. ಬಡಿಸುವ ಕೆಲಸವೊಂದನ್ನು ಮಾತ್ರ ಚಿಕ್ಕಮ್ಮ ಸ್ವತಃ ಮಾಡುತ್ತಿದ್ದಳು.

ಪುತ್ತಬ್ಬ ಸಾಹುಕಾರರ ದೊಡ್ಡ ಮನೆಯಲ್ಲಿ ಮೆಹರುನ್ನೀಸಾ ಹತ್ತು ಗಂಟೆಯ ತನಕ ಮಲಗಿದರೂ ಕೇಳುವಂತವರು ಇರಲಿಲ್ಲ. ಕೈಜಮ್ಮನವರೇ ಎಲ್ಲ ಮಾಡಲು ಸಿದ್ಧರಿದ್ದರು. ಆದರೆ ಅಭ್ಯಾಸಬಲ, ಮಸೀದಿಯಿಂದ ನಮಾಜಿನ ಭಾಂಗ್ ಕೇಳಿಸುತ್ತಲೇ ಎಚ್ಚರವಾಗುತ್ತಿತ್ತು. ನಮಾಜು ಮುಗಿಸಿದ ಕೂಡಲೇ ಅಡುಗೆ ಮನೆಗೆ ಹೋಗುವ ಮೆಹರುನ್ನಿಸಾ, ಕೈಜಮ್ಮನವರು ಬೇಡಬೇಡವೆನ್ನುತ್ತಲೇ ಎಲ್ಲ ಮಾಡಿ ಮುಗಿಸುತ್ತಿದ್ದಳು.

ಮೆಹರುನ್ನೀಸಾ 'ಇದ್ದತ್'ಗೆ ಕೂತ ಬಳಿಕ ಎಲ್ಲ ಕೆಲಸಗಳೂ ಕೈಜಮ್ಮನವರ ಪಾಲಿಗೆ ಬಿದ್ದಿದ್ದವು. ಮೆಹರುನ್ನೀಸಾ ಕೋಣೆಯಿಂದ ಹೊರಗೆ ಕಾಣಿಸಿಕೊಳ್ಳುವಂತಿರಲಿಲ್ಲ. ಯಾವನೇ ಗಂಡಸಿನ ಕಣ್ಣಿಗೆ ಬೀಳಬಾರದು. ಮಕ್ಕಳಿರುತ್ತಿದ್ದರೆ ಅದು ಬೇರೆ ವಿಷಯ. ಬಚ್ಚಲಿಗೆ ಹೋಗಲಿದ್ದರೆ ಮಾತ್ರ ಕೋಣೆಯ ಹೊಸಿಲು ದಾಟುವಳು ಮೆಹರುನ್ನೀಸಾ.

ಅಚ್ಚರಿಯೆಂದರೆ, ಈ ಹೊಸ ದಿನಚರಿಗೆ ಹೊಂದಿಕೊಳ್ಳಲು ಆಕೆಗೆ ವಿಶೇಷ ಕಷ್ಟವೇನೂ ಆಗಿದ್ದಿರಲಿಲ್ಲ. ಅವಳು ತನ್ನ ಚಿಕ್ಕಮ್ಮನ ಜತೆ ಬದುಕುತ್ತಿದ್ದಾಗಿನ ಅನುಭವಕ್ಕಿಂತ ಇದು ಬಹಳ ವಿಭಿನ್ನವಾಗಿಯೇನೂ ಇರಲಿಲ್ಲ. ಕಾಯಿಲೆ ಬಿದ್ದಾಗ ಸರಕಾರಿ ಆಸ್ಪತ್ರೆಗೆ ಮತ್ತು ವರ್ಷಕ್ಕೊಮ್ಮೆ ನಡೆಯುವ ಮುತ್ತುಪ್ಪಾಡಿಯ ಉರೂಸಿಗೆ ಹೋಗಿರುವುದನ್ನು ಲೆಕ್ಕದಿಂದ ಬಿಟ್ಟರೆ ಮೆಹರುನ್ನೀಸಾ ಒಮ್ಮೆ ಕೂಡಾ ರಸ್ತೆಯಲ್ಲಿ ನಡೆದವಳಲ್ಲ. ತಮ್ಮ – ತಂಗಿಯಂದಿರ ಚಾಕರಿ ಮತ್ತು ಬೀಡಿ ಕಟ್ಟುವ ಗಡಿಬಿಡಿಯಲ್ಲಿ ಪರಪುರುಷರನ್ನು ಕಾಣಬೇಕೆನ್ನುವ ಯೋಚನೆಯೂ ಹುಟ್ಟಿಕೊಂಡದ್ದಿಲ್ಲ. ಚಿಕ್ಕಮ್ಮ ತನ್ನ ಮದುವೆಗೆ ಪ್ರಯತ್ನಿಸುತ್ತಿರುವುದು ಗೊತ್ತಾದ ಒಂದು ವರ್ಷದಲ್ಲಿ ತನ್ನ ಮದುವೆಯ ಬಗ್ಗೆ ಒಂದೆರಡು ಅಸ್ಪಷ್ಟ ಕನಸುಗಳನ್ನು ಕಂಡಿದ್ದಿರಬಹುದಾದರೂ, ತನ್ನನ್ನು ಮದುವೆ ಮಾಡಿಕೊಳ್ಳುವವನ ಬಗ್ಗೆ ನಿರ್ದಿಷ್ಟವಾದ ಚಿತ್ರಗಳನ್ನೇನೂ ಅವಳು ಕಲ್ಪಿಸಿಕೊಂಡಿರಲಿಲ್ಲ. ಪುತ್ತಬ್ಬ ಸಾಹುಕಾರರ ಹೆಂಡತಿಯಾಗಲಿರುವ ಸುದ್ದಿಯನ್ನು ಮೆಹರುನ್ನೀಸಾ ಹೆಚ್ಚು ಕಮ್ಮಿ ಸಂತೋಷದಿಂದಲೇ ಸ್ವೀಕರಿಸಿದ್ದಳು. ಬೀಡಿ ಕಟ್ಟುವ ಕೆಲಸ ಮಾಡದೆಯೂ ಮೂರು ಹೊತ್ತು ಗಮ್ಮತ್ತಿನ ಊಟ ಸಿಗುವುದಾದರೆ ಯಾರಿಗೆ ಬೇಡ? ಚಾವಡಿಗೆ ಮತ್ತು ಕನ್ನಡಿ ಕಪಾಟಿನ ಕೋಣೆಗೆ ಕಾಲಿಡುವುದನ್ನು ನಿಲ್ಲಿಸಿದ್ದೊಂದೇ ಈ 'ಇದ್ದತ್' ಅವಧಿಯಲ್ಲಿ ಆಕೆಯ ದಿನಚರಿಯಲ್ಲುಂಟಾದ ಪ್ರಮುಖ ಬದಲಾವಣೆ. ನೆರೆಕರೆಯ ಮನೆಯೆಂದರೆ ಮೈಮೂನಳದ್ದು. ಹಿತ್ತಲ ಬಾವಿಯ ತಡಮೆ ದಾಟಿದರೆ ಅವಳ ಮನೆ. ಅಲ್ಲಿಗೂ ಮೆಹರುನ್ನೀಸಾ ಹೋಗುತ್ತಿದ್ದದ್ದು ಅಪರೂಪವೇ. ಕೆಲವೊಮ್ಮೆ ಬಹಳ ಬೇಸರವಾದಾಗ ಮೈಮೂನಳ ಮಗುವಿನ ಜತೆ ಮುದ್ದು ಮಾತಾಡಲು ಹೋಗುತ್ತಿದ್ದುದುಂಟು. ಇದ್ದತ್‌ನ ಅವಧಿಯಲ್ಲಿ ಆ ಮಗುವಿನ ನೆನಪೇನೂ ಬಹಳ ಕಾಡಿದ್ದಿಲ್ಲ. ಮೈಮೂನಳ ಮಗುವಿನ ಜತೆ ಆಡುವಾಗ ಸಂತೋಷಕ್ಕಿಂತ ಹೆಚ್ಚು ಅವಮಾನವೇ ಆಗುತ್ತಿತ್ತು.

ಪುತ್ತಬ್ಬ ಸಾಹುಕಾರರು ತೀರಿಕೊಂಡ ಬಳಿಕ ಹದಿಮೂರನೇ ದಿನದ 'ಫಾತಿಹ' ಮುಗಿದ ಮರುದಿನ ಕೈಜಮ್ಮನವರು ಅನುಮಾನದಿಂದಲೇ ಪ್ರಸ್ತಾಪಿಸಿದ್ದರು. 'ಅಂಗಡಿ ಬಾಗಿಲು ತೆರೆಯದೆ ತಿಂಗಳಾಗುತ್ತ ಬಂತು. ಮನೆಯಲ್ಲಿ ತಂದಿರಿಸಿದ ಸಾಮಾನು ಎಷ್ಟು ದಿನ ಅಂತ ಬಂದೀತು? ಏನು ಮಾಡೋಣ ಅಂತೀಯಾ?' ನಿರ್ಧಾರದ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಮೆಹರುನ್ನೀಸಾಳ ಮೇಲೆ ಹಾಕಿದ್ದರು ಕೈಜಮ್ಮನವರು.

ಮೆಹರುನ್ನೀಸಾಳಿಗೂ ಇದು ಅನಿರೀಕ್ಷಿತ ಸಮಸ್ಯೆಯೇನೂ ಆಗಿದ್ದಿರಲಿಲ್ಲ. ಅಂಗಡಿ ಸಾಹುಕಾರರ ಹೆಂಡತಿಯಾಗಿ ಬಂದ ಎರಡು ವರ್ಷಗಳಲ್ಲಿ ಅಲ್ಪಸ್ವಲ್ಪ ವ್ಯವಹಾರ ಜ್ಞಾನವೂ ಅವಳಿಗಂಟಿಕೊಂಡಿತ್ತು. ಪುತ್ತಬ್ಬನವರೇ ಅದಕ್ಕೆ ಕಾರಣ. ಹೆಂಡತಿಯೊಡನೆ

ಯಾವ ಮುಚ್ಚು ಮರೆಯೂ ಅವರಲ್ಲಿರಲಿಲ್ಲ. ಪ್ರತಿದಿನ ರಾತ್ರಿಯೂ ಈವತ್ತು ಹೀಗಾಯಿತು. ಇಷ್ಟು ಲಾಭ ಸಿಕ್ಕಿತು. ನಾಳೆ ತೆಂಗಿನಕಾಯಿ ರೇಟು ಡೌನಾದರೆ ಗೋಣಿಯಲ್ಲಿ ಕಟ್ಟಿಟ್ಟದ್ದನ್ನು ಚಟ್ನಿ ಮಾಡಿ ತಲೆಗೆ ಮೆತ್ತಬೇಕಷ್ಟೇ – ಹೀಗೆ ಎಲ್ಲವನ್ನೂ ಬಿಡಿಸಿ ಬಿಡಿಸಿ ಹೇಳುತ್ತಿದ್ದರು. ಅವರು ವಿವರಿಸುತ್ತಲೇ ನಿದ್ರೆ ಹೋಗುತ್ತಿದ್ದರು. ಮೆಹರುನ್ನೀಸಾ ಸೂರು ದಿಟ್ಟಿಸುತ್ತಾ ನಿದ್ರೆಗಾಗಿ ಹಂಬಲಿಸುತ್ತಿದ್ದಳು.

ಮೆಹರುನ್ನೀಸಾಳ ಮೌನವೂ ಕೈಜಮ್ಮನವರಿಗೆ ಅನಿರೀಕ್ಷಿತವಲ್ಲ. ಒಂದೇ ಮಾತಿನಲ್ಲಿ ನಿರ್ಧರಿಸಿ ಉತ್ತರಿಸಬಹುದಾದ ಪ್ರಶ್ನೆ ತನ್ನದಲ್ಲ ಎಂಬುದೂ ಅವರಿಗೆ ಗೊತ್ತಿದೆ.

'ಸಮದ್‌ನಿಗೆ ನಾನು ಸಂಜೆ ಹೇಳುತ್ತೇನೆ ಎಂದಿದ್ದೇನೆ. ಅವನು ಈ ಬಗ್ಗೆ ವಿಚಾರಿಸಿದ್ದರಲ್ಲಿ ನನಗೆ ತಪ್ಪೇನೂ ಕಾಣುವುದಿಲ್ಲ. ಎಷ್ಟಾದರೂ ಅವನು ಗಂಡಸು, ಅವನದ್ದು ಅಂತ ಏನಾದರೊಂದು ಆಗಬೇಕಲ್ಲ. ಅವನನ್ನು – ನೀನು ಹೋಗು – ಎಂದು ಹೇಳುವುದು ಸುಲಭ. ಆದರೂ ಈ ಮನೆಗೂ ಒಬ್ಬ ಗಂಡಸು ಅಂತ ಬೇರೆ ಯಾರಿದ್ದಾರೆ? ಸಂಜೆಯವರೆಗೆ ಆಲೋಚನೆ ಮಾಡಿ ಹೇಳು' – ಕೈಜಮ್ಮನವರು ಬಹಳ ಜಾಣ್ಮೆಯಿಂದ ಉತ್ತರವನ್ನೂ ಸೂಕ್ಷ್ಮವಾಗಿ ಸೂಚಿಸಿ ಹೋಗಿದ್ದರು.

ಬೀಗದ ಕೈಗೊಂಚಲು ತಲೆದಿಂಬಿನ ಅಡಿಯಲ್ಲಿಯೇ ಬಿದ್ದುಕೊಂಡಿತ್ತು. ಗಂಡ ತೀರಿಕೊಂಡ ದಿನ ಅದನ್ನೊಮ್ಮೆ ಕೊಂಡು ಹೋಗಿದ್ದ ಸಮದ್, ಅದೇ ದಿನ ಸಂಜೆ ಕೈಜಮ್ಮನವರ ಮೂಲಕ ಮರಳಿ ಕಳಿಸಿದ್ದ.

ತೊಡೆಗಳ ಮೇಲೆ ಕುರಾನು ಗ್ರಂಥ ಬಿಡಿಸಿಟ್ಟು ಓದುತ್ತಿರುವಂತೆಯೇ ತಲೆಯೊಳಗೆ ನೂರಾರು ಯೋಚನೆಗಳು. ಈ ಮನೆಗೆ ಒಬ್ಬ ಗಂಡಸು ಅಂತ ಬೇರೆ ಯಾರಿದ್ದಾರೆ? ಕೈಜಮ್ಮನವರ ಮಾತಿನ ಹಿಂದೆ ಬೇರೇನಾದರೂ ಸೂಚನೆಗಳಿವೆಯೇ? ನೀನಿನ್ನು ಹೋಗು ಎಂದಕೂಡಲೇ ಅವನು ಹೋಗುತ್ತಾನೆಯೇ? ರಕ್ತ ಸಂಬಂಧಿಯಲ್ಲದೇ ಇರಬಹುದು; ಆದರೆ ತನಗಿಂತ ಮೊದಲೇ ಈ ಮನೆಗೆ ಬಂದವನು. ಈ ಮನೆಯ ಒಟ್ಟು ಸಂಪತ್ತಿನಲ್ಲಿ ಅವನದೂ ಪಾಲಿದೆ. ಎಷ್ಟಾದರೂ ಅವನು ಗಂಡಸು. ಮನಸ್ಸು ಮಾಡಿದರೆ ತನ್ನನ್ನೂ, ಕೈಜಮ್ಮನವರನ್ನೂ ಹೊರಗೆ ಹೋಗಲು ಹೇಳಿ ಅವನೊಬ್ಬನೇ ಈ ಮನೆಯ ಯಜಮಾನನೆನ್ನಿಸಿಕೊಳ್ಳಲು ತಾಕತ್ತು ಉಳ್ಳವನು. ಮೆಹರುನ್ನೀಸಾ ನವಿರಾಗಿ ನಡುಗಿದಳು. ಸಮದ್ ತನ್ನನ್ನು ದೂರ ಮಾಡಬಹುದೆ? ಛೇ! ಅವನು ಅಂತವನು ಖಂಡಿತವಾಗಿಯೂ ಅಲ್ಲ. ಈ ಮನೆಯ ಯಜಮಾನಿತಿ ನಾನೇ ಆಗಿ ಉಳಿಯುತ್ತೇನೆ.

ಕೈಜಮ್ಮನವರ ಉದ್ದೇಶ ಏನಿದ್ದಿರಬಹುದು? ತೌಬಾ...! ತೌಬಾ... ಕಣ್ಣುಜ್ಜಿಕೊಂಡು ಕುರಾನಿನ ಸಾಲುಗಳಲ್ಲಿ ದೃಷ್ಟಿನೆಟ್ಟಳು.



**'ಇದ್ದತ್‌ನ ಅವಧಿಯಲ್ಲಿ ವಿಧವೆಯರೊಂದಿಗೆ ವಿವಾಹದ ಸಮಾಲೋಚನೆ ಮಾಡುವುದಾಗಲೀ, ಮನದೊಳಗೇ ಬಚ್ಚಿಡುವುದರಲ್ಲಾಗಲೀ ನಿಮ್ಮದು ದೋಷವೇನೂ ಇಲ್ಲ. ಅಲ್ಲಾಹುವಿಗೆ ತಿಳಿದೇ ಇರುತ್ತದೆ. ಆದರೆ ಇದ್ದತ್‌ನ ಕಾಲ ಮುಕ್ತಾಯಗೊಳ್ಳುವವರೆಗೂ ವಿವಾಹಬಂಧವನ್ನು ಕುರಿತು ನೀವು ತೀರ್ಮಾನ ಮಾಡಬಾರದು. ತಿಳಿಯಿರಿ. ನಿಶ್ಚಯವಾಗಿಯೂ ನಿಮ್ಮ ಹೃದಯದಲ್ಲಿ ಏನಿದೆಯೆಂಬುದನ್ನು ಅಲ್ಲಾಹು ತಿಳಿದಿರುತ್ತಾನೆ. ಅಂತಲೇ ಆತನ ಬಗ್ಗೆ ಭಯಪಡಿರಿ ಅವನು ಅತ್ಯಧಿಕ ಕ್ಷಮಾಶಾಲಿಯೂ ಸಹನಾಶೀಲನೂ ಆಗಿರುತ್ತಾನೆ'.**

ಆ ದಿನ ಕೈಜಮ್ಮನವರು ಮಧ್ಯಾಹ್ನದ ಊಟವನ್ನು ಕೋಣೆಯೊಳಗೆ ತಂದಿರಿಸಿದಾಗಲೇ ಮೆಹರುನ್ನೀಸಾ ಬೀಗದ ಕೈ ಗೊಂಚಲನ್ನು ಅವರತ್ತ ಚಾಚಿದ್ದಳು. ಈ ಬಗ್ಗೆ ಯಾವುದೇ ಮಾತಿಗೆ ಅವಕಾಶ ಕೊಡದೆ ಕೈಜಮ್ಮನವರು ಅದನ್ನು ಸ್ವೀಕರಿಸಿದ್ದರು. ಇದ್ದತ್‌ಗೆ ಕೂತವಳ ಜತೆ ಹೆಚ್ಚು ಮಾತನಾಡುವುದು ಅವರಿಗೂ ಇಷ್ಟವಿರಲಿಲ್ಲ. ಹೊತ್ತು ಹೊತ್ತಿಗೆ ಊಟ–ತಿಂಡಿ ತಂದಿರಿಸುತ್ತಿರುವ ಕೈಜಮ್ಮನವರಿಗೆ ಆ ಬಳಿಕ ಒಂದು ಕೆಲಸ ಜಾಸ್ತಿಯಾದಂತಾಯಿತು; ಪ್ರತಿ ಮುಂಜಾನೆ ಬೀಗದ ಕೈಗೊಂಚಲನ್ನು ಒಯ್ಯುವುದು ಮತ್ತು ರಾತ್ರಿಯ ಹೊತ್ತು ತಂದುಕೊಡುವುದು. ಅಂಗಡಿ ವ್ಯಾಪಾರ ವಹಿವಾಟಿನ ಬಗ್ಗೆಯಾಗಲೀ – ಕನಿಷ್ಠ ಸಮದ್‌ನ ಬಗ್ಗೆ ಕೂಡಾ – ಕೈಜಮ್ಮ ಚಕಾರವೆತ್ತುವವರಲ್ಲ. ಮೆಹರುನ್ನೀಸಾ ಕೂಡ ಆ ಬಗ್ಗೆ ಆಸಕ್ತಿ ಪ್ರಕಟಿಸಲಿಲ್ಲ. ಇಡೀ ಹಗಲು ಕುರಾನು ಓದು. ಇಡೀ ರಾತ್ರಿ ಅರೆ ಎಚ್ಚರದ ನಿದ್ರೆ. ನಾಲ್ಕು ತಿಂಗಳು ಹತ್ತು ದಿನಗಳ ಏಕತಾನತೆಯ ದಿನಚರಿ. ಕೈಜಮ್ಮನವರು ಬೀಗದ ಕೈಗೊಂಚಲನ್ನು ಒಯ್ಯಲು ಮುಂಜಾನೆ ಬಂದಾಗ ಒಮ್ಮೆ ಮತ್ತು ರಾತ್ರಿ ತಂದುಕೊಡುತ್ತಿರುವಾಗ ಮತ್ತೊಮ್ಮೆ – ಈ ಎರಡು ಸಮಯಗಳಲ್ಲಿ ಮಾತ್ರ ಮೆಹರುನ್ನೀಸಾಳ ಮನಸ್ಸು ಹುಚ್ಚು ಕುದುರೆಯಂತಾಗುತ್ತಿತ್ತು. ಸಮದ್ ಮಧ್ಯಾಹ್ನದ ಊಟಕ್ಕೆ ಮನೆಗೆ ಬರುತ್ತಿರಲಿಲ್ಲ. ಚಿಕ್ಕ ಹುಡುಗನೊಬ್ಬ ಬಂದು ಕೊಂಡು ಹೋಗುತ್ತಾನೆಂದು ಕೈಜಮ್ಮನವರು ಒಮ್ಮೆ ಹೀಗೇ ಮಾತಿನ ನಡುವೆ ಹೇಳಿದ್ದರೂ ಮೆಹರುನ್ನೀಸಾ ಆ ಬಗ್ಗೆ ನಿರುತ್ಸಾಹ ತೋರಿಸಿದ್ದಳು.

ನಮಾಜು ಮುಗಿಸಿ ಕುರಾನು ಹಿಡಿದು ಕೂತವಳಿಗೆ ಮೈಯೆಲ್ಲಾ ಪುಳಕ. ಕಿಟಕಿಯ ಹೊರಗಡೆ ಬೆಳಕು ಇಣುಕುತ್ತಿತ್ತು. ಇನ್ನು ಕೆಲವೇ ನಿಮಿಷಗಳಲ್ಲಿ ಎಲ್ಲವೂ ಬೆಳಕಾಗಲಿದೆ.

**'ಸೂರ್ಯ ಚಂದ್ರರನ್ನು ಒಂದು ನಿರ್ದಿಷ್ಟ ಗತಿಯಲ್ಲಿ ನಡೆಸುವ ಅಲ್ಲಾಹುವೇ, ನನ್ನನ್ನು ನರಕದ ಯಾತನೆಯಿಂದ ರಕ್ಷಿಸು. ಸ್ವರ್ಗದ**

**ಬಾಗಿಲನ್ನು ನನಗಾಗಿ ತೆರೆದಿರಿಸು. ಅಲ್ಲಾಹುವಿನ ಭಯವಿಟ್ಟುಕೊಂಡವರಿಗೆ ಎರಡು ಸ್ವರ್ಗೋದ್ಯಾನಗಳನ್ನು ತೆರೆದಿರಿಸಲಾಗುವುದು. ಹಸಿರು ಹರಡಿರುವ ಕೊಂಬೆಗಳುಳ್ಳ ಉದ್ಯಾನವನಗಳು. ಪ್ರತಿಯೊಂದೂ ಎರಡೆರಡು ಬಗೆಯ ಹಣ್ಣುಗಳನ್ನು ಹೊಂದಿರುವ ಮರಗಳು. ಫಲಗಳು ಕೈಗೆಟಕುವಷ್ಟು ಹತ್ತಿರದಲ್ಲಿ ತೆಳ್ಳಗಿನ ರೇಶಿಮೆಯ ಪೀಠದಲ್ಲಿ ಒರಗಿಕೊಂಡಿರುವ ಸ್ವಾಧೀಮಣಿಗಳು. ಅವರು ಸುರಸುಂದರಿಯರು ಮಾತ್ರವಲ್ಲ; ಅದುವರೆಗೆ ಯಾವನೇ ಮನುಷ್ಯನಾಗಲೀ ಸೈತಾನನಾಗಲೀ ಸ್ಪರ್ಶಿಸಿರದ ಸಾಧ್ವೀ ರಮಣಿಯರು. ಅವರು ಅತ್ಯಂತ ಗುಣವತಿಯರು. ಅಲ್ಲಾಹುವಿನ ಭಯವನ್ನು ಇಟ್ಟುಕೊಂಡವರಿಗೆ ಅತಿದೊಡ್ಡದಾದ ಮತ್ತು ಸುಂದರವಾದ ಕಣ್ಣುಗಳುಳ್ಳ ರೂಪವತಿಯರಾದ ಸ್ತ್ರೀಯರ ಜತೆ ವಿವಾಹ ಮಾಡಿಸಲಾಗುವುದು'.**

ಓದುತ್ತಲೇ ಮೆಹರುನ್ನೀಸಾ ರೋಮಾಂಚನಗೊಳ್ಳುವಳು. ತನ್ನ ಗಂಡನಿಗೆ ಈ ಎಲ್ಲ ಸುಖಗಳೂ ಸಿಗಲಿ ಎಂದು ಪ್ರಾರ್ಥಿಸುವಳು. ಆದರೆ ತನಗೆ? ಹೆಣ್ಣಾಗಿ ಹುಟ್ಟಿದವರು ಮಹಾ ಪಾಪಿಗಳು. ಪಾಪಿಗಳಿಗೆ ಅಂತಹ ಸುಖ ಎಲ್ಲಿ ಬರೆದಿದೆ?!

ಅಡುಗೆ ಮನೆಯಿಂದ ಸದ್ದು ಕೇಳಿಸಲಾರಂಭಿಸಿತು. ಕೈಜಮ್ಮನವರಿದ್ದಿರಬೇಕು. ಸಮದ್ ಏಳುವುದು ಯಾವಾಗಲೂ ತಡವೇ.

ಕನ್ನಡಿ ಕಪಾಟಿನ ಕೋಣೆಯಲ್ಲಿ ಕಿಟಿಕಿಯ ಬದಿಗೆ ಮಂಚದಲ್ಲಿ ಮಲಗುವ ಅವನ ಬೆನ್ನ ಮೇಲೆ ಬಿಸಿಲು ಕೋಲು ಉರುಟು ಚಂದ್ರನನ್ನು ಮೂಡಿಸುವುದನ್ನು ಸ್ವತಃ ಮೆಹರುನ್ನೀಸಾಳೇ ಹಲವು ಬಾರಿ ಕಂಡದ್ದುಂಟು. ಚಾವಡಿಯ ಮೂಲಕ ಅಂಗಳಕ್ಕೆ ಹಾದು ಹೋಗುವುದಾದರೆ ಪಕ್ಕದ ಕನ್ನಡಿ ಕಪಾಟಿನ ತೆರೆದ ಬಾಗಿಲಿನಿಂದ ಒಳಗಿನದೆಲ್ಲವನ್ನೂ ನೋಡಬಹುದು. ಗೋಂಕರು ಕಪ್ಪೆಯಂತೆ ಕಾಲಗಲಿಸಿ ಕವುಚಿ ಬಿದ್ದುಕೊಂಡವನನ್ನು ನೋಡುವಾಗಲೇ ನಾಚಿಕೆಯಾಗುತ್ತಿತ್ತು. ಈವತ್ತು ಕೂಡಾ ಹಾಗೆಯೇ ಬಿದ್ದುಕೊಂಡಿರಬಹುದೆ? ಮುಖ ನೋಡದೆ ನಾಲ್ಕು ತಿಂಗಳು ಹತ್ತು ದಿನಗಳಾಯಿತಲ್ಲ!

ಕೈಜಮ್ಮ ಅಡುಗೆ ಮನೆಯಿಂದಲೇ ಪ್ರಶ್ನಿಸಿದ್ದಳು. 'ಎದ್ದೀಯಾ ಮೋಳೇ?'

ಮೆಹರುನ್ನೀಸಾ ಉತ್ತರಿಸಬೇಕಾಗಿದ್ದಿರಲಿಲ್ಲ. ಇದ್ದತ್‌ಗೆ ಕೂತ ಬಳಿಕದ ಪ್ರತಿದಿನ ಬೆಳಿಗ್ಗೆಯೂ ಅವರು ಕೇಳುತ್ತಿದ್ದ ಪ್ರಶ್ನೆ ಅದು. ಆದರೆ ಇಂದೇಕೋ ಮೆಹರುನ್ನೀಸಾಳಿಗೆ ಉತ್ತರಿಸಬೇಕೆನ್ನಿಸಿತು. ತಾನಿಂದು ಈ ಕೋಣೆಯಿಂದ ಹೊರಗೆ ಹೋಗುವುದಾದರೆ



ಅದು ಪಾಪವಲ್ಲ. ಆದರೆ ಹೊರಗೆ ಹೋಗುವುದಾದರೂ ಎಲ್ಲಿಗೆ? ನೇರವಾಗಿ ಅಡುಗೆ ಮನೆಗೆ ಹೋಗಿ ಬಿಡಲೇ? ಕೈಜಮ್ಮನವರು ಏನೆಂದುಕೊಂಡಾರು? ಅವರೇ ಬಂದು ಕರೆಯಲಿ; ಮತ್ತೆ ಹೋದರಾಯಿತು. ಇನ್ನು ಹೆಚ್ಚೆಂದರೆ ಅರ್ಧ ತಾಸು. ಇದಿಷ್ಟು ದಿನ ಸಹಿಸಿದವಳಿಗೆ ಏನೂ ಕಷ್ಟವಾಗಲಿಕ್ಕಿಲ್ಲ. ಕುರಾನನ್ನು ಮಡಿಚಿ ಮುತ್ತಿಟ್ಟು ಮೇಜಿನ ಮೇಲೆ ಇರಿಸಿ ಅಂಗೈಗಳೆರಡನ್ನೂ ಕಣ್ಣಿಗೊತ್ತಿಕೊಂಡ ಮೆಹರುನ್ನೀಸಾ ಹಾಸಿಗೆಯ ಮೇಲೆ ಅಂಗಾತ ಬಿದ್ದುಕೊಂಡಳು.

ಹೊರಗೆ – ಚಾವಡಿಯಲ್ಲಿದ್ದಿರಬೇಕು; ಸಮದ್ ಜತೆಯಲ್ಲಿ ಕೈಜಮ್ಮನವರು ಮಾತನಾಡುತ್ತಿರುವುದು ಕೇಳಿಸಿದಂತಾಯಿತು. ಅಂಗಡಿಗೆ ಹೊರಡುವ ಹೊತ್ತೇನೂ ಆಗಿದ್ದಿರಲಿಲ್ಲ. ಆದರೂ ಆಸೆಯಿಂದ, ಬೀಗದ ಕೈಗೊಂಚಲು ಒಯ್ಯಲು ಕೈಜಮ್ಮ ಬರುವ ಹೆಜ್ಜೆಯ ಸದ್ದಿಗೆ ಕಿವಿಯಾನಿಸಿ ಕೂತಳು. ಕೈಜಮ್ಮನವರು ಬರಲಿಲ್ಲ. ಮುಂಬಾಗಿಲು ತೆರೆದು ಮುಚ್ಚಿದ ಸಪ್ಪಳ ಕೇಳಿಸಿದಾಗ ಮೆಹರುನ್ನೀಸಾಳಿಗೆ ಅಚ್ಚರಿ. ಸಮದ್ ಎಲ್ಲಿಗೆ ಹೊರಟಿರಬಹುದು?

ತಿಂಡಿಯ ತಟ್ಟೆ ಮತ್ತು ಚಹದ ಲೋಟಗಳೊಂದಿಗೆ ಕೈಜಮ್ಮನವರು ಕೋಣೆಗೇ ಬಂದಾಗ ಮೆಹರುನ್ನೀಸಾಳಿಗೆ ಗಲಿಬಿಲಿ. ತನ್ನ ಲೆಕ್ಕ ತಪ್ಪಾಗಿರಬಹುದೇ? ಕುರಾನು ಗ್ರಂಥದ ಪುಟಗಳಿಗೆ ದಿನವೂ ಗುರುತು ಮಾಡಿ ಇರಿಸುತ್ತಿದ್ದಳು. ಬೀಡಿ ಕಟ್ಟಲು ಕಲಿತಾಗ, ಆ ವಿದ್ಯೆ ಮೆಹರುನ್ನೀಸಾಳಿಗೆ ಕೂಡುವ ಲೆಕ್ಕ ಹೇಳಿಕೊಟ್ಟಿತ್ತು. ತನ್ನೆಣಿಕೆ ತಪ್ಪಾಗಿರಲು ಸಾಧ್ಯವೇ ಇಲ್ಲ. ಕೈಜಮ್ಮನವರಿಗೂ ಗೊತ್ತಿರಬೇಕಲ್ಲಾ? ಎರಡು ದಿನಗಳ ಹಿಂದೆ ಅವರೇ ಎಣಿಸಿ ನೆನಪಿಸಿದ್ದರು. ಹಾಗಾದರೆ ತನ್ನನ್ನೇಕೆ ಚಹ ಕುಡಿಯಲು ಅಡುಗೆ ಮನೆಗೆ ಕರೆಯಲಿಲ್ಲ? ಗಂಟಲವರೆಗೆ ನುಗ್ಗಿದ್ದ ಪ್ರಶ್ನೆಯನ್ನು ತುಟಿ ಕಚ್ಚಿ ಅದುಮಿ ತಿಂಡಿಯ ತಟ್ಟೆಗೆ ಕೈಹಾಕಿದಳು.

'ಮೆಂತೆಯ ದೋಸೆ ಪುತ್ತಬ್ಬನಿಗಂತೂ ಆಗುತ್ತಲೇ ಇರಲಿಲ್ಲ'. ಕೈಜಮ್ಮನವರು ಮಾತಿಗೆ ಮೊದಲಿಟ್ಟರು. 'ಸಮದ್‌ನಿಗಾದರೋ ಮೆಂತೆ ದೋಸೆಯೆಂದರೆ ಜೀವ. ನಿನ್ನೆ ತಂದುಕೊಟ್ಟು ಮಾಡಲು ಹೇಳಿದ್ದ. ಹೇಗಾಗಿದೆ ದೋಸೆ?' ಅಲ್ಲೇ ಇದ್ದ ಮೇಜಿಗೊರಗಿ ಕೂತು ಪ್ರಶ್ನಿಸಿದರು.

ಮೆಹರುನ್ನೀಸಾಳಿಗೆ ಅವರು ಮಾತು ಪ್ರಾರಂಭಿಸಿದಾಗಲೇ ಅನುಮಾನವಿತ್ತು; ಅವರು ಪ್ರಸ್ತಾಪಿಸಬೇಕಾಗಿರುವ ವಿಷಯ ಬೇರೇನೋ ಗಂಭೀರವಾದದ್ದೇ ಇದೆ ಯೆಂಬುದು. ತಲೆಯೆತ್ತಿ ಕೈಜಮ್ಮನವರ ಮುಖ ದಿಟ್ಟಿಸಿದ ಮೆಹರುನ್ನೀಸಾಳಿಗೆ ಅವರ ಕಣ್ಣುಗಳಲ್ಲಿ ಕಪಟವೇನೂ ಗೋಚರಿಸಲಿಲ್ಲ. ಆದರೂ ಮೆಹರುನ್ನೀಸಾಳಿಗೆ ಕುತೂಹಲ.

'ಸಮದ್ ಈವತ್ತು ಅಂಗಡಿಗೆ ಹೋಗುವುದಿಲ್ಲವಂತೆ. ಕಾಸರಗೋಡು ತನಕ ಹೋಗಿಬರುತ್ತಾನಂತೆ' ಕೈಜಮ್ಮನವರು ಅದೇನೂ ವಿಶೇಷವಲ್ಲ ಎಂಬಂತೆ ಸಹಜ ಧ್ವನಿಯಲ್ಲಿ ಹೇಳಿದ್ದರು.

'ಕಾಸರಗೋಡಿಗೆ! ಯಾಕಂತೆ?' ಮೆಹರುನ್ನೀಸಾ ಅಚ್ಚರಿಯ ಜತೆ ಅಸಹನೆ ಬೆರೆಸಿ ಪ್ರಶ್ನಸಿದ್ದಳು.

ಖಾಲಿ ತಟ್ಟೆ ಮತ್ತು ಗ್ಲಾಸುಗಳನ್ನು ಎತ್ತಿಕೊಳ್ಳುತ್ತಾ ಕೈಜಮ್ಮನವರು ಹೇಳಿದರು, 'ಇದ್ದತ್ ಅವಧಿಯ ಮೊದಲು ನಿನಗೆ ತಿಳಿಸಲೇಬಾರದೆಂದು ನನ್ನಲ್ಲಿ ಆಣೆ ಹಾಕಿಸಿದ್ದ. ಕಾಸರಗೋಡಿನ ಪಾರ್ಟಿಯವರು ಒಂದು ತಿಂಗಳಿನಿಂದ ಅವನಿಗೆ ಗಂಟು ಬಿದ್ದಿದ್ದಾರೆ. ನೀನೇ ಸ್ವತಃ ಕಾಸರಗೋಡಿಗೆ ಹೋಗಿ ಹುಡುಗಿಯನ್ನು ನೋಡಿ ಪಾಸ್ ಮಾಡಿದ ಬಳಿಕವೇ ಮುಂದಿನ ಮಾತು ಎಂದು ನನ್ನೆದುರೇ ಖಡಕ್ಕಾಗಿ ಹೇಳಿಬಿಟ್ಟಿದ್ದ. ಮುಂದಿನ ಗುರುವಾರ ತಪ್ಪಿದರೆ ಶುಕ್ರವಾರ ಹುಡುಗಿ ನೋಡುವ ಶಾಸ್ತ್ರ ಮುಗಿಸೋಣ ಅಂತ ಹೇಳಿಬರಲು ಹೋಗಿದ್ದಾನೆ. ನನ್ನದು ಈವತ್ತೋ ನಾಳೆಯೋ ಎಂದಾಗಿದೆ. ನಿನ್ನ ಸೊಸೆಯಾಗಿ ಈ ಮನೆಗೆ ಬರುವವಳು ಮೊದಲು ನಿನಗೊಪ್ಪಿಗೆಯಾಗಬೇಕು ನೋಡು. ಅವನು ಕೂಡಾ ಅದನ್ನೇ ಹೇಳಿದ್ದ. ನೀನು ಹುಂ ಎಂದು ಹೇಳಿದರೆ ಸಾಕು: ಹುಡುಗಿ ಹೇಗೆಯೇ ಇರಲಿ ಕುಂಟಿಯೋ – ಕುರುಡಿಯೋ ಹೇಗಿದ್ದರೂ ಸರಿಯೇ ಕಣ್ಣುಮುಚ್ಚಿ ನಿಕಾಹ್ ಮಾಡಿಕೊಳ್ಳುತ್ತೇನೆ ಎಂದಿದ್ದಾನೆ. ಏನೇ ಇರಲಿ ಈ ಕಾಲದಲ್ಲಿ ಸಮದ್‌ನಂತಹ ಹುಡುಗ ಸಿಕ್ಕಲು ಪುಣ್ಯ ಮಾಡಿರಬೇಕು ಅಲ್ವಾ?'

ಮೆಹರುನ್ನೀಸಾಳಿಗೆ ಪ್ರಜ್ಞೆಯೇನೂ ತಪ್ಪಲಿಲ್ಲ. ಒಂದು ಬಗೆಯ ಅರೆ ಎಚ್ಚರದಲ್ಲೇ ಅಲ್ಲಾಹುವನ್ನು ಪ್ರಾರ್ಥಿಸಿದಳು.

**ಓಹ್.... ಅಲ್ಲಾಹುವೇ!**
**ಕಾದು ಕೆಂಪು ಚರ್ಮದಂತಾದ ಆಗಸವನ್ನು**
**ಪಾಪಿಯಾದ ನನ್ನ ಮೇಲೆ ಬೀಳಿಸು.**
**ಕುದಿಯುವ ನೀರಿನಲ್ಲಿ ನನ್ನನ್ನು ನಡೆಸು.**
**ಸುಡುವ ಕರಗಿದ ತಾಮ್ರವನ್ನು ನನ್ನ ಮೇಲೆ**
**ಸುರಿದು ಬಿಡು...**



# ದೃಷ್ಟಿ

## 1

ಅಂದುಕಾಕನ ಚಹದಂಗಡಿಯಲ್ಲಿ ಪೊಡಿಯಜ್ಜನವರ ಜತೆ ಲಾಟು ಹೊಡೆಯುತ್ತಿದ್ದ ಸೈಯ್ಯದ್, ಕಿಟಿಕಿ ಸಂದಿಯಲ್ಲಿ ಕಣ್ಣು ತೂರಿದವನು 'ಅದ್ಯಾರಪ್ಪ ಈ ಹೊತ್ನಲ್ಲಿ ನಮ್ಮೂರಿಗೆ ಬರುತ್ತಿರುವುದು?' ಎಂದು ಉದ್ಗರಿಸಿದಾಗ, ಚಹದ ಗ್ಲಾಸುಗಳನ್ನು ತೊಳೆದಿರಿಸುತ್ತಿದ್ದ ಅಂದುಕಾಕ ಕುಳಿತಲ್ಲಿಂದಲೇ ಹೊರಳಿ ಗುಡ್ಡದ ಇಳಿಜಾರಿನಲ್ಲಿ ಕಣ್ಣು ಇಳಿಸಿದ. ಮುಸ್ಸಂಜೆಯ ಬೆಳಕಿನಲ್ಲಿ ಹಸಿರು ಹುಲ್ಲಿನ ಇಳಿಜಾರು ಹೆಚ್ಚು ಕಮ್ಮಿ ನೀಲಿ ಬಣ್ಣಕ್ಕೆ ತಿರುಗಿತ್ತು.

ಭುಜದಲ್ಲೊಂದು ಭರ್ಜರಿಯಾದ ಚರ್ಮದ ಚೀಲವನ್ನು ತೂಗುಹಾಕಿ, ಬಲಗೈಯಲ್ಲಿ ಭಾರಿ ಸೂಟ್‌ಕೇಸನ್ನು ಎತ್ತಿಕೊಂಡು ತನ್ನ ಹೋಟೆಲಿನ ದಿಕ್ಕಿಗೇ ಹೆಜ್ಜೆಯೆತ್ತುತ್ತಿರುವ ಪ್ಯಾಂಟುಧಾರಿಯನ್ನು ಕಂಡಾಗ ತುಸು ಅನುಮಾನವುಂಟಾದರೂ ಅದನ್ನು ತೋರಬಯಸದ ಅಂದುಕಾಕ, 'ಯಾರು ಬಂದರೂ ನನ್ನ ಹೋಟೆಲಿಗೆ ಬಂದೇ ತೀರಬೇಕು. ಬಂದಾಗ ಗೊತ್ತೇ ಆಗುತ್ತದೆ' ಎನ್ನುತ್ತಾ ನಿರುತ್ಸಾಹ ನಟಿಸಿದ.

ಬೆಂಚಿನ ಮೇಲೆ ಚಕ್ಕಳಮಕ್ಕಳ ಕುಳಿತು ಕಂಬಕ್ಕೊರಗಿದ್ದ ಪೊಡಿಯಜ್ಜನವರು ನಿಧಾನವಾಗಿ ಕಾಲು ಬಿಡಿಸಿಕೊಂಡು ನೆಲಕ್ಕಿಳಿದು ಊರುಗೋಲಿನ ಬಲದಿಂದ ಬೆನ್ನನ್ನು ನೆಟ್ಟಗೆ ನಿಲ್ಲಿಸಿ ಬಾಗಿಲ ಬಳಿಗೆ ನಡೆದವರು ತಮ್ಮ ದಪ್ಪಗಾಜಿನ ಕನ್ನಡಕದ ಮೂಲಕ ಗುಡ್ಡದ ಇಳಿಜಾರನ್ನೆಲ್ಲ ದೃಷ್ಟಿಯಲ್ಲೇ ಸವರಿದರು. ನಸುಗತ್ತಲಿನ ನಡುವೆ ಮಸುಕಾಗಿ ಚಲಿಸುತ್ತಿದ್ದ ಆಕೃತಿಯನ್ನು ತಮ್ಮ ನೆನಪುಗಳ ಜತೆ ಕೂಡಿಸಿ – ಕಳೆದು 'ಅದು ಫಾರೆಸ್ಟಿ

ನವರಲ್ವಾ?' ಎನ್ನುತ್ತಾ ಪಕ್ಕದಲ್ಲಿ ಬಂದು ನಿಂತಿದ್ದ ಸೈಯದ್‌ನನ್ನು ಅನುಕಂಪದಿಂದೆಂಬಂತೆ ನೋಡಿದರು.

ಸೈಯ್ಯದ್‌ನ ಎದೆಗೆ ಹುಲಿ ಹಾರಿದಂತಾಗಿ 'ಧಸಕ್' ಎಂದಿತು. ಅಪಾಯವನ್ನು ನಿರಾಕರಿಸುವ ಆಸೆಯಿಂದ ತಕ್ಷಣ ಸಾವರಿಸಿಕೊಂಡು ಬಾಗಿಲ ಮರೆಯಿಂದಲೇ ಬರುತ್ತಿರುವವರನ್ನು ಪರೀಕ್ಷಿಸುತ್ತಾ ತನಗೆ ತಾನೇ ಧೈರ್ಯ ಹೇಳುವವನಂತೆ, 'ಫಾರೆಸ್ಟಿನವರಂತೆ! ಹ್ಞೆ! ಅಂಬಟೆಕಾಯಿ, ಎದುರು ನಿಂತವರ ಗುರ್ತ ಆಗಲೂ ನಿಮಗೆ ಕಾಲು ಗಂಟೆ ಬೇಕು. ಅಂಥಾದ್ರಲ್ಲಿ ಫರ್ಲಾಂಗ್ ದೂರದಿಂದ ಎಂತ ಕಂಡೀತು ಮಣ್ಣಾಂಗಟ್ಟಿ?' ಎಂದು ಗೊಣಗಿದ. ಕಳೆದ ವಾರದಲ್ಲಷ್ಟೇ ಅಕ್ಕನ ಒತ್ತಾಯಕ್ಕೆ ಕಟ್ಟುಬಿದ್ದು ಹೊಳೆಬದಿಯ ಕಾಡಿನಿಂದ ಆರು ತುಂಡು ಬಿದಿರು ಕಡಿದು ತಂದದ್ದು ಪೊಡಿಯಜ್ಜನವರಿಗೂ ತಿಳಿದು ಹೋಗಿದೆಯೆಂಬುದು ಸೈಯ್ಯದ್‌ನಿಗೂ ಗೊತ್ತು.

ಸೈಯ್ಯದ್ ಹೆದರಿದ್ದಾನೆ ಎಂಬುದನ್ನು ಖಾತರಿಪಡಿಸಿಕೊಂಡ ಪೊಡಿಯಜ್ಜನವರು, 'ಹೂಂ...ಹೂಂ! ನಾಲಗೆ ಬಾರಿ ಉದ್ದ ಮಾಡುವುದು ಬೇಡ. ನನ್ನ ಪ್ರಾಯವಾದಾಗ ನಿನಗೆ ಹೆಂಡತಿ ಯಾರು, ತಾಯಿ ಯಾರು ಅಂತ ಕಾಣಲಿಕ್ಕಿಲ್ಲ' ಎಂದು ಮತ್ತಷ್ಟು ಚುಚ್ಚಿದರು.

'ಮತ್ತೆ ಸುರು ಮಾಡಿದ್ರಲ್ಲಾ ಬದರ್ ಯುದ್ಧ!? ಮಾಡಲು ಮುಕ್ಕಾಲಿನ ಕೆಲಸವಿಲ್ಲದಿದ್ರೆ ಹೀಗೇ ಆಗುವುದು. ಹೌದಾ ಸೈಯ್ಯದ್, ನಿನ್ನ ತಂದೆಯ ಪ್ರಾಯವಾಯ್ತು ಅವರಿಗೆ. ಹೀಗಾ ಮಾತಾಡುವುದು?' ಅಂದುಕಾಕ ಸೈಯ್ಯದ್‌ನನ್ನು ತರಾಟೆಗೆ ತೆಗೆದುಕೊಂಡ. ಅವನು ಯಾವಾಗಲೂ ಹಾಗೆಯೇ. ಜಗಳವೆಂದರೆ ಮಾರುದೂರ, ಆದ್ದರಿಂದಲೇ ಎಲ್ಲಿಂದಲೋ ಬಂದು ಮುತ್ತುಪ್ಪಾಡಿಯಲ್ಲಿ ಚಹದಂಗಡಿ ತೆರೆದಿದ್ದ ಅದ್ದು, ಎಲ್ಲರಿಗೂ ಪ್ರೀತಿಯ 'ಅಂದುಕಾಕ' ಎನ್ನಿಸಿಕೊಂಡದ್ದು.

ಅಂದುಕಾಕ ಹೇಳಿದಂತೆ, ಮುತ್ತುಪ್ಪಾಡಿಗೆ ಹೊಸಬರು ಯಾರೇ ಬರಲಿ, ಆತನ ಚಹದಂಗಡಿಗೆ ಬಾರದೆ ಹೋಗುವುದಿಲ್ಲ. ಪೋಸ್ಟ್‌ಮೇನು ಕಾಗದ ಬಟವಾಡೆ ಮಾಡುವುದೂ ಇದೇ ಹೋಟೆಲಿನಲ್ಲಿ. ರಾಜರಸ್ತೆಯ ಪಕ್ಕದಲ್ಲೇ ಇರುವ ಗುಡ್ಡದ ನೆತ್ತಿಯ ಮೇಲಿನ ಬೊಟ್ಟಂತಿರುವ ಈ ಹೋಟೆಲು ಟಾರು ರೋಡಿನಲ್ಲಿ ನಿಂತು ನೋಡಿದರೆ ಕಾಣಿಸಲಿಕ್ಕಿಲ್ಲ. ಡಾಮರು ರಸ್ತೆಗೆ ಲಂಬವಾಗಿರುವ ಕಣಿವೆಯಂತಹ ಕಾಲು ಹಾದಿಯಲ್ಲಿ ನೂರು ಮಾರು ನಡೆದು ಬಲಕ್ಕೆ ತಿರುಗಿದರೆ, ಗುಡ್ಡದ ಇಳಿಜಾರಿನಲ್ಲಿರುವ ಎಂಟು ಸಾಲು ಜನತಾ ಮನೆಗಳಿಗೆ ಕಿರೀಟವಿಟ್ಟಂತೆ ಅಂದುಕಾಕನ ಹೋಟೆಲು ಕಾಣಿಸುತ್ತದೆ. ಪಂಚಾಯಿತಿಯ ಪುಸ್ತಕದಲ್ಲಿ ಈ ಗುಡ್ಡವೂ ಮುತ್ತುಪ್ಪಾಡಿಗೆ ಸೇರಿದೆಯಾದರೂ, ನಿಜವಾದ



ಊರು ಆರಂಭವಾಗುವುದು ಜುಮ್ಮಾಮಸೀದಿಯ ಕೆರೆಯ ಬಳಿಯಿಂದ. ರಾಜರಸ್ತೆಯಿಂದ ಜುಮ್ಮಾ ಮಸೀದಿಗೆ ಏನಿಲ್ಲವೆಂದರೂ ಅರ್ಧಮೈಲು ನಡೆಯಬೇಕಾದೀತು. ಫಾರೆಸ್ಟಿನವರು ಡಾಮರು ರಸ್ತೆಯ ಬದಿಗಳಲ್ಲಿ ನೆಟ್ಟಿರುವ ಸುಬಾಬುಲ್‌ಗಳು ಎಂದು ಕೂಡಾ ಸೊಂಟ ಮೇಲೆ ಬೆಳೆಯದ್ದರಿಂದ ಬಸ್ಸು ಕಾಯುವವರು ನೆರಳು ಕುಡಿಯಬೇಕಾದರೂ ಅಂದುಕಾಕನ ಹೋಟೆಲಿಗೇ ಓಡಬೇಕು. ಎಂಟು ಜತೆ ಬೆಂಚುಗಳ ಆ ಪುಟ್ಟ ಹೋಟೆಲು ಮುತ್ತುಪ್ಪಾಡಿಯ ಎರಡನೆಯ ಪಂಚಾಯತು ಕಟ್ಟೆಯೆಂದರೂ ತಪ್ಪಾಗುವುದಿಲ್ಲ. ಊರೊಳಗಿನ ಚಿಕ್ಕಪುಟ್ಟ ರಗಳೆಗಳು – ಅವು ಜಮಾತ್ ಪ್ರೆಸೀಡೆಂಟರ ಯೋಗ್ಯತೆಗೆ ಕಿರಿದಾಗಿದ್ದರೆ – ಅಂಥವುಗಳನ್ನೆಲ್ಲ ಪೊಡಿಯಜ್ಜನವರ ಸಮ್ಮುಖದಲ್ಲಿ ಅಂದುಕಾಕನೇ ತೀರ್ಮಾನಿಸಿಬಿಡುತ್ತಿದ್ದ. ಅಂದುಕಾಕನ ಪ್ರಭಾವ ಅಂಥದ್ದು.

ನಲವತ್ತಕ್ಕೆ ದಾಪುಗಾಲು ಹಾಕುತ್ತಿರುವ ಅಂದುಕಾಕ ಮನಸ್ಸು ಮಾಡಿರುತ್ತಿದ್ದರೆ ಮುತ್ತುಪ್ಪಾಡಿಯ ಅಳಿಯನೆನ್ನಿಸಿಕೊಳ್ಳುತ್ತಿದ್ದದ್ದು ಚಹಕ್ಕೆ ನೀರು ಕುದಿಸಿದಷ್ಟೇ ಸುಲಭವಿತ್ತು. ಹಾಗೆ ಹೇಳುವುದಾದರೆ ಪೊಡಿಯಜ್ಜನವರ ಎರಡನೇ ಮಗಳನ್ನು ಅಂದುಕಾಕನಿಗೆ ಕೊಡುತ್ತಾರೆಂಬ ಪುಕಾರು ಎದ್ದದ್ದೂ ಉಂಟು. ಆದರೆ ಈ ಸುದ್ದಿ ಬಲಿಯುವ ಮೊದಲೇ ತಲೆ ಓಡಿಸಿದ ಅಂದುಕಾಕ ತಾನೇ ಮುತುವರ್ಜಿ ವಹಿಸಿ ಘಟ್ಟಕ್ಕೆ ಕೂಲಿಯಾಳುಗಳ ಕಂತ್ರಾಟು ಮಾಡುತ್ತಿದ್ದ ಇಸ್ಮಾಲಿಗೆ ಪೊಡಿಯಜ್ಜನವರ ಮಗಳನ್ನು ಗಂಟು ಹಾಕಿದ್ದ. ಆ ಬಳಿಕವಂತೂ ಪೊಡಿಯಜ್ಜನವರು ಹಗಲಿನ ಬಹುಭಾಗವನ್ನು ಅಂದುಕಾಕನ ಚಹದಂಗಡಿಯಲ್ಲೇ ಕಳೆಯತೊಡಗಿದ್ದರು. ಕಾಗೆ ಓಡಿಸುವುದರಿಂದಾರಂಭಿಸಿ ಮಂಡದಲ್ಲಿ ಕೂತು ಕ್ಯಾಷ್ ತೆಗೆದುಕೊಳ್ಳುವವರೆಗೆ ಅವರು ಕೆಲಸ ವಹಿಸಿಕೊಳ್ಳುತ್ತಿದ್ದರು. ಹಿರಿ ಮಗಳ ಗಂಡ ಮಸ್ಕತ್‌ನಿಂದ ಪ್ರತಿ ತಿಂಗಳೂ ಡ್ರಾಫ್ಟು ಕಳಿಸುತ್ತಿದ್ದರಿಂದ ಎರಡು ಹೊತ್ತು ಮೀನುಸಾರಿನ ಊಟಕ್ಕೆ ತಾಪತ್ರಯವಿರಲಿಲ್ಲ.

ಅಂದುಕಾಕನ ಮಾತು ಎಂದೂ ಸುಳ್ಳಾದುದಿಲ್ಲ. ಹೋಟೆಲಿನೊಳಗೆ ಕಾಲಿಟ್ಟ ಆರಡಿ ಎತ್ತರದ ತೆಳ್ಳಗಿನ ಯುವಕ ಅತ್ತಿತ್ತ ಕಣ್ಣಾಡಿಸುತ್ತಾ ತನ್ನ ಹೊರೆಗಳನ್ನು ನೆಲದ ಮೇಲಿರಿಸಿ ಬೆಂಚಿನ ಮೇಲೆ ಕುಳಿತ. ಜೇಬಿನಿಂದ ಕರವಸ್ತ್ರ ತೆಗೆದು ಕತ್ತಿನ ಭಾಗದ ಬೆವರು ಒರೆಸಿಕೊಳ್ಳುವಾಗ ಆತನ ಎಡಗೈಯಲ್ಲಿದ್ದ ಬಂಗಾರದ ಬಣ್ಣದ ವಾಚು ಮುಸ್ಸಂಜೆಯ ಬೆಳಕಲ್ಲೂ ಸೈಯ್ಯದನ ಕಣ್ಣೊಳಗೆ ಮಿನುಗಿತು. ಆದರೆ ಹೊಸಬನ ಪ್ರವೇಶವನ್ನೇ ಮರೆತವರಂತೆ ಪೊಡಿಯಜ್ಜನವರು ಬೆಂಚಿನ ಮೇಲೆ ತಲೆ ತಗ್ಗಿಸಿ ಕೂತು ಬಾಯೊಳಗೆ ಮಣಮಣ ಮಾಡಲಾರಂಭಿಸಿದ್ದನ್ನು ಗಮನಿಸಿದ ಸೈಯ್ಯದ್‌ನ ಹುಬ್ಬು ಮೇಲೇರಿತು.

ಬಂದವನನ್ನು ವಾರೆನೋಟದಲ್ಲೇ ಪರೀಕ್ಷಿಸುತ್ತಿದ್ದ ಅಂದುಕಾಕನ ಹೊಟ್ಟೆಯೊಳಗೆ ಹಾಲು ಕುದಿದು ಉಕ್ಕಲಾರಂಭಿಸಿತು. ಕುಕ್ಕುರುಗಾಲು ಹಾಕಿ ಕೂತು ಒಲೆಯೊಳಗೆ ಬಿದಿರು ತುಂಡು ತುರುಕುತ್ತಿದ್ದವನ ಬೆರಳುಗಳು ನಡುಗಲಾರಂಭಿಸಿದ್ದವು. ನಿಟ್ಟುಸಿರು ಬಿಟ್ಟು ಎದ್ದು ಚಹದ ಮೇಜು ದಾಟಿ ಯುವಕನ ಬಳಿಗೆ ಬಂದು, 'ಯಾವಾಗ ಬಂದದ್ದು?' ಎಂದು ಪ್ರಶ್ನಿಸಿದ; ತನ್ನ ಧ್ವನಿಯ ನಿರುತ್ಸಾಹವನ್ನು ಅಡಗಿಸಲು ಪೆಚ್ಚು ಪೆಚ್ಚಾಗಿ ನಕ್ಕ. ತನ್ನ ನಗು ಕೂಡಾ ಅಸಹಜವಾಯಿತೆಂದು ತಕ್ಷಣ ಗ್ರಹಿಸಿದ ಅಂದುಕಾಕ, ಯುವಕನಿಂದ ಮುಖ ಮರೆಸುತ್ತಾ ಪೊಡಿಯಜ್ಜನವರತ್ತ ತಿರುಗಿ, 'ನೆನಪುಂಟಾ ಪೊಡಿಯಜ್ಜಾ....? ಫಕೀರ್ ಸಾಹೇಬರ ಅಳಿಯ ಸುಲೇಮಾನನ ಗುರ್ತ ಇರಬೇಕಲ್ಲ ನಿಮಗೆ?' ಎಂದು ಪ್ರಶ್ನಿಸಿದ.

'ಇಲ್ಲದೆ ಉಂಟ ಅಂದು? ಫಕೀರಬ್ಬನ ಮುಖ ದಿನಾಲು ಕಾಣ್ತಿರುವಾಗ ಇವ್ನನ್ನು ಮರೆಯುವುದುಂಟಾ?' ಒಗಟಿನಂತೆ ಮಾತನಾಡಿದ ಮುದುಕನ ನಿರಾಸಕ್ತಿ ಅಂದುಕಾಕ ನನ್ನು ಮತ್ತಷ್ಟು ಕಂಗಾಲು ಮಾಡಿತು. ಯುವಕನ ಮುಖದಲ್ಲೂ ಮುಜುಗರದ ಬುರ್ಖಾವನ್ನು ಗಮನಿಸಿದ ಅಂದುಕಾಕ, 'ಒಂದೇ ಒಂದು ಮಿನಿಟ್ ಸುಲೇಮಾನ್, ಫಸ್ಟ್‌ಕ್ಲಾಸ್ ಕೇಟಿ ಹೊಡೆದು ಕೊಡ್ತೇನೆ. ಮತ್ತೊಮ್ಮೆ ಮಸ್ಕತ್‌ಗೆ ಹೋದ ಮೇಲೂ ನನ್ನ ನೆನಪಾಗಬೇಕು' ಎನ್ನುತ್ತಾ ಒಲೆಯತ್ತ ಧಾವಿಸಿದ.

ಪಾಟೆಯಲ್ಲಿ ಕುದಿವ ನೀರನ್ನೆತ್ತಿಕೊಳ್ಳುವಾಗ ಫಕೀರ್ ಸಾಹೇಬರ ಗುಂಡಿಗಿಳಿದ ಕಣ್ಣುಗಳು ಉಗಿಯ ನಡುವೆ ಕಾಣಿಸಿಕೊಂಡು ಹೊಟ್ಟೆಯೊಳಗೆ ಚಹದ ಕರಟ ತುಂಬಿ ಕೊಂಡಂತೆ ಸಂಕಟವಾಯಿತು. ಇಂದು ರಾತ್ರಿ ಸಾಹೇಬರ ಮನೆಯಲ್ಲಿ ನಡೆಯಬಹುದಾದ ಸೈತಾನನ ಉಪದ್ರವವನ್ನು ಊಹಿಸಲೂ ಭಯವಾಯಿತು. ಹೇಗಾದರೂ ಮಾಡಿ ಇವನನ್ನು ಮಾತಿಗೆಳೆಯುತ್ತಾ ರಾತ್ರಿ ಮಾಡಿ, ಆತನ ಜತೆಗೆ ತಾನೂ ಫಕೀರ್ ಸಾಹೇಬರ ಮನೆಗೆ ಹೋಗುವುದೆಂದು ತೀರ್ಮಾನಿಸಿದ ಅಂದುಕಾಕ, ಚಹದ ಕರಟವನ್ನು ಹೊರ ಗೆಸೆಯುವವನಂತೆ ಹೋಟೆಲಿನ ಹಿಂಭಾಗಕ್ಕೆ ನಡೆದವನು, ಅಲ್ಲಿಂದಲೇ ಸೈಯ್ಯದ್‌ನನ್ನು ಕೂಗಿ ಕರೆದ.

ಅಚ್ಚರಿಯ ಮುಖ ತುಂಬ ಕಣ್ಣರಳಿಸಿಕೊಂಡು ಬಂದ ಸೈಯ್ಯದ್‌ನ ಹೆಗಲ ಮೇಲೆ ಕೈಯಿರಿಸಿದ ಅಂದುಕಾಕ, ಬಹಳ ಗುಟ್ಟು ಎಂಬಂತೆ ಹೇಳಿದ, 'ನೀನೊಂದು ಕೆಲಸ ಮಾಡಬೇಕು. ಸೀದಾ ಫಕೀರ್ ಸಾಹೇಬರ ಮನೆಗೇ....' ಎಂದವನು ಮಾತು ತಿದ್ದಿಕೊಳ್ಳುವವನಂತೆ 'ಅಲ್ಲ, ಮೊದಲು ಮಸೀದಿಗೆ ಹೋಗಿ ಮೌಲ್ವಿಯವರನ್ನು ಕಂಡು ರಾತ್ರಿ ಊಟಕ್ಕೆ ಸಾಹೇಬರ ಮನೆಗೆ ಬರಬೇಕಂತೆ ಅಂತ ಹೇಳು. ಇವ್ನು ಮನೆ ಹೊಕ್ಕಿದಾಗ ನಾಲ್ಕು ಮಂದಿ ದೊಡ್ಡವರು ಇರುವುದು ಒಳ್ಳೆಯದು. ಅಲ್ಲಿಂದ ಸೀದಾ ಸಾಹೇಬ್ರ ಮನೆಗೆ ಹೋಗಿ ಸಂಗ್ತಿ ಹೇಳು. ಹಾಗಂತ ಗಾಬರಿಯಾಗುವುದು ಬೇಡ. ಅದೇನಂತಹ ಆನೆ ಕುದ್ರೆ ಆಗಲಿಕ್ಕಿಲ್ಲ ಅಂತ ಹೇಳು. ಹಾಂ! ಅಂದ ಹಾಗೆ ಒಂದು ಮಾತು. ಮಗುವಿಗೆ ಒಳ್ಳೆ ಅಂಗಿ ಚಡ್ಡಿ ಹಾಕಿ ಒಳಗೆ ತೊಟ್ಲಲ್ಲಿ ನಿದ್ರೆ ಮಾಡಿಸಲಿ. ನಾನು ಈ ಮದುಮಗನನ್ನು ರಾತ್ರಿ ಊಟದ ಹೊತ್ತಿಗೆ ಕರ್ಕೊಂಡು ಬರ್ತೇನೆ. ಬಾಕಿದ್ದು ಅಲ್ಲಾಹು ಇಟ್ಟ ಹಾಗೆ ಆಗ್ತದೆ'.

ಎಲ್ಲವನ್ನೂ ಅರ್ಥಮಾಡಿಕೊಳ್ಳುವವನಂತೆ ಮುಖದಲ್ಲಿ ಭರವಸೆಯನ್ನು ತುಂಬಿ ಕೊಂಡ ಸೈಯ್ಯದ್ ಅಂದುಕಾಕನತ್ತ ಧೈರ್ಯದ ನೋಟ ಬೀರುತ್ತಾ ಗುಡ್ಡ ಇಳಿಯ ತೊಡಗಿದಾಗ ಸೂರ್ಯ ಪೂರ್ತಿ ಮುದಿಯಾಗಿದ್ದ.

## 2

ಮಂಡಲ ಪಂಚಾಯತಿಗೆ ಓಟು ಹಾಕಿದ್ದು. ಸಾಲಮೇಳದಲ್ಲಿ ಐಸಾಬಿಯ ಬುರ್ಖಾದ ಫೋಟೋ ಮಿನಿಷ್ಟ್ರ ಜೊತೆಯಲ್ಲಿ ಪೇಪರ್‌ನಲ್ಲಿ ಬಂದದ್ದು. ಶೆಟ್ಟರ ತೋಟಕ್ಕೆ ಕಳ್ಳರು ನುಗ್ಗಿದ್ದು – ಹೀಗೆ, ಆ ಮಾತು ಈ ಮಾತುಗಳ ಎಳೆಗಳಲ್ಲಿ ಸುಲೇಮಾನ್‌ನನ್ನು ಪೂರ್ತಿ ಕತ್ತಲಾಗುವವರೆಗೆ ಚಹದಂಗಡಿಯಲ್ಲೇ ಕಟ್ಟಿಹಾಕುವುದು ಅಂದುಕಾಕನಿಗೆ ಎಣಿಸಿದಷ್ಟು ಕಷ್ಟವೇನೂ ಆಗಲಿಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ಅಂದುಕಾಕನಿಗೇ ಅಚ್ಚರಿಯಾಗುವಂತೆ ಗುಡ್ಡದ ಮೇಲಿನಿಂದ ಕಾಡಿನ ನಡುವೆ ಜಾರುವ ಸೂರ್ಯನನ್ನು ನೋಡುವ ನೆವದಿಂದ ಪೊಡಿಯಜ್ಜನವರನ್ನು ಜತೆ ಮಾಡಿಕೊಂಡು ಹೋದ ಸುಲೇಮಾನ್ ಒಂದು ತಾಸಿಗಿಂತಲೂ ಹೆಚ್ಚು ಹೊತ್ತು ಮಾಡಿಕೊಂಡು ಬಂದಿದ್ದ. ಪೊಡಿಯಜ್ಜನವರನ್ನು ಕಾಣದ ಅಂದುಕಾಕನ ಕಣ್ಣುಗಳಲ್ಲಿ ಪ್ರಶ್ನೆ ಮೂಡುವ ಮೊದಲೇ ಸುಲೇಮಾನ್ 'ಅವರು ಅಲ್ಲಿಂದಲೇ ಮಸೀದಿಗೆ ಹೋದರು' ಎಂದು ಚುಟುಕಾಗಿ ಹೇಳಿ ಅಂದುಕಾಕನನ್ನು ಮತ್ತಷ್ಟು ಗೊಂದಲಕ್ಕೆ ತಳ್ಳಿದ್ದ.

ಬೇರೆ ಗಿರಾಕಿಗಳಿಗೆ ಚಹ ಮಾಡುತ್ತಿರುವಾಗಲೂ ಅಂದುಕಾಕ ಕಿವಿ ತೆರೆದುಕೊಂಡೇ ಸುಲೇಮಾನ್‌ನ ಕಾವಲು ನಡೆಸಿದ್ದ, ಹೊಸಬರ ಜತೆ ಸುಲೇಮಾನ್ ಪರಿಚಯವಾಗು ತ್ತಿದ್ದಂತೆ ಅಂದುಕಾಕ ಎಲ್ಲರನ್ನೂ ಮಾತಿಗೆಳೆಯುತ್ತಿದ್ದ. 'ಇನ್ನು ಹೊರಡುವನಾ?' ಎಂದು ಸುಲೇಮಾನ್ ಹೇಳಿದಾಗಲೆಲ್ಲ, 'ನಿನ್ನನ್ನು ಮನೆಗೆ ಮುಟ್ಟಿಸುವ ಕೆಲಸ ನನ್ನದು; ಆಯ್ತಲ್ಲಾ? ಈ ಕತ್ತಲಲ್ಲಿ ಅದೂ, ಆ ಎರಡೂ ಬ್ಯಾಗುಗಳನ್ನು ಹೊತ್ಕೊಂಡು ನೀನು ಒಬ್ನೇ ಒಂದು ಮೈಲು ನಡೀಲಿಕ್ಕುಂಟಾ? ಅಲ್ಲಿ ತನಕ ಕಾರು ಹೋಗ್ತಿದ್ರೆ ನೀನು ನನ್ನ

ಹೋಟೆಲಿಗೆ ಬರ್ಲಿಕ್ಕಿತ್ತಾ? ಹೌದಾ ಅಲ್ವಾ ಹೇಳು. ರಾತ್ರಿ ನಮಾಜಿನ ಬಾಂಗ್ ಕೇಳಿಸಿದ ಕೂಡ್ಲೆ ಹೊರಡುವ, ಆಯ್ತಲ್ಲಾ? ನನಗೆ ನಿನ್ನ ಹತ್ರ ಬಾರಿ ಮಾತಾಡ್ಲಿಕ್ಕುಂಟು. ಒಮ್ಮೆ ನೀನು ಅಲ್ಲಿಗೆ ನುಗ್ಗಿ ಬಿಟ್ಟೆ ಅಂತ ಆದ್ರೆ ನನ್ನಲ್ಲಿ ಮತ್ತೆ ನೀನು ಮಾತಾಡ್ತಿ ಅಂತ ಏನು ಗ್ಯಾರಂಟಿ? ನಿನ್ನ ಆ ದುಬೈ ಮಸ್ಕತ್ ಎಲ್ಲ ನಾನು ಕನಸು ಕಾಣ್ಲಿಕ್ಕುಂಟಾ? ಹೌದಾ ಸುಲೇಮಾನ್? ಅಲ್ಲಿಗೆ ಮಕ್ಕಮದೀನ ಎಲ್ಲ ಬಾರಿ ಹತ್ರ ಅಂತ ಹೌದಾ?' ಅನ್ನುತ್ತಾ ಒಂದೇ ಸವನೆ ಅಂದುಕಾಕ ಮಾತು ಬೆಳೆಸುತ್ತಿದ್ದ. ಸುಲೇಮಾನ್ ಉತ್ತರಿಸಲಿ, ಬಿಡಲಿ ಅದರ ಗಣನೆಯೇ ಇಲ್ಲದವನಂತೆ ಮಾತು ಉದುರಿಸುತ್ತಲೇ ಇದ್ದ. ಆದರೆ ಫಕೀರ್ ಸಾಹೇಬರ ಮನೆಯ ಬಗ್ಗೆ ಮಾತು ಸುಳಿದಾಗಲೆಲ್ಲ 'ಹೆ...ಹೇ...' ಎಂದು ನಗುತ್ತಾ ಅದೊಂದು ಮುಖ್ಯ ಸಂಗತಿಯೇ ಅಲ್ಲವೆಂಬಂತೆ ತೇಲಿಸುತ್ತಾ ಹೊಸ ವಿಷಯಕ್ಕೆ ನಾಲಗೆ ಹಾಕುತ್ತಿದ್ದ.

ರಾತ್ರಿ ನಮಾಜಿನ ಬಾಂಗ್ ಕೇಳಿಸಿದಾಗ ಚಂದ್ರ ಮೂವತ್ತು ಮಾರು ಮೇಲೇರಿದ್ದ. ಸುಲೇಮಾನ್ ಕೇಳುವ ಮೊದಲೇ ಹೊರಡುವ ಸೂಚನೆ ನೀಡಿದ ಅಂದುಕಾಕ ಒಲೆಯಲ್ಲಿದ್ದ ಕೆಂಡವನ್ನೆಲ್ಲ ಹೊರಗೆ ಎಳೆದು ಹಾಕಿ ನೀರು ಚಿಮುಕಿಸಿದ. ಪಾತ್ರೆಗಳನ್ನೆಲ್ಲ ಓರಣವಾಗಿಟ್ಟು ಕೈಕಾಲು ತೊಳೆದುಕೊಂಡ ಅಂದುಕಾಕ, ಅಲ್ಲೇ ಗೂಟದಲ್ಲಿ ತೂಗುತ್ತಿದ್ದ ಅಂಗಿಯನ್ನು ತೊಟ್ಟುಕೊಂಡ. ಮೇಜಿನ ಡ್ರಾಯರ್‌ನಿಂದ ನೋಟುಗಳನ್ನು ಹೆಕ್ಕಿ ಅಂಗಿ ಜೇಬು ಸೇರಿಸಿ, ಟಾರ್ಚ್ ತೆಗೆದು ಸುಲೇಮಾನ್‌ನ ಕೈಗಿತ್ತ. ಸುಲೇಮಾನ್‌ನ ಎರಡೂ ಬ್ಯಾಗುಗಳನ್ನೆತ್ತಿ ಹೊರಗಿರಿಸಿದ. ಸುಲೇಮಾನ್‌ನನ್ನು ಹೊರಡಲು ತಿಳಿಸಿ ಗ್ಯಾಸ್‌ಲೈಟಿನ ಗಾಳಿ ಪಿನ್ ತಿರುಗಿಸಿದಾಗ ದೊಪ್ಪನೆ ಕತ್ತಲು ಮೈಮೇಲೆ ಬಿತ್ತು. ಬಾಗಿಲೆಳೆದುಕೊಂಡು ಬೀಗ ಜಡಿದು, ಸುಲೇಮಾನ್ ಎಷ್ಟು ತಡೆದರೂ ಒಪ್ಪದೆ ಎರಡೂ ಬ್ಯಾಗುಗಳನ್ನು ತಲೆಯ ಮೇಲೆ ಹೊತ್ತ ಅಂದುಕಾಕ, 'ನೀನು ಎದುರಿನಿಂದ ಹೋಗು' ಎಂದ. ಟಾರ್ಚ್ ಬೆಳಗಿಸುತ್ತಾ ಹೆಜ್ಜೆ ಬದಲಿಸಲಾರಂಭಿಸಿದ ಸುಲೇಮಾನ್‌ನ ಬೆನ್ನು ನೋಡುತ್ತಾ ಅಂದುಕಾಕ ಒಂದೊಂದೇ ಹೆಜ್ಜೆ ಇಳಿಯತೊಡಗಿದ.

ಹೋಟೆಲಿನಿಂದ ಫಕೀರ್ ಸಾಹೇಬರ ಮನೆಗೆ ಮಾತನಾಡುತ್ತಾ ನಡೆದರೆ ಅರ್ಧ ತಾಸಿನ ಹಾದಿ. ಮಾದರಿ ಶಾಲೆಯ ಬಾವಿಯನ್ನು ಬಳಸಿಕೊಂಡು ಇಳಿದು, ಮಸೀದಿ ಗುಡ್ಡೆಯ ಎಡಕ್ಕೆ ತೋಡಿಗಡ್ಡವಾಗಿರುವ ಕೈಸಂಕ ದಾಟಿದರೆ ಒಂದರ್ಧ ಮೈಲಿನಷ್ಟು ಗದ್ದೆ ಏರಿಯಲ್ಲೇ ನಡೆಯಬೇಕು. ಬಳಿಕ ಸರಕಾರಿ ಗೇರು ತೋಟ, ತೋಟದ ನಡುವಿನ ಕಾಲುದಾರಿಯಲ್ಲಿ ಒಂದೆರಡು ಫರ್ಲಾಂಗಿನಷ್ಟು ನಡೆದರೆ ಇಳಿಜಾರಿನಲ್ಲಿ ತ್ಯಾಂಪಣ್ಣ ಶೆಟ್ರ ಅಡಿಕೆ ತೋಟ ಕಾಣಿಸುತ್ತದೆ. ಅಡಿಕೆ ತೋಟವನ್ನು ಬಲಬದಿಯಿಂದ ಬಳಸಿಕೊಂಡು ಹೋದರೆ ಮೊದಲನೆಯ ಮನೆಯೇ ಫಕೀರ್ ಸಾಹೇಬರದ್ದು.



ಸೀತಾನದಿ, ಕುಳ್ಳುಂದ ಎಂದು ಹತ್ತಾರು ಕಡೆಗಳ ಜಾನುವಾರು ಜಾತ್ರೆಗಳಲ್ಲಿ ಎಮ್ಮೆ ವ್ಯಾಪಾರ ಮಾಡುತ್ತಾ ನಾಲ್ಕು ಮುಕ್ಕಾಲು ಮಾಡಿಕೊಂಡಿದ್ದ ಫಕೀರ್ ಸಾಹೇಬರು ಮುತ್ತಾಪ್ಪಾಡಿಯಲ್ಲಿ ತಳವೂರಿ ಸುಮಾರು ಮೂವತ್ತು ವರ್ಷಗಳೇ ಸಂದಿವೆ. ಕಾಡು ಸವರಿ ಮೂರುವರೆ ಎಕರೆ ಗದ್ದೆ – ತೋಟ ದರ್ಕಾಸು ಮಾಡಿಕೊಂಡಿದ್ದ ಸಾಹೇಬರಿಗೆ ಒಬ್ಬಳೇ ಮಗಳು. ಐದನೇ ಕ್ಲಾಸಿನವರೆಗೆ ಕನ್ನಡ ಶಾಲೆಗೆ ಹೋಗಿದ್ದ ಜುಲೇಖಳನ್ನು ಲಾಟುಪೋಟು ಹುಡುಗನಿಗೆ ಕೊಡುವಂತಿರಲಿಲ್ಲ. ಎಸ್ಸೆಲ್ಸಿ ಆದವನಿಗಾಗಿಯೇ ಹುಡುಕಾಡಿದ ಸಾಹೇಬರಿಗೆ ಪಿಯುಸಿ ಓದಿದವನೇ ಸಿಕ್ಕಿಬಿಟ್ಟಿದ್ದ! ಉಳ್ಳಾಳದ ಸಂಕದ ಬಳಿ ಆರು ರೂಪಾಯಿ ಬಾಡಿಗೆ ಮನೆಯಲ್ಲಿದ್ದ ಹುಡುಗನಿಗೆ ತಂದೆಯನ್ನು ನೋಡಿದ ನೆನಪಿಲ್ಲ. ಅಕ್ಕಿ ರೊಟ್ಟಿ ತಟ್ಟಿ ಹೋಟೆಲುಗಳಿಗೆ ಮಾರಾಟ ಮಾಡಿ ಮಗನನ್ನು ಓದಿಸಿದ ತಾಯಿಗಿರುವ ಆಸ್ತಿಯೆಲ್ಲ ಆ ಮಗ ಮಾತ್ರ. ಆತನಿಗೋ ದುಬೈಗೆ ಹೋಗಿ ತಾಯಿಗೆ ಹಣ ಕಳಿಸುವ ಕನಸು. ಎಂಟು ಸಾವಿರವಿದ್ದಿದ್ದರೆ ವೀಸಾ ಕೊಡಿಸುವ ಗೆಳೆಯರೂ ಇದ್ದರು.

ಒಂದೂಕಾಲು ಎಕರೆ ಗದ್ದೆಯನ್ನು ತ್ಯಾಂಪಣ್ಣ ಶೆಟ್ಟರಿಗೆ ಬರೆದುಕೊಟ್ಟ ಫಕೀರ್ ಸಾಹೇಬರು ಹುಡುಗನ ವೀಸಾ ಸಮಸ್ಯೆಯನ್ನು ಬಗೆಹರಿಸಿದ್ದರು. ಜುಲೇಖಳ ಜತೆ ನಾಲ್ಕು ತಿಂಗಳು ಓಡಾಡಿದ ಸುಲೇಮಾನ್ ತನ್ನ ತಾಯಿಯನ್ನು ಕರೆದುಕೊಂಡು ಬಂದು ಮಾವನ ಮನೆಯಲ್ಲಿ ಬಿಟ್ಟು ಮಸ್ಕತ್‌ಗೆ ಹಾರಿದ. ನಾಲ್ಕು ವರ್ಷಗಳ ಕಂಟ್ರಾಕ್ಟ್. ನಡುವೆ ರಜೆಯಿಲ್ಲ. ಜುಲೇಖಳ ಬಳಿ ನೆನಪುಗಳು ಮಾತ್ರ.

ಜುಲೇಖ ಗಂಡು ಮಗುವನ್ನು ಹೆತ್ತಾಗ ಇಡಿಯ ಊರಿಗೆ ಸಿಹಿ ಅವಲಕ್ಕಿ – ತೆಂಗಿನಕಾಯಿ ತುಂಡು ಹಂಚಿದ್ದರು ಸಾಹೇಬರು. ಮಸ್ಕತ್‌ನಿಂದ ಬಣ್ಣಬಣ್ಣದ ಬಟ್ಟೆಗಳ ಪಾರ್ಸೆಲ್ ತಿಂಗಳೊಳಗೆ ಬಂದಿತ್ತು. ಮತ್ತೆ ಪ್ರತಿತಿಂಗಳೂ ಕಾಗದಗಳು, ಡ್ರಾಫ್ಟುಗಳು, ಬಂಗಾರದಂತಹ ಅಳಿಯ.

ಶಾಲೆಯ ಆವರಣ ದಾಟುವವರೆಗೂ ಅಂದುಕಾಕ ತುಟಿ ಎರಡು ಮಾಡಲಿಲ್ಲ. ಬ್ಯಾಗುಗಳ ತುಂಬ ಸಮಸ್ಯೆಗಳನ್ನು ಹೊತ್ತ ಅಂದುಕಾಕ ಸುಲೇಮಾನ್‌ನ ಬೆನ್ನ ಹಿಂದೆ ಯಾಂತ್ರಿಕವಾಗಿ ಕಾಲೆಳೆಯುತ್ತಿದ್ದ. ಚಂದ್ರ ಸಾಕಷ್ಟು ಮೇಲೇರಿ ಬಂದಿದ್ದ. ಮಳೆ ಬಿದ್ದು ತಿಂಗಳಾಗಿದ್ದ ಶುಭ್ರ ಆಕಾಶದಲ್ಲಿ ನಕ್ಷತ್ರಗಳು ಪಳಪಳನೆ ಹೊಳೆಯುತ್ತಿದ್ದವು. ತೋಡಿಗಡ್ಡವಾಗಿದ್ದ ಕೈಸಂಕ ದಾಟುವಾಗ ಕಾಲ ಕೆಳಗಿದ್ದ ನೀರು ಇವರಿಬ್ಬರ ಮೌನವನ್ನು ಅಣಕಿಸುವಂತೆ ಸದ್ದು ಮಾಡಿತು. ನೂರಾರು ಬಾರಿ ಓಡಾಡಿದ ದಾರಿ. ಅಂದುಕಾಕ ಎಂತಹ ಕತ್ತಲಲ್ಲೂ ಎಡವುದು ಸಾಧ್ಯವಿರಲಿಲ್ಲ.

ಆದರೆ, ಒಂದು ಮಟಮಟ ಮಧ್ಯಾಹ್ನದ ಹೊತ್ತು ಹೋಟೆಲಿಗೆ ಬಂದಿದ್ದ

ಫಕೀರ್ ಸಾಹೇಬರು ಗಳಗಳನೆ ಅಳಲಾರಂಭಿಸಿದಾಗ ಅಂದುಕಾಕ ಹೌಹಾರಿದ್ದ! 'ಛೇ! ಇದು ಹ್ಯಾಗಾಯ್ತು!' ಎಂದು ಉದ್ಗರಿಸಿದ್ದ ಅಂದುಕಾಕ. 'ಹೆದರಬೇಡಿ ಸಾಹೇಬ್ರೆ, ನಾನಿದ್ದೇನೆ. ಇದಕ್ಕೆ ಮದ್ದು ಹುಡುಕುವ ಜವಾಬ್ದಾರಿ ನನ್ದು; ಆಯ್ತಲ್ಲಾ?' ಎಂದು ಸಾಹೇಬರನ್ನು ಸಮಾಧಾನಿಸಿದ್ದ. ತನ್ನ ಚಹದಂಗಡಿಗೆ ಎರಡು ವಾರ ಬೀಗ ಜಡಿದು ಸಾಹೇಬರ ಜತೆ ಹತ್ತಾರು ಕಡೆಗೆ ಹೋಗಿ ಬಂದಿದ್ದ. ಆದರೆ ಎಲ್ಲ ಕಡೆಯೂ ಸೋಲು. ಕಂಡಕಂಡ ಗೋರಿಗಳಿಗೆ ಊದುಕಡ್ಡಿ ಹಚ್ಚಿದ್ದೂ ಆಯಿತು. ಅಂಜನ–ಜೋತಿಷ್ಯಗಳೂ ವ್ಯರ್ಥವಾದವು. ನಡುನಡುವೆ ಫಕೀರ್ ಸಾಹೇಬರು 'ಸುಲೇಮಾನ್ನಿಗೆ ಕಾಗದ ಹಾಕಿ ತಿಳಿಸುವನಾ?' ಎಂದು ಹತಾಶರಾಗಿ ಪ್ರಶ್ನಿಸಿದಾಗಲೆಲ್ಲ ಅಂದುಕಾಕ ಏನಾದರೊಂದು ನೆವ ಹೇಳಿ ತಡೆಯುತ್ತಿದ್ದ. 'ಅವಸರ ಮಾಡುವುದು ಬೇಡ ಸಾಹೇಬ್ರೇ, ಒಂದು ನಾಲ್ಕು ದಿನ ಕಾದು ನೋಡೋಣ. ಅಲ್ಲಾಹು ಮನಸ್ಸು ಮಾಡಿದ್ರೆ ಯಾವುದೂ ಕಷ್ಟವಲ್ಲ. ಅವನಿಗೆ ಕಾಗದ ಹಾಕಿ ಅವನ ನಿದ್ದೆಯನ್ನು ಹಾಳು ಮಾಡುವುದ್ಯಾಕೆ? ಅವನು ಬಂದು ಅದೇನು ಮಾಯ ಮಂತ್ರ ಮಾಡ್ಲಿಕ್ಕುಂಟಾ?' ಎನ್ನುತ್ತಿದ್ದ. ಸಾಹೇಬರು ಕಾದರು : ಮೂರು ವರ್ಷ ಕಾದರು. ಆರಂಭದಲ್ಲೇ ಸುಲೇಮಾನ್‌ಗೆ ತಿಳಿಸದ ಬಗ್ಗೆ ಪಶ್ಚಾತ್ತಾಪಪಡುತ್ತಾ, ಅದರ ಜತೆಯಲ್ಲೇ ತಡವಾಗಿ ತಿಳಿಸಲು ಭಯಪಡುತ್ತಾ ಕೊರಗಿದರು. ಎಷ್ಟೇ ಗುಟ್ಟು ಮಾಡಲು ಯತ್ನಿಸಿದರೂ ಊರಿನ ಮಕ್ಕಳಿಗೂ ಸಂಗತಿ ಗೊತ್ತಾದಾಗ ಸಾಹೇಬರು ಅಂಗಳ ದಾಟುವುದನ್ನೇ ನಿಲ್ಲಿಸಿಬಿಟ್ಟರು. ಅಂದುಕಾಕ ಆಗೊಮ್ಮೆ – ಈಗೊಮ್ಮೆ ಸಾಹೇಬರ ಮನೆಗೆ ಹೋಗಿ ಮಗುವಿನ ಕೈಯಲ್ಲಿ ಏನಾದರೊಂದು ತಿಂಡಿಯಿರಿಸಿ, ಸಾಹೇಬರಿಗೆ ನಾಲ್ಕು ಸಮಾಧಾನದ ಮಾತು ಒಪ್ಪಿಸಿ ಬರುತ್ತಿದ್ದ.

ಅಗಲ ಕಿರಿದಾದ ಮಣ್ಣಿನ ಏರಿಯಲ್ಲಿ ಅಂದುಕಾಕನ ಹೆಜ್ಜೆಗಳು ಅಡ್ಡಾದಿಡ್ಡಿಯಾಗಿ ಚಲಿಸಲಾರಂಭಿಸಿದ್ದವು. ಅಂದುಕಾಕನಿಗೆ ತನ್ನ ಬಗ್ಗೆಯೇ ಅನುಮಾನ ಕಾಡಿತು.

'ನೀನು ಪುನಃ ಹೋಗುವುದು ಯಾವಾಗ?' ಅಂದುಕಾಕ ತನಗರಿವಿಲ್ಲದೆ ಪ್ರಶ್ನಿಸಿದ್ದ.

'ಯಾಕೆ?' ಸುಲೇಮಾನ್ ತನ್ನ ಪ್ರಶ್ನೆ ಹಿಂದೆಸೆದಿದ್ದ;

'ಹೀಗೇ... ಸುಮ್ಮನೆ ಕೇಳಿದೆ' ಅಂದುಕಾಕ ನಿರುತ್ಸಾಹದಿಂದ ಉತ್ತರಿಸಿದ್ದ.

'ನಿಜ ಹೇಳಬೇಕಾ?' ಸುಲೇಮಾನ್ ಮತ್ತೆ ಪ್ರಶ್ನಿಸಿದ್ದ.

'ಏನು ಹಾಗಂದ್ರೆ?' ಅಂದುಕಾಕನಿಗೆ ತನ್ನ ಮೇಲೆಯೇ ಕೋಪ. ಎರಡು ಕ್ಷಣಗಳ ಹಿಂದೆ ಮೌನ ಅಸಹ್ಯವಾಗಿದ್ದ ಅವನಿಗೆ ಈಗ ಮಾತೇ ಬೇಡವಾಯಿತು. ಆದರೆ ಸುಲೇಮಾನ್‌ಗೆ ಮಾತು ಬೇಕಾಗಿತ್ತು.

'ನೀವು ನನ್ನ ಮಾವನ ಮನೆಗೆ ಆಗಾಗ ಹೋಗ್ತಿರಬೇಕಲ್ಲಾ' – ಸುಲೇಮಾನ್



ಏರಿಯ ತಿರುವೊಂದರ ಬಳಿ ಕತ್ತು ತಿರುಗಿಸಿ ಪ್ರಶ್ನಿಸಿದವನು, ಅಂದುಕಾಕನ ಮುಖವನ್ನು ಕತ್ತಲಲ್ಲಿ ಓದಲಾಗದೆ, 'ಆಕಾಶದಲ್ಲಿ ಚಂದ್ರ ಇದ್ರೂ ಎಂತಹಾ ಕತ್ಲು ಅಲ್ವಾ?' ಎಂದು ಪ್ರಶ್ನಿಸಿದ. 'ಹೌದೌದು.. ತುಂಬಾ ಕತ್ಲೆ' ಎಂದ ಅಂದುಕಾಕ ಸುಲೇಮಾನ್‌ನ ಪ್ರಶ್ನೆಯ ಮೊದಲ ಭಾಗದ ಬಗ್ಗೆ ಭಯಪಡಲಾರಂಭಿಸಿದ. ಕಳೆದ ಎರಡು ವಾರಗಳಲ್ಲಿ ತಾನು ಸಾಹೇಬರ ಮನೆಗೆ ಹೋಗಿರಲಿಲ್ಲ ಎಂಬುದು ನೆನಪಾಗಿ ಸಮಾಧಾನವಾಯಿತು. ಮೊದಲು ವಾರಕ್ಕೆರಡು ಬಾರಿ ಹೋಗುತ್ತಿದ್ದೆ ಎಂದು ಉತ್ತರಿಸಿದರೆ, 'ಯಾಕೆ' ಎಂಬುದಕ್ಕೂ ಉತ್ತರಿಸಬೇಕಾಗುತ್ತದೆ. ಆ ಬಳಿಕ ಪ್ರಶ್ನೆಗಳ ಸರಮಾಲೆಯೇ ಆರಂಭವಾದೀತು. ಇಲ್ಲವೆನ್ನುವುದರಲ್ಲಿಯೇ ಜಾಣತನವಿದೆಯೆಂದು ನಿರ್ಧರಿಸಿದ ಅಂದುಕಾಕ, ನಿರುತ್ಸಾಹ ನಟಿಸುತ್ತಾ, 'ನನಗೆಲ್ಲಿ ಪುರುಸೊತ್ತು ಉಂಟು ಸುಲೇಮಾನ್? ತಿಂಗಳ ಕೆಳಗೊಮ್ಮೆ ಹೋದದ್ದು ಹೌದು. ಒಂದು ನೂರು ಬಾಳೆ ಎಲೆ ಬೇಕಿತ್ತು ನೋಡು. ಆಗ ಹೋದವನು ನಿನ್ನ ಮಗನನ್ನು ನೋಡಿಕೊಂಡು ಬಂದಿದ್ದೆ' ಎಂದು ಹೇಳಿದವನೇ ತುಟಿ ಕಚ್ಚಿಕೊಂಡ.

'ಮಗು ದೊಡ್ಡದಾಗಿರಬೇಕಲ್ಲಾ?' ಎಂದು ಪ್ರಶ್ನಿಸಿದ ಸುಲೇಮಾನ್ ದೂರು ಹೇಳುವವನಂತೆ, 'ನಿಮಗೆ ಗೊತ್ತುಂಟಾ ಅಂದುಕಾಕ? ಮಗುವಿನ ಒಂದು ಫೋಟೋ ಕಳಿಸಿ ಅಂತ ಕಾಗದ ಬರೆದ್ರೆ. ಇವರು ಮಗುವಿನ ಫೋಟೋ ತೆಗೆದ್ರೆ ಆಯಸ್ಸು ಕಮ್ಮಿಯಾಗ್ತದೆ ಅಂತ ಕಾರಣ ಬರೀತಾರೆ. ಇದನ್ನೆಲ್ಲ ಈ ಕಾಲದಲ್ಲಿ ಯಾರಾದ್ರೂ ನಂಬ್ತಾರಾ? ಏನು ಹೇಳ್ತೀರಾ?' ಎಂದು ಪ್ರಶ್ನೆಯನ್ನು ಮುಂದುವರಿಸಿದ್ದ. 'ಹೌದಾ! ಇದು ನನಗೆ ಗೊತ್ತೇ ಇರಲಿಲ್ಲ!' ಅಂದುಕಾಕ ತನ್ನ ಮಾತಿನಲ್ಲಿ ಅಚ್ಚರಿಯನ್ನು ಅಗತ್ಯಕ್ಕಿಂತ ಹೆಚ್ಚೇ ಬೆರೆಸಿದ್ದ. 'ನನಗೆ ಗೊತ್ತಿದ್ದರೆ ನಾನೇ ಫೋಟೋದವರನ್ನು ಕರ್‍ಕೊಂಡು ಬಂದು ತೆಗೆಸಿ ಕಳಿಸ್ತಿದ್ದೆ. ಎಷ್ಟು ಚಂದ ಉಂಟು ಗೊತ್ತುಂಟಾ ಸುಲೇಮಾನ್? ಬಿಳಿ–ಬಿಳೀ ಉಂಟು, ನೋಡಿದವರು ಎತ್ತಿಕೊಳ್ಬೇಕು. ನಿಜ ಹೇಳ್ಬೇಕಾ... ಅಷ್ಟು ಚಂದದ ಮಗುವನ್ನು ನಾನು ಬೇರೆ ಕಡೆ ನೋಡಿಯೇ ಇಲ್ಲ, ಆಯ್ತಲ್ಲಾ?'

'ನೀವು ನಿಜ ಹೇಳ್ತಾ ಇದ್ದೀರಾ?' ಸಹಜ ಧ್ವನಿಯಲ್ಲಿ ಪ್ರಶ್ನಿಸಿದ್ದ ಸುಲೇಅಮನ್, 'ಮತ್ತೆಂತದ್ದು! ಸುಳ್ಳು ಹೇಳಿದ್ರೆ ನನ್ನ ಕಣ್ಣು ಹೊಟ್ಟಿ ಹೋಗ್ಲಿಕ್ಕಿಲ್ವಾ?' ಅಂದುಕಾಕ ತನ್ನ ಮಾತಿಗೆ ಭರವಸೆ ತುಂಬಿದ್ದನಾದರೂ ತನ್ನ ಮಾತು ಅತಿಯಾಯಿತೆಂದೇ ಪರಿತಪಿಸಿದ.

ಗೇರು ತೋಟ ಕಪ್ಪಗೆ ಹತ್ತಿರ ಬರುತ್ತಿತ್ತು. ದೂರದಲ್ಲೆಲ್ಲೋ ನರಿಯೊಂದು ಊಳಿಡಲಾರಂಭಿಸಿದಾಗ ಇದ್ದಕ್ಕಿದ್ದಂತೆ ಕಾಡಿನ ಬೇರೆ ಬೇರೆ ಮೂಲೆಗಳಿಂದ ನಾಲ್ಕಾರು ನರಿಗಳು ಧ್ವನಿ ಸೇರಿಸಿದವು. ಕಪ್ಪು ಕತ್ತಲನ್ನು ನಡುಗಿಸುವ ಸ್ವರದಿಂದಾಗಿ ಸುಲೇಮಾನ್ ಭಯಪಡಬಹುದು ಎಂದು ಭಾವಿಸಿದ ಅಂದುಕಾಕ ಆತನನ್ನು ಮಾತಾಡಿಸಲು ಶಬ್ದಗಳಿಗಾಗಿ ತಡಕಾಡಿದ. ಅಷ್ಟರೊಳಗೆ ಸುಲೇಮಾನ್ ಪ್ರಶ್ನಿಸಿದ್ದ.

'ನೀವ್ಯಾಕೆ ಮದುವೆ ಮಾಡಿಕೊಳ್ಳಲಿಲ್ಲ?'

ಅಂದುಕಾಕನಿಗೆ ಇದು ಅನಿರೀಕ್ಷಿತ. ಏನಾದರೊಂದು ಮಾತಿನಿಂದ ಉತ್ತರಿಸಬೇಕು ಎಂಬುದಕ್ಕಾಗಿ, 'ಹೆ...ಹೇ... ನಮಗ್ಯಾರು ಹೆಣ್ಣು ಕೊಟ್ಟಾರು ಸುಲೇಮಾನ್? ಏನುಂಟು ನನ್ನ ಹತ್ರ? ಮನೆಯಾ, ಆಸ್ತಿಯಾ?'

'ನನ್ನಲ್ಲಿ ಏನಿದೆ ಕಾಕ? ನಿಮ್ಮ ಹಾಗೇ ಅಲ್ವ ನಾನು?'

'ಛೇ...ಛೇ... ಎಂತದ್ದು ಸುಲೇಮಾನ್? ಮಸ್ಕತ್‌ನಲ್ಲಿ ಇರುವವನು ನೀನು. ನಾನು ಇಡೀ ವರ್ಷ ಗ್ಲಾಸು ತೊಳೆದು ಮಾಡುವ ಹಣವನ್ನು ನೀನಲ್ಲಿ ಒಂದು ದಿನದಲ್ಲಿ ಚಾ ಕುಡಿಲಿಕ್ಕೆ ಖರ್ಚು ಮಾಡುತ್ತಿ. ನಿನ್ನಂತವರನ್ನು ಹುಡುಕಿಕೊಂಡು ಬಂದು ಹುಡುಗಿ ಕೊಡುತ್ತಾರೆ ಗೊತ್ತುಂಟಾ?'

'ಕೊಟ್ಟವರು ಈಗ ದುಃಖ ಪಡುತ್ತಿರಬೇಕು ಅಲ್ವಾ?'

'ಯಾಕೆ! ಅಂತದ್ದು ಏನಾಗಿದೆ ಈಗ?' ಅಂದುಕಾಕ ನಿಜವಾಗಿ ಗಾಬರಿಗೊಂಡಿದ್ದ. ಇಬ್ಬರೂ ಗೇರು ಕಾಡು ಹೊಕ್ಕಿದ್ದರಿಂದ ಇದೀಗ ಅಕ್ಕಪಕ್ಕದಲ್ಲೇ ಹೆಜ್ಜೆ ಹಾಕುತ್ತಿದ್ದರು. ಅಂದುಕಾಕನ ಪ್ರಶ್ನೆಗೆ ಉತ್ತರಿಸಬೇಕೆನ್ನುವ ಆತುರ ಸುಲೇಮಾನ್‌ಗೆ ಇದ್ದಂತಿರಲಿಲ್ಲ. ಜೀರುಂಡೆಗಳ ಕಿರಿಕಿರಿಯ ಸಪ್ಪಳಕ್ಕೆ ತಾಳ ಹಾಕುವಂತೆ ನಾಲ್ಕು ಪಾದಗಳು ಒಣಗಿದ ತರಗೆಲೆಗಳನ್ನು ಚರಚರ ಪುಡಿಗುಟ್ಟುತ್ತಿದ್ದವು. ಯೋಚನೆಗಳ ಭಾರದಿಂದ ಬಳಲಿದ್ದ ಅಂದುಕಾಕನ ಕಣ್ಣಿಗೆ ತ್ಯಾಂಪಣ್ಣ ಶೆಟ್ಟರ ಅಡಿಕೆ ತೋಟದ ಎಲೆಗಳು ಗೋಚರಿಸಲಾರಂಭಿಸಿದಾಗ ಕಾಲುಗಳು ಮುಂದೊತ್ತಲು ನಿರಾಕರಿಸತೊಡಗಿದವು. ಗೇರು ತೋಟದ ಕೊನೆಯ ಇಳಿಜಾರು ಆರಂಭವಾಯಿತು. ಶೆಟ್ಟರ ಮನೆ ಬೆಳಕು ನಕ್ಷತ್ರದಂತೆ ಮಿನುಗಲಾರಂಭಿಸಿತು. ಅಂದು ಕಾಕ ಪೂರ್ತಿ ಸುಸ್ತಾಗಿದ್ದ. ತಲೆ ವಿಪರೀತ ನೋಯತೊಡಗಿತು.

'ಏನಿದೆಯಪ್ಪ ನಿನ್ನ ಪೆಟ್ಟಿಗೆಯಲ್ಲಿ? ಕಬ್ಬಿಣದ ತುಂಡು ತುಂಬಿಸಿದ್ದೀಯಾ ಏನು? ನನ್ನಿಂದ ಸಾಧ್ಯವಿಲ್ಲಪ್ಪ. ಸ್ವಲ್ಪ ಇಳಿಸಿ ಉಸಿರೆಳೆದುಕೊಂಡೇ ಬರುವುದು ನಾನು' ಎಂದು ಗೊಣಗುತ್ತಲೇ ಅಂದುಕಾಕ ಎರಡೂ ಬ್ಯಾಗುಗಳನ್ನು ತಲೆಯಿಂದ ಜಾರಿಸಿ ನೆಲದ ಮೇಲಿರಿಸಿ, ಪಕ್ಕದಲ್ಲಿದ್ದ ಹಲಸಿನ ಮರದ ಉಬ್ಬು ಬೇರಿನ ಮೇಲೆ ಕುಳಿತುಬಿಟ್ಟ. ನಾಲ್ಕು ಹೆಜ್ಜೆ ಮುಂದೆ ಸಾಗಿದ್ದ ಸುಲೇಮಾನ್‌ನಿಗೆ ಅಂದುಕಾಕನ ಏಕಾಯೇಕಿ ಮುಷ್ಕರದಿಂದ ಬೇಸರವುಂಟಾದರೂ ತೋರಿಸಿಕೊಳ್ಳದೆ, ಹಿಂತಿರುಗಿ ಬಂದು ಅಂದುಕಾಕನಿಗೆ ಎದುರಾಗಿ ಕಪ್ಪು ಹುಲ್ಲಿನ ಮೇಲೆ ಕರವಸ್ತ್ರ ಹಾಸಿ ಕುಳಿತ. ಹತ್ತಾಳು ಎತ್ತರಕ್ಕೆ ಬೆಳೆದಿದ್ದ ಹಲಸಿನ ಮರದ ದಟ್ಟ ಎಲೆಗಳು ಚಂದ್ರನನ್ನು ಇಡಿಯಾಗಿ ಮುಚ್ಚಿದ್ದರಿಂದ ಪರಸ್ಪರ ಮುಖ ಕಾಣುತ್ತಿರಲಿಲ್ಲ. ಭಯ ಹುಟ್ಟಿಸುವ ಕತ್ತಲು. ಅಂದುಕಾಕ ಏದುಸಿರುಬಿಡುತ್ತಿದ್ದ.



ಬಲಗೈಯ ಮುಷ್ಟಿಯೊಳಗೆ ಅನಾಮತ್ತಾಗಿ ತುಂಬಿಕೊಂಡ ಕಲ್ಲೊಂದನ್ನು ಸುಲೇಮಾನ್ ಇಳಿಜಾರಿನ ಕಾಡನಡುವೆ ತೂರಿದ. ಪಟಪಟ ಸದ್ದು ಮಾಡುತ್ತಾ ಗೂಬೆಯೊಂದು ಹಾರುತ್ತಾ ಸಾಹೇಬರ ಮನೆಯ ದಿಕ್ಕಿಗೆ ತೇಲಿತು.

'ನಿನಗೊಂದು ಸಂಗತಿ ಹೇಳ್ಬೇಕಿತ್ತು ನೋಡು' ಅಂದುಕಾಕ ಕಣ್ಣುಮುಚ್ಚಿ ಅದುಮಿಟ್ಟ ಗುಟ್ಟಿನ ಬಾಗಿಲು ತೆರೆದ. ಅಳುಕುತ್ತಲೇ ಪದ ಜೋಡಿಸಲಾರಂಭಿಸಿದ ಅಂದುಕಾಕ ಕ್ರಮೇಣ – ನೀರಲ್ಲಿ ಮುಳುಗಿದವನಿಗೆ ಚಳಿಯೇನು ಎಂಬಂತೆ – ಮಾತುಗಳಿಗೆ ಶಕ್ತಿ ತುಂಬತೊಡಗಿದ. ಆದರೆ ರೆಪ್ಪೆ ಸರಿಸಿ ಸುಲೇಮಾನ್‌ನನ್ನು ನೋಡಬೇಕೆನ್ನುವ ಯೋಚನೆಯನ್ನು ತನ್ನೆಲ್ಲ ಮಾತುಗಳು ಮುಗಿಯುವ ತನಕವೂ ದೂರ ತಳ್ಳಿದ.

* * *

ಅದು ಯಾರು ಸುದ್ದಿ ಮುಟ್ಟಿಸಿದ್ದರೋ ಏನೋ, ಫಕೀರ್ ಸಾಹೇಬರ ಮನೆ ಸೈಯ್ಯದ್ ತಲುಪುವ ಮೊದಲೇ ಚಾವಡಿಯಲ್ಲಿ ದುಃಖದ ಮೊಟ್ಟೆ ಒಡೆದಿತ್ತು. ಮೌಲ್ವಿಯವರನ್ನು ಫಕೀರ್ ಸಾಹೇಬರ ಮನೆಗೆ ಬರಲೊಪ್ಪಿಸಿ ಓಡುತ್ತಲೇ ಬರುತ್ತಿದ್ದ ಸೈಯ್ಯದ್‌ನಿಗೆ, ಸಾಹೇಬರ ಹೆಂಡತಿಯ ಅಳುವಿನ ಸ್ವರ ತೋಟದ ತಿರುವಿಗೇ ಕೇಳಿಸಿತ್ತು. ಸೈಯ್ಯದ್‌ನಿಗೆ ಸಾಹೇಬರ ಮನೆ ಹೊಸತೇನೂ ಅಲ್ಲ. ಚಿಕ್ಕಂದಿನಿಂದಲೇ ಉಮ್ಮಾತುಮ್ಮನವರಿಂದ ಕೈ ತುತ್ತು ಉಂಡ ಹುಡುಗ. ಗಂಡು ಮಕ್ಕಳಿಲ್ಲದ ಸಾಹೇಬರ ಮನೆಯ ಸಣ್ಣ ಪುಟ್ಟ ಹೊರಗಿನ ಓಡಾಟಕ್ಕೆ ಅವನೇ ಆಗಬೇಕು. ಇತ್ತೀಚೆಗೆ ಸಾಹೇಬರು ಹೊರಗೆ ಕಾಣಿಸುವುದೇ ಕಡಿಮೆಯಾದ ಬಳಿಕ ಅವನ ಜವಾಬ್ದಾರಿಯೂ ಹೆಚ್ಚಿತ್ತು.

'ನೀವೇನೂ ಗಲಾಟೆ ಮಾಡುವುದು ಬೇಡವಂತೆ. ಅಂದುಕಾಕ ಎಲ್ಲ ಸರಿ ಮಾಡಿಯೇ ಕರೆದುಕೊಂಡು ಬರುತ್ತಾರಂತೆ' ಚಾವಡಿಯಲ್ಲಿ ಗಿರಕಿ ಹೊಡೆಯುತ್ತಿದ್ದ ಅಳು–ಜಗಳಗಳ ನಡುವೆ ನುಗ್ಗಿದ ಸೈಯ್ಯದ್ ನಾಲ್ಕಾರು ಬಾರಿ ಹೇಳಿದ್ದರೂ ಕೇಳಿಸಿಕೊಳ್ಳುವ ಆಸಕ್ತಿ ಯಾರಿಗೂ ಇದ್ದಿರಲಿಲ್ಲ. ಮಂಚದ ಮೇಲೆ ಮೊಣಕಾಲುಗಳನ್ನು ಎರಡೂ ಕೈಗಳಿಂದ ಅಪ್ಪಿಕೊಂಡು ಏದುಸಿರು ಬಿಡುತ್ತಿದ್ದ ಸಾಹೇಬರು ತಮ್ಮ ಹೆಂಡತಿಯ ಬಾಯಿ ಮುಚ್ಚಿಸಲು ಒದ್ದಾಡುತ್ತಿದ್ದರು. ಆದರೆ ಅದಷ್ಟು ದಿನಗಳಿಂದ ಉಮ್ಮಾತುಮ್ಮ ಹೊಟ್ಟೆಯೊಳಗೇ ಕಟ್ಟಿಕೊಂಡಿದ್ದ ಮಾತುಗಳೆಲ್ಲವೂ ಹೊಟ್ಟೆ ಬಗಿದು ಆರೋಪಗಳ ಧಾರೆಯಾಗಿ ಹೊರ ಜಿಗಿದು ಸಾಹೇಬರನ್ನು ಮುಳುಗಿಸುತ್ತಿದ್ದವು.

'ನಿಮಗೆ ಹೆಂಗಸರ ಮಾತೆಂದರೆ ಕಾಲಿನ ಕಸ. ಈಗ ಹೇಳಿ ನೋಡುವಾ? ಯಾವ ಮುಖದಿಂದ ಅವನನ್ನು ಒಳಗೆ ಬಾ ಎನ್ನುವುದು? ಯಾವ ಸುಖಕ್ಕೆ ಅವನು ಓಡಿ ಬರಬೇಕು? ನಾನು ಸಾರಿ ಸಾರಿ ಹೇಳಲಿಲ್ವಾ? ದಮ್ಮಯ್ಯ ಹಾಕಲಿಲ್ವಾ? ನಿಮಗೆ

ನನ್ನ ಕಣ್ಣೀರಿಗಿಂತ ಅಂದುಕಾಕನ ಉಪದೇಶವೇ ಹೆಚ್ಚಾಯಿತು. ಅವನಿಗೇನು ಗೊತ್ತು ಹೆಂಗಸರ ಕಷ್ಟ? ಅವನಿಗೇನು ಹೆಂಡತಿಯಾ.... ಮಕ್ಕಳಾ? ಅವನ ಮಾತು ಕೇಳ್ಕೊಂಡು... ಇವ್ನಿಗೊಂದು ಕಾಗದ ಹಾಕಿ ಅಂತ ನಾವೆಲ್ಲ ಹೇಳಿದ್ರೂ ನೀವು ಗಣ್ಯವೇ ಮಾಡಲಿಲ್ಲ. ಊರು ಊರು ಸುತ್ತಾಡಿಕೊಂಡು ಬಂದ್ರಲ್ಲಾ? ಒಂದು ಮುಕ್ಕಾಲಿನ ಪ್ರಯೋಜನ ಉಂಟಾ?'

'ನಿನ್ನ ಕಾಲು ಹಿಡೀತೇನೆ. ಸ್ವಲ್ಪ ಸುಮ್ಮನಿರ್ತೀಯಾ?' ಎರಡೂ ಕೈಗಳಿಂದ ಕಿವಿ ಮುಚ್ಚಿಕೊಂಡ ಸಾಹೇಬರು ಅಸಹನೆಯಿಂದಲೇ ಹೇಳಿದ್ದರು. 'ನಾನವನಿಗೆ ಕಾಗದ ಹಾಕಿದೆ ಅಂತ್ಲೇ ಇಟ್ಟುಕೊ. ಕಾಗದ ಕಂಡ ಕೂಡಲೇ ಓಡಿ ಬರಲಿಕ್ಕೆ ಅದೇನು ಹೋಟ್ಲಿಗೆ ಚಾ ಕುಡಿಯಲು ಹೋದವನಾ? ಒಮ್ಮೆ ಬಂದು ಹೋಗಲು ಹತ್ತು ಸಾವಿರ ರೂಪಾಯಿ ಬೇಕು. ಗೊತ್ತುಂಟಾ? ಅವನು ಬಂದ ಅಂತಲೇ ಇಟ್ಕೋ. ಬಂದೇನು ದಪ್ಪ ದಾಯಿರೆ ಮಾಡ್ಲಿಕ್ಕಿತ್ತಾ? ನಾನೇನು ಇಲ್ಲಿ ಒಲೆ ಊದುತ್ತಾ ಕೂತಿದ್ನಾ? ಅವನು ಅಂದುಕೊಂಡಿದ್ದಿರಬಹುದು, ಪ್ರತಿ ತಿಂಗಳು ಕಳಿಸಿದ ದುಡ್ನಲ್ಲಿ ನಾವಿಲ್ಲಿ ಬಂಗಾರದ ಜೋಡು ಹಾಕ್ಕೊಂಡು ಓಡಾಡ್ತಿರಬಹುದು ಅಂತ. ಕಳೆದ ಎರಡು ವರ್ಷದಲ್ಲಿ ನಾನು ಹೋಟೆಲಿನ ಒಂದು ಸಿಂಗ್ಲು ಚಾ ಕುಡಿದದ್ದುಂಟಾ? ಇದ್ದ ದುಡ್ಡೆಲ್ಲಾ ಬಸ್ಸಿಗೇ ಆಗ್ಲಿಲ್ವಾ?'

ಉಮ್ಮಾತುಮ್ಮ ಮತ್ತಷ್ಟು ಕೆರಳಿದ್ದರು : 'ಮಾತೆತ್ತಿದ್ರೆ ನಿಮಗೆ ದುಡ್ಡೂ, ಅದು ಬಿಟ್ರೆ ನಿಮಗೆ ಬೇರೆ ಎಂತದ್ದೂ ಇಲ್ಲ. ಇಷ್ಟು ದಿವಸ ಆಯ್ತು. ಯಾರು ಎತ್ತಿ ಕೊಂಡಾಟ ಮಾಡಿದ್ರೇನು? ತಾಯಿಯ ಮುಖ ನೋಡುವುದು ಆ ಮಗುವಿನ ಹಣೆಯಲ್ಲಿ ಬರೆದದ್ದುಂಟಾ? ತಂದೆಯಾದ್ರೂ ಹತ್ರ ಇದ್ದಾನಾ? ಹೋಗಿದ್ದಾನಲ್ಲ ಬಂಗಾರದ ಗಟ್ಟಿ ತರಲಿಕ್ಕೆ. ನನ್ನ ಮಗಳೇನು ಕಲ್ಲಿನ ತುಂಡಾ? ಅವ್ನು ಕಳಿಸಿದ ನೋಟುಗಳನ್ನು ಅವಳೇನು ಪೆಟ್ಟಿಗೆಯಲ್ಲಿಟ್ಟು 'ದುವಾ' ಮಾಡ್ಬೇಕಿತ್ತಾ? ನಿಮ್ಗೆ ಗಂಡಸರಿಗೆ ಎಷ್ಟು ಹೇಳಿದರೂ ಅಷ್ಟೆಯೇ' – ಉಮ್ಮಾತುಮ್ಮಾ ಹಣೆ ಬಡಿದುಕೊಂಡು ಅಳಲಾರಂಭಿಸಿದರು.

'ಸಾಕು ಉಮ್ಮಾತುಮ್ಮಾ... ಅವರನ್ನು ಯಾಕೆ ಕಲ್ಲಿಗೆ ಹಾಕಿ ಅರೀತಾ ಇದ್ದೀ?' ಉಮ್ಮಾತುಮ್ಮನವರನ್ನು ಸಮಾಧಾನಿಸಲು ಮಾತು ಆರಂಭಿಸಿದ ಸುಲೇಮಾನನ ತಾಯಿ ಜೈನಮ್ಮನವರು, ಗದ್ಗದ ಕಂಠದಿಂದ, 'ಆದ್ದು ಆಗಿಹೋಯ್ತಲ್ಲಾ? ಒಟ್ಟಾರೆ ಇದು ನನ್ನ ಸೋಲು. ಈ ಮನೆಗೆ ಬಂದು ಬಿದ್ನಲ್ಲಾ? ಎಲ್ಲಿಗಾದ್ರೂ ಓಡಿ ಸತ್ತು ಹೋಗೋಣ ಅಂದ್ರೆ ಈ ಮಗು ಒಂದು ಉಂಟಲ್ಲಾ?' ಎನ್ನುವಷ್ಟರಲ್ಲೇ ಗಂಟಲು ಕಟ್ಟಿ ಬಂದು ಮಾತು ಮುಂದುವರಿಸಲು ಸಾಧ್ಯವಾಗದೆ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಒಳಗೆ ನಡೆದರು. ಕೂತಲ್ಲೇ ಚಡಪಡಿಸುತ್ತಿದ್ದ ಸಾಹೇಬರಿಗೆ ತಮ್ಮ ಉಸಿರ ಮೇಲೆ ಹಿಡಿತ



ಸಿಕ್ಕಿದ್ದು ಪೊಡಿಯಜ್ಜನವರ ಜತೆ ಮೌಲ್ವಿಯವರು ಚಾವಡಿಗೆ ಕಾಲಿಟ್ಟಾಗಲೇ. ಅವರಿಬ್ಬರು ಹೊಸ್ತಿಲ ಬಳಿ ಕಾಣಿಸಿಕೊಳ್ಳುತ್ತಿರುವಂತೆಯೇ ಉಮ್ಮಾತುಮ್ಮ ತಲೆಯ ಮೇಲೆ ಸೆರಗನ್ನು ಎಳೆದುಕೊಂಡು ಒಳ ಬಾಗಿಲ ಪರದೆಯ ಹಿಂದೆ ಮರೆಯಾಗಿಬಿಟ್ಟರು. ಸೈಯ್ಯದ್ ಜಗಲಿ ಕಟ್ಟೆಯ ಮೇಲೆ ಕುಳಿತು ಅಂದುಕಾಕ ಬರಬಹುದಾದ ತೋಟದ ತಿರುವಿನತ್ತ ಕಣ್ಣು ನೆಟ್ಟ.

ಮೌಲ್ವಿಯವರಿಗೆ ಎಲ್ಲವೂ ತಿಳಿದಂತಿತ್ತು. ಆದ್ದರಿಂದಲೇ ಇರಬೇಕು; ಸಾಹೇಬರನ್ನು ಹೆಚ್ಚು ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ಪೊಡಿಯಜ್ಜನವರಂತೂ ಯಾವುದರಲ್ಲೂ ಆಸಕ್ತಿಯಿಲ್ಲದವರಂತೆ ಬೆಂಚಿನ ಮೇಲೆ ಕಾಲು ಮಡಚಿ ಕೂತು ಸೂರು ದಿಟ್ಟಿಸಲಾರಂಭಿಸಿದ್ದರು. ಹತ್ತು ನಿಮಿಷ ಚಾವಡಿಯೊಳಗೆ ಲ್ಯಾಂಪಿನ ಪುಕು ಪುಕು ಸದ್ದು ಮಾತ್ರ.

ತೋಟದ ತಿರುವಿನಲ್ಲಿ ಟಾರ್ಚ್ ಬೆಳಕು ಕಂಡ ಸೈಯ್ಯದ್ ಅಂಗಳಕ್ಕೆ ಹಾರಿದ. ಅಂಗಳಕ್ಕೆ ಕಾಲಿಟ್ಟ ಅಂದುಕಾಕನ ತಲೆಹೊರೆಯನ್ನು ಇಳಿಸಿ ತಂದು ಚಾವಡಿಯ ನಡುಕಂಬದ ಬಳಿ ಇರಿಸಿದಾಗ ಸಾಹೇಬರ ಉಸಿರು ನಿಂತಂತಾಯಿತು. ಲ್ಯಾಂಪಿನ ಹಳದಿ ಬೆಳಕಿನಲ್ಲಿ ಚಾವಡಿಯೊಳಗೆ ಚಲಿಸಲಾರಂಭಿಸಿದ ಎರಡು ಜತೆ ಕಾಲುಗಳನ್ನಷ್ಟೇ ನೋಡಲು ಶಕ್ತವಾದ ಸಾಹೇಬರ ಕಣ್ಣುಗಳು ಆಯಾಸದಿಂದ ರೆಪ್ಪೆಗಳ ಮರೆಯಾಚಿಸಿದವು.

ಒಳಬಾಗಿಲ ಬಳಿಯಿದ್ದ ಮರದ ಕುರ್ಚಿಯನ್ನು ಎತ್ತಿಕೊಂಡು ಬಂದ ಅಂದುಕಾಕ ಅದನ್ನು ಕಂಬದ ಬಳಿ ಇರಿಸಿ ಸುಲೇಮಾನ್‌ನನ್ನು ಕುಳಿತುಕೊಳ್ಳಲು ಸೂಚಿಸಿದ. ಮೌಲ್ವಿಯವರಿಗೆ ವಂದಿಸಿದ ಸುಲೇಮಾನ್ ತನ್ನ ಬ್ಯಾಗುಗಳನ್ನು ಹತ್ತಿರಕ್ಕೆ ಎಳೆದುಕೊಳ್ಳುತ್ತಾ ಕುರ್ಚಿಯಲ್ಲಿ ಕುಳಿತ. ಫಕೀರ್ ಸಾಹೇಬರ ಬಳಿಗೆ ಕಾಲೆಳೆದ ಅಂದುಕಾಕ ಮಂಚದ ಮೂಲೆಯಲ್ಲಿ ಕುಂಡಿಯೂರಿದ. ಪೊಡಿಯಜ್ಜನವರು ಎಲ್ಲರನ್ನೂ ಪರೀಕ್ಷಿಸುವವರಂತೆ ಸುತ್ತಲೂ ಕಣ್ಣು ಹಾಯಿಸಿ, ತಮ್ಮ ಕನ್ನಡಕವನ್ನು ಕಳಚಿ ಜೇಬಿಗಿಳಿಸಿಕೊಂಡವರು ಗೋಡೆಗೊರಗಿ ತೂಕಡಿಸತೊಡಗಿದರು. ಒಳಬಾಗಿಲ ತೆರೆಯಲ್ಲಿ ಅಲ್ಲಲ್ಲಿ ಉಬ್ಬುಗಳೇಳಿ ಇಳಿಯುವುದನ್ನು ಗಮನಿಸುತ್ತಾ ಸುಲೇಮಾನ್ ದೊಡ್ಡ ಬ್ಯಾಗನ್ನು ಹತ್ತಿರಕ್ಕೆಳೆದುಕೊಂಡು ಹಿಡಿಯ ಮೇಲೆ ಬೆರಳಾಡಿಸುತ್ತಾ ತಲೆತಗ್ಗಿಸಿದ.

ತಾನು ಮಸ್ಕತ್‌ಗೆ ಹೊರಡುವ ದಿನ ಚಾವಡಿ ಹೇಗಿತ್ತೋ ಹಾಗೆಯೇ ಇದೆ. ಮದುವೆಯ ಸಂಭ್ರಮಕ್ಕೆಂದು ಬಳಿದಿದ್ದ ಹಸಿರು ಬಣ್ಣ ಹೊಗೆಯ ಲೇಪದಿಂದ ನೀಲಿಯಾಗಿದೆ. ಒಳಬಾಗಿಲ ದಾರಂದದ ಮೇಲೆ ತೂಗು ಹಾಕಿದ್ದ ಕನ್ನಡಿ ಕಟ್ಟಿನ 'ವೆಲ್‌ಕಂ'ನ ಅಕ್ಷರಗಳು ಮಸಿ ಹಿಡಿದು ಕಪ್ಪಾಗಿವೆ. ಚಾವಡಿಯೊಳಗೆ ಹೊಸದಾಗಿ ಕಂಡದ್ದು ಮೌಲ್ವಿಯವರು ತೊಟ್ಟುಕೊಂಡಿದ್ದ ಬಿಳಿ ಬಟ್ಟೆಗಳು ಮಾತ್ರ.

ಅಂದುಕಾಕ ಬಿಸಿಬಾಣಲೆಯಲ್ಲಿ ಕೂತವನಂತೆ ಚಡಪಡಿಸಲಾರಂಭಿಸಿದ್ದ. ಗೇರು ತೋಟದ ನಡುವೆ ಹಲಸಿನ ಮರದ ಕಪ್ಪು ನೆರಳಲ್ಲಿ ಕಣ್ಣುಮುಚ್ಚಿ ನಿಜದ ಸಿಕ್ಕು ಬಿಡಿಸುತ್ತಿರುವಾಗಲೂ ಅಂದುಕಾಕ ಇಷ್ಟೊಂದು ಗಲಿಬಿಲಿಗೊಂಡಿರಲಿಲ್ಲ. ತನ್ನ ಅಷ್ಟೂ ಮಾತುಗಳಿಗೆ ವಿಚಿತ್ರ ಮೌನವನ್ನೇ ಉತ್ತರವಾಗಿತ್ತಿದ್ದ ಸುಲೇಮಾನ್ ಇದೀಗ ಚಾವಡಿಯ ನಡುವೆ ಯಾವುದೇ ಕ್ಷಣಕ್ಕೂ ಸ್ಫೋಟಗೊಳ್ಳಬಹುದಾದ ಸಿಡಿಮದ್ದಿನ ಪೆಟ್ಟಿಗೆಯ ಕೀಲಿ ಹಿಡಿದು ಕೂತವನಂತೆ, ಸೂಟ್‌ಕೇಸಿನ ಬೀಗದ ಮೇಲೆ ಬೆರಳಾಡಿಸುತ್ತಿರುವುದನ್ನು ಗಮನಿಸಿದಾಗ ರಕ್ತವೆಲ್ಲ ತಣ್ಣಗಾಗುತ್ತಿತ್ತು.

ಕಬರ್‌ಸ್ಥಾನದ ಮೌನದ ನಡುವೆ 'ಟಪ್' ಎಂದು ಸೂಟ್‌ಕೇಸಿನ ಬೀಗ ಹಾರಿಸಿದ ಸುಲೇಮಾನ್, ಎಲ್ಲರಿಗೂ ಅನ್ವಯಿಸುವಂತೆ, 'ಮಗುವನ್ನು ಕರ್‍ಕೊಂಡು ಬರ್‍ತೀರಾ?' ಎಂದು ಪ್ರಶ್ನಿಸಿದಾಗ ಬೆಚ್ಚಿಬಿದ್ದ ಫಕೀರ್ ಸಾಹೇಬರು ಪಕ್ಕದಲ್ಲೇ ಕೂತಿದ್ದ ಅಂದುಕಾಕನ ತೊಡೆಯ ಮೇಲೆ ಕೈ ಊರಿ ಸದ್ದಿಲ್ಲದೇ ಕಣ್ಣೀರು ಸುರಿಸಲಾರಂಭಿಸಿದರು. ಅಂದುಕಾಕ ಅಸಹಾಯಕನಂತೆ ಮುದುಡಿದ.

'ಆಯಿತೆಲ್ಲ ಈಗ, ಇನ್ನು ಅಡಗಿಸುವುದು ಏನುಂಟು? ಮಗುವನ್ನು ತಂದು ತಂದೆಯ ಕೈಯಲ್ಲಿ ಕೊಟ್ಟುಬಿಡಿ' – ಮೌಲ್ವಿಯವರು ಗಂಭೀರವಾಗಿ ಆದೇಶ ನೀಡಿದರು. ಹೊರಗೆ ಜಗಲಿಯಲ್ಲಿ ನಿಂತು ಕಿಟಕಿಯ ಸಂದಿಯಲ್ಲಿ ಇಣುಕುತ್ತಿದ್ದ ಸೈಯ್ಯದ್ ಅಂಗಳಕ್ಕೆ ಹಾರಿ ಮನೆಯ ಹಿಂಭಾಗಕ್ಕೆ ಧಾವಿಸಿದ. ಎರಡು ನಿಮಿಷ ಭಯಾನಕ ಮೌನ.

ಒಳಬಾಗಿಲ ತೆರೆಯ ಸಂದಿಯಿಂದ ಉಮ್ಮಾತುಮ್ಮ ಚಾವಡಿಗೆ ಕಾಲಿಟ್ಟರು. ಹೆಗಲಿಗೊರಗಿ ನಿದ್ರಿಸಿದ್ದ ದುಂಡನೆಯ ಮಗುವಿನ ಬೆನ್ನು ಕೋಣೆ ತುಂಬ ಅಸ್ವಸ್ಥತೆಯ ತರಂಗಗಳನ್ನು ಹಬ್ಬಿಸಿತು. ಏನು ಮಾಡಬೇಕೆಂದು ತಿಳಿಯದೆ ಉಮ್ಮಾತುಮ್ಮ ಮಗುವನ್ನು ಹೆಗಲಿಗೊರಗಿಸಿಕೊಂಡೇ ಬಾಗಿಲ ಬಳಿಯಲ್ಲಿ ಗೋಡೆಗೊರಗಿ ನಿಂತರು.

ಸುಲೇಮಾನ್ ಸೂಟ್‌ಕೇಸಿನ ಬಾಗಿಲನ್ನು ನಿಧಾನವಾಗಿ ತೆರೆದಿರಿಸಿದ. ಎಲ್ಲರ ಕಣ್ಣು ಗೊಂಬೆಗಳಲ್ಲೂ ಸುಲೇಮಾನನ ಬೆರಳುಗಳು ಕುಣಿಯಲಾರಂಭಿಸಿದವು. ಸೂಟ್‌ಕೇಸ್‌ನೊಳಗಿನಿಂದ ಬೆಳ್ಳಿಯಂತೆ ಹೊಳೆಯುತ್ತಿದ್ದ ಬೇರೆ ಬೇರೆ ಆಕಾರದ ಕಬ್ಬಿಣದ ಕೊಳವೆಗಳು ನೆಲಕ್ಕಿಳಿದಾಗ ಕಣ ಕಣ ಸದ್ದು. ನಾಲ್ಕು ಉರುಟು ಗಾಲಿಗಳ ಸ್ಟೀಲು ಸಲಿಕೆಯ ಚೌಕಕ್ಕೆ ಇತರ ಬಿಡಿಭಾಗಗಳನ್ನು ಅತ್ಯಂತ ಪ್ರೀತಿಯಿಂದ ಜೋಡಿಸುತ್ತಾ, ಕೀಲು ತಿರುಗಿಸುತ್ತಾ ತನ್ನನ್ನೇ ತಾನು ಮರೆತಂತಿರುವ ಸುಲೇಮಾನ್‌ನನ್ನು ನೋಡುತ್ತಿದ್ದ ಅಂದುಕಾಕನ ಎದೆಯೊಳಗೆ ಕೋಲಾಹಲ!

ನೋಡು ನೋಡುತ್ತಿರುವಂತೆಯೇ ಚಾವಡಿಯ ನಡುವೆ ಸುಂದರವಾದ ಪುಟ್ಟ ತಳ್ಳುಗಾಡಿಯೊಂದು ಸಿದ್ಧವಾಗಿತ್ತು. ಕಪ್ಪು ಮೆತ್ತನೆಯ ಆಸನಕ್ಕೆ ಹೊಂದಿಕೊಂಡಂತೆ



ಕೆಂಪು ಬಣ್ಣದ ಒರಗು ದಿಂಬು. ಬೆನ್ನ ಹಿಂದೆ ಎರಡು ನಯವಾದ ಹಿಡಿಕೆಗಳು. ಎದ್ದು ನಿಂತ ಸುಲೇಮಾನ್ ತಳ್ಳುಗಾಡಿಯನ್ನು ಅತ್ತಿತ್ತ ಸರಿಸಿ ಪರೀಕ್ಷಿಸಿದಾಗ ಚಕ್ರಗಳಿಗೆ ಅಂಟಿಕೊಂಡಿದ್ದ ಬಂಗಾರ ಬಣ್ಣದ ಗೆಜ್ಜೆಗಳು ಕಿಲಿಕಿಲಿ ನಕ್ಕವು. ಮುಂಗೈಯಿಂದ ಕಣ್ಣೊರಸಿಕೊಂಡ ಸುಲೇಮಾನ್ ನೇರವಾಗಿ ಅತ್ತೆಯ ಬಳಿಗೆ ಹೆಜ್ಜೆಹಾಕಿ ಅವರ ಹೆಗಲಿಗೊರಗಿದ್ದ ಮಗುವನ್ನು ಹೂವಿನಂತೆ ಎತ್ತಿಕೊಂಡು ಬಂದು ತಳ್ಳುಗಾಡಿಯಲ್ಲಿ ಕುಳ್ಳಿರಿಸಿದ. ಆದರೆ ಅಪರಿಚಿತ ಸ್ಪರ್ಶದಿಂದ ಎಚ್ಚೆತ್ತ ಮಗು ಕಿಟಾರನೆ ಕಿರುಚಲಾರಂಭಿಸಿದಾಗ ಸುಲೇಮಾನ್ ತಬ್ಬಿಬ್ಬಾದ. ತಾನೇನು ಮಾಡಬೇಕೆಂದು ಯೋಚಿಸುವಷ್ಟರಲ್ಲಿ, ಒಳಬಾಗಿಲ ತೆರೆಯ ಸಂದಿಯಿಂದ ಬಾಣದಂತೆ ನುಗ್ಗಿ ಬಂದ ಜುಲೇಖ, ಸುಲೇಮಾನ್‌ನನ್ನು ಬದಿಗೆ ತಳ್ಳಿ ಮಗುವನ್ನು ಗಬಕ್ಕನೆ ಎತ್ತಿಕೊಂಡು ಒಳಗೋಡಿದಳು! ಸಿಡಿಲೆರಗಿದವನಂತೆ ಸುಲೇಮಾನ್ ಕುರ್ಚಿಯಲ್ಲಿ ಕುಸಿದು ಕುಳಿತ.

ಧಾವಿಸಿ ಬಂದ ಅಂದುಕಾಕ, ಕುರ್ಚಿಯಲ್ಲಿ ಶವದಂತೆ ಕಾಣಿಸುತ್ತಿದ್ದ ಸುಲೇಮಾನ್‌ನ ಎರಡೂ ಭುಜ ಹಿಡಿದು ಬಲವಾಗಿ ಕುಲುಕುತ್ತಾ, 'ಹಾಗಾದರೆ! ಹಾಗಾದರೆ!! ನಿನಗೆ ಮೊದಲೇ ಗೊತ್ತಿತ್ತಾ?' ಎಂದು ಅಸಹನೆಯಿಂದಲೇ ಪ್ರಶ್ನಿಸಿದ್ದ.

ಹೆಗಲ ಮೇಲಿದ್ದ ಅಂದುಕಾಕನ ಕೈಗಳೆರಡನ್ನೂ ಮೃದುವಾಗಿ ಅದುಮಿ ಹಿಡಿದ ಸುಲೇಮಾನ್ ಬಿಕ್ಕಳಿಸುತ್ತಲೇ ಹೇಳಿದ, 'ಹೂಂ.... ಅಂದುಕಾಕ, ಎರಡು ತಿಂಗಳ ಹಿಂದೆಯೇ ಪೊಡಿಯಜ್ಜನವರು ಅವರ ಮಸ್ಕತ್‌ನಲ್ಲಿರುವ ಅಳಿಯನ ಮೂಲಕ ಎಲ್ಲ ಸುದ್ದಿ ಮುಟ್ಟಿಸಿದ್ದರು. ನರದೋಷದಿಂದ ಮಗುವಿಗೆ ಕಣ್ಣು ಕಾಣಿಸುವುದಿಲ್ಲ ಅಂತ ಆದ್ರೆ ಯಾರಿಗೂ ಏನೂ ಮಾಡಲು ಸಾಧ್ಯವಿಲ್ಲ ಅಂತ ಅಲ್ಲಿಯ ಡಾಕ್ಟರುಗಳೂ ಹೇಳಿದ್ದರು'.

ಅವಾಕ್ಕಾದ ಅಂದುಕಾಕ ಪೊಡಿಯಜ್ಜನವರತ್ತ ಕಣ್ಣು ನೆಡುತ್ತಿರುವಂತೆಯೇ ನಿಧಾನವಾಗಿ ಎದ್ದುನಿಂತ ಸುಲೇಮಾನ್, ಅದುಕಾಕನ ಹೆಗಲ ಮೇಲೆ ತನ್ನ ಬಲಗೈಯಿಂದ ಮೆತ್ತಗೆ ಬಡಿದು ತುಟಿ ಕಚ್ಚುತ್ತಾ ಪ್ರಯಾಸದಿಂದ 'ಥ್ಯಾಂಕ್ಸ್' ಎಂದ. ನೆಲಕ್ಕಂಟಿಕೊಂಡ ಕಾಲುಗಳನ್ನು ಬಲವಂತ ಕೀಳುತ್ತಾ ಒಳಬಾಗಿಲ ಪರದೆಯ ಹಿಂದೆ ಮರೆಯಾದ. ಪೊಡಿಯಜ್ಜನವರನ್ನು ಅಭಿಮಾನದಿಂದ ಕಣ್ಣು ತುಂಬಿಕೊಂಡ ಅಂದುಕಾಕ ಪೆಚ್ಚುಪೆಚ್ಚಾಗಿ ನಗುತ್ತಾ, 'ನಿಮಗೆ ಕಣ್ಣು ಕಾಣಿಸುವುದಿಲ್ಲ ಎಂದು ಹೇಳುವವರ ನಾಲಿಗೆ ಸೀಳಿ, ಮೆಟ್ಟು ಹೊಲಿಯಬೇಕು' ಎಂದು ಕಣ್ಣೊರೆಸಿಕೊಂಡಾಗ, ಪೊಡಿಯಜ್ಜನವರು 'ಈ ಮಾತನ್ನು ನಿನ್ನ ಸೈಯ್ಯದ್‌ನಿಗೆ ಹೇಳು' ಎನ್ನುತ್ತಾ ಜೇಬಿನಿಂದ ಕನ್ನಡಕ ತೆಗೆದು ಕಣ್ಣಿಗಡ್ಡ ಇಟ್ಟುಕೊಂಡರು.

# ಇಮಾರತ್

## 1

ನನ್ನ ರಾಯಭಾರದ ಗೆಲುವಿನ ಬಗ್ಗೆ ಎಳ್ಳಿನಷ್ಟು ವಿಶ್ವಾಸವೂ ನನಗಿದ್ದಿರಲಿಲ್ಲ. ಇಡಿಯ ಜಮಾತ್‌ನವರು, ಅದರಲ್ಲೂ ಇಸ್ಮಾಲಿ ಹಾಜಿಯವರ ಅಧ್ಯಕ್ಷತನದಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು, ಆ ಜಮಾತಿನ ಸದಸ್ಯನೂ ಆಗಿರದ ನಾನು ಏಕಾಯೇಕಿ ಬದಲಿಸಬಲ್ಲೆ ಎಂಬ ಯೋಚನೆ ಸುಲೇಮಾನ್‌ನಿಗೆ ಹೇಗೆ ಹೊಳೆಯಿತೆಂಬುದೇ ನನಗೆ ಒಗಟಾಗಿತ್ತು.

ತೀರಿ ಹೋಗಿರುವ ಸುಪ್ರಸಿದ್ಧ ಮತಪ್ರಸಂಗ ಪಂಡಿತ, ವಾಕ್ ಶಿರೋಮಣಿ ಮೌಲಾನಾ ಮುಹಮ್ಮದ್ ಮುಸ್ಲಿಯಾರರ 'ಇಮಾರತ್' ಆಗಿ ಒಂದು ಮನೆಕಟ್ಟಿಸಿ, ಅದನ್ನು ಮುಸ್ಲಿಯಾರರ ವಿಧವೆ ಸಲ್ಮಾಳಿಗೆ ಕೊಡುವುದೆಂದು ನಿರ್ಧರಿಸಿ, ಊರೂರು ಸುತ್ತಿ ಹಣ ಸಂಗ್ರಹಿಸಿ ಮನೆಯ ಕೆಲಸವನ್ನು ಮುಗಿಸಿದ ಬಳಿಕ, ಇದೀಗ ಕೊನೇ ಕ್ಷಣದಲ್ಲಿ ನಾನು ಹೋಗಿ, 'ಆ ಹುಡುಗಿಗೆ ಮನೆ ಕೊಡುವುದು ಬೇಡ, ಅವಳನ್ನು ಹಾಜಿಯವರ ಮಗನೇ ಮದುವೆ ಮಾಡಿಕೊಳ್ಳುತ್ತಾನಂತೆ' ಎಂದು ಹೇಳಿದರೆ ಯಾರಾದರೂ ಒಪ್ಪಿಯಾರೆ?

ಹಾಜಿಯವರ ಸ್ವಭಾವ ನನಗೆ ಅಪರಿಚಿತವೇನೂ ಅಲ್ಲ, ಬಾಲ್ಯದ ದಿನಗಳಿಂದಲೇ ಅವರ ಬಗ್ಗೆ ಭಯ ಬೆಳೆಸಿಕೊಂಡವನು ನಾನು. ಅವರ ತಲೆಯೊಳಗೆ ಏನಾದರೊಂದು ಬಗೆಯ ಯೋಚನೆ ಹೊಕ್ಕರೆ ಅದನ್ನು ದಕ್ಕಿಸಿಕೊಳ್ಳುವವರೆಗೂ ನಿದ್ರಿಸುವ ಮನುಷ್ಯ ಅಲ್ಲವೆಂಬುದು ನನಗೆ ಗೊತ್ತು. ಮುತ್ತುಪ್ಪಾಡಿ ಜಮಾತಿನ ಅವಿರೋಧ ಅಧ್ಯಕ್ಷರಾಗಿ



ಕಳೆದ ಹತ್ತು ಹನ್ನೆರಡು ವರ್ಷಗಳಿಂದ ರಾಜ ದರ್ಬಾರು ನಡೆಸುತ್ತಿರುವ ತೋಟದ ಮನೆ ಇಸ್ಮಾಲಿ ಹಾಜಿಯವರ ಯಾವುದೇ ಮಾತನ್ನು 'ಅದು ಹಾಗಲ್ಲ – ಹೀಗೆ' ಎನ್ನುವವರು ಮುತ್ತುಪ್ಪಾಡಿ ಜಮಾತಿನಲ್ಲಿ ಒಬ್ಬರೂ ಇರುವುದು ಸಾಧ್ಯವಿಲ್ಲ.

ಆರು ಹೆಣ್ಣುಗಳ ಬಳಿಕ ಏಳನೆಯ ಗಂಡು ಮಗುವಾಗಿ, ಹಾಜಿಯವರ ಸಕಲ ಸಂಪತ್ತಿಗೂ ಹಕ್ಕುದಾರನಾಗಿ ಹುಟ್ಟಿದ್ದ ಸುಲೇಮಾನ್‌ನನ್ನು ಹಲೀಮಮ್ಮನವರು ಅತಿ ಮುದ್ದಿನಿಂದ ಬೆಳೆಸಿದ್ದರಿಂದಲೇ ಇರಬಹುದು: ಅವನು ಕನ್ನಡ ಶಾಲೆಯ ನಾಲ್ಕನೆಯ ತರಗತಿಯನ್ನೂ ದಾಟಲಿಲ್ಲ. ಆದರೆ ಪಿತ್ರಾರ್ಜಿತ ಹೊಲಗದ್ದೆಗಳ ಕೆಸರಲ್ಲಿ ಆಡಿ ಬೆಳೆದ ಹುಡುಗ ಮುಂದೆ ಹತ್ತೇ ವರ್ಷಗಳಲ್ಲಿ, 'ಆಕಾಶವಾಣಿ'ಯವರಿಂದ 'ಆದರ್ಶ ಯುವ ಕೃಷಿಕ' ಎಂದು ಹೊಗಳಿಸಿಕೊಂಡದ್ದು ಸ್ವತಃ ಹಾಜಿಯವರಿಗೂ ಹೆಮ್ಮೆಯ ಸಂಗತಿಯಾಗಿತ್ತು. ಮುತ್ತುಪ್ಪಾಡಿಯ ಚಳ್ಳೆಪಿಳ್ಳೆಗಳೂ ಇದೀಗ ಲುಂಗಿಯಿಂದ ಪ್ಯಾಂಟಿಗೆ ಬದಲಿಸಿಕೊಂಡಿದ್ದರೂ, ಸುಲೇಮಾನ್ ಮಾತ್ರ ಲುಂಗಿಯಲ್ಲೇ ಉಳಿದುಕೊಂಡವನು. ನಿನ್ನೆಯ ದಿನ ನನ್ನನ್ನು ಹುಡುಕಿಕೊಂಡು ಎಂಭತ್ತು ಮೈಲು ಬಸ್ಸಲ್ಲಿ ಬರುವಾಗಲೂ ಅದೇ ವೇಷ.

ಬಾಯಿ ತೆರೆದರೆ ಅರಳು ಹುರಿದಂತೆ ಚಟಪಟ ಮಾತನಾಡಬಲ್ಲ ಸುಲೇಮಾನ್ ನಿನ್ನೆ ಪ್ರತಿಯೊಂದು ಮಾತು ಆಡುವಾಗಲೂ ತಡವರಿಸುತ್ತಿದ್ದ. ಕಪ್ಪು ಶಿಲೆಯಲ್ಲಿ ಕಡೆದಿಟ್ಟಂತೆ ಕಾಣಿಸುವ ಅವನ ಮೂವತ್ತರ ಯವ್ವನಕ್ಕೆ ಹೊಳಪು ನೀಡುತ್ತಿದ್ದ ಅವನ ದೊಡ್ಡ ಕಣ್ಣುಗಳಲ್ಲಿ ನಿನ್ನೆ ನೋವು ಮಡುಗಟ್ಟಿ ಕೂತಿತ್ತು. ಸದಾ ಕಿರುನಗು ಚೆಲ್ಲಿರುತ್ತಿದ್ದ ಅವನ ತುಟಿಗಳು ನಡುಗುತ್ತಿದ್ದವು. ತನ್ನ ತಂದೆಗೆ ಹೊರತಾಗಿ ಬೇರ್‍ಯಾರಿಗೂ ತಲೆಬಾಗಿಸುವುದನ್ನೇ ಕಲಿಯದಿದ್ದ ಸುಲೇಮಾನ್ ನಿನ್ನೆ ನನ್ನೆದುರು ಕಣ್ಣಲ್ಲಿ ನೀರು ತುಂಬಿಕೊಂಡೇ ಯಾಚಿಸಿದ್ದು ನನಗೆ ಅಚ್ಚರಿಯನ್ನುಂಟುಮಾಡಿತ್ತು.

'ನಾನು ನಿನ್ನ ಬಳಿಗೆ ಬರುವ ಬದಲು ಯಾವುದಾದರೂ ಪೋಲೀಸ್ ಸ್ಟೇಷನ್ನಿಗೋ, ರಿಜಿಸ್ಟ್ರಿ ಆಫೀಸಿಗೋ ಅವಳನ್ನು ಕರೆದುಕೊಂಡು ಹೋಗುವುದು ಸಾಧ್ಯ ವಿರುತ್ತಿದ್ದರೇ ಚೆನ್ನಾಗಿರುತ್ತಿತ್ತು. ಆದರೆ ಅವಳಿಗೆ ಇನ್ನೂ ಹದಿನೇಳು ತುಂಬಿಲ್ಲ. ಹಾಗೆಂದು ಇನ್ನೊಂದೆರಡು ವರ್ಷ ಕಾಯುವ ಸ್ಥಿತಿಯಲ್ಲೂ ನಾನಿಲ್ಲ. ನಾಳೆ ಜುಮ್ಮಾ ನಮಾಜು ಆದ ಕೂಡಲೇ ಅವಳ ಹೆಸರಿಗೆ ಮನೆ ಬಿಟ್ಟು ಕೊಡಲು ನಿರ್ಧರಿಸಿಬಿಟ್ಟಿದ್ದಾರೆ. ಒಮ್ಮೆ ಅವಳು ಆ 'ಇಮಾರತ್'ಗೆ ಸೇರಿದಳು ಅಂದಮೇಲೆ ಸಾಯುವವರೆಗೂ ಅವಳು ಮುಸ್ಲಿಯಾರರ ವಿಧವೆಯಾಗಿಯೇ ಉಳಿಯಬೇಕಾಗುತ್ತದೆ. ನೀನು ನಾಳೆ ಬಂದು ಏನಾದರೂ ಮಾಡಿ, ಆ ಮನೆಗೆ ಅವಳು ಸೇರದಂತೆ ಮಾಡಬೇಕು'.

ನನಗೆ ನನ್ನ ಮಿತಿ ಚೆನ್ನಾಗಿಯೇ ತಿಳಿದಿತ್ತು; ನನಗನ್ನಿಸಿದ್ದನ್ನು ಹಾಗೆಯೇ ಹೇಳಿದ್ದೆ, 'ನೋಡು ಸುಲೇಮಾನ್, ನಾನು ಇಂತಹಾ ಕೊನೇ ಗಳಿಗೆಯಲ್ಲಿ ಬಂದು ಮಾಡುವುದೇನೂ ಇಲ್ಲ. ಮುಸ್ಲಿಯಾರರು ತೀರಿಕೊಂಡ ಕೂಡಲೇ, ನೀನು ಅವಳನ್ನು ಮದುವೆಯಾಗಲು ಹೊರಟಿದ್ದರೆ ಆ ಮಾತು ಬೇರೆ, ಆಗಲೂ ನಿನ್ನ ತಂದೆ ಒಪ್ಪುತ್ತಿದ್ದರೆಂದೇನೂ ನನಗೆ ಖಾತರಿಯಿಲ್ಲ. ಆದರೂ ಪ್ರಯತ್ನಿಸಲು ಅವಕಾಶಗಳಿದ್ದವು. ಈಗ ಎಲ್ಲ ಮುಗಿದ ಬಳಿಕ ಯಾರಿಗೇನು ಮಾಡಲು ಸಾಧ್ಯ?'

ಆದರೆ ಸುಲೇಮಾನ್ ನಿಲುವು ಅಚಲವಾಗಿತ್ತು. 'ನೀನು ಹೇಳುವುದು ಒಂದು ರೀತಿಯಲ್ಲಿ ನಿಜವಿರಬಹುದು. ಆದರೆ ಎಂಟು ತಿಂಗಳ ಕೆಳಗೆ ಮುಸ್ಲಿಯಾರರ ಮರಣದ ದುಃಖದಲ್ಲಿ ಊರಿಗೆ ಊರೇ ಕಣ್ಣೀರು ಹಾಕುತ್ತಿದ್ದಾಗ ನಾನು ಯಾವ ಬಾಯಿಯಿಂದ ಹೇಳಲು ಸಾಧ್ಯವಿತ್ತು? ಅವಳ 'ಇದ್ದತ್' ಅವಧಿ ಮುಗಿದ ಬಳಿಕ ಪ್ರಸ್ತಾಪಿಸೋಣ ಎಂದು ಸುಮ್ಮನಿದ್ದೆ. ಆ ನಡುವೆಯೇ 'ಇಮಾರತ್' ಕಟ್ಟಿಸಲು ಅಬ್ಬ ನಿರ್ಧರಿಸಿಬಿಟ್ಟರು. ಅವರ ಮರಣದ ವಾರ್ಷಿಕ ತಿಥಿಯಂದು ಆ ಮನೆಯನ್ನು ಅವಳಿಗೆ ಒಪ್ಪಿಸುವುದು ಅಂತಲೇ ನಿರ್ಧಾರವಾದದ್ದು. ಅವರ ವರ್ಷಾಂತಿಕಕ್ಕೆ ಇನ್ನು ನಾಲ್ಕು ತಿಂಗಳು ಉಂಟು ಅಂತ ನಿನಗೂ ಗೊತ್ತುಂಟು' ಎಂದು ಹೇಳಿದ ಸುಲೇಮಾನ್ ಇದ್ದಕ್ಕಿದ್ದಂತೆ ಮಾತು ನಿಲ್ಲಿಸಿ ಅಸಹಾಯಕತೆಯ ನಗು ಚೆಲ್ಲುತ್ತಾ, 'ನಾನು ಅವಳನ್ನು ನಿಕಾಹ್ ಮಾಡಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದೇನೆ ಎಂಬ ಸುದ್ದಿ ನಾಲ್ಕು ದಿನಗಳ ಕೆಳಗೆ ಅದು ಹೇಗೋ 'ಅಬ್ಬ'ನ ಕಿವಿಗೆ ಬಿದ್ದಿರಬೇಕು. ಅದಕ್ಕೆಂದೇ ಈ ತರಾತುರಿಯ ಜಮಾತ್ ಸಭೆ ಕರೆದಿದ್ದಾರೆ. ನಾಳೆ ಜುಮ್ಮಾ ನಮಾಜು ಮುಗಿದ ಕೂಡಲೇ ಈ ಕಾರ್ಯಕ್ರಮ ನಡೆಯಲಿದೆಯೆಂದು ನನಗೆ ಗೊತ್ತಾದದ್ದೇ ಈವತ್ತು ಬೆಳಗ್ಗೆ. ನನಗೆ ಏನು ಮಾಡಬೇಕೆಂದೇ ಗೊತ್ತಾಗದೆ ನಿನ್ನ ಹತ್ರ ಓಡಿ ಬಂದಿದ್ದೇನೆ. ನಿನ್ನ ಮಾತಿಗೆ ಅಬ್ಬ ಸ್ವಲ್ಪವಾದರೂ ಬೆಲೆ ಕೊಟ್ಟೇ ಕೊಡ್ತಾರೆ'.

ಹಾಜಿಯವರಿಗೆ ನನ್ನ ಬಗ್ಗೆ ಸ್ವಲ್ಪ ವಿಶ್ವಾಸವಿದೆಯೆಂಬುದೇನೋ ನಿಜ. ನಾಲ್ಕು ಅಕ್ಷರ ಕಲಿತ ನಮ್ಮೂರ ಹುಡುಗ ಎಂಬ ಪ್ರೀತಿಯಿಂದಲೇ ಮಾತನಾಡಿಸುತ್ತಿರುವುದೂ ಹೌದು. ಹಾಗೆಂದು ನನ್ನ ತಂದೆಯವರಿಗೂ ಬಹಳ ಹಿರಿಯವರಾಗಿದ್ದ ಹಾಜಿಯವರ ಜತೆ ನನಗೆ ಯಾವುದೇ ಬಗೆಯ ಸಲಿಗೆ ಇರಲಿಲ್ಲ. ಅವರ ಎದುರು ನಿಂತು ಮಾತುಕತೆ ಯಾಡಲು ನಾನು ಧೈರ್ಯ ವಹಿಸಿದ್ದೇ ಇತ್ತೀಚೆಗೆ; ಮದುವೆ–ಉದ್ಯೋಗ ಅಂತ ಊರಿಂದ ದೂರವಾದ ಬಳಿಕ.

ಕಳೆದ ಮೂರು ನಾಲ್ಕು ವರ್ಷಗಳಿಂದ, ಹಾಜಿಯವರು ತಮ್ಮ ಮರದ ವ್ಯಾಪಾರದ



ನಿಮಿತ್ತ ಮಂಗಳೂರಿಗೆ ಬಂದಾಗಲೆಲ್ಲ ನಮ್ಮ ಮನೆಗೆ ಬರುವ ಕ್ರಮವಿರಿಸಿಕೊಂಡಿದ್ದರು. ಅದಕ್ಕೆ ಪ್ರತ್ಯೇಕ ಕಾರಣವೂ ಉಂಟು. ಅವರಿಗೆ ಹೋಟೆಲು ಊಟ ಆಗುತ್ತಿರಲಿಲ್ಲ. ಅವರು ಮಂಗಳೂರಿಗೆ ಬಂದಾಗಲೆಲ್ಲ ಮಧ್ಯಾಹ್ನದ ಊಟ ನಮ್ಮ ಮನೆಯಲ್ಲಿ. ಎರಡು ತುತ್ತು ಅನ್ನ ತಿಂದು ಒಂದರ್ಧ ತಾಸು ಮಂಚದಲ್ಲಿ ಒರಗಿಕೊಂಡು ಮರಳಿ ಬಿಡುತ್ತಿದ್ದರು. ಅವರು ಬರುವ ಹೊತ್ತಲ್ಲೆಲ್ಲ ನಾನು ಕಚೇರಿಯಲ್ಲೇ ಇರುತ್ತಿದ್ದೆನಾದರೂ ಊಟದ ಮೇಜಿನ ಮೇಲೆ ಅವರು ತಂದಿರಿಸುತ್ತಿದ್ದ ತಿಂಡಿಯ ಪೊಟ್ಟಣಗಳು, ಸಂಜೆ ಮನೆಗೆ ಬರುವ ನನಗೆ ಹಾಜಿಯವರ ಆಗಮನದ ಸೂಚನೆ ನೀಡುತ್ತಿದ್ದವು. ಸ್ವಲ್ಪ ಉದ್ದಕ್ಕೆ ಕೂಡಿಸುತ್ತಾ ಹೋದರೆ ಹಾಜಿಯವರು ನನ್ನವಳಿಗೆ ಬಲು ದೂರದ ಮಾವನೂ ಆಗಿಬಿಡುತ್ತಾರೆ.

ನನ್ನ ಹಾಗೂ ಹಾಜಿಯವರ ನಡುವಿನ ಸಂಬಂಧ ಇಷ್ಟು ಮಾತ್ರ. ಆದರೆ ಸುಲೇಮಾನ್ ನನ್ನನ್ನು ಸುಲಭದಲ್ಲಿ ಬಿಟ್ಟುಕೊಡಲು ಸಿದ್ಧನಿರಲಿಲ್ಲ.

'ನೀನು ಬಂದರೆ ಖಂಡಿತಾ ಕೆಲಸವಾಗುತ್ತದೆ. ನಮ್ಮೂರ ಹೆಂಗಸರಲ್ಲಿ ನೂರಕ್ಕೆ ನೂರು ಜನರೂ ಆ ಹುಡುಗಿಯನ್ನು 'ಇಮಾರತ್'ನ ನೆವದಲ್ಲಿ ಜೀವಮಾನ ಪೂರ್ತಿಯಾಗಿ ವಿಧವೆಯನ್ನಾಗಿ ಉಳಿಸುವುದನ್ನು ಇಷ್ಟಪಡುವುದಿಲ್ಲ. ಅಷ್ಟು ಮಾತ್ರವಲ್ಲ, ಮುಸ್ಲಿಯಾರರು ತೀರಿಕೊಂಡಾಗ ಅಬ್ಬನವರು ಇಮಾರತ್‌ನ ಪ್ರಸ್ತಾಪ ಮುಂದಿಟ್ಟಾಗ ಯಾವುದೇ ಯೋಚನೆ ಮಾಡದೆ ಬೆಂಬಲಿಸಿದ್ದ ಕೆಲವು ಗಂಡಸರೂ ಈಗ, ಆ ಹುಡುಗಿಗೊಂದು ಮದುವೆ ಮಾಡಿಸಿದ್ದರೇ ಚೆನ್ನಾಗಿರುತ್ತಿತ್ತು ಎನ್ನಲಾರಂಭಿಸಿದ್ದಾರೆ' ಎನ್ನುತ್ತಾ ನನಗೇ ಉತ್ಸಾಹ ತುಂಬಿಸಲು ಯತ್ನಿಸಿದ್ದ.

ಸುಲೇಮಾನ್‌ನ ಮಾತಿನಲ್ಲಿ ಸತ್ಯಾಂಶವಿದ್ದಿರಲೂಬಹುದು. ಆದರೆ ಜನರ ಅಭಿಪ್ರಾಯವನ್ನು ಹಾಜಿಯವರಲ್ಲಿ ವಿವರಿಸಿ ಹೇಳಬಲ್ಲ ಒಬ್ಬನಾದರೂ ಮುತ್ತುಪ್ಪಾಡಿ ಯಲ್ಲಿದ್ದಿರಲಾರ – ಯಾಕೆಂದರೆ ಸಮಸ್ಯೆ ವಿಧವೆಯೊಬ್ಬಳ ಮರುಮದುವೆಯದಷ್ಟೆ ಆಗಿದ್ದಿರಲಿಲ್ಲ; ಅವಳನ್ನು ಮದುವೆಯಾಗಲಿರುವವನು ಸ್ವತಃ ಹಾಜಿಯವರ ಮಗನೇ ಆಗಿದ್ದ. ಆದರೆ ಇದಿಷ್ಟೆ ಆಗಿದ್ದರೂ ಹಾಜಿಯವರನ್ನು ಒಪ್ಪಿಸಬಹುದಿತ್ತೇನೋ.. ಆದರೆ ವಿಧವೆಯಾಗಿರುವ ಹೆಣ್ಣು ಅಂತಿಂಥ ವಿಧವೆಯಲ್ಲ! ಮುತ್ತುಪ್ಪಾಡಿ ಜಮಾತಿಗೂ, ಆ ಮೂಲಕ ಜಮಾತ್ ಅಧ್ಯಕ್ಷ ಇಸ್ಮಾಲಿ ಹಾಜಿಯವರಿಗೂ ನಾಲ್ಕೂರಲ್ಲಿ ಹೆಸರು ತಂದಿತ್ತ ಸುಪ್ರಸಿದ್ಧ ಮತಪಂಡಿತರ ವಿಧವೆ. ಅಲ್ಲಾಹುವಿನ ಪಾದ ಸೇರಿದ್ದ ಮುಸ್ಲಿಯಾರರ 'ಇಮಾರತ್'ನಲ್ಲಿದ್ದುಕೊಂಡು ಇಡಿಯ ಊರಿಗೇ ಗೌರವಾನ್ವಿತಳಾಗಿ ಬದುಕಬೇಕಾಗಿರುವ ವಿಧವೆ!

## 2

ನಾನು ಬಸ್ಸಿನಿಂದಿಳಿದಾಗ ಗಂಟೆ ಹನ್ನೊಂದಾಗುತಲಿತ್ತು. ನೆತ್ತಿಯ ಮೇಲೆ ಸೂರ್ಯ ಸುಡುತ್ತಿದ್ದ. ಹಾಜಿಯವರ ತೋಟದ ಮನೆಗೆ ಬಹಳ ದೂರವೇನೂ ಇಲ್ಲ. ನಾನು ಬಾಲ್ಯದಲ್ಲಿ ಓಡಾಡಿದ ದಾರಿ. ಗುಡ್ಡ ಶಾಲೆಯ ದಿನ್ನೆ ಹತ್ತಿ ಇಳಿದರೆ ಹಾಜಿಯವರ ಅಡಿಕೆ ತೋಟ ಆರಂಭವಾಗುತ್ತದೆ. ತೋಟಕ್ಕೆ ತಾಗಿಕೊಂಡೇ ಅವರ ಮನೆ; 'ಹಲೀಮಾ ಮಂಜಿಲ್'.

ನಾನು ಮನೆಯ ಮೆಟ್ಟಲೇರಿದಾಗ ಎದೆಬಡಿತ ಜೋರಾಗಿತ್ತು. ಹಾಜಿಯವರ ಜತೆ ಯಾವ ಬಗೆಯಿಂದ ಮಾತು ಆರಂಭಿಸುವುದೆಂದೇ ನಿರ್ಧಾರ ಮಾಡಲು ಅಸಮರ್ಥ ನಾಗಿದ್ದೆ. ಸುಲೇಮಾನ್‌ನ ಒತ್ತಾಯಕ್ಕೆ ಇಲ್ಲವೆನ್ನಲಾಗದೆ ಹೊರಟು ಬಂದದ್ದೇನೋ ಆಗಿತ್ತು. ಹಾಜಿಯವರು ಎದುರಾದ ಕೂಡಲೇ, 'ನೋಡಿ ಹಾಜಾರ್‍ರೇ, ನೀವು ಮೂರು ವರ್ಷದಿಂದ ನಮ್ಮ ಮನೆಯ ಅನ್ನ ತಿನ್ನುತ್ತಾ ಬಂದಿದ್ದೀರಿ. ಆದ್ದರಿಂದ ನಾನು ಹೇಳಿದ ಹಾಗೆ ಕೇಳಿ. ನಿಮ್ಮ ಮಗ ಸುಲೇಮಾನನಿಗೆ ಆ ಹುಡುಗಿಯನ್ನು ನಿಕಾಹ್ ಮಾಡಿಸಿ' ಎಂದು ಹೇಳಿಬಿಡುವುದೇ? ಹಾಜಿಯವರ ಮನೆಯಲ್ಲಿ ಕೋವಿ ಇರುವುದನ್ನು ನಾನು ಚಿಕ್ಕಂದಿನಲ್ಲೇ ಕಂಡಿದ್ದೆ!

ನಡುಗುವ ಬೆರಳುಗಳಿಂದಲೇ ಬಾಗಿಲು ಬಡಿದೆ. ಸುಲೇಮಾನ್ ಖಡಾ ಖಂಡಿತ ವೆಂಬಂತೆ ಹೇಳಿದ್ದ, 'ನೀನು ಹನ್ನೆರಡರ ಮೊದಲು ಬಂದರೆ ಅಬ್ಬ ಮನೆಯಲ್ಲೇ ಸಿಗುತ್ತಾರೆ. ಶುಕ್ರವಾರ ಅವರು ಬೇರೆಲ್ಲಿಗೂ ಹೋಗುವುದಿಲ್ಲ'.

ಸುಲೇಮಾನ್ ನಿಜವನ್ನೇ ಹೇಳಿದ್ದ, ಬಾಗಿಲು ತೆರೆದದ್ದೇ ಹಾಜಿಯವರು! ನಾನು ಗಲಿಬಿಲಿಯಿಂದ 'ಅಸ್ಸಲಾಂ ಅಲೈಕುಂ' ಎನ್ನುತ್ತಾ ಕೈ ಎತ್ತಿ ವಂದಿಸಲು ಯತ್ನಿಸಿದ್ದೆನಾದರೂ, ನನ್ನ ಧ್ವನಿ ಗಂಟಲ ಒಳಗೇ ಕರಗಿಬಿಟ್ಟಿತು. ಬಾಗಿಲಿಗಡ್ಡವಾಗಿ ನಿಂತುಕೊಂಡ ಹಾಜಿ ಯವರು ನನ್ನತ್ತ ಅಪರಿಚಿತ ನೋಟ ಬೀರಿದಾಗ ಮುಜುಗರದಿಂದ ನಾನು 'ಹಹ್ಹೆ, ನನ್ನ ಗುರುತು ಆಗಲಿಲ್ಲವೇ?' ಎಂದು ಪೆಚ್ಚು ಪೆಚ್ಚಾಗಿ ನಗಲು ಯತ್ನಿಸಿದೆ.

ಹಾಜಿಯವರು ನಿಂತ ಭಂಗಿ ಬದಲಿಸಲಿಲ್ಲ. ಒಳಗೆ ಬಾ ಎನ್ನಲೂ ಇಲ್ಲ. ಬಾಗಿಲಿಗಡ್ಡವಾಗಿ ತುಂಬಿಕೊಂಡದ್ದರಿಂದ ನಾನು ಒಳಗೆ ನುಸುಳುವಂತೆಯೂ ಇರಲಿಲ್ಲ. ನನ್ನ ಸ್ಥಿತಿ ಚಿಂತಾಜನಕ. ಸ್ವಲ್ಪ ಹೊತ್ತು ಅಸಹನೀಯ ಮೌನ.

'ಏನು ಈ ಕಡೆ ಅಪರೂಪದ ಸವಾರಿ?' ಹಾಜಿಯವರ ಮಾತಿನಲ್ಲಿ ಕುಹಕದ ನೆರಳಿತ್ತು.

'ಹಿ... ಹ್ಹೀ... ಹೀಗೇ...ಬಂದೆ' ಎಂದು ತಡವರಿಸಿದ್ದೆ.



'ಅಷ್ಟೇ ಅಲ್ವಾ? ಹಾಗಾದರೆ ಊಟ ಮಾಡಿಕೊಂಡು ನಿನ್ನ ದಾರಿ ನೋಡು' ಎಂದು ತೀರಾ ಒರಟಾಗಿ ನುಡಿದ ಹಾಜಿಯವರು, ನನ್ನ ಮೈಮೇಲೆಯೇ ಬೀಳುವವರಂತೆ ಮೆಟ್ಟಲಿಳಿದು, ಅಂಗಳದಲ್ಲಿ ದಾಪುಗಾಲು ಹಾಕುತ್ತಾ ತೋಟದೊಳಗೆ ನುಗ್ಗಿಬಿಟ್ಟರು!

ನಾನು ಗರಬಡಿದವನಂತೆ ನಿಂತು ಬಿಟ್ಟಿದ್ದೆ. ನನ್ನ ಬಗ್ಗೆ ಅಷ್ಟೊಂದು ಪ್ರೀತಿವಿಶ್ವಾಸ ಹೊಂದಿದ್ದ ಹಾಜಿಯವರು ನನ್ನನ್ನು ಈ ಬಗೆಯಲ್ಲಿ ಸ್ವಾಗತಿಸಬಹುದೆಂದು ಕನಸು ಕೂಡಾ ಕಾಣಲು ನಾನು ಸಿದ್ಧನಿರಲಿಲ್ಲ. ನಾನು ಸುಲೇಮಾನ್‌ನ ಬಗ್ಗೆ ಮಾತನಾಡಲು ಬಂದವನೆಂದು ಹಾಜಿಯವರಿಗೆ ಗೊತ್ತಾಗಿದ್ದಿರಬಹುದೇ? ನಾನು ಅತ್ತಿತ್ತ ಕಣ್ಣು ಹಾಯಿಸಿದೆ. ಸುಲೇಮಾನ್‌ನ ನೆರಳೂ ಕಾಣಿಸಲಿಲ್ಲ.

ಅದಷ್ಟರಲ್ಲಿ ಹಲೀಮಮ್ಮನವರು ಹೊರಗೆ ಬಂದು ನನ್ನ ತೋಳು ಹಿಡಿದು ಒಳ ಕೋಣೆಯವರೆಗೂ – ಹೆಚ್ಚು ಕಮ್ಮಿ ಎಳೆದುಕೊಂಡೇ – ಹೋಗಿಬಿಟ್ಟಿದ್ದರು. ನಾಚಿಕೆ–ಅವಮಾನ ಗಾಬರಿಗಳ ಮುದ್ದೆಯಾಗಿದ್ದ ನನ್ನನ್ನು ಮಂಚದ ಮೇಲೆ ಕುಳ್ಳಿರಿಸಿದ ಹಲೀಮಮ್ಮನವರು.

'ನೀನೇನೂ ಬೇಜಾರು ಮಾಡಿಕೊಳ್ಳಬೇಡ ಇವನೇ. ನಿನ್ನೆ ರಾತ್ರಿಯಿಂದ ನಮಗೆಲ್ಲರಿಗೂ ಇದೇ ಗತಿ. ಸುಲೇಮಾನ್ ನಿನ್ನೆ ನಿನ್ನ ಹತ್ರ ಬಂದದ್ದನ್ನು ಅದ್ಯಾರೋ ಇವರ ಕಿವಿಗೆ ಊದಿದ್ದಾರೆ. ಬೆಳಗ್ಗಿನಿಂದಲೂ ಚಾವಡಿಯಲ್ಲಿ ಕುಳಿತುಕೊಂಡು ನಿನ್ನನ್ನು ಕಾಯ್ತಾ ಇದ್ರು. ನೀನು ಬಂದಾಗ ಅದೇನೆಲ್ಲ ಆಗಿಬಿಡ್ತದೋ ಅಂತ ನಾನು ಹೆದರಿ ಹೋಗಿದ್ದೇ'.

'ಸುಲೇಮಾನ್ ಎಲ್ಲಿ? ಕಾಣುವುದೇ ಇಲ್ಲಾ!' ನಾನು ಅಸಹನೆಯಿಂದಲೇ ಪ್ರಶ್ನಿಸಿದ್ದೆ.

ರಾತ್ರಿಯಿಂದ ತೋಟದ ಮನೆಯಲ್ಲೇ ಇದ್ದಾನೆ. ಈಗ ಇವರೂ ಅಲ್ಲಿಗೆ ನುಗ್ಗಿ ಬಿಟ್ಟಿದ್ದಾರಲ್ಲಾ? ಅಲ್ಲಿ ಇನ್ನು ಏನೇನು ಆಗ್ಲಿಕುಂಟೋ ಆ ಅಲ್ಲಾಹು ಒಬ್ಬನಿಗೇ ಗೊತ್ತು'.

'ಹಾಗಾದರೆ ನನಗೆ ಅಲ್ಲಿಗೆ ಹೋಗಬೇಕು' ನಾನು ಎದ್ದು ನಿಂತೆ.

ಪಕ್ಕದಲ್ಲೇ ನಿಂತಿದ್ದ ಹಲೀಮಮ್ಮನವರು ನನ್ನ ಭುಜ ಹಿಡಿದು ಮಂಚದತ್ತ ತಳ್ಳುತ್ತಾ 'ನೀನು ಅಲ್ಲಿಗೆ ಹೋಗಿ ಏನು ಮಾಡುತ್ತೀ? ನೀನು ಬಂದುದರಿಂದ ಒಂದು ಲಾಭವಂತೂ ಆಗಿದೆ. ನಿನ್ನೆ ರಾತ್ರಿಯಿಂದಲೂ ಈ ನಿನ್ನ ಹಾಜಿಯವರು, 'ಸುಲೇಮಾನ್ ನನ್ನು ಕೊಂದುಬಿಡ್ತೇನೆ' ಅಂತಲೇ ಹಾರಾಡ್ತಾ ಇದ್ರು. ಅವನು ತೋಟದಲ್ಲಿ ಇದ್ದಾನೆ ಅಂತ ಹೇಳುವ ಧೈರ್ಯ ನಿನ್ನೆ ರಾತ್ರಿಯ ಹೊತ್ತಲ್ಲಿ ನನಗಂತೂ ಇರಲಿಲ್ಲ. ಈಗಾದರೆ ಪರವಾಗಿಲ್ಲ. ಅವನ ಹತ್ತರ ಬೇರೆ ಬೇರೆ ನಾಲ್ಕೈದು ಜನ ಇದ್ದಾರೆ. ಅಲ್ಲಿ ಬಹಳವೆಂದರೆ ನಾಲ್ಕು ಬೊಬ್ಬೆಯಾದೀತು ಹೊರತು ಯಾರಿಗೇನೂ ತೊಂದರೆಯಾಗಲಿಕ್ಕಿಲ್ಲ'.

ಹಲೀಮಮ್ಮನವರ ಮಾತು ಬಹಳ ಭರವಸೆಯಿಂದ ಕೂಡಿದಂತಿತ್ತು.

'ನಿಮಗೆ ಈ ಮದುವೆ ಇಷ್ಟವುಂಟಾ?' ನಾನು ನೇರವಾಗಿ ಪ್ರಶ್ನಿಸಿದ್ದೆ.

'ನನ್ನ ಇಷ್ಟದಿಂದ ಏನಾಗಲಿಕ್ಕುಂಟು ಇವನೇ?' ಹಲೀಮಮ್ಮನವರು ವಿಷಾದದ ಸ್ವರದಲ್ಲಿ ಪ್ರಶ್ನಿಸುತ್ತಾ ಮಂಚದಲ್ಲಿ ನನ್ನ ಪಕ್ಕವೇ ಕುಳಿತುಕೊಂಡು,

'ನೋಡು ಇವನೇ, ಆ ಹುಡುಗಿ ಸಲ್ಮಾ ಉಂಟಲ್ಲಾ, ಅವಳ ಮನೆ ಇರುವುದು ನಮ್ಮ ತೋಟದ ಆಚೆ ಬದಿಯಲ್ಲಿ. ಮೊನ್ನೆ ಮೊನ್ನೆ ತನಕ ನಮ್ಮ ಮನೆಯ ಅಂಗಳದಲ್ಲೇ ಆಡಿಕೊಂಡಿದ್ದ ಹುಡುಗಿ ಅದು. ಅದಕ್ಕೆ ಅಪ್ಪ ಇಲ್ಲ. ತಾಯಿ ಒಬ್ಬಳಿದ್ದಾಳೆ. ಬೀಡಿ ಕಟ್ಟಿ ಏನಾದ್ರೂ ಸಿಕ್ಕಿದ್ರೆ ಮಾಡ್ತಾಳೆ. ಇಲ್ಲದಿದ್ರೆ ಇಲ್ಲ' ಎನ್ನುತ್ತಾ ಲೊಚಗುಟ್ಟಿದರು.

'ಅಷ್ಟು ಬಡತನದಲ್ಲಿರುವ ಹುಡುಗಿಯನ್ನು ಮುಸ್ಲಿಯಾರರು ನಿಕಾಹ್ ಮಾಡಿ ಕೊಂಡಿದ್ದಾದರೂ ಯಾಕೆ? ಅವರಿಗೆ ಬೇರೆ ಯಾರೂ ಹೆಣ್ಣು ಕೊಡುತ್ತಿರಲಿಲ್ಲವೇ?' ನಾನು ಕುತೂಹಲದಿಂದಲೇ ಪ್ರಶ್ನಿಸಿದ್ದೆ.

'ಮುಸ್ಲಿಯಾರರಿಗೆ ಹುಡುಗಿಯಾ!' ಎಂದು ಉದ್ಗರಿಸಿದ್ದ ಹಲೀಮಮ್ಮನವರು, 'ಅವರು ಹೂಂ ಎಂದಿದ್ದರೆ ಐವತ್ತು ಪವನು ಬಂಗಾರ ಹಾಕಿ ಹುಡುಗಿಯನ್ನು ಕೊಡು ವವರು ಈ ಊರಲ್ಲೇ ಬೇಕಾದಷ್ಟು ಜನ ಇದ್ದರು. ಆದರೆ ಇವನೇ, ನಾನು ಪಂಥ ಕಟ್ಟಲು ಬೇಕಾದರೆ ತಯಾರಿದ್ದೇನೆ. ನೂರು ಪವನು ಬಂಗಾರ ಹಾಕಿದರೂ ಸಲ್ಮಾಳ ಹಾಗೆ ಚೆಂದ ಕಾಣುವ ಹುಡುಗಿ ಈ ಲೋಕದಲ್ಲಿ ಬೇರೆ ಇರಲಿಕ್ಕಿಲ್ಲ' ಎಂದು ಹೇಳುತ್ತಾ ಇದ್ದಕ್ಕಿದ್ದಂತೆ ತಮ್ಮ ಧ್ವನಿಯನ್ನು ತಗ್ಗಿಸಿ, 'ಅದಕ್ಕೇ ಅಲ್ವಾ ನಮ್ಮ ಸುಲೇಮಾನ್ ಒಂದು ವರ್ಷದಿಂದ ಅವಳ ಹಿಂದೆ ತಿರುಗುತ್ತಿರುವುದು?'

'ಒಂದು ವರ್ಷದಿಂದ!' ನನಗರಿವಿಲ್ಲದೆ ಉದ್ಗರಿಸಿದ್ದೆ.

'ಹೂಂ! ಒಂದು ವರ್ಷದಿಂದಲೇ, ಬೇಕಾದರೆ ಎರಡು ವರ್ಷದಿಂದಲೇ ಅಂತಲೂ ಹೇಳಬಹುದು. ನನಗೆ ಮೊದಲೇ ಅನುಮಾನವಿತ್ತು. ಆದರೆ ಈ ಹಾಜಾರ್ರಲ್ಲಿ ಹೇಳುವ ಧೈರ್ಯ ಯಾರಿಗುಂಟು ಹೇಳು? ನಿನಗೂ ಗೊತ್ತು. ನಮಗಿರುವುದು ಒಬ್ಬನೇ ಮಗ. ಇರುವ ಮನೆ–ತೋಟ ಎಲ್ಲ ಅವನಿಗೇ ಸೇರುವಂಥದ್ದು, ಈ ಮನೆಗೆ ಬೇರೆ ಹುಡುಗಿ ಯೊಂದು ನೂರು ಪವನು ಬಂಗಾರ ಹೊತ್ತುಕೊಂಡು ಬರುವ ಅಗತ್ಯವೂ ನಮಗಿಲ್ಲ. ನನ್ನ ಕಣ್ಣೆದುರೇ ಬೆಳೆದ ಹುಡುಗಿ ಈ ಮನೆಗೆ ಬಂದರೆ ನಾನು ಸ್ವಲ್ಪ ಕಾಲುಚಾಚಿ ಮಲಗಲು ಪುರುಸೊತ್ತಾದರೂ ಸಿಗಬಹುದಿತ್ತು. ಆದರೆ ಯಾರು ಏನು ಮಾಡಲು ಸಾಧ್ಯ?' ಹಲೀಮಮ್ಮ ನಿಟ್ಟುಸಿರುಬಿಟ್ಟರು.



'ನೀವು ಇಷ್ಟೆಲ್ಲ ಹೆದರಿ ಕೂತದ್ದರಿಂದಲ್ಲವೇ ಈ ಪರಿಸ್ಥಿತಿ ಬಂದದ್ದು? ಈಗ ಏನು ಮಾಡಬೇಕು ಅಂತ ಇದ್ದೀರಿ? ಈಗಲ್ಲಿ ತೋಟದಲ್ಲಿ ತಂದೆ ಮಗ ಜಗಳ ಮಾಡ್ತಾ ಇರುವಾಗ ನಾನಿಲ್ಲಿ ನಿಮ್ಮ ಹತ್ರ ಸುಖದುಃಖ ಮಾತಾಡ್ತಾ ಕೂತುಕೊಳ್ಳುವುದು ನ್ಯಾಯವಾ? ನೀವೂ ಬನ್ನಿ, ಇಬ್ಬರೂ ಅಲ್ಲಿಗೆ ಹೋಗಿ ಹಾಜಾರ್ರಲ್ಲಿ ಮಾತಾಡುವಾ ಏನಾದರೊಂದು ತೀರ್ಮಾನ ಆಗಿಬಿಡಲಿ' – ನಾನು ಧೈರ್ಯ ತಂದುಕೊಳ್ಳುತ್ತಾ ಮಂಚದಿಂದ ಏಳಲು ಪ್ರಯತ್ನಿಸಿದೆ.

'ಗಡಿಬಿಡಿ ಮಾಡಬೇಡ' ಎನ್ನುತ್ತಾ ನನ್ನ ಕೈಹಿಡಿದು ಜಗ್ಗಿದ ಹಲೀಮಮ್ಮನವರು 'ಈಗ ನಾವಲ್ಲಿ ಹೋಗುವುದರಿಂದ ಯಾವ ಕೆಲಸವೂ ಆಗುವುದಿಲ್ಲ. ಸ್ವಲ್ಪ ಹೊತ್ತು ಹೋಗಲಿ. ಜುಮ್ಮಾ ನಮಾಜಿಗೆ ಅಂತ ಇವರು ಮಸೀದಿಗೆ ಹೋಗಲೇಬೇಕು. ಅವರೇನು ತೋಟದಲ್ಲೇ ಇರುತ್ತಾರೆಯೇ?' ಎಂದು ನನ್ನನ್ನು ತಡೆದರು.

ಅವರ ವರ್ತನೆಯೇ ಒಗಟಿನಂತೆ ಕಾಣಿಸಿತು.

ಮುತ್ತುಪ್ಪಾಡಿಯ ಬಡ ಗುಡಿಸಲೊಂದರಿಂದ ಯಾರದೋ ಲಾರಿ ಹತ್ತಿ ಕೇರಳಕ್ಕೆ ಓಡಿ ಹೋಗಿದ್ದ ಅನಾಮಧೇಯ ಹುಡುಗನೊಬ್ಬ, ತಳಂಗೆರೆಯ ಸುಪ್ರಸಿದ್ಧ ಮತ ಪಂಡಿತರಾಗಿದ್ದ ಅಲ್‌ಹಾಜಿ ಕುಂಞಕೋಯಾ ತಂಜಳ್‌ರವರ ಪಟ್ಟದ ಶಿಷ್ಯನಾಗಿ, ತನ್ನ ಅಸ್ಖಲಿತ ವಾಕ್‌ಚಾತುರ್ಯದಿಂದ ಕೇಳುಗರನ್ನು ನಿಬ್ಬೆರಗಾಗಿಸಬಲ್ಲ 'ಮತಪ್ರಸಂಗ ಪಂಡಿತ'ನಾಗಿ ರೂಪುಗೊಂಡದ್ದು ಸಾಮಾನ್ಯ ಸಂಗತಿಯೇನೂ ಅಲ್ಲ.

ಕೇರಳದ ತುಂಬೆಲ್ಲ ಮಿನಾರ್‌ನಂತೆ ಬೆಳೆಯುತ್ತಿದ್ದ ಈ ಯುವ ಮತ ಪ್ರಸಂಗ ಪಂಡಿತನ ಖ್ಯಾತಿ ಮುತ್ತುಪ್ಪಾಡಿಗೂ ತಲುಪಿದಾಗ, ಹಾಜಿಯವರಿಗೆ ತಮ್ಮೂರ ಹುಡುಗನ ಬಗ್ಗೆ ಇದ್ದಕ್ಕಿದ್ದಂತೆಯೇ ಪ್ರೀತಿ ಹುಟ್ಟಿತು.

ನಾಲ್ಕು ವರ್ಷಗಳ ಹಿಂದೆ 'ಮತಪ್ರಸಂಗ' ನಡೆಸುವ ನೆವದಲ್ಲಿ ಅವರನ್ನು ಕರೆಸಿ ಕೊಂಡು ತಮ್ಮ ಮನೆಯಲ್ಲೇ ತಿಂಗಳ ಕಾಲ ಉಪಚರಿಸಿದ ಹಾಜಿಯವರು, ತಮ್ಮ ಪ್ರಭಾವ ಬೀರಿ ಕನ್ನಡ ಜಿಲ್ಲೆಯ ಇತರ ಏಳೆಂಟು ಮಸೀದಿಗಳಲ್ಲೂ 'ಮತಪ್ರಸಂಗ'ದ ಕಂತ್ರಾಟು ಕೊಡಿಸಿದ್ದಲ್ಲದೆ, ಪ್ರತಿಯೊಂದು ಮತಪ್ರಸಂಗದ ಕರಪತ್ರದಲ್ಲೂ 'ಮುತ್ತುಪ್ಪಾಡಿ ಮೌಲಾನಾ ಮುಹಮ್ಮದ್ ಮುಸ್ಲಿಯಾರರಿಂದ ಗಂಭೀರ ಮತಪ್ರಸಂಗ ಕಾರ್ಯಕ್ರಮ' ಎಂದೇ ಮುದ್ರಣವಾಗುವಂತೆ ನೋಡಿಕೊಂಡಿದ್ದರು.

ಇಸ್ಮಾಲಿ ಹಾಜಿಯವರ ಪ್ರೀತಿ ವಿಶ್ವಾಸಗಳಿಗೆ ಸಂಪೂರ್ಣ ಶರಣಾದ 'ಮುತ್ತುಪ್ಪಾಡಿ ಮುಸ್ಲಿಯಾರರು' ಗುಡ್ಡೆ ಶಾಲೆಯ ಹಿಂಭಾಗದಲ್ಲಿ ಹಾಜಿಯವರೇ ಉಚಿತವಾಗಿ ಒದಗಿಸಿದ ಹಳೆಯ ಮನೆಯೊಂದರಲ್ಲಿ ಹೊಸ ಜೀವನ ಆರಂಭಿಸಲು ಒಪ್ಪಿಕೊಂಡಿದ್ದರು.

ವರುಷ ಎರಡು ವರುಷ ದಾಟುವ ಮೊದಲೇ ಮುತ್ತುಪ್ಪಾಡಿ ಜಮಾತಿನ ಹೆಸರು ಕರಾವಳಿಯುದ್ದಕ್ಕೂ ಕೇಳಿಸುವಂತಾಗಿತ್ತು. ಯಾವುದೇ ಊರಿನ ಯಾವುದೇ ಮಸೀದಿಯ ಜೀರ್ಣೋದ್ಧಾರವಾಗಬೇಕಿದ್ದರೆ 'ಮುತ್ತುಪ್ಪಾಡಿ ಮುಸ್ಲಿಯಾರರ' ಮತಪ್ರಸಂಗ ಕಾರ್ಯಕ್ರಮ ವಿದೆಯೆಂದು ಕರಪತ್ರ ಮುದ್ರಿಸಿ ಹಂಚಿದರೆ ಸಾಕು; ರಾತ್ರಿಯಾಗುತ್ತಿರುವಂತೆಯೇ ಮಸೀದಿಯ ಅಂಗಳದಲ್ಲಿ ಜನ ಜಾತ್ರೆಯಾಗುತ್ತದೆ.

ಜಗಜಗಿಸುವ ವಿದ್ಯುತ್ ದೀಪಗಳ ಬೆಳಕಿನಲ್ಲಿ, ಧ್ವನಿವರ್ಧಕದ ಎದುರು ನಿಂತು, ಕಿವಿಯಾನಿಸಿ ಕುಳಿತ ಪ್ರೇಕ್ಷಕರನ್ನು ವೈಯಕ್ತಿಕವಾಗಿ ಕರೆದು ಮಾತನಾಡಿಸುತ್ತಿರುವವರಂತೆ ಮಾತು ಆರಂಭಿಸುತ್ತಿದ್ದ ಮುಸ್ಲಿಯಾರರು, ತಮ್ಮ ರಸವತ್ತಾದ ಮಾತಿನ ಮೋಡಿಯಿಂದ ಸ್ವರ್ಗ–ನರಕಗಳೆರಡನ್ನೂ ದೇವಲೋಕದಿಂದ ಎಳೆದು ತಂದು ಮಸೀದಿಯ ಅಂಗಳದಲ್ಲಿ ಹರಡಿಬಿಡುತ್ತಿದ್ದರು.

ಧರ್ಮಸಮ್ಮತವಾಗಿ ನಡೆದುಕೊಳ್ಳುವ ನೈಜ ಮುಸಲ್ಮಾನರಿಗೆ ಮಾತ್ರ ಅಲ್ಲಾಹು ಮೀಸಲಾಗಿಟ್ಟಿರುವ ಮರಣಾನಂತರದ ಬದುಕಿನ ಸಕಲ ಸುಖ ಸೌಭಾಗ್ಯಗಳ ಪಟ್ಟಿಯನ್ನು ಮುಸ್ಲಿಯಾರರು ಬಿಡಿಸಿ ಬಿಡಿಸಿ ವಿವರಿಸುತ್ತಿರುವಂತೆಯೇ, ಪುಳಕಿತರಾಗುತ್ತಿದ್ದ ಭಾವುಕ ಮಂದಿ, ಇಹಲೋಕದ ಸುಖಕ್ಕೆಂದು ಗಳಿಸಿದ್ದ ರೂಪಾಯಿ ನೋಟುಗಳನ್ನು ಮಸೀದಿಯ ಗೋಲಕಕ್ಕೆ ತುರುಕಿಸಿ ಧನ್ಯರಾಗುತ್ತಿದ್ದರು. ಪರಲೋಕದ ಆಸೆ ಅತಿರೇಕಕ್ಕೆ ತಲುಪಿದಾಗ ಹೆಂಗಸರ ಕಾಲಿನ ಬೆಳ್ಳಿಗೆಜ್ಜೆ, ಬೆರಳಿನ ಉಂಗುರ, ಕಿವಿಯ ಅಲಿಖತ್–ಹೀಗೆ ಒಂದಲ್ಲ ಒಂದು ಬಗೆಯಲ್ಲಿ ಮಸಈದಿಯ ಜೀರ್ಣೋದ್ಧಾರಕ್ಕೆಂದು – ಸಂಪತ್ತು ಸಂಗ್ರಹ ವಾಗುತಲಿತ್ತು.

ಮುತ್ತುಪ್ಪಾಡಿ ಜುಮ್ಮಾ ಮಸೀದಿಗೆ ಹನ್ನೆರಡು ಕಂಭಗಳ ಹೊಸ ಅಂಕಣ, ಅರೆಬಿಕ್ ಶಾಲೆಗೆ ಹೊಸ ಮಾಡು, ಕಬರ್‌ಸ್ಥಾನಕ್ಕೆ ಕಾಂಪೌಂಡ್ ಗೋಡೆ – ಈ ಎಲ್ಲದರ ಹಿಂದೆಯೂ ಮುತ್ತುಪ್ಪಾಡಿ ಮುಸ್ಲಿಯಾರರ 'ಮತಪ್ರಸಂಗ'ದ ಮೋಡಿಯಿತ್ತು; ಜತೆಯಲ್ಲಿ ಇಸ್ಲಾಮಿ ಹಾಜಿಯವರ ಸಂಘಟನಾ ಚಾತುರ್ಯವೂ ಇತ್ತು. ಎರಡು ವರ್ಷಗಳ ಹಿಂದೆ ಮಂಗಳೂರಲ್ಲಿ ನಡೆದ ಧಾರ್ಮಿಕ ಸಮ್ಮೇಳನವೊಂದರಲ್ಲಿ 'ವಾಕ್ ಶಿರೋಮಣಿ' ಎಂಬ ಬಿರುದನ್ನು ಗಿಟ್ಟಿಸಿಕೊಂಡಿದ್ದ ಮುಸ್ಲಿಯಾರರಿಂದಾಗಿ ಮುತ್ತುಪ್ಪಾಡಿ ಜಮಾತಿಗೂ, ಆ ಮೂಲಕ ಜಮಾತ್ ಅಧ್ಯಕ್ಷ 'ತೋಟದ ಮನೆ ಇಸ್ಮಾಲಿ ಹಾಜಿ' ಯವರಿಗೂ ನಾಲ್ಕು ಊರುಗಳಲ್ಲಿ ಮನ್ನಣೆ ಸಿಗುವಂತಾಗಿತ್ತು.

ಮಂಚದ ಮೇಲೆ ಕುಳಿತು ಗೊಂದಲಗಳ ಭಾರದಿಂದ ನೆಲ ದಿಟ್ಟಿಸುತ್ತಿದ್ದ ನನ್ನನ್ನು, ಭುಜ ಹಿಡಿದು ಅಲ್ಲಾಡಿಸಿ ಎಚ್ಚರಿಸಿದ್ದ ಹಲೀಮಮ್ಮನವರು,



'ಅದ್ಯಾವ ವಿಷಗಳಿಗೆಯಲ್ಲಿ ಆ ಹುಡುಗಿ ಮುಸ್ಲಿಯಾರರ ಕಣ್ಣಿಗೆ ಬಿದ್ದಳೋ ಅಲ್ಲಾಹುವಿಗೇ ಗೊತ್ತು. ಮದುವೆಯೆಂದರೇ ಮಾರು ದೂರ ಹಾರುತ್ತಿದ್ದ ಅವರು, ಸಲ್ಮಾಳನ್ನು ನಿಕಾಹ್ ಮಾಡಿಕೊಡಿಸುವಂತೆ ಹಾಜಾರ್ರನ್ನೇ ಕೇಳಿಕೊಂಡಿದ್ದರು.

'ಹಾಜಾರ್ರು ಕೈ ಹಾಕಿದ ಬಳಿಕ ಅದರಲ್ಲಿ ತಡ ಉಂಟಾ? ಹತ್ತೇ ದಿವಸಗಳ ಒಳಗೆ ಎಲ್ಲವೂ ಚಟ್ ಚಟ್ ಅಂತ ಮುಗಿದೇಬಿಟ್ಟಿತು. ನಮ್ಮ ಸುಲೇಮಾನ್‌ನಿಗಂತೂ ಹುಚ್ಚೇ ಹಿಡಿದುಹೋಗಿತ್ತು. ಬಾಯಿಬಿಟ್ಟು ಹೇಳುವಂತೆಯೂ ಇಲ್ಲ. ಸುಮ್ಮನಿರು ವಂತೆಯೂ ಇಲ್ಲ. ಆ ಹುಡುಗಿಯಾದರೂ ಬಾಯಿಬಿಟ್ಟು ಕೇಳಲು ಸಾಧ್ಯವಾಗಿದ್ದರೆ ಇದೊಂದೂ ನಡೆಯುತ್ತಿರಲಿಲ್ಲ. ಆದರೆ ಅವಳಲ್ಲಿ ಯಾರು ವಿಚಾರಿಸಲು ಹೋಗುತ್ತಾರೆ? ಮುಸ್ಲಿಯಾರರಂತಹ ಗಂಡು ದೊರಕುವುದು ಮಹಾಭಾಗ್ಯವೆಂದೇ ಎಲ್ಲರೂ ನಂಬಿರು ವಾಗ, ಸಲ್ಮಾಳ ತಾಯಿಯಾದರೂ ಹೇಗೆ ಅಡ್ಡಿ ಮಾಡಿಯಾಳು?

'ಆದರೆ ಇವನೇ, ಅಲ್ಲಾಹುವಿನ ಲೆಕ್ಕಾಚಾರವೇ ಬೇರೆ ಇತ್ತು. ಮದುವೆಯಾದ ಮುಂದಿನ ವಾರ ಮಂಗಳೂರಿಗೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದ ಮುಸ್ಲಿಯಾರರು ಅಲ್ಲಿ ಬಸ್ಸು ಹತ್ತುವಾಗ ಜಾರಿ ಬಿದ್ದು ಪ್ರಾಣಬಿಟ್ಟಿದ್ದರು. ಅವರ ತಲೆಯ ಮೇಲೆಯೇ ಬಸ್ಸಿನ ಚಕ್ರ ಹೋಗಿತ್ತಂತೆ'.

ಮುಸ್ಲಿಯಾರರು ತೀರಿಹೋದ ಮುಂದಿನ ತಿಂಗಳಲ್ಲೇ 'ಮುತ್ತುಪ್ಪಾಡಿ ಮುಸ್ಲಿಯಾರ್ ಇಮಾರತ್ ಫಂಡ್' ಎಂದು ಮುದ್ರಿಸಲಾದ ರಶೀದಿ ಪುಸ್ತಕಗಳು ನಮ್ಮ ಮನೆಗೂ ಬಂದು ತಲುಪಿದ್ದವು. ನಾನು ಸ್ವತಃ ನೂರು ರೂಪಾಯಿ ಚಂದಾ ತೆತ್ತದ್ದಲ್ಲದೆ, ಮತ್ತೊಂದು ಮುನ್ನೂರು ಸಂಗ್ರಹಿಸಿ ರವಾನಿಸಿದ್ದೆ. ಆದರೆ ನನ್ನದೇ ಪಾಲುಗಾರಿಕೆಯ ಕಲ್ಲು ಕಟ್ಟಡ ವೊಂದು ವಿಧವೆಯೊಬ್ಬಳ ಕಾರಾಗೃಹವಾಗಬಹುದೆಂಬ ಕಲ್ಪನೆಯೇ ನನಗಿದ್ದಿರಲಿಲ್ಲ.

ನಾನು ಕುಳಿತಲ್ಲೇ ಚಡಪಡಿಸತೊಡಗಿದೆ. ಸುಲೇಮಾನ್‌ನ ಪರವಾಗಿ ಹಾಜಿ ಯವರಲ್ಲಿ ಮಾತನಾಡಲೆಂದು ಆದಷ್ಟು ದೂರದಿಂದ ಬಂದಿದ್ದ ನಾನು ಇದೀಗ, ಹಾಜಿ ಯವರ ಮನೆಯ ಒಳಕೋಣೆಯಲ್ಲಿ ಅಸಹಾಯಕನಂತೆ ಕುಳಿತುಕೊಳ್ಳುತ್ತಿರುವುದು ನನಗೇ ನಾಚಿಕೆಯನ್ನುಂಟುಮಾಡಿತ್ತು.

ಹಲೀಮಮ್ಮನವರ ವರ್ತನೆಯಂತೂ ಅರ್ಥವೇ ಆಗುತ್ತಿರಲಿಲ್ಲ. ತೋಟದಲ್ಲಿ ತಂದೆ ಮಗ ಎದುರಾದಾಗ ನಡೆಯಬಹುದಾಗಿದ್ದ ಅನಾಹುತದ ಬಗ್ಗೆ ಅವರು ವಿಶೇಷ ವಾಗಿ ತಲೆ ಕೆಡಿಸಿಕೊಂಡಿರದೇ ನನ್ನ ಜತೆ ಮಾತಿಗೆ ಕುಳಿತದ್ದೇ ವಿಶೇಷವಾಗಿ ಕಾಣಿಸುತ್ತಿತ್ತು. ನಾನು ತೋಟಕ್ಕೆ ಹೋಗುವುದನ್ನು ಅವರು ಏನಾದರೊಂದು ನೆವ ಹೇಳುತ್ತಾ ಅಡ್ಡಿ ಪಡಿಸುತ್ತಿದ್ದರು.

ಹೇಗೂ ನೀರಿಗಿಳಿದಾಗಿತ್ತು. ಸ್ವಲ್ಪವಾದರೂ ಕೈಕಾಲು ಬಡಿಯದೆ ಮರಳುವುದು ಹೇಡತಿನವೆನ್ನಿಸಿತು.

ನಾನು ನಿರ್ಧಾರದ ಧ್ವನಿಯಲ್ಲೇ ಹೇಳಿದೆ, 'ನಾನೊಮ್ಮೆ ತೋಟಕ್ಕೆ ಹೋಗಿ ಬರುತ್ತೇನೆ. ಎರಡರಲ್ಲಿ ಒಂದು ತೀರ್ಮಾನ ಆಗಲೇಬೇಕಲ್ಲವೆ?'

ಹಲೀಮಮ್ಮನವರು ಈ ಬಾರಿ ಉತ್ತರಿಸಲು ಯತ್ನಿಸಿದಂತೆ ಕಾಣಲಿಲ್ಲ. ಅವರು ಕೋಣೆಯೊಳಗಿದ್ದ ಗೋಡೆ ಗಡಿಯಾರದತ್ತ ಕಣ್ಣು ನೆಟ್ಟು ಕುಳಿತು ಬಿಟ್ಟಂತಿತ್ತು. ನಾನು ಮಂಚದಿಂದ ಎದ್ದು ಹೊರ ನಡೆದು, ಚಾವಡಿ ದಾಟಿ ಜಗಲಿಗೆ ಕಾಲಿರಿಸಿದೆ.

ಅಂಗಳದಲ್ಲಿ ಯಾರೂ ಕಾಣಿಸಲಿಲ್ಲ. ಅಳುಕುತ್ತಲೇ ಅಂಗಳ ದಾಟಿ ತೋಟದ ಗೇಟಿನ ಬಳಿಗೆ ನಡೆದೆ.

ತೋಟದ ನಡುವಿದ್ದ ಪುಟ್ಟ ಮನೆಯೊಂದರ ಅಂಗಳದಲ್ಲಿ ನಾಲ್ಕಾರು ಮಂದಿ ಕೂತಿರುವುದು ಕಾಣಿಸಿತು. ಹಾಜಿಯವರ ಮುಂಡಾಸು ಕಾಣುತ್ತಿರಲಿಲ್ಲ.

ನಾನು ಹತ್ತು ಹೆಜ್ಜೆ ತೋಟದ ಒಳಕ್ಕೆ ನಡೆದೆ. ಗುಂಪಿನ ನಡುವಿನಿಂದ ಒಬ್ಬ ಎದ್ದು ನನ್ನತ್ತ ಬರುವುದು ಕಾಣಿಸಿದಾಗ ಅಲ್ಲೇ ಪಕ್ಕದಲ್ಲಿದ್ದ ಲಿಂಬೆಯ ಗಿಡವೊಂದರ ಮರೆಯಲ್ಲಿ ನಿಂತೆ.

ಬಂದವನು ಸುಲೇಮಾನ್. ಮುಖ ಕಪ್ಪಿಟ್ಟಿತ್ತು. ನನ್ನನ್ನು ಕಂಡು ಕಣ್ಣರಳಿಸಲು ಯತ್ನಿಸಿದನಾದರೂ ಬಾಡಿದ್ದ ಮುಖದಲ್ಲಿ ನಗು ಹುಟ್ಟಲಿಲ್ಲ.

'ಎಲ್ಲಿದ್ದಾರೆ ಹಾಜಿಯವರು?!' ನಾನು ಆತುರದಿಂದ ಪ್ರಶ್ನಿಸಿದ್ದೆ.

'ಇದ್ದಾರೆ, ತೋಟದ ಮನೆಯೊಳಗೆ ಬಿದ್ದುಕೊಂಡಿದ್ದಾರೆ' ಸುಲೇಮಾನ್ ನಿರ್ಲಿಪ್ತ ಸ್ವರದಲ್ಲಿ ಹೇಳಿದ್ದ.

'ಯಾಕೆ! ಏನಾಯ್ತು ಅವರಿಗೆ?!' ನಾನು ಗಾಬರಿಗೊಂಡಿದ್ದೆ.

'ಅಂಥದ್ದೇನೂ ಆಗಲಿಲ್ಲ ಅವರಿಗೆ' ಎಂದು ಹೇಳಿದ ಸುಲೇಮಾನ್ ಸೋತ ಧ್ವನಿಯಲ್ಲಿ 'ಅವರು ನಮ್ಮ ಮದುವೆಗೆ ಸಮ್ಮತಿಸಿದ್ದಾರೆ. ಇಮಾರತ್‌ನ ಕಟ್ಟಡದಲ್ಲಿ ಕುರಾನು ಶಾಲೆ ಮಾಡುವ ಯೋಚನೆ ಮಾಡಿದ್ದಾರೆ' ಎನ್ನುತ್ತಾ ತಲೆ ತಗ್ಗಿಸಿದ.

ನನಗೆ ನಂಬಿಕೆಯೇ ಆಗಲಿಲ್ಲ.

'ಹೌದಾ!' ಎಂದು ಉದ್ಗರಿಸಿದ್ದೆ.

'ಹೌದು' ಸುಲೇಮಾನ್ ಸೋತ ಧ್ವನಿಯಲ್ಲೇ ಮುಂದುವರಿಸಿದ್ದ, 'ಹೌದು,



ಸಲ್ಮಾಳ ಹೊಟ್ಟೆಯಲ್ಲಿ ನನ್ನ ಮಗು ಬೆಳೆಯುತ್ತಿದೆ ಎಂದು ಹೇಳಿದ ಬಳಿಕ ಒಪ್ಪದೇ ಏನು ಮಾಡುತ್ತಾರೆ?'

ನಾನು ಮತ್ತಷ್ಟು ಗಲಿಬಿಲಿಯಿಂದ ಪ್ರಶ್ನಿಸಿದ್ದೆ.

'ನಿಜವಾ ನೀನು ಹೇಳುತ್ತಿರುವುದು?'

ಸುಲೇಮಾನ್ ವಿಷಾದದಿಂದ ಹೇಳಿದ್ದ,

'ಹಾಗೆ ಹೇಳಬೇಕೆಂದು ಉಮ್ಮಾ ಹೇಳಿಕೊಟ್ಟಿದ್ದರು'.

ನಾನು ಗರ ಬಡಿದವನಂತೆ ನಿಂತುಬಿಟ್ಟಿದ್ದೆ!

❍

# ಇಬಾದತ್

**'ಸುಳ್ಳು ಹೇಳುವವರನ್ನು ಅಲ್ಲಾಹು ಕಾಪಾಡಲಿ.**
**ಸತ್ಯ ಹೇಳುವವರ ಪರವಾಗಿ ಪ್ರಾರ್ಥನೆ ಅನಗತ್ಯ'.**

## ಭಾಗ–1

### 1

ಜವುಳಿ ಹಾಜಿಯವರಿಗೆ ಈ ಅನುಮಾನ ಮೊದಲಿನಿಂದಲೂ ಇತ್ತು. ಪ್ರಾರ್ಥಿಸಿದ ಮಾತ್ರಕ್ಕೆ ಅಲ್ಲಾಹು ಕ್ಷಮಿಸುತ್ತಾನೆಂದು ಯಾವ ಗ್ಯಾರಂಟಿಯೂ ಇದ್ದಿರಲಿಲ್ಲ.

ಎಲ್ಲ ರಗಳೆ ಆರಂಭವಾದದ್ದು 'ಮಿಠಾಯಿ ಅವುಲಿಯಾ'ರವರು ಬಂದ ಮೇಲೆಯೇ. ಹಾಗೆಂದು ಅವರನ್ನು ದೂರುವುದಾ? ತೌಬಾ! ತೌಬಾ! ಅವರು ತಪ್ಪು ಮಾಡಿಯಾರು ಎಂದು ಹೇಳುವವರ ಬಾಯಲ್ಲಿ ಹುಳ ಬಿದ್ದೀತು.

ಮಿಠಾಯಿ ಅವುಲಿಯಾರವರನ್ನು ಉಳ್ಳಾಲದಿಂದ ಕರೆದುಕೊಂಡು ಬಂದಿದ್ದಾರೆ ಎಂಬ ಕಾರಣಕ್ಕೆ ಜವುಳಿ ಹಾಜಿಯವರಿಗೆ ಹರಕೆ–ಕರಾಮತ್ತುಗಳಲ್ಲಿ ನಂಬಿಕೆಯಿತ್ತು ಅಂತ ಹೇಳುವುದು ತಪ್ಪಾದೀತು. ಅಂತಹ ನಂಬಿಕೆ ಅವರಿಗೆ ಆಗಲೂ ಇದ್ದಿರಲಿಲ್ಲ; ಹಾಗಿರುತ್ತಿದ್ದರೆ ಮೊಮ್ಮಗಳು ಆಯಿಷಾಳಿಗೆ ಒಂದು ವರ್ಷ ತುಂಬಿದಾಗ ಹೆಂಡತಿಯ ಮಾತಿಗೆ ಅಷ್ಟೊಂದು ಸುಲಭವಾಗಿ ಬಲಿ ಬೀಳುತ್ತಿರಲಿಲ್ಲ.

ಉಳ್ಳಾಲ, ಹಾಜಿಯವರಿಗೆ ಹೊಸ ಊರು ಏನೂ ಅಲ್ಲ. ಕಾರಿನಲ್ಲಿ ಹೋಗುವು



ದಾದರೆ ಮೂರು ತಾಸಿನ ದಾರಿ. ಕಳೆದ ನಲುವತ್ತು ವರ್ಷಗಳಲ್ಲಿ ಏನಿಲ್ಲವೆಂದರೂ ಒಂದು ಇಪ್ಪತ್ತು ಬಾರಿ ಹೋಗಿ ಬಂದಿದ್ದಿರಬಹುದು. ಜವುಳಿ ಹಾಜಿಯವರು ಉಳ್ಳಾಲಕ್ಕೆ ಈವತ್ತು ಹೋದರೂ ಹೆಜ್ಜೆಗೊಂದರಂತೆ 'ಅಸ್ಸಲಾಂ ಅಲೈಕುಂ' ಕೇಳಿಸೀತು. ಮುತ್ತುಪ್ಪಾಡಿಯ ಜುಮ್ಮಾ ಮಸೀದಿಯ ಜಮಾತ್ ಅಧ್ಯಕ್ಷ 'ಹಾಜಿ ಅಬ್ದುಲ್ ರೆಹಮಾನ್ ಸಾಹೇಬ'ರೆಂದರೆ ಅಂತಹ ಪ್ರಸಿದ್ಧ. ಒಂದು ಮಾದರಿ ಜಮಾತಿನ ಮಾದರಿ ಅಧ್ಯಕ್ಷ ಹೇಗಿರಬೇಕು ಎಂಬುದನ್ನು ವಿವರಿಸುವಾಗ ದೊಡ್ಡ ದೊಡ್ಡ ಉಲೇಮಾಗಳೂ ಜವುಳಿ ಹಾಜಿಯವರ ಹೆಸರು ಹೇಳುತ್ತಿದ್ದರು ಎಂದ ಮೇಲೆ ಬೇರೆ ಸರ್ಟಿಫಿಕೇಟು ಅನಗತ್ಯ.

ಅದಾಗಲೇ ಅರುವತ್ತರ ದಡ ತಡವುತ್ತಿದ್ದ ಹಾಜಿಯವರ ಅಗಲ ಹಣೆಯ ನಡುವೆ ಪಾವಲಿಯ ಅಗಲಕ್ಕೆ ಎದ್ದು ಕಾಣಿಸುತ್ತಿದ್ದ ಕಪ್ಪು ಕಲೆ– ಅವರ ನಿರಂತರ ನಮಾಜಿಗೆ ಸಾಕ್ಷಿ ಹೇಳುತ್ತಿರುವಾಗ ಗೌರವ ಕೊಡದೆ ಇರುವುದಾದರೂ ಹೇಗೆ ಸಾಧ್ಯ? ಆರು ಅಡಿ ಎತ್ತರದ ಪೈಲುವಾನನಂತೆ ಕಾಣುವ ಕೆಂಪು ಮುಖದ ಜವುಳಿ ಹಾಜಿಯವರು ಬಿಳಿ ಮುಂಡಾಸಿನ ಕುಚ್ಚು ಹಾರಿಸುತ್ತಾ ನೀಳ ತೋಳುಗಳನ್ನು ಬೀಸಿ ನಡೆದು ಬಂದ ರೆಂದರೆ ಎಂಥವರೂ 'ಸಲಾಂ' ನೀಡಿಯಾರು. ಮಾತುಮಾತಿನ ನಡುವೆ 'ಇನ್‌ಷಾ ಅಲ್ಲಾ' (ಅಲ್ಲಾಹು ಬಯಸಿದರೆ) ಎಂದು ಬೆರೆಸುತ್ತಲೇ ಹೊಲಿಗೆ ಯಂತ್ರದಂತೆ ಪಟ ಪಟ ಮಾತನಾಡುವ ಹಾಜಿಯವರ ಎದುರು ಕೂತುಬಿಟ್ಟರೆ ಹೊತ್ತು ಹೋದದ್ದು ಗೊತ್ತಾಗಲಾರದು.

ಹರಕೆಯ ಕಾರ್ಯಗಳೆಲ್ಲ ಮುಗಿಯುವಾಗ ಸೂರ್ಯ ತಂಪಾಗಿದ್ದ. ಮುಸ್ಸಂಜೆಯ ನಮಾಜನ್ನು ಮುಗಿಸಿಕೊಂಡೇ ಹೋದರಾಯಿತು ಎಂಬ ಯೋಚನೆಯಿಂದ ಕುಟುಂಬ ವನ್ನು ಕಾರಿನ ಒಳಗೆ ಇರಲು ಹೇಳಿ ಮಸೀದಿಯ ಒಳಕ್ಕೆ ಹೋಗಿದ್ದ ಹಾಜಿಯವರು ಹೊರಬರುವಾಗಿ ತಮ್ಮ ಜತೆ ಹೊಸಬರನ್ನು ಕರೆದುಕೊಂಡು ಬಂದಿದ್ದರು.

ಬಿರು ಬೇಸಗೆಯ ಬಿಸಿಗೆ ಬಿಸಿಯೇರಿದ್ದ ಕಾರಿನೊಳಗೆ ಬೆವರಿಳಿಸುತ್ತಾ ಕೂತಿದ್ದ ಜವುಳಿ ಹಾಜಿಯವರ ಹೆಂಡತಿ ಹಲೀಮಮ್ಮನವರು ಗಂಡನ ಜಡೆ ನಿಧಾನವಾಗಿ ಹೆಜ್ಜೆ ಬದಲಿಸುತ್ತಾ ಬರುತ್ತಿರುವ ವ್ಯಕ್ತಿಯನ್ನು, ಧರಿಸಿದ್ದ ಬುರ್ಖಾದ ಮುಖ ಪರದೆಯ ಸಂದುಗಳಿಂದ ದಿಟ್ಟಿಸಿ ನೋಡಿದರು. ಒಮ್ಮೆ ನೋಡಿದರೆ ಇನ್ನೊಮ್ಮೆ ನೋಡಬೇಕೆನ್ನಿಸುವ ರೂಪ ಅದು.

ಕಪ್ಪು ಬಣ್ಣವೂ ಚಂದ ಕಾಣಲು ಸಾಧ್ಯ ಎಂಬುದನ್ನು ನಂಬದವರು ಆ ವ್ಯಕ್ತಿಯನ್ನು ಮೊದಲು ನೋಡಬೇಕು. ಇದ್ದಲನ್ನು ಕಪ್ಪು ಬಣ್ಣದಲ್ಲಿ ಮುಳುಗಿಸಿ ತೆಗೆದಾಗ ಹೇಗೆ ಕಾಣಬಹುದೋ ಅಂತಹ ಬಣ್ಣದ ಮುಖದಲ್ಲಿನ ಕುರುಚಲು ಗಡ್ಡದ ನಡುವೆಯೂ

ಚಿನ್ನದ ಬೆಳಕನ್ನು ಲೇಪಿಸಿಡಬಲ್ಲ ಅಲ್ಲಾಹುವಿನ ಕರಾಮತ್ತನ್ನು ಯಾರೇ ಆದರೂ ಮೆಚ್ಚಬೇಕು. ಸುಮಾರು ನಲುವತ್ತು – ನಲುವತ್ತೈದರ ಆ ಮುಖದಲ್ಲಿ ಬೆಳ್ಳಗೆ ಕಾಣಿಸುವು ದೆಂದರೆ ಕಪ್ಪು ಕಣ್ಣಾಲಿಗಳನ್ನು ಅತ್ತಿತ್ತ ಸರಿಸುತ್ತಿರುವ ಕಣ್ಣ ಮೂತಿಗಳು ಮಾತ್ರ. ತುಂಬು ತೋಳಿನ ಕಡು ನೀಲಿ ಜುಬ್ಬ ಧರಿಸಿ ಕುತ್ತಿಗೆಯನ್ನು ಹಸುರು ಶಾಲಿನಿಂದ ಮುಚ್ಚಿಕೊಂಡಿದ್ದು, ಮೊಣಕಾಲಿಗಿಂತ ಸ್ವಲ್ಪವೇ ಕೆಳಗಿನ ತನಕ ಸುತ್ತಿಕೊಂಡಿದ್ದ ಬಿಳಿ ಮುಂಡು ಅವರನ್ನು ಸ್ವಲ್ಪ ಕುಳ್ಳಾಗಿ ತೋರಿಸುತ್ತಿತ್ತು.

ಹಾಜಿಯವರು ಬಂದಿದ್ದ ಕಾರಿನಲ್ಲಿ ಅದಾಗಲೇ ಹೆಂಗಸರು, ಮಕ್ಕಳು ಅಂತ ಭರ್ತಿಯಾಗಿತ್ತು. ಉಳ್ಳಾಲದಲ್ಲಿ ಬಾಡಿಗೆ ಕಾರುಗಳಿಗೇನೂ ಬರವಿಲ್ಲ. ಕೈ ತಟ್ಟಿದರೆ ಕಾಲಿನ ಬುಡಕ್ಕೆ ಬಂದು ನಿಲ್ಲುತ್ತವೆ.

ಬಟ್ಟೆಯ ಚಿಕ್ಕ ಚೀಲವೊಂದನ್ನು ಎತ್ತಿಕೊಂಡು ಬಂದ ಹುಡುಗನೊಬ್ಬ ಹಾಜಿ ಯವರ ಸೂಚನೆಯಂತೆ ಅದನ್ನು ಗೇಟಿನ ಹೊರಗೆ ನಿಂತಿದ್ದ ಕಾರೊಂದರ ಒಳಗೆ ಇರಿಸಿ ಹೋದ. ಹೊಸ ವ್ಯಕ್ತಿಯನ್ನು ಅದೇ ಕಾರಿನೊಳಗೆ ಕುಳ್ಳಿರಿಸಿದ ಹಾಜಿಯವರು ಸ್ವತಃ ಬಾಗಿಲು ಮುಚ್ಚಿ ತಮ್ಮ ಕುಟುಂಬ ಕುಳಿತಿದ್ದ ಕಾರಿನ ಬಳಿಗೆ ಬಂದು ಹೇಳಿದರು, 'ಬಹು ದೊಡ್ಡ ಅವುಲಿಯಾ ಅಂತೆ. ನಮ್ಮ ಮನೆಗೆ ಬರಲು ಒಪ್ಪಿದ್ದಾರೆ. ನಾನು ಆ ಕಾರಿನಲ್ಲಿ ಬರುತ್ತೇನೆ. ನೀವು ಹೊರಡಿ'.

ಮುತ್ತುಪ್ಪಾಡಿಗೆ ಎರಡೂ ಕಾರುಗಳು ತಲುಪಿದಾಗ ಕರಿಗತ್ತಲು, ಹೊಳೆಯಂಚಿ ನಲ್ಲಿದ್ದ 'ರೆಹಮಾನ್ ಮಂಜಿಲ್' ಅಂಗಳದಲ್ಲಿ ಕಾರಿನಿಂದ ಕೆಳಗೆ ಇಳಿದ ಅವುಲಿಯಾರವರು ಹಾಜಿಯವರ ತೋಳು ಹಿಡಿದು ಪ್ರಶ್ನಿಸಿದ್ದು, 'ಈ ಮನೆ ಯಾರದ್ದು?'

ಜವುಳಿ ಹಾಜಿಯವರು ಒಂದು ಕ್ಷಣ ತಬ್ಬಿಬ್ಬಾದರೂ, ತತ್‌ಕ್ಷಣ ಚೇತರಿಸಿಕೊಂಡು 'ಅಲ್ಲಾಹುವಿನ ದಯೆಯಿರುವರೆಗೆ ನನ್ನದು' ಎನ್ನುತ್ತಾ ಜಾಣ ನಗೆ ಚೆಲ್ಲಿದರು. ಅವುಲಿ ಯಾರವರು ನಕ್ಕರೋ ಇಲ್ಲವೋ ಗೊತ್ತಾಗಲಿಲ್ಲ; ಅಂಗಳದಲ್ಲಿ ಕತ್ತಲಿತ್ತು.

## 2

ಅಲ್ಲಾಹು ಭೂಮಿಯಲ್ಲಿ ಕೆಲವರನ್ನು ಬಹಳವಾಗಿ ಇಷ್ಟಪಡುತ್ತಾನೆ. ಅವರ ಜತೆಯೇ ಗೆಳೆತನ ಮಾಡುತ್ತಾನೆ.

ರಾತ್ರಿ ಇಡೀ ಸ್ವರವೆಬ್ಬಿಸಿ ಗೊರಕೆ ಹೊಡೆದಿದ್ದ ಅವುಲಿಯಾರವರು, ಮರುದಿನ ಮುಂಜಾನೆಯಿಂದ ಸಂಜೆಯ ತನಕ ಸರಿಯಾಗಿ ಹತ್ತು ಪದವನ್ನೂ ಆಡದೆ ಸಂಜೆಯ



ನಮಾಜು ಮುಗಿದ ಕೂಡಲೇ 'ನನಗೆ ಮಸೀದಿಗೆ ಹೋಗಬೇಕು' ಎಂದು ಏಕಾಯೇಕಿ ಹೊರಟು ನಿಂತಾಗ ಹಾಜಿಯವರಿಗೆ ನಿರಾಸೆಗಿಂತ ಅಚ್ಚರಿಯೇ ಹೆಚ್ಚಾಗಿತ್ತು!

ಮಸೀದಿಯಲ್ಲಿ ಇಮಾಂ ಇಬ್ರಾಹಿಂ ಮೌಲವಿಯವರು ಪಕ್ಕದಲ್ಲೇ ನಿಂತಿದ್ದಾಗ 'ನಾನು ಇಲ್ಲಿಯೇ ಮಲಗುತ್ತೇನೆ, ನೀವು ಹೋಗಿ' ಎಂದು ಹೇಳಿದ ಅವುಲಿಯಾರವರನ್ನು, ತಮ್ಮ ಮನೆಯಲ್ಲಿ ಮಸೀದಿಗಿಂತ ಹೆಚ್ಚಿನ ಸೌಕರ್ಯವಿದೆ ಎಂಬ ಪಟ್ಟಿ ನೀಡುವ ಮೂಲಕ, ಮನೆಗೆ ಬರಬೇಕು ಎಂದು ಒತ್ತಾಯಿಸುವುದಾದರೂ ಹೇಗೆ? ಕಳೆದ ಹದಿನೈದು ವರ್ಷಗಳಿಂದಲೂ ಮೌಲವಿಯವರು ಮಸೀದಿಯ ಪಕ್ಕದಲ್ಲಿದ್ದ ಕೋಣೆಯಲ್ಲಿ ಮಲಗುತ್ತಿಲ್ಲವೆ? ಹಾಜಿಯವರ ಬಾಯಿ ಕಟ್ಟಿಹೋದದ್ದು ಸಹಜ.

ಉಳ್ಳಾಲದಲ್ಲಿ ಅವುಲಿಯಾರವರನ್ನು ಆಹ್ವಾನಿಸುತ್ತಿರುವಾಗಲೇ, ಅಲ್ಲಿ ಭೇಟಿಯಾಗಿದ್ದ ಹಸನ್ ಕೋಯಾರವರು ಎಚ್ಚರಿಕೆ ನೀಡಿದ್ದರು. 'ಬಹಳ ಕರಾಮತ್ತು ಇರುವ ಅವುಲಿಯಾ ಅಂತ ಕಾಣ್ತದೆ ಹಾಜಾರ್ರೇ. ಇಲ್ಲಿಗೆ ಬಂದು ಒಂದು ತಿಂಗಳು ದಾಟಿದರೂ ಯಾರ ಮನೆಗೂ ಹೋಗಲು ಒಪ್ಪಿದವರಲ್ಲ. ನೀವು ಅದೇನು ಜಾದೂ ಮಾಡಿದರೋ ನನಗೆ ಗೊತ್ತಾಗುವುದಿಲ್ಲ. ಇರುವಷ್ಟು ದಿನ ಇಟ್ಟುಕೊಳ್ಳಿ...ಹಾಂ! ಇನ್ನೊಂದು ಸಂಗ್ತಿ ನಿಮಗೆ ಹೇಳಬೇಕು. ಅವರಿಗೆ ಕಡ್ಲೆಮಿಠಾಯಿ ಎಂದರೆ ಬಹಳ ಇಷ್ಟ. ಆಗಾಗ ಹೊರಗೆ ಹೋಗಿ ಎಲ್ಲಿಂದಾದ್ರೂ ಸಂಪಾದಿಸಿಕೊಂಡು ಬರ್ತಾರೆ. ಇವರ ಬಗ್ಗೆ ಗೊತ್ತಿಲ್ಲದವರು ಅದನ್ನೇ ಹರಕೆ ಅಂತಲೂ ತಂದು ಕೊಡ್ತಾರೆ. ಎಲ್ರೂ ಇವರನ್ನು 'ಮಿಠಾಯಿ ಅವುಲಿಯಾ' ಅಂತೇ ಕರೆಯುವುದು'.

ಹಾಜಿಯವರು ಎರಡು ಸೇರು ಕಡ್ಲೆಮಿಠಾಯಿಯನ್ನು ಮಧ್ಯಾಹ್ನವೇ ತರಿಸಿಟ್ಟಿದ್ದರು. ಅದನ್ನು ಅವುಲಿಯಾರವರ ಚೀಲದಲ್ಲಿ ಇರಿಸಿ ಹುಡುಗನೊಬ್ಬನ ಕೈಯಲ್ಲಿ ಮಸೀದಿಗೆ ಕಳುಹಿಸಿದ ಹಾಜಿಯವರು ರಾತ್ರಿ ಹೆಂಡತಿಯನ್ನು ಸಮಾಧಾನಪಡಿಸುತ್ತಾ, 'ಅವರು ಅಲ್ಲಿ ಇರುವುದೇ ಎಲ್ಲರಿಗೂ ಅನುಕೂಲ. ಇಲ್ಲಿಯೇ ಉಳಿದುಬಿಟ್ಟರೆ ಬಂದು ನೋಡುವ ಜನರಿಗೆ ಚಹ ಕೊಟ್ಟು ಪೂರೈಸಲಿಕ್ಕಿಲ್ಲ' ಎಂದು ತಮಗೂ ಸಮಾಧಾನ ಹೇಳಿಕೊಂಡರು. ಜುಮ್ಮಾ ಮಸೀದಿಯಲ್ಲಿ ಉಳಕೊಂಡವರಿಗೆ ಊಟಕ್ಕೇನೂ ತೊಂದರೆಯಾಗುವುದಿಲ್ಲ. ಮಸೀದಿಯ ಇಮಾಂ ಮತ್ತು ಅವರ ಸಹಾಯಕರು ಅಂತ ಮೂರು ನಾಲ್ಕು ಜನಕ್ಕೆ ಹೇಗೂ ಊಟ ಬರುತ್ತದೆ. ಒಂದು ಮುಷ್ಟಿ ಅನ್ನ ಹೆಚ್ಚು ಹಾಕಿ ಅಂದರೆ ಜಮಾತಿನ ಯಾವ ಸದಸ್ಯರ ಮನೆಯಲ್ಲೂ ಇಲ್ಲವೆನ್ನಲಾರರು.

ಜವುಳಿ ಹಾಜಿಯವರ ಮನೆಗೆ ಅವುಲಿಯಾ ಒಬ್ಬರು ಬಂದಿದ್ದಾರೆ, ಅವರ ಅಂಗಿ ಜೇಬಿನಿಂದ ಎಷ್ಟು ತೆಗೆದರೂ ಕಡ್ಲೆಮಿಠಾಯಿ ಖಾಲಿಯಾಗುವುದಿಲ್ಲ. ಎಂತೆಂತಹ

ರೋಗವಿದ್ದರೂ ಅವರು ಮಂತ್ರಿಸಿದ ನೀರು ಕುಡಿದ್ರೆ ಟಪ್ಪಂತ ನಿಲ್ತದೆ – ಇತ್ಯಾದಿ ಸುದ್ದಿಗಳು ಮೊದಲ ದಿನವೇ ಹರಡಿತ್ತಾದರೂ ಜವುಳಿ ಹಾಜಿಯವರ ಮನೆಗೆ ಹೋಗಿ ಅವುಲಿಯಾರವರನ್ನು ಕಂಡು ಬಂದವರು ಕೆಲವೇ ಮಂದಿ ಮಾತ್ರ. ಆದರೆ ಯಾವಾಗ ಅವರು ಮಸೀದಿಗೆ ಬಂದು ಉಳಕೊಂಡರೋ ಆವಾಗಿನಿಂದ ಅವರನ್ನು ಕಂಡವರು, ಕಾಣದವರು ಎಲ್ಲರೂ ತಲೆಗೊಂದು ಪವಾಡದ ಕತೆ ಹೇಳಲಾರಂಭಿಸಿದ್ದರು.

ಆದರೆ, ಅವುಲಿಯಾರವರ ಮಿಠಾಯಿ ಕರಾಮತ್ತಿನ ಗುಟ್ಟು ನಾಲ್ಕನೇ ದಿನವೇ ಟುಸ್ಸಂತ ಒಡೆದುಹೋದಾಗ ಜನರಿಗೆಲ್ಲ ನಿರಾಶೆಗಿಂತ ನಾಚಿಕೆಯಾದದ್ದೇ ಹೆಚ್ಚು. ಒಬ್ಬ 'ಕಾಫರ'ನ ಮೂಲಕ ಅವುಲಿಯಾರೊಬ್ಬರ ಕರಾಮತ್ತು ಬೆಲೆ ಕಳೆದುಕೊಂಡದ್ದು ಅವಮಾನ ವಲ್ಲದೆ ಮತ್ತೇನು?

ಜುಮ್ಮಾ ಮಸೀದಿಯ ಪೂರ್ವ ದಿಕ್ಕಿನ ಹೆಬ್ಬಾಗಿಲು ಹೊರಗೆ ರಸ್ತೆಯ ಆಚೆ ಮಗ್ಗುಲಲ್ಲಿ ಜೀನಸು ವ್ಯಾಪಾರ ಮಾಡುವ ಗೋಪಾಲಣ್ಣ ಬೆಳಗ್ಗೆಬೆಳಗ್ಗೆ ತನ್ನ ಅಂಗಡಿಯ ಮೆಟ್ಟಲೇರಿ ಬಂದು ಮಿಠಾಯಿ ತುಂಬಿದ್ದ ಗಾಜಿನ ಭರಣಿಯತ್ತ ಕೈಬೆರಳು ಬೊಟ್ಟು ಮಾಡಿ, ತುಂಟನಗು ಚೆಲ್ಲುವಂತೆ ನಿಂತುಬಿಟ್ಟ ಕಪ್ಪು ಶಿಲೆಯಂತಹ ವ್ಯಕ್ತಿಯನ್ನು ಕಂಡು ಹೌಹಾರಿದ್ದರೆ ಅದರಲ್ಲಿ ಅಚ್ಚರಿಯೇನೂ ಇಲ್ಲ. ಮಸೀದಿಗೊಬ್ಬರು ಅವುಲಿಯಾ ಬಂದಿದ್ದಾರೆ ಎಂಬುದು ಆತನಿಗೂ ಗೊತ್ತಿದ್ದುದರಿಂದ ಬೊಬ್ಬೆ ಹೊಡೆಯಲಿಲ್ಲ ಅಷ್ಟೆ. ಅಂತಹ ವ್ಯಕ್ತಿಗಳು ಈ ಹಿಂದೆಯೂ ಬಂದು ನಾಲ್ಕಾರು ದಿನ ಮಸೀದಿಯಲ್ಲೇ ಮೊಕ್ಕಾಂ ಮಾಡುತಿದ್ದುದು ತಿಳಿಯದ ವಿಷಯವಲ್ಲ. ಆದರೂ ಅದುವರೆಗೆ ಅಂತಹ ಯಾವ ವ್ಯಕ್ತಿಯೂ ಅಂಗಡಿಯೊಳಗೆ ಬಂದದ್ದಿಲ್ಲ.

ಅಂಗಡಿ ಬಾಗಿಲು ತೆರೆದು ಅರ್ಧ ತಾಸು ದಾಟಿದ್ದರೂ 'ಬೋಣಿ'ಯಾಗಿದ್ದಿರಲಿಲ್ಲ. ಬೋಣಿಯಾಗದೆ ಧರ್ಮ ನೀಡುವ ಕ್ರಮವೂ ಇಲ್ಲ. ಸಹಜವಾಗಿ ಗೋಪಾಲಣ್ಣ 'ಏನೂ ಇಲ್ಲ. ಮುಂದೆ ಹೋಗು' ಎನ್ನುವಂತೆ ಎಡಕೈಯಾಡಿಸಿ ಬಿಟ್ಟಿದ್ದ. ಇದಿಷ್ಟೇ ಸಂಗತಿಯಾಗಿರುತ್ತಿದ್ದರೆ ಅದು ಹೆಚ್ಚು ಜನರಿಗೆ ಗೊತ್ತು ಆಗುತ್ತಿರಲಿಲ್ಲ. ಆ ಬಳಿಕ ಅಂಗಡಿಯಲ್ಲಿ ಏನು ನಡೆಯಿತು ಎಂಬುದನ್ನು ಗೋಪಾಲಣ್ಣ ಆ ರಾತ್ರಿ ಶೇಷಪಣ್ಣನ 'ಗಡಂಗಿ'ನಲ್ಲಿ ಹೇಳಿದ್ದ ಮಾತುಗಳಲ್ಲೇ ಹೇಳಬೇಕು.

'ಎಂಥ ಕಣ್ಣು ಕಟ್ಟು ಅಂತ ಹೇಳೋಕ್ಕಾಗಲ್ಲ ಮಾರಾಯ್ರೇ, ಹೀಗೂ ಉಂಟಾ? ಒಮ್ಮೆಗೇ ಭೂತ ಕಂಡ ಹಾಗೆ ಆಯಿತು. ಆ ಮೇಲೆ ನಾನು ತೆಗೆದುಕೊಟ್ನೋ ಅವರೇ ಕೈಹಾಕಿ ತೆಕೊಂಡ್ರೋ ಎಂತದೂ ಹೇಳೋಕ್ಕಾಗಲ್ಲ. ಒಟ್ರಾಸಿ ಕಾಲು ಭರಣಿ ಮಿಠಾಯಿ ಮಂಗಮಾಯ. ದುಡ್ಡು ವಸೂಲಿ ನನಗೆ ದೊಡ್ಡ ಸಂಗ್ತಿಯೇ ಅಲ್ಲ. ಜವುಳಿ ಹಾಜಾರ್ರ ಹತ್ರ ಹೋಗಿ ಹೀಗೆ ಹೀಗೆ ಅಂತ ಹೇಳಿಬಿಟ್ರೆ ಸಾಕು, ಅವರು ನನಗೆ ಇಲ್ಲಾಂತ ಹೇಳ್ತಾರಾ? ಆದ್ರ ಮಾರಾಯ್ರೆ, ಆನಂತ್ರ ಏನಾಯ್ತು ಕೇಳಿ. ಮಧ್ಯಾಹ್ನದ ಹೊತ್ತಿಗೆ ಒಂದು ಬಿಳಿ ಕಾರು ಬಂದು ನಿಂತಿತು ಮಾರಾಯ್ರೆ. ಯಾವುದೋ ಊರಿನ ಮದುವೆ ಪಾರ್ಟಿ ಕಂಡಂಗಿತ್ತು. ಅದು ಕೊಡಿ ಇದು ಕೊಡಿ ಅಂತ ನಾನ್ನೂರು ರೂಪಾಯಿ ವ್ಯಾಪಾರ ಮಾಡಿ ಪುಸ್ಕ ಅಂತ ಹೋಗಿಬಿಟ್ರು. ಇನ್ನು ನಾಕು ದಿನ ಬಾಗಿಲು ಹಾಕಿದ್ರೂ ಚಿಂತಿಲ್ಲ ಮಾರಾಯ್ರೇ. ಆ ಅವುಲಿಯಾ ಇನ್ನೊಮ್ಮೆ ಬಂದ್ರೆ ಉಂಟಲ್ಲ. ಧರ್ಮಸ್ಥಳದ ಆಣೆ ಹಾಕಿ ಹೇಳ್ತೇನೆ : ಇಡೀ ಮಿಠಾಯಿ ಭರಣಿಯನ್ನು ಅವರ ಕಾಲ ಹತ್ರ ಇಟ್ಟು ಬಿಡ್ತೇನೆ'.

ಮಿಠಾಯಿ ಕರಾಮತ್ತಿನ ಮಹಿಮೆ ಸುಳ್ಳಾದುದಕ್ಕೆ ನಿರಾಸೆ ಪಡಬೇಕೋ ಅಥವಾ ಹೋಗಿ ಹೋಗಿ ಆ ಕಾಫರನ ಅಂಗಡಿಗೆ ನಾಲ್ಕು ಪಟ್ಟು ವ್ಯಾಪಾರ ಹೆಚ್ಚಾಗು ವಂತೆ ಮಾಡಿದ್ದಕ್ಕೆ ಅಸೂಯೆ ಪಡಬೇಕೋ ಎಂಬುದನ್ನು ನಿರ್ಧರಿಸಲಾಗದ ಜನ ತಮಗೆ ತೋಚಿದಂತೆ ಮಾತನಾಡುತ್ತಿರುವಾಗಲೇ, ಇಮಾಂ ಇಬ್ರಾಹಿಂ ಮೌಲವಿ ಯವರ ಹಲ್ಲು ನೋವಿನ ಪ್ರಸಂಗ ಮನೆಗೊಂದರಂತೆ ರೂಪು ಪಡೆದು ಹರಡ ಲಾರಂಭಿಸಿತು.

ಮುತ್ತುಪ್ಪಾಡಿ ಜುಮ್ಮಾ ಮಸೀದಿಯ ಇಮಾಂ ಇಬ್ರಾಹಿಂ ಮೌಲವಿಯವರೆಂದರೆ ಚಿಲ್ಲರೆ ಜನ ಅಲ್ಲ. ಕಾಸರಗೋಡಿನ ಹತ್ತಿರ ಎಲ್ಲೋ ದೊಡ್ಡ ತೆಂಗಿನ ತೋಟದ ಮನೆತನದಿಂದಲೇ ಬಂದವರು. ಮನೆಯಲ್ಲಿ ತಿನ್ನಲು, ಕುಡಿಯಲು ಸಾಕಷ್ಟು ಅಲ್ಲಾಹು ಕೊಟ್ಟಿದ್ದರಿಂದ, ಅಲ್ಲಾಹುವಿನ ಸೇವೆಗಾಗಿಯೇ ಇಮಾಂ ಆಗಿ ಕೆಲಸ ಮಾಡುವವರು. ಇಲ್ಲಿ ಕೊಡುವ ನಾಕು ನೂರು ರೂಪಾಯಿ ಸಂಬಳ ಅವರಿಗೊಂದು ಲೆಖ್ಖವೇ ಅಲ್ಲ.

ಇಲ್ಲಿಗೆ ಬರುವ ಮೊದಲು ಎರ್ನಾಕುಲಂ ಹತ್ತಿರದ ಒಂದು ಮಸೀದಿಯಲ್ಲಿ ಅಲ್ಲಿಯ ಇಮಾಂರವರ ಸಹಾಯಕರಾಗಿ ಕೆಲಸ ಕಲಿಯುತ್ತಿದ್ದಾಗ ಬಹಳ ದೊಡ್ಡ ಅವುಲಿಯಾರೊಬ್ಬರನ್ನು ಸ್ವತಃ ಕಂಡು ಮಾತನಾಡಿಸಿದ್ದವರು.

ಆ ಅವುಲಿಯಾರ ಜತೆ ಈ ಮಿಠಾಯಿ ಅವುಲಿಯಾರವರನ್ನು ಹೋಲಿಸಿದರೆ ಹಗಲು ರಾತ್ರಿಯ ವ್ಯತ್ಯಾಸ ಕಂಡೀತು. ದೊಡ್ಡ ದೊಡ್ಡ ಬಿಸಿನೆಸ್‌ನವರೆಲ್ಲ ಅವುಲಿಯಾ ಹೇಳಿದಂತೆ ಕೇಳುತ್ತಿದ್ದರು. ಒಮ್ಮೆ ಅವರು ಕುಡಿದು ಗ್ಲಾಸಿನಲ್ಲಿ ಉಳಿದಿದ್ದ ಚಹ ಮತ್ತು ಅರ್ಧ ಮೊಟ್ಟೆಯನ್ನು ಏಲಂ ಹಾಕಿದಾಗ ಆರು ನೂರು ರೂಪಾಯಿಗೆ ವಹಿಸಿಕೊಂಡಿದ್ದ ಸಾಹುಕಾರರೊಬ್ಬರು ಒಂದೇ ವರ್ಷದಲ್ಲಿ ಎರಡು ಹೊಸ ಲಾರಿ ಕೊಂಡದ್ದನ್ನು ಮೌಲವಿಯವರು ಕಿವಿಯಾರೆ ಸ್ವತಃ ಕೇಳಿದ್ದರು.

ಹಾಗೆಂದು ಮಿಠಾಯಿ ಅವುಲಿಯಾರವರನ್ನು ತಾತ್ಸಾರದಿಂದೇನೂ ಕಾಣುವ ಸಣ್ಣತನವೂ ಮೌಲವಿಯವರದ್ದಲ್ಲ. ಅಲ್ಲಾಹುವಿನ ಸೃಷ್ಟಿಯಲ್ಲಿ ಎಲ್ಲವೂ ಒಂದೇ ಎಂದು ನಂಬುವ ಹೃದಯ ಅವರದು. ಆದ್ದರಿಂದಲೇ ಅಲ್ಲವೇ ಅವುಲಿಯಾರವರು ಬಂದ ರಾತ್ರಿ ಮಲಗುವ ಹೊತ್ತಲ್ಲಿ ತಮ್ಮ ಸ್ವಂತ ತಲೆದಿಂಬನ್ನು ಎತ್ತಿಕೊಂಡುಹೋಗಿ ಅವುಲಿಯಾರ ಬಳಿ ಇರಿಸಿದ್ದು!!

ತಲೆದಿಂಬನ್ನು ನಗುತ್ತಲೇ ಸ್ವೀಕರಿಸಿದ್ದ ಅವುಲಿಯಾರವರು ತಾವು ಕುಳಿತಿದ್ದಂತೆಯೇ ಅಂಗಿ ಜೇಬಿನಿಂದ ಒಂದಷ್ಟು ಕಡ್ಲೆಮಿಠಾಯಿ ತೆಗೆದು ಚಾಚುತ್ತಾ 'ತಿನ್ನಿ' ಎಂದಾಗ, ಮೌಲವಿಯವರಿಗೆ ಸಂಕೋಚವಾಗಿತ್ತು. 'ಬೇಡ, ನನಗೆ ಹಲ್ಲುನೋವು ಉಂಟು' ಎಂದು ನೆವ ಹೇಳಿದ ಮೌಲವಿಯವರು ಮುಗುಳು ನಗು ಚೆಲ್ಲುತ್ತಾ ಹೋಗಿ ಮಲಗಿದ್ದರು.

ಕರಾಮತ್ತು ಅಂದರೆ ಅದು!

ಅದು ಯಾವಾಗ ಸುರುವಾಯಿತೋ ಹೇಗೆ ಸುರುವಾಯಿತೋ ಒಂದೂ ಗೊತ್ತಿಲ್ಲ. ಎಂದೂ ಇಲ್ಲದ ಹಲ್ಲು ನೋವು ಅಂದು ಆರಂಭವಾಗಬೇಕೆ? ಆ ನೋವು ಅನುಭವಿಸಿದವರಿಗೇ ಗೊತ್ತು. ನಡುರಾತ್ರಿ ದಾಟಿದರೂ ಮೌಲವಿಯವರಿಗೆ ನಿದ್ರೆಯಿಲ್ಲ. ನೋವು ತಡೆಯಲಾರದೆ ಸ್ವಲ್ಪ ಬಾಯಿ ಮುಕ್ಕಳಿಸಿಯಾದರೂ ನೋಡೋಣ ಎಂದು ಹೊರಗೆ ಬಂದು ನೀರಿನ ಟಾಂಕಿಯತ್ತ ಕಾಲು ಹಾಕಿದ ಮೌಲವಿಯವರನ್ನು ಯಾರೋ ಕೈತಟ್ಟಿ ಕರೆದಂತಾಯಿತಂತೆ!

ಮೂವತ್ತು ವರ್ಷಗಳ ಸರ್ವಿಸಿನಲ್ಲಿ ಭಯ ಎಂದರೆ ಅವರಿಗೆ ಅಲ್ಲಾಹುವಿನದ್ದು ಮಾತ್ರ. ಇಮಾಂ ಇಬ್ರಾಹಿಂ ಮೌಲವಿಯವರ ಹತ್ತಿರ ಸೈತಾನನ ನೆರಳು ಕೂಡಾ ಬೀಳಲು ಸಾಧ್ಯವಿಲ್ಲ. ಆದರೂ ಅವರ ಎದೆ ಧಸಕ್ಕೆಂದದ್ದು ನಿಜ ಅಂತ ಅವರೇ ಒಪ್ಪಿಕೊಳ್ಳುತ್ತಾರೆ.

ತಿರುಗಿ ನೋಡಿದರೆ ಕಂಬದ ಹತ್ತಿರ ಮಲಗಿದ್ದ ಅವುಲಿಯಾ ಅಲ್ಲಿಂದಲೇ ಕೈಸನ್ನೆ ಮಾಡಿ ಕರೆಯುತ್ತಿದ್ದಾರಂತೆ! ಕುತೂಹಲದಿಂದ ಹತ್ತಿರ ಹೋದಾಗ ಜೇಬಿನಿಂದ ಪುನಃ ಸ್ವಲ್ಪ ಕಡ್ಲೆಮಿಠಾಯಿ ಹೊರತೆಗೆದು ಚಾಚುತ್ತಾ 'ತಿನ್ನಿ' ಎಂದರಂತೆ.

ಮೌಲವಿಯವರಿಗೆ ಎಲ್ಲ ಅರ್ಥವಾಗಿ ಬಿಟ್ಟಿತ್ತಂತೆ! ಆ ಬಳಿಕ ಮೌಲವಿಯವರು ಹಿಂದೆ ಮುಂದೆ ನೋಡಲಿಲ್ಲ. ಕಡ್ಲೆಮಿಠಾಯಿಯನ್ನು ಬಾಯಲ್ಲಿ ಹಾಕಿಕೊಂಡು ಕಟಂ ಕಟಂ ಅಂತ ಜಗಿದೇ ಬಿಟ್ಟರಂತೆ! ಅ ಹಲ್ಲು ನೋವು ಎಲ್ಲಿಗೆ ಓಡಿತೋ ಅದಕ್ಕೇ ಗೊತ್ತು.



# 3

ಹುಟ್ಟು ಕುರುಡರಿಗೂ ಕಣ್ಣು ಬರುವಂತೆ ಮಾಡುವ ಭಯಂಕರ ಕರಾಮತ್ತು ಉಳ್ಳ ಅವುಲಿಯಾಗಳು ಲಕ್ಷ ದ್ವೀಪಗಳ ಮಸೀದಿಗಳಿಗೆರಡರಂತೆ ಇರುತ್ತಾರೆ ಎಂಬುದು ಗೊತ್ತಿರುವ ಮುತ್ತುಪ್ಪಾಡಿಯ ಜನರಿಗೆ, ಮಿಠಾಯಿ ಅವುಲಿಯಾರವರು ಜೀಪು ಕಾರುಗಳಲ್ಲಿ ಬಂದವರಿಗೆ ದೊಡ್ಡ ಮಣೆ ಹಾಕುವುದಿಲ್ಲ ಎಂಬ ಸಂಗತಿ ಹೆಚ್ಚು ಜನರಿಗೆ ಖುಷಿ ಕೊಟ್ಟದ್ದು ಸುಳ್ಳಲ್ಲ.

ಹಗಲಿನ ಬಹುಪಾಲು ಊರಿನ ಅಂಗಡಿಗಳ ಎದುರೋ ಮನೆಗಳ ಎದುರಿನ ಮರದ ಬುಡದಲ್ಲೋ ಹೊಳೆಯ ಅಂಚಿನ ಬಂಡೆಯ ಮೇಲೋ ಕುಳಿತುಕೊಂಡು ಆಕಾಶ ನೋಡುವ ಅವುಲಿಯಾರವರು ಎರಡೇ ಎರಡು ತಿಂಗಳಲ್ಲಿ ಮುತ್ತುಪ್ಪಾಡಿಗೆ ಹಳಬರಾಗಿಬಿಟ್ಟರು. ಕಡ್ಲೆಮಿಠಾಯಿಯನ್ನು ಎಂದೂ ನಿರಾಕರಿಸದ, ಬೇರೇನಾದರೂ ತಂದುಕೊಟ್ಟರೆ ಅಪರೂಪಕ್ಕೆ ಸ್ವೀಕರಿಸುವ ಅವುಲಿಯಾರವರನ್ನು ಮಾತನಾಡಿಸಲು ಯತ್ನಿಸಿದವರು ಮಾತ್ರ ಅವರ ಒಗಟಿನಂತಹ ಪ್ರಶ್ನೆಯಿಂದ ಕಂಗಾಲಾಗುತ್ತಿದ್ದರು. ಕಸಾಯಿ ಖಾದರ್ ಹೆದರಿದ್ದೂ ಅದೇ ಕಾರಣಕ್ಕೆ.

ಮಸೀದಿಯ ಪಕ್ಕದಲ್ಲೇ ಇರುವ ಕಬರಸ್ಥಾನದ ದಕ್ಷಿಣ ಮೂಲೆಯಲ್ಲಿರುವ ಸಣ್ಣ ಗೇಟಿನ ಮೂಲಕ ಹೊರಗೆ ಕಾಲಿರಿಸಿದರೆ ಅದುವೇ ಕಸಾಯಿಗಲ್ಲಿ. ಈ ಗಲ್ಲಿಯಲ್ಲಿರುವ ಸುಮಾರು ನಲುವತ್ತರಷ್ಟು ಮನೆಗಳಲ್ಲಿ ಮೂರು ಹೊತ್ತು ಸರಿಯಾಗಿ ಒಲೆ ಉರಿಯುವ ಮನೆ ಕಸಾಯಿ ಬಾವಾಕನವರದ್ದು ಮಾತ್ರವೆಂದೇ ಹೇಳಬಹುದು. ಸರಿಸುಮಾರು ಜವುಳಿ ಹಾಜಿಯವರಷ್ಟೇ ವಯಸ್ಸಾಗಿರಬಹುದಾದ ಬಾವಾಕ, ಈಗೊಂದು ಎರಡು ವರ್ಷಗಳಿಂದ ವಿಪರೀತ ಬೆನ್ನು ನೋವಿನಿಂದ ಒದ್ದಾಡುತ್ತಿರುವುದರಿಂದ ಅವರ 'ಮಟನ್ ಸ್ಟಾಲ್'ನ ವ್ಯವಹಾರವನ್ನೆಲ್ಲ ಈಗ ಅವರ ಮಗ ಖಾದರ್ ನೋಡಿಕೊಳ್ಳುತ್ತಿದ್ದ.

ಬಾವಾಕ ಎಷ್ಟೊಂದು ಸಾಧುಸ್ವಭಾವದ ಮನುಷ್ಯನೋ, ಅವರ ಮಗ ಖಾದರ್ ಅದಕ್ಕೆ ತದ್ವಿರುದ್ಧ. ಕೊಬ್ಬಿದ ಕುರಿಯಂತಹ ಯುವಕ. ಮಾತಿಗಿಂತ ಮೊದಲು ಕೈಮುಂದೆ ಮಾಡುವವನು. ಇಪ್ಪತ್ತನಾಲ್ಕು ಗಂಟೆಯೂ ಮುಖ ಸಿಮಡರಿಸಿಕೊಂಡೇ ಇರುವ ಖಾದರ್ ಬಾಯಿ ತೆಗೆದರೆ 'ಹಲ್ಕಾಸುವ್ವರ್' ಎಂದೇ ಉಗುಳುವವನು. ಮುತ್ತುಪ್ಪಾಡಿ ಜಮಾತಿನ ಪ್ರೆಸಿಡೆಂಟ್ ಹಾಗೂ ಟಿಂಬರ್ ಕಂಟ್ರಾಕ್ಟರ್ ಉಮ್ಮರಬ್ಬನವರ ಬಲಗೈ ಎಂದೇ ಹೆಸರು ಮಾಡಿದ್ದ ಖಾದರ್ ಭಾಗವಹಿಸದೆ ಇದ್ದ ಹೊಡೆದಾಟ ನಡೆದದ್ದಿಲ್ಲ. ಮದುವೆ ಮಾಡಿದರೆ ಸರಿಯಾದಾನು ಎಂಬ ಪ್ರಯತ್ನದಲ್ಲಿ ಅಪ್ಪ ಸೋತದ್ದು, ಆತನಿಗೆ ಹುಡುಗಿ ಕೊಡುವ ಮಾವಂದಿರು ಇಲ್ಲ ಎಂದಲ್ಲ; ಮದುವೆಯಾಗಲು ಖಾದರ್ ಒಪ್ಪಿದರೆ ತಾನೆ?

ಮುತ್ತುಪ್ಪಾಡಿ ಜಮಾತಿನ ಆಡಳಿತ ಕಮಿಟಿಯಲ್ಲಿ ಕಸಾಯಿಗಲ್ಲಿಯನ್ನು ಪ್ರತಿನಿಧಿಸುತ್ತಿದ್ದ ಬಾವಾಕನವರ ಓಡಾಟ ಕಡಮೆಯಾದ ಬಳಿಕ ಆ ಪಟ್ಟ ಖಾದರ್‌ನಿಗೆ ದಕ್ಕಿದ್ದು ಸಹಜವೆಂದೇ ಹೇಳಬೇಕು. ಬಹುತೇಕ ಸೋಗೆ ಗುಡಿಸಲುಗಳ ಆ ಕೊಂಪೆಯಲ್ಲಿ ಮಂಗಳೂರು ಹಂಚು ಹೊದಿಸಿದ ಮನೆಯವರಿಗಲ್ಲದೆ ಬೇರಾರಿಗೆ ಆ ಯೋಗ್ಯತೆ ಇದ್ದೀತು? ಜಮಾತಿನ ಮೀಟಿಂಗ್‌ನಲ್ಲಿ ತನ್ನ ತರಲೆಗಳಿಂದ ಉಮರಬ್ಬನವರಿಗೇ ಇರುಸು – ಮುರುಸು ಉಂಟುಮಾಡುತ್ತಿದ್ದ ಖಾದರ್, ಜವುಳಿ ಹಾಜಿಯವರು ಅಧ್ಯಕ್ಷರಾದ ಬಳಿಕವಂತೂ ಜಮಾತಿನ ತಲೆ ತಿಂದುಬಿಡುತ್ತಿದ್ದ. ಯಾರಿಂದಲೂ ಕೆಟ್ಟ ಮಾತು ಕೇಳಿರದ ಜವುಳಿ ಹಾಜಿಯವರನ್ನು ಖಾದರ್ ಎದುರೆದುರು ಗೇಲಿ ಮಾಡಿಲ್ಲವಾದರೂ, ಬೇರೆಯವರ ಜತೆ 'ಗೊತ್ತುಂಟು, ಗೊತ್ತುಂಟು. ನಾಲ್ಕು ರೂಪಾಯಿ ಲುಂಗಿಯನ್ನು ಎಂಟು ರೂಪಾಯಿಗೆ ಮಾರಿ ಮಕ್ಕಕ್ಕೆ ಹೋದ ಹಾಜಿಯಲ್ಲಾ?' ಎಂದು ನಕ್ಕದ್ದು ಹಾಜಿಯವರ ಕಿವಿಗೂ ಬಿದ್ದಿತ್ತು. ಆದರೆ ಖಾದರ್‌ನ ಜತೆ ವಾದ ಮಾಡುವುದು ಮೇಲೆ ನೋಡಿ ಉಗುಳಿದಂತೆ ಎಂಬುದನ್ನು ಬಲ್ಲ ಹಾಜಿಯವರು ಜಮಾತಿನ ಸಭೆಗಳಲ್ಲಿ ಬಹಳ ಜಾಣ್ಮೆಯಿಂದ ವ್ಯವಹರಿಸುತ್ತಿದ್ದರು.

ಹಾಜಿಯವರು ಉಳ್ಳಾಲದಿಂದ ಅವುಲಿಯಾರೊಬ್ಬರನ್ನು ಕರೆದು ತಂದದ್ದು, ಅವರು ಮಸೀದಿಯನ್ನೇ ತಮ್ಮ ನಿವಾಸವನ್ನಾಗಿ ಬದಲಾಯಿಸಿದ್ದು, ಎಲ್ಲವೂ ಖಾದರ್‌ನಿಗೆ ಅ ದಿನವೇ ಗೊತ್ತಾಗಿತ್ತು. ಕಸಾಯಿಗಲ್ಲಿಯ ಹೆಚ್ಚು ಕಮ್ಮಿ ಎಲ್ಲರೂ ಮಸೀದಿಗೆ ಹೋಗಿ ಅವುಲಿಯಾರನ್ನು ಕಂಡುಬಂದಿದ್ದರೂ, ಖಾದರ್ ತನ್ನ ಕುತೂಹಲವನ್ನು ಮುಂದಿನ ಶುಕ್ರವಾರದ ತನಕ ತಡೆದುಕೊಂಡಿದ್ದ. 'ಎಂಥದ್ದು ಅಂಥ ನೊಡಲಿಕ್ಕೆ ಹೋಗಬೇಕು? ಇಂಥದ್ದು ತಿಂಗಳಿಗೆ ನಾಲ್ಕು ತರಿಸಬಹುದು. ಅವುಲಿಯಾ ಅಂತ ಆದ ಮೇಲೆ ನಾಲ್ಕು ಮಂದಿ ಶಾಬ್ಬಾಶ್ ಅನ್ನುವಂತ ಕರಾಮತ್ತು ಮಾಡಿ ತೋರಿಸಬೇಕು. ಹಲ್ಲು ನೋವು ಗುಣ ಮಾಡಲು ನಾಲ್ಕು 'ಒಳ್ಳೆ ಮೆಣ್ಸು' ಗುದ್ದಿ ಇಟ್ಟರೆ ಸಾಕು. ಅದು ಗುಣ ಮಾಡಲು ಅವುಲಿಯಾ ಬೇಕಾ? ಈ ಜವುಳಿ ಹಾಜಿಗೆ ಬೇರೆ ಯಾರೂ ಸಿಕ್ಕಲಿಲ್ಲ ಅಂತ ಕಾಣ್ತದೆ. ನೋಡ್ವ..., ತಾಖತ್ತು ಇದ್ದರೆ ನಾನು ಕಡಿದು ಹಾಕಿದ ಆಡನ್ನು ಪುನಃ ಜೋಯಿಂಟ್ ಮಾಡಲಿ ನೋಡ್ವ. ಆಗ ಅವರ ಮೂತ್ರ ಬೇಕಿದ್ದರೆ ಕುಡೀತೇನೆ' ಎಂದು ಸವಾಲು ಎಸೆದದ್ದು ಗಲ್ಲಿ ತುಂಬ ಭಯದ ನೆರಳು ಹರಡಿತ್ತು.

ತಾನು ಹೇಳಿದ್ದು ಸ್ವಲ್ಪ ಹದ್ದು ಮೀರಿತೇನೋ ಎಂಬ ಸಣ್ಣ ಅನುಮಾನವನ್ನು ಎದೆಯೊಳಗೆ ಅಡಗಿಸಿಕೊಂಡೇ ಮುಂದಿನ ಶುಕ್ರವಾರ ನಮಾಜಿಗೆಂದು ಬಂದಿದ್ದ ಖಾದರ್, ಮಸೀದಿಯ ಒಳಗೆ ಕಂಬಕ್ಕೆ ಒರಗಿ ತೂಕಡಿಸುತ್ತಿದ್ದ ಅವುಲಿಯಾರವರನ್ನು



ಕಂಡು ಗಲಿಬಿಲಿಗೊಂಡಿದ್ದ. ಸಾಮಾನ್ಯವಾಗಿ ಅದುವರೆಗೆ ಖಾದರ್ ಕಂಡಿದ್ದ ಅವುಲಿಯಾಗಳೆಲ್ಲರೂ ಜವುಳಿ ಹಾಜಿಯವರಂತೆ ಗುಂಡುಗುಂಡಾಗಿ ಇರುತ್ತಿದ್ದು, ದಪ್ಪ ಮುಂಡಾಸು, ಬಿಳಿ ಗಡ್ಡಗಳ ಜತೆ ನಿಗೂಢಗಳ ಮೂಟೆಗಳಂತೆಯೇ ಕಾಣಿಸಿದ್ದರು. ಆದರೆ ಸರಿಯಾದ ಗಡ್ಡವೂ ಬೆಳೆಸಿರದ ಕಪ್ಪು ಕಲ್ಲಿನಂತಹ ಆ ವ್ಯಕ್ತಿಯನ್ನು ಅವುಲಿಯಾ ಅಂತ ಕರೆದವರಾರು ಎಂದು ತನ್ನೊಳಗೇ ಪ್ರಶ್ನಿಸಿಕೊಳ್ಳುತ್ತಿರುವಾಗಲೇ, ಅವುಲಿಯಾರವರು ಕಣ್ಣು ತೆರೆದು ಎದುರು ನಿಂತಿದ್ದ ಖಾದರ್‌ನತ್ತ ನೋಡಿದ್ದರು.

ಅವರ ಕಣ್ಣಿನ ನೋಟದಲ್ಲಿ ಅದೇನು ಶಕ್ತಿಯಿತ್ತೋ ಖಾದರನ ರಕ್ತವೆಲ್ಲ ತಣ್ಣಗಾದಂತಾಗಿತ್ತು. ತಪ್ಪಿಸಿಕೊಳ್ಳಲು ಪಕ್ಕಕ್ಕೆ ಸರಿಯೋಣವೆಂದರೆ ಕಾಲುಗಳು ಮರಗಟ್ಟಿದಂತಾಗಿದೆ. ನಿಂತಲ್ಲಿಂದಲೇ ಕೈಯೆತ್ತಿ 'ಅಸ್ಸಲಾಂ ಅಲೈಕ್ಕುಂ' ಎಂದು ವಂದಿಸಿದ್ದನ್ನು ಅವುಲಿಯಾ ಗಮನಿಸಿದಂತಿಲ್ಲ. ಗೊಂದಲಗೊಂಡ ಖಾದರ್ ಮತ್ತೊಮ್ಮೆ 'ಅಸ್ಸಲಾಂ ಅಲೈಕ್ಕುಮ್' ಎನ್ನುವಷ್ಟರಲ್ಲಿ ಅವುಲಿಯಾರವರು ಕಣ್ಣು ಮುಚ್ಚಿಕೊಂಡಿದ್ದರು. ಅರ್ಧ ಅವಮಾನ, ಅರ್ಧ ಸಿಟ್ಟು ಏಕಕಾಲದಲ್ಲಿ ಖಾದರ್‌ನನ್ನು ಕಂಗೆಡಿಸಿತ್ತು. ಮುಖ ಕಿವುಚಿದ ಖಾದರ್ ಜನರ ಗುಂಪಿನ ನಡುವೆ ಸೇರಿಕೊಂಡು ಅವುಲಿಯಾರವರನ್ನು ಮರೆತುಬಿಟ್ಟ. ಆ ಬಳಿಕದ ಎಲ್ಲ ಶುಕ್ರವಾರಗಳಲ್ಲೂ ಅವುಲಿಯಾರ ಕಣ್ಣು ತಪ್ಪಿಸಿಯೇ ಮಸೀದಿಗೆ ಹೋಗಿ ಬರತೊಡಗಿದ್ದ.

ಆದ್ದರಿಂದಲೇ ಖಾದರ್ ಸುಮಾರು ಹತ್ತು ದಿನಗಳ ಕೆಳಗೆ ಮಿಠಾಯಿ ಅವುಲಿಯಾರವರು ಕಸಾಯಿಗಲ್ಲಿಗೆ ಬಂದಿದ್ದಾಗಲೂ, ಹೋಗಿ ಎದುರುಗೊಳ್ಳುವ ಉತ್ಸಾಹ ತೋರಿಸಲಿಲ್ಲ.

ಆ ದಿನವೂ ಅವುಲಿಯಾ ಒಗಟಿನ ಗಂಟಿನಂತೆಯೇ ಕಂಡಿದ್ದರು. ಸಾಮಾನ್ಯವಾಗಿ ಬೆಳಗಿನ ಹೊತ್ತು ಖಾದರ್‌ನ ಕಣ್ಣು ತಪ್ಪಿಸಿ ಕಸಾಯಿಗಲ್ಲಿಗೆ ಯಾರಿಗೂ ಬಂದು ಹೋಗಲು ಸಾಧ್ಯವಿಲ್ಲ. ಸುಮಾರು ನಲವತ್ತರಷ್ಟು ಅಡ್ಡಾದಿಡ್ಡಿ ನಿಂತಿರುವ ಗುಡಿಸಲುಗಳ ಗುಂಪಿಗೆ ಕಿರೀಟದಂತಿರುವ ಕಸಾಯಿ ಬಾವಾಕನ ಮನೆಗೆ ಅಂಟಿಕೊಂಡಿರುವ 'ಮಟನ್ ಸ್ಟಾಲ್'ನ ಒಳಗೆ ಕೂತರೂ ಇಳಿಜಾರಿನಲ್ಲಿರುವ ಎಲ್ಲರ ಮನೆಯಂಗಳಗಳೂ ಕಾಣಿಸುತ್ತದೆ. ಅಂದು ಮಟನ್ ಸ್ಟಾಲ್‌ನಲ್ಲಿ ವಿಪರೀತ ರಶ್ಶು. ಅಡ್ಡ ಮರದ ತುಂಡಿನ ಮೇಲೆ ಆಡಿನ ಮಾಂಸವನ್ನು ಕಚಕಚ ಕೊಚ್ಚುತ್ತಿರುವಂತೆಯೇ, ಯಾರೋ ಒಬ್ಬಾತ ಉದ್ಗರಿಸಿದ್ದ, 'ಓಹ್, ಈವತ್ತು ಭಾರೀ ಬೇಗ ಹೊರಟಿದ್ದಾರೆ'. ಖಾದರ್ ಕುತೂಹಲದಿಂದ ಹೊರಗೆ ಕಣ್ಣು ಹಾಯಿಸಿದ್ದ. ಅವುಲಿಯಾರವರು ಹನಿ ಮಳೆಯಲ್ಲಿ ಕಾಗೆಯಂತೆ ಒದ್ದೆಯಾಗುತ್ತಾ, ಅದ್ರಾಮಣ್ಣನ ಗುಡಿಸಲಿನ ಎದುರು ನಡೆಯುತ್ತಿರುವುದು ಕಾಣಿಸಿತ್ತು.

ತನಗೇನೂ ಇದರಲ್ಲಿ ಆಸಕ್ತಿಯಿಲ್ಲವೆಂಬ ಸೋಗಿನಲ್ಲಿ ಖಾದರ್ 'ಅವರಿಗೇನು ತಿರುಗುವುದೇ ಕೆಲಸ' ಎಂದು ಉದಾಸೀನದಿಂದ ಹೇಳುತ್ತಾ ತನ್ನ ಕೆಲಸವನ್ನು ಮುಂದುವರೆಸಿದ್ದನಾದರೂ, ಕಣ್ಣು ಮೂಲೆಗಳು ಅವುಲಿಯಾರ ಬೆನ್ನನ್ನು ಹಿಡಿದಿದ್ದವು.

ಮಸೀದಿಯ ಕಾಂಪೌಂಡ್ ಗೋಡೆಯಿಂದ ಆರಂಭವಾಗಿ ಕೆಳಗಡೆ ಕೆರೆಯ ತನಕವೂ ಪರಸ್ಪರ ಅಂಟಿಕೊಂಡಂತಿರುವ ಗುಡಿಸಲುಗಳ ನಡುವಿನ ತಟ್ಟು ದಿನ್ನೆಗಳನ್ನೇ ಬೀದಿಗಳೆನ್ನಬಹುದಾದರೆ, ಕಸಾಯಿಗಲ್ಲಿಯಲ್ಲಿ ಎಲ್ಲ ಮನೆಗಳ ಸುತ್ತಲೂ ಬೀದಿಗಳೇ, ಈ ಬೀದಿಗಳ ತುಂಬ ಕೋಳಿಗೂಡು, ಆಡಿನ ಹಿಕ್ಕೆ, ಮಕ್ಕಳ ಹೇಲು, ಸ್ನಾನದ ನೀರು, ಮುಸುರೆಯ ಕೆಸರು, ಮೂತ್ರದ ಕೊಚ್ಚೆ ಮತ್ತು ಈ ಎಲ್ಲದರ ನೇತಾರನೆಂಬಂತೆ ಕಸಾಯಿಖಾನೆಯ ಕೆಂಪುರಕ್ತ ವಿವಿಧ ವಿನ್ಯಾಸಗಳೊಂದಿಗೆ ಬಿಸಿಲಿಗೆ ಹೊಳೆಯುತ್ತವೆ. ಎಲ್ಲವೂ – ಎಲ್ಲ ಮನೆಗಳನ್ನು ಬಳಸಿಕೊಂಡೇ ಹರಿಯುತ್ತಾ ತಗ್ಗಿನ 'ಕುಂಟಲಕೆರೆ'ಯನ್ನು ತುಂಬುತ್ತವೆ.

ಕೆರೆಯ ಬಲಭಾಗದಲ್ಲಿ ಕುರುಚಲು ಕುಂಟಲಕಾಡು. ಅದರಾಚೆ ಈಶ್ವರಲಿಂಗ ದೇವಾಲಯ. ದೇವಾಲಯದ ಬೀದಿಯಲ್ಲಿರುವ ನಾರಾಯಣ ಪಂಡಿತರಿಗೆ ಅತಿ ಹೆಚ್ಚು ಗಿರಾಕಿಗಳನ್ನೊದಗಿಸುವ ಕಸಾಯಿಗಲ್ಲಿಯಲ್ಲಿ ಹಗಲೆಲ್ಲ ಹೆಂಗಸರದ್ದೇ ಕಾರುಬಾರು. ಗಂಡಸರೆಲ್ಲ ಕೂಲಿನಾಲಿಗೆ ಹೋಗುವವರು. ಖಾದರ್‌ನ ಮಟನ್ ವ್ಯಾಪಾರವೂ ಸುಮಾರು ಹತ್ತು ಹನ್ನೊಂದಾಗುವ ಮುನ್ನ ಮುಗಿದುಹೋಗುವುದರಿಂದ ಆತ ಕೂಡಾ ಆ ಬಳಿಕ ಗಲ್ಲಿಯಲ್ಲಿ ಇರಲಾರ. ದುಡಿಯಲು ಹೊರಗೆ ಹೋಗಲಾರದ ಬಾವಾಕ ನಂತವರು ಹತ್ತು ಹನ್ನೆರಡು ಜನ ಇದ್ದರೆ ಹೆಚ್ಚು.

ಆ ದಿನ ಬಂದಿದ್ದಾಗ ಯಾರು ಕರೆದು ಮಾತನಾಡಿದರೂ ತುಟಿ ಎರಡು ಮಾಡದಿದ್ದ ಅವುಲಿಯಾರವರು, ಈ ದಿನ ಯಾರೂ ಇಲ್ಲದ ಸಮಯ ಸಾಧಿಸಿ ಬಂದವರಂತೆ ಅಂಗಡಿಯೊಳಕ್ಕೆ ನೇರವಾಗಿ ನುಗ್ಗಿ 'ನೀನು ಖಾದರ್ ಅಲ್ಲವಾ?' ಎಂದು ಪ್ರಶ್ನಿಸಿದಾಗ, ಖಾದರ್ ಕಂಗಾಲಾಗಿ ಹೋಗಿದ್ದ. ದಿನದ ವ್ಯಾಪಾರ ಮುಗಿಸಿ ತಕ್ಕಡಿ ತೊಳೆದಿಟ್ಟು ದುಡ್ಡು ಎಣಿಸುತ್ತಿದ್ದ ಖಾದರ್, ಅವುಲಿಯಾರ ಅನಿರೀಕ್ಷಿತ ಪ್ರಶ್ನೆಗೆ 'ಹೌದು' ಎನ್ನಬೇಕೇ? 'ಅಲ್ಲ' ಎನ್ನಬೇಕೇ? ಎಂದು ನಿರ್ಧರಿಸಲಾಗದೆ ಕಣ್ಣು ಪಿಳಿ ಪಿಳಿ ಮಾಡಿದ್ದ.

'ಈವತ್ತು ವ್ಯಾಪಾರ ಚೆನ್ನಾಗಿ ಆಯಿತಾ?' ಅವುಲಿಯಾ ಹೊಸ ಪ್ರಶ್ನೆ ಎಸೆದಿದ್ದರು. ಅಂಗಡಿಯ ಬಾಗಿಲು ಬಹಳ ತಗ್ಗಿನದ್ದು. ಒಳಗೆ ಬರುವುದಾದರೆ ತಲೆ ತಗ್ಗಿಸಿ ಬರಬೇಕು. ಅವುಲಿಯಾರವರು ಬಾಗಿಲ ಬಳಿಯೇ ನಿಂತಿದ್ದರಿಂದ ಖಾದರ್‌ನತ್ತ ಬಾಗಿದ್ದರು. ಅಂಗಡಿಯೊಳಗೆ ಗಿರಾಕಿಗಳ ಸಲುವಾಗಿ ಒಂದು ಬೆಂಚು ಇದ್ದರೂ ಅದರಲ್ಲಿ ಕೊಳೆಯಿರು



ವುದರಿಂದ ಅವುಲಿಯಾರವರನ್ನು ಕುಳಿತುಕೊಳ್ಳಲು ಹೇಳುವಂತೆಯೂ ಇಲ್ಲ. ಏನು ಮಾಡುವುದೀಗ?

'ತಂದೆಯವರನ್ನು ಕರೆಯುತ್ತೇನೆ ನಿಲ್ಲಿ' ಎಂಬ ಮಾತನ್ನು ದಡಬಡನೆ ಉದುರಿಸಿದ ಖಾದರ್, ಮಿಂಚಿನ ವೇಗದಲ್ಲಿ ಹೊರಗೆ ನುಗ್ಗಲು ಯತ್ನಿಸಿದ್ದನಾದರೂ ಬಾಗಿಲ ಬಳಿಯೇ ನಿಂತಿದ್ದ ಅವುಲಿಯಾರವರು ಆತನ ಎಡರಟ್ಟೆ ಹಿಡಿದು ನಿಲ್ಲಿಸಿ ಬಿಟ್ಟಿದ್ದರು. 'ನನಗೆ ಕೆಲಸವಿರುವುದು ನಿನ್ನಲ್ಲಿ. ನಿನ್ನ ತಂದೆಯವರಲ್ಲಿ ಅಲ್ಲ' ಎಂದ ಅವುಲಿಯಾರ ಬೆರಳುಗಳ ಬಿಗಿತಕ್ಕೆ ಖಾದರ್‌ನ ರಟ್ಟೆ ನೋಯಲಾರಂಭಿಸಿತ್ತು. ಪಾರಾಗಬೇಕಾದರೆ ತನ್ನ ಬಲಗೈ ಬೆರಳುಗಳಿಂದ ಅವರನ್ನು ಮುಟ್ಟಬೇಕು. ತನ್ನ ಬೆರಳ ಸಂದಿಗಳಲ್ಲಿ ರಕ್ತದ ಕೆಂಪು ಇನ್ನೂ ಹಸಿಯಾಗಿರುವಾಗ ಅವುಲಿಯಾರವರನ್ನು ಮುಟ್ಟಬಹುದೆ?

'ನಾನು ಹೊರಗೆ ಇರುತ್ತೇನೆ. ನೀನು ಅಂಗಡಿ ಮುಚ್ಚಿಕೊಂಡು ಬಾ' ಎಂದು ಅವುಲಿಯಾ ತನ್ನ ಹಿಡಿತವನ್ನು ಸಡಿಲಿಸಿ ಹೊರಗೆ ಹೋದಾಗ, ಖಾದರ್ ಅದೇನೋ ಹೊಸ ಉತ್ಸಾಹ ಆವಾಹನೆಯಾದವನಂತೆ ಕೈಗಳನ್ನು ಚೆನ್ನಾಗಿ ತೊಳೆದುಕೊಂಡು, ಅಂಗಡಿಯ ಬಾಗಿಲಲ್ಲಿ ತೂಗಾಡುತ್ತಿದ್ದ ಗೋಣಿತಟ್ಟನ್ನು ಕೆಳಗೆ ಸರಿಸಿ ರಸ್ತೆಗೆ ಕಾಲಿಟ್ಟ.

ಅದಷ್ಟು ಹೊತ್ತಿಗೆ ಹೊರಗೆ ಬಂದಿದ್ದ ಬಾವಾಕನ ಜತೆ ಗುಂಪುಗಟ್ಟಿದ್ದ ಹೆಂಗಸರು, ಮಕ್ಕಳು, ಮುದುಕರು ಬೆಕ್ಕಸಬೆರಗಾಗಿ ನೋಡುತ್ತಿರುವಂತೆಯೇ ಖಾದರ್‌ನ ತೋಳು ಹಿಡಿದುಕೊಂಡ ಅವುಲಿಯಾರವರು ತಗ್ಗಿನ ಕೆರೆಯತ್ತ ನಡೆದಿದ್ದರು. ಕೆರೆಯ ಪಕ್ಕದಲ್ಲಿ ನಿಂತು ತಮ್ಮ ಎರಡೂ ತೋಳುಗಳನ್ನು ಅತ್ತಿತ್ತ ಚಾಚುತ್ತಾ ಏನನ್ನೋ ಹೇಳುತ್ತಿರುವ ಅವುಲಿಯಾರ ಎದುರು ಕುರಿಮರಿಯಂತೆ ತಲೆಯಾಡಿಸುತ್ತಿದ್ದ ಖಾದರ್ ಎಲ್ಲರ ಕುತೂಹಲದ ವಸ್ತುವಾದ.

ಸ್ವಲ್ಪವೇ ಹೊತ್ತಿನಲ್ಲಿ ಖಾದರ್‌ನ ಜತೆ ಮರಳಿ ಬಂದ ಅವುಲಿಯಾರವರು ಬಾವಾಕನ ಮನೆಯಂಗಳದಲ್ಲಿ ಜಮಾಯಿಸಿದ್ದ ಜನರನ್ನು ಪರೀಕ್ಷಿಸುವವರಂತೆ ನೋಡುತ್ತಾ ಹೇಳಿದರು. 'ಈಗಿನಿಂದ ಈ ಹುಡುಗ ನನ್ನ ದೋಸ್ತ್. ಈ ದೋಸ್ತ್ ನಿಮ್ಮ ಲೀಡರು. ಇವನು ಹೇಳಿದ ಹಾಗೆ ಕೇಳಿದರೆ ನಿಮಗೆಲ್ಲ ಒಳ್ಳೆಯದಾಗುತ್ತದೆ'.

ಅವುಲಿಯಾರವರ ಮಾತಿಗೆ ಏನು ಅರ್ಥವಿರಬಹುದೆಂಬ ಗೊಂದಲ ಎಲ್ಲರನ್ನೂ ಕಾಡುತ್ತಿರುವಂತೆಯೇ ಅವುಲಿಯಾರವರು ಖಾದರ್‌ನ ಬೆನ್ನುತಟ್ಟುತ್ತಾ 'ನಾಳೆ ಇದೇ ಹೊತ್ತಿಗೆ ಬರುತ್ತೇನೆ' ಎಂದವರೇ ಹಿಂದಿರುಗಿಯೂ ನೋಡದೆ ಹೋಗಿಬಿಟ್ಟರು.

ಆಕಾಶವೇ ತಲೆಯ ಮೇಲೆ ಬಿದ್ದವನಂತೆ ಖಾದರ್ ಮನೆಯ ಜಗಲಿಯಲ್ಲಿ ಕುಸಿದು ಕುಳಿತ.

# ಭಾಗ–2

## 1

ನೂರಕ್ಕೆ ನೂರು ನಿಷ್ಠೆಯಿಂದ ನಮಾಜು ಮಾಡುವವನು, 'ಅಲ್ಲಾಹುವೇ ನನಗೆ ಇಂತಿಷ್ಟು ದಿನಗಳೊಳಗೆ ಇಂತಿಂಥದ್ದು ಆಗಬೇಕು' ಎಂದು ಕೇಳಿದಾಗ ಅಲ್ಲಾಹು ಇಲ್ಲವೆನ್ನುವುದಾದರೂ ಹೇಗೆ?

ಜವುಳಿ ಹಾಜಿಯವರಿಗೆ ಈ ಬಗ್ಗೆ ಎಳ್ಳಿನಷ್ಟೂ ಸಂಶಯವಿಲ್ಲ. ಇಲ್ಲದೇ ಹೋಗಿದ್ದರೆ ತಲೆಹೊರೆ ಬಟ್ಟೆ ವ್ಯಾಪಾರ ಮಾಡುವವರ ಜತೆ ಸಹಾಯಕನಾಗಿ ಮುತ್ತುಪ್ಪಾಡಿಗೆ ಕಾಲಿರಿಸಿದ್ದ 'ಅದ್ದು' ಎಂಬ ಅನಾಥ ಹುಡುಗ, ಅರುವತ್ತು ವರ್ಷ ಬದುಕಿದರೆ, ಬಹಳವೆಂದರೆ 'ಅದ್ರಾಮ' ಎಂದು ಗುರುತಿಸಲ್ಪಡಬಹುದಿತ್ತು ಅಥವಾ ಅದಕ್ಕೂ ಹೆಚ್ಚೆಂದರೆ ಒಂದು ನಾಲ್ಕು ಮಂದಿ ಮುದುಕನ ವಯಸ್ಸಿಗೆ ಬೆಲೆಕೊಟ್ಟು 'ಅದ್ರಾಮಣ್ಣ' ಎಂದು ಕರೆದರೂ ಕರೆದಾರು.

ಆದರೆ ಅಲ್ಲಾಹುವಿನ ಆಟವನ್ನು ಅದು ಹೀಗೆಯೇ ಎಂದು ಲೆಖ್ಖಾಚಾರ ಮಾಡಿ ಹೇಳಲು ಸಾಧ್ಯವಿಲ್ಲ. ತನ್ನ ಮದುವೆಯ ವಯಸ್ಸಿಗೇ 'ಟೈಲರ್ ಅದ್ರಾಮ' ಎಂದು ಫೇಮಸ್ಸಾಗಿದ್ದ ಯುವಕ, ಬಸಳೆ–ಬಳ್ಳಿಯಂತಹ ಹಲೀಮಳನ್ನು ನಿಕಾಹ್ ಮಾಡಿಕೊಂಡ ದಿನವೇ ಎಚ್ಚರಿಕೆ ನೀಡಿದ್ದು, 'ಕೈಕಾಲು ಸರಿ ಉಂಟು ಅಂತ ಆದ್ರೆ ಒಂದು ಹೊತ್ತಿನ ನಮಾಜು ಕೂಡಾ ಬಾಕಿ ಮಾಡಬೇಡ. ಅದು ಹೇಗೆ ಅಲ್ಲಾಹು ನಮ್ಮನ್ನು ಗುಂಡಿಗೆ ಹಾಕ್ತಾನೆ ಅಂತ ನಾನೂ ಒಂದು ಕೈ ನೋಡಿಯೇ ಬಿಡುತ್ತೇನೆ!'

ಅಲ್ಲಾಹುವೇ ಅಚ್ಚರಿಪಡಬಹುದಾದ ನಿಷ್ಠೆ ಅದು. ಹಾಗೆಂದು ಟೈಲರ್ ಆದ್ರಾಮನ ನಿಷ್ಠೆ ಬರಿಯ ಪ್ರಾರ್ಥನೆಗಷ್ಟೇ ಸೀಮಿತವಲ್ಲ. ಹಿಡಿದ ಕೆಲಸದಲ್ಲೂ ಅದೇ ಹಟ. ದಿನಕ್ಕೆ ಹದಿನೆಂಟು ತಾಸು ದುಡಿದರೂ ಆಯಾಸವೆಂಬುದಿಲ್ಲ. ಹೇಳಿದವರಿಗೆ ಹೇಳಿದ ಟೈಮಿಗೆ ಬಟ್ಟೆ ಮುಟ್ಟಿಸಿಯೇ ಸಿದ್ಧ. ಮುತ್ತುಪ್ಪಾಡಿಯ ವ್ಯಾಪಾರೀ ಇತಿಹಾಸದಲ್ಲೇ ಮೊತ್ತ ಮೊದಲ ಬಾರಿಗೆ, ವಾರಕ್ಕೆ ಎರಡು ರೂಪಾಯಿ ಕಂತಿನ 'ರಂಜಾನ್ ಡ್ರೆಸ್ ಸ್ಕೀಮ್' ಆರಂಭಿಸಿ ಆ ಕಾಲದಲ್ಲೇ ನಾಲ್ಕು ನೂರು ಮೆಂಬರುಗಳನ್ನು ಕಲೆ ಹಾಕಿದ್ದ ಸಾಹಸಿ.

ಮುತ್ತುಪ್ಪಾಡಿಯ ಮಂದಿ ಕಣ್ಣರಳಿಸಿ ನೋಡು ನೋಡುತ್ತಿರುವಂತೆಯೇ ಬಸ್ ಸ್ಟ್ಯಾಂಡಿನಲ್ಲಿ ಜವುಳಿ ಅಂಗಡಿ ಹಾಕಿದ್ದ ಟೈಲರ್ ಆದ್ರಾಮ, ಮುಂದೆ ಎಂಟೇ ವರ್ಷಗಳಲ್ಲಿ ಹೊಸ ಕಟ್ಟಡ ಕಟ್ಟಿಸಿ 'ರೆಹಮಾನ್ ಕ್ಲಾತ್ ಸ್ಟೋರ್' – ಪ್ರೊ। ಅಬ್ದುಲ್ ರೆಹಮಾನ್ ಎಂಬ ಬೋರ್ಡು ತಗುಲಿಸಿದ್ದ. ಹಿರಿಯ ಮಗಳು ನಬಿಸಳಿಗೆ ಹೊಳೆ ಬದಿಯಲ್ಲಿ



ಹೊಸದಾಗಿ ಕಟ್ಟಿಸಿದ್ದ 'ರೆಹಮಾನ್ ಮಂಜಿಲ್'ನಲ್ಲೇ ನಿಕಾಹ್ ಮಾಡಿಕೊಟ್ಟ. ಅಬ್ದುಲ್ ರೆಹಮಾನ್ ಸಾಹೇಬರು ತಮ್ಮ ಎರಡನೆಯ ಮಗ ಗಫೂರ್‌ನಿಗೆ ಹುಡುಗಿ ತಂದ ವರ್ಷವೇ ಹೊಳೆ ಬದಿಯ ಜಮೀನಿನಲ್ಲಿ ಎರಡೆಕರೆ ಅಡಿಕೆ ಸಸಿ ನೆಟ್ಟದ್ದು ಮಾತ್ರವಲ್ಲ. ಅಂಗಡಿ ಬೋರ್ಡಿನಲ್ಲಿದ್ದ ತಮ್ಮ ಹೆಸರಿನ ಹಿಂದೆ 'ಹಾಜಿ' ಎಂಬ ಬಿರುದು ಅಂಟಿಸಿಕೊಂಡುಬಿಟ್ಟಿದ್ದರು.

ಮನಸ್ಸು ಮಾಡಿರುತ್ತಿದ್ದರೆ ಮಕ್ಕಾ ಯಾತ್ರೆಯಿಂದ ಮರಳಿ ಬಂದ ವರುಷವೇ ಜವುಳಿ ಹಾಜಿಯವರು ಜಮಾತಿನ ಅಧ್ಯಕ್ಷರಾಗಬಹುದಿತ್ತು. ಯಾರಲ್ಲೂ ಒಂದು ಪೈಸೆ ಬೇಡವೆ ಸ್ವಂತ ಖರ್ಚು ಹಾಕಿ ಮಸೀದಿಯ ಕೆರೆಯನ್ನು ಎರಡಾಳು ಕೆಸರು ತೆಗೆಯಿಸಿ, ಕಾರ್ಕಳದಿಂದ ಆರು ಲೋಡು ಕರಿಗಲ್ಲು ತರಿಸಿ ದಂಡೆ ಕಟ್ಟಿಸಿದ್ದ ಜವುಳಿ ಹಾಜಿಯಂಥವರು ಜಮಾತು ಪ್ರೆಸಿಡೆಂಟರಾಗಲು ಸಾಧ್ಯವಾಗದೇ ಹೋದರೆ ಮತ್ತೆಂಥವರಿಗೆ ಸಾಧ್ಯವಾದೀತು!

ಆದರೆ ಹಾಜಿಯವರದ್ದು ಖಡಕ್ ಮಾತು. 'ಜಮಾತು ಪ್ರೆಸಿಡೆಂಟು ಆಗುವವನಿಗೆ ಒಂದು ನಿಯತ್ತು ಅಂತ ಇರಬೇಕು. ಅವನು ನಾಲ್ಕು ಜನರಿಗೆ ಷೋ ಕೇಸು ಥರ ಇರಬೇಕು. ಈಗ ನೋಡಿ, ನಾನು ಎಲ್ಲಿ ತನಕ ಜವುಳಿ ವ್ಯಾಪಾರ ಮಾಡ್ತಾ ಇರ್ತೇನೆ, ಅಲ್ಲಿ ತನಕ 'ಹರಾಮು' ಕೆಲಸ ಮಾಡ್ತಾ ಇದ್ದೇನೆ ಅಂತಲೇ ಲೆಖ್ಖ, ನೀವು ಹೇಗೆ ಅಂತ ಕೇಳಿ. ವ್ಯಾಪಾರ ಅಂದ ಮೇಲೆ ಬ್ಯಾಂಕಿಗೆ ಬಡ್ಡಿ ಕೊಡುವುದು. ತೆಕೊಳ್ಳುವುದು ಎಲ್ಲ ಮಾಡಲೇಬೇಕಾಗ್ತದೆ. ಹೀಗೆ, ಒಂದು ಕಡೆಯಿಂದ ಹರಾಮಿನ ಬಡ್ಡಿ ವ್ಯವಹಾರ, ಮತ್ತೊಂದು ಕಡೆಯಿಂದ ಜಮಾತು ಪ್ರೆಸಿಡೆಂಟು ಅಂತ ಡಬ್ಬಲ್ ಗೇಮು ಆಡಿದರೆ ನನ್ನನ್ನು ಅಲ್ಲಾಹು ಎತ್ತಿ 'ಕಟ್‌ಪೀಸು' ಮಾಡಿ ಬಿಸಾಡುವುದಿಲ್ಲವಾ?'

ಮಾತು ಎಂದರೆ ಅದು. ಬಾಯಲ್ಲೊಂದು ಕಾಯಕದಲ್ಲೊಂದು ಎಂಬುದು ಹಾಜಿಯವರ ಜಾಯಮಾನಕ್ಕೇ ಒಗ್ಗದ ಸಂಗತಿ. ಆದ್ದರಿಂದಲೇ ಯಾವಾಗ ಹಾಜಿಯವರು ತಮ್ಮ ಎಲ್ಲ ವ್ಯವಹಾರಗಳನ್ನು ತಮ್ಮ ಇಬ್ಬರು ಮಕ್ಕಳ ತಲೆಗೆ ಕಟ್ಟಿ ಕೈತೊಳೆದುಕೊಂಡರೋ ಆವಾಗಿನಿಂದ 'ಇನ್ನು ಜಮಾತು ಅಧ್ಯಕ್ಷನಾಗಲು ನನ್ನಿಂದ ಅಡ್ಡಿಯಿಲ್ಲ' ಎಂದು ಸಾರುತ್ತಾ ಬಂದರು.

ಆಗ ಜಮಾತು ಅಧ್ಯಕ್ಷರಾಗಿದ್ದ ಟಿಂಬರ್ ಕಂಟ್ರಾಕ್ಟರ್ ಉಮರಬ್ಬನವರಿಗೆ ಉಭಯ ಸಂಕಟವನ್ನು ನುಂಗುವಂತೆಯೂ ಇಲ್ಲ, ಉಗುಳುವಂತೆಯೂ ಇಲ್ಲ. ಹಾಗೂ ಹೀಗೂ ಆರು ತಿಂಗಳು ದೂಡುವಷ್ಟರಲ್ಲಿ ಬಹುಪಾಲು ಸದಸ್ಯರು ಹಾಜಿಯವರ ಸೈಡಿಗೆ ವಾಲಿಬಿಟ್ಟಿದ್ದರು. ಕೊನೆಗೆ ಬೇರೆ ದಾರಿಯೇ ಇಲ್ಲದೆ ಉಮರಬ್ಬನವರು, ಮುಂದಿನ ಜನರಲ್ ಬಾಡಿಯಲ್ಲಿ, ತಮ್ಮ ಬಿಡುವಿಲ್ಲದ ವಹಿವಾಟುಗಳ ನೆವನ ಹೇಳಿ ಜಮಾತಿನ ಪ್ರೆಸಿಡೆಂಟ್

ಗಿರಿಯನ್ನು ಜವುಳಿ ಹಾಜಿಯವರಿಗೆ ಬಿಟ್ಟುಕೊಟ್ಟರು. ಕಡೆಯ ನಿಮಿಷದವರೆಗೂ ಉಮರಬ್ಬನವರ ಪರವಾಗಿ ಎದುರೆದುರೇ ಸಪೋರ್ಟ್ಟು ಮಾಡಿದವರು ಕಸಾಯಿ ಖಾದರ್ ಹಾಗೂ ಮತ್ತೊಂದು ನಾಲ್ಕು ಜನರು ಮಾತ್ರ.

ಮುತ್ತುಪ್ಪಾಡಿಯಲ್ಲಿ ಯಾರು ಏನು ಮಾಡುವುದಿದ್ದರೂ ಮೊದಲು ಹಾಜಿಯವರಲ್ಲಿ ಒಂದು ಮಾತು ಹೇಳದೆ ಇರಲಾರರು. ಮದುವೆ, ಮುಂಜಿ, ಸಾವುಗಳ ವಿಷಯ ಹೋಗಲಿ. ಒಂದು ದನ ಕರು ಹಾಕಿದರೂ ಹಾಜಿಯವರಲ್ಲಿ ಬಂದು ಹೇಳಿಯಾರು. ಹಾಜಿಯವರು ಬಾಯಿತುಂಬ ನಗುತ್ತಾ, 'ಅಲ್ಲಾಹು ನಿಮಗೆ ಒಳ್ಳೇದು ಮಾಡುತ್ತಾನೆ' ಎಂದು ಹೇಳಿದರೇನೇ ಅವರಿಗೊಂದು ನೆಮ್ಮದಿ. ತಮ್ಮ ಹೆಸರಿನ ಹಿಂದೆ 'ಹಾಜಿ' ಎಂದು ಸೇರಿಸಿಕೊಂಡ ಬಳಿಕ ಮುತ್ತುಪ್ಪಾಡಿಯಲ್ಲಿ ಯಾವುದೇ ಹುಡುಗಿಗೆ ಮದುವೆ ನಿಶ್ಚಯವಾಯಿತು ಅಂದರೆ ಸಾಕು. ಹಾಜಿಯವರ ಅಂಗಡಿಯಿಂದ ಅದೇ ದಿನ ಸಂಜೆ ಒಂದು ವಾಯಿಲ್ ಸೀರೆ, ಒಂದು ರವಕೆ ಪೀಸು ಆ ಹುಡುಗಿಗೆ ಉಡುಗೊರೆಯಾಗಿ ಬಂದು ಬೀಳುವಾಗ ಹಾಜಿಯವರನ್ನು ಜನ ಯಾಕೆ ಮರೆತಾರು?

ರೆಹಮಾನ್ ಕ್ಲಾತ್ ಸ್ಟೋರ್ ಇರುವುದು ಬಸ್‌ಸ್ಟ್ಯಾಂಡಿನ ಮೂಗಿನ ಮೇಲೆಯೇ. ಯಾವ ಬಸ್ಸು ಹರಿದಾಡಿದರೂ ಹಾಜಿಯವರು ಕುಳಿತ ಮಂಡಕ್ಕೆ ಕಾಣಿಸಬೇಕು. ಬಸ್ಸು ಕಾಯುವವರಿಗೆ ಅನುಕೂಲವಾಗುವಂತೆ ತಮ್ಮ ಅಂಗಡಿಯ ಎಡಭಾಗದ ಮಾಡನ್ನು ರಸ್ತೆಯ ದಿಕ್ಕಿಗೆ ಆರು ಅಡಿ ಇಳಿಸಿ ನಾಲ್ಕು ಮರದ ಬೆಂಚು ಹಾಕಿದ್ದ ಹಾಜಿಯವರ ಅಂಗಡಿಗೆ ಜನ ಬಾರದೆ ಬೇರೆಲ್ಲಿ ಹೋಗಬೇಕು? ಈವತ್ತು ಪುತ್ತೂರಿಗೆ ಯಾರು ಹೋಗಿದ್ದಾರೆ, ಮಂಗಳೂರಿನಿಂದ ಯಾರು ಬಂದಿದ್ದಾರೆ? ಎಲ್ಲ ವಿವರಗಳೂ ಹಾಜಿಯವರ ನಾಲಗೆಯ ತುದಿಯಲ್ಲಿರುತ್ತದೆ.

ಇಂಥಹ ಜವುಳಿ ಹಾಜಿಯವರು, ಅಂಗಡಿಯಿಂದ ನಿವೃತ್ತರಾಗಿ ಜಮಾತು ಪ್ರೆಸಿಡೆಂಟರಾದ ಬಳಿಕ ತಮ್ಮ 'ರೆಹಮಾನ್ ಮಂಜಿಲ್'ನ ಮುಖಮಂಟಪದಲ್ಲಿ ಮಿನಿ ಪಂಚಾಯತು ಕಚೇರಿ ನಡೆಸಲಾರಂಭಿಸಿದ್ದರು. ಪಂಚಾಯತಿನ ಅಧ್ಯಕ್ಷರಾದ ಸೀತಣ್ಣ ಶೆಟ್ರ ಮಾವ ಪಟೇಲ್ ದೂಮಣ್ಣ ರೈಗಳು ಹಗಲಿನ ಹೊತ್ತು ಅವರ ಮನೆಯಲ್ಲಿ ಇಲ್ಲ ಅಂತ ಆದರೆ ಅವರನ್ನು ಹುಡುಕಲು ಬೇರೆ ಯಾರ ಮನೆಗೂ ಹೋಗುವ ಅಗತ್ಯವಿಲ್ಲ. ಗುಡ್ಡೆಶಾಲೆಯ ಹೆಡ್‌ಮಾಸ್ತರ್ ಸದಾಶಿವ ಐತಾಳ ಬಿ.ಎ., ಇವರು ಸಂಜೆಯ ಒಂದು ತಾಸಾದರೂ ಮುಖಮಂಟಪದ ಚರ್ಚೆಯಲ್ಲಿ ಭಾಗವಹಿಸದೆ ಹೋದರೆ ರಾತ್ರಿ ನಿದ್ರೆ ಬರಲಿಕ್ಕಿಲ್ಲ. ಬೀಡಿ ಬ್ರಾಂಚಿನ ಪುತ್ತಬ್ಬನವರ ಯಾವುದೇ ಹೊಸ ರಗಳೆಯಿದ್ದರೂ ಹಾಜಿಯವರೇ ಸರಿಮಾಡಬೇಕು. ಹಾಜಿಯವರ ಚಡ್ಡಿ ದೋಸ್ತ್ ಉಸ್ಮಾನ್ ಖಾನರು



ತಮ್ಮ ಪೋಸ್ಟ್‌ಮನ್ ಕೆಲಸದಿಂದ ನಿವೃತ್ತರಾದ ಮರುದಿನದಿಂದ ಹೆಚ್ಚುಕಮ್ಮಿ ಹಾಜಿಯವರ ಸಂಗಡವೇ ಇರುವವರು. ಐತಾಳರಂತೂ ಖಾನರನ್ನು ಜವುಳಿ ಹಾಜಿಯವರ ಸೆಕ್ರೆಟರಿ ಅಂತಲೇ ಕರೆಯುವುದು.

ಅವುಲಿಯಾರವರನ್ನು ಕರೆದುಕೊಂಡು ಬಂದು ಮರುದಿನ ಬೆಳಗ್ಗೆ ಉಸ್ಮಾನ್ ಖಾನ್‌ರನ್ನು ಜವುಳಿ ಹಾಜಿಯವರು ಪರಿಚಯಿಸುತ್ತಾ 'ಇವರು ಕಳೆದ ವರ್ಷ ಕೆಲಸದಿಂದ ರಿಟೈರ್ಡ್ ಆದದ್ದು' ಎಂದಾಗ ಅವುಲಿಯಾರವರು ಥಟ್ಟನೆ 'ಹಾಗಾದರೆ ಇನ್ನಿವರು ಕೆಲಸ ಮಾಡುವುದಿಲ್ಲವಾ?' ಎಂದು ಮರುಪ್ರಶ್ನೆ ಹಾಕಿದ್ದು ಇಬ್ಬರನ್ನೂ ಕಂಗೆಡಿಸಿತ್ತು. ಹಾಜಿಯವರು ತಮ್ಮ ಮಾತನ್ನು ವಿವರಿಸುತ್ತಾ, ಇವರಿಗೆ ಇನ್ನು ಮುಂದೆ ಸರಕಾರ ಸಂಬಳ ಕೊಡುವುದಿಲ್ಲ, ಪೆನ್ಷನ್ ಕೊಡುತ್ತಾರೆ ಎಂದೆಲ್ಲ ಹೇಳಲು ಪ್ರಯತ್ನಿಸಿದ್ದರೂ ಅವುಲಿಯಾರ ನಿರುತ್ಸಾಹ ಕಂಡು ಸುಮ್ಮನಾದರು.

ಅವುಲಿಯಾರವರು ಒಂದು ದಿನದಲ್ಲಿ ತಮ್ಮ ನಿವಾಸವನ್ನು ಮಸೀದಿಗೆ ಸ್ಥಳಾಂತರಿಸುವ ಕಾರಣವೇನಿರಬಹುದು? ಎಂಬ ಜಿಜ್ಞಾಸೆಯಲ್ಲಿ ಕೊನೆಗೆ ಉಸ್ಮಾನ್ ಖಾನರು, ಬಹಳ ಗಂಭೀರವಾದ ಧ್ವನಿಯಲ್ಲಿ ಹೇಳಿದ್ದು, 'ಅದಕ್ಕೇ ಅಲ್ವಾ ಹಾಜಾರ್ರೆ, ಅವರನ್ನು ಅವುಲಿಯಾ ಅಂತ ಹೇಳುವುದು? ಈ ಅವುಲಿಯಾ ಅಂತ ಇರ್ತಾರಲ್ಲಾ, ಅವರು ಒಂದು ರೀತಿಯ ಪೋಸ್ಟು ಕವರು ಇದ್ದ ಹಾಗೆ, ಒಳಗಡೆ ಎಂತ ಉಂಟು ಯಾರಿಗೂ ಗುಟ್ಟು ಗೊತ್ತಾಗುವುದಿಲ್ಲ. ನಾವು ನೀವೆಲ್ಲ ಉಂಟಲ್ಲ..., ಚಿಲ್ಲರೆ ಕಾರ್ಡು ತಪ್ಪಿದರೆ, ಇಂಗ್ಲೆಂಡ್‌ಲೆಟರ್ ಇದ್ದ ಹಾಗೆ, ಸ್ವಲ್ಪ ಇಣುಕಿದರೆ ಎಲ್ಲ ಕಾಣ್ತದೆ.... ಹ್ಹ.. ಹ್ಹಾ...'.

## 2

'ಈ ಅಲ್ಲಾಹುವಿನ ಆಟದಲ್ಲಿ, ಯಾವಾಗ ಎಲ್ಲಿ ಏನಾಗುತ್ತದೆ ಅಂತ ತೀರ್ಮಾನ ಮಾಡುವುದು ಸಾಧ್ಯವೇ ಇಲ್ಲಾಂತ ಆಯ್ತುಲ್ಲಾ! ಹೋಗಲಿ, ಆ ಸೀತಣ್ಣ ಶೆಟ್ರಿಗಾದ್ರೂ ಸ್ವಲ್ಪ ಮಂಡೆ ಖರ್ಚು ಮಾಡಬೇಕು ಅಂತ ಹೊಳೀಬೇಕಾ ಬೇಡ್ವಾ?' ಹಾಜಿಯವರಿಗೆ ಒಂದು ತಿಂಗಳಿಂದ ನಿದ್ರೆಯಲ್ಲೂ ಕಾಡುತ್ತಿರುವ ಪ್ರಶ್ನೆ ಇದು.

ಏನು ಇದ್ದರೂ ತಮ್ಮ ಜತೆ ಒಂದು ಮಾತು ಹೇಳಿಯೇ 'ಹಾಗಾದ್ರೆ ಹೀಗೆ ಮಾಡ್ವ, ಅಲ್ವಾ ಹಾಜಾರ್ರೇ' ಅಂತ ತೀರ್ಮಾನ ತೆಗೆದುಕೊಳ್ಳುತ್ತಿದ್ದ ಶೆಟ್ಟ್ರು ಇದರಲ್ಲಿ ಯಾಕೆ ಗುಟ್ಟು ಮಾಡಿದರು? ಗುಟ್ಟು ಅಂದರೆ ಪೂರ್ತಿ ಗುಟ್ಟೇನೂ ಮಾಡಲಿಲ್ಲ ಹೌದು. ಆದರೆ ಎಲ್ಲ ಮುಗಿಸಿಕೊಂಡು ಬಂದು 'ಹಾಜಾರ್ರೇ ಈವತ್ತು ಒಂದು ಕತೆ ಆಯ್ತಲ್ಲ' ಅಂತ ಹೇಳಿಬಿಟ್ರೆ ತಾನಾದರೂ ಏನು ಹೇಳಲು ಸಾಧ್ಯ? 'ಹೌದಾ! ಬಹಳ

ಒಳ್ಳೆಯ ಕೆಲಸ' ಎಂದಷ್ಟೇ ಹೇಳಿ ಸುಮ್ಮನಾಗಿದ್ದ ಜವುಳಿ ಹಾಜಿಯವರ ತಲೆ ಮಾತ್ರ ಹನ್ನೆರಡಾಣೆಯಾಗಿತ್ತು.

ಈ ಅವುಲಿಯಾರವರಿಗಾದರೂ ಸುಮ್ಮನೆ ಊಟ ಮಾಡಿಕೊಂಡು 'ಅಲ್ಲಾ' ಅಂತ ಬಿದ್ದಿರಲು ಆಗುವುದಿಲ್ಲವೆ? ಇಲ್ಲೀ ತನಕ ಒಂದೇ ಒಂದು 'ಓಟು' ಹಾಕಿದ್ದಿರದ ಅವರಿಗೆ ಊರಿನ ಬಗ್ಗೆ ತಲೆಬಿಸಿ ಯಾಕೆ ಬೇಕಿತ್ತು? ವರ್ಷದ ಹಿಂದೆಲ್ಲ ಆ ಕಸಾಯಿ ಹುಡುಗನ ಬಗ್ಗೆ ತಮ್ಮ ಹತ್ತಿರವೇ ಬಂದು ಅವನು ಹಾಗೆ, ಅವನು ಹೀಗೆ ಲಂಗು ಅಂತ ದೂರಿಕೊಂಡಿದ್ದ ಜನರೇ ಈಗ ಅವನ ಹಿಂದೆ ಖಾದರಣ್ಣ, ಖಾದರಣ್ಣ ಲಂಗು ಲಸ್ಕು ಅಂತ ಓಡಾಡಬೇಕಾದರೆ ಈ ಅವುಲಿಯಾ ಯಾವ ಕರಾಮತ್ತು ಮಾಡಿದರು?

ಸೀತಣ್ಣ ಶೆಟ್ರು ಕೂಡ ಅದೇ ಮಾತು ಹೇಳಿದ್ದರು – 'ನೀವು ಏನೇ ಹೇಳಿ ಹಾಜಾರ್‍ರೆ. ನೀವು ತಂದ ನಿಮ್ಮ ಅವುಲಿಯಾ ಉಂಟಲ್ಲ. ಅದು ನೋಡಿದ ಹಾಗಲ್ಲ. ಅವರ ಕೈಗೆ ಕೊಡೆ ಕಡ್ಡಿ ಕೊಟ್ಟರೂ ಸುಂಯ್ಕ್ ಅಂತ ಬಂಗಾರದ ಸರಿಗೆ ಮಾಡಿ ಕೊಟ್ಟಾರು. ಇಲ್ಲದಿದ್ರೆ, ಆ ಕಸಾಯಿ ಖಾದರ್ ಒಬ್ಬ ಲೀಡರ್ ಆಗಲಿಕ್ಕುಂಟಾ? ಅದು ಯಾವ ಮಾಯಕದಲ್ಲಿ ಅಷ್ಟು ಮೆಂಬರುಗಳನ್ನು ಮಂಗ ಮಾಡಿದ್ದನೋ ಆ ಭಗವಂತನಿಗೇ ಗೊತ್ತು. ಈವತ್ತು ನಮ್ಮ ಪಂಚಾಯ್ತಿನ ಮೆಜಾರಿಟಿ ಅವನ ಅಪೀಲಿಗೆ ಸಪೋರ್ಟು ಮಾಡಿಬಿಟ್ರು.

'ಯಾವತ್ತೋ ಆಗಬೇಕಾಗಿದ್ದ ಕೆಲಸ; ಎರಡು ವರ್ಷದ ಕೆಳಗೇ ನಾನು ನಿಮಗೆ ಹೇಳಿದ್ದೆ. ಹೇಗಾದ್ರೂ ಮಾಡಿ ಸ್ವಲ್ಪ ಹಣ ವಂತಿಗೆ ಮಾಡಿಕೊಡಿ. ಆ ಕಸಾಯಿ ಗಲ್ಲಿಗೆ ಮೂಗು ಬಿಟ್ಟುಕೊಂಡು ಜನ ಹೋಗುವ ಹಾಗೆ ಏನಾದ್ರೂ ಮಾಡೋಣ ಅಂತ. ಆ ದಿನ ತಾಸೀಲ್ದಾರ್ರು ಬಂದಿದ್ದಾಗ ನಮ್ಮ ಪಂಚಾಯತಿನ ಮಾನ ಹರಾಜು ಹಾಕಿದ್ರು. ಆದ್ರೆ ಇಂಥದ್ದನ್ನೆಲ್ಲ ಲೋಕಲ್ ಸಪೋರ್ಟ್ ಇಲ್ಲದೆ ಮಾಡಲಿಕ್ಕೆ ಆಗುವುದಿಲ್ಲ. ಈಗ ನೋಡಿ, ಆ ಖಾದರ್‌ನ ಲೀಡರ್‌ಶಿಪ್ಪಿನಲ್ಲಿ ಕಸಾಯಿಗಲ್ಲಿಯ ಸುತ್ತ ಕಣಿ ಕಡಿದು, ನೀರು ಹೋಗುವ ಕಾಲುವೆ ಮಾಡಲು ಅಂತ ಎರಡೂವರೆ ಸಾವಿರ ಸ್ಯಾಂಕ್ಷನ್ ಆಗಿಬಿಡ್ತು. ನೀವು ನೋಡ್ತಾ ಇರಿ. ಮುಂದಿನ ಸರ್ತಿ ಪಂಚಾಯಿತು ಮೆಂಬರು ಅಂತ ಓಟಿಗೆ ನಿಂತ್ರೆ ಎದುರಿದ್ದವನ ಡೆಪೊಸಿಟ್ ನಿಲ್ಲಲಿಕ್ಕಿಲ್ಲ'.

ಎರಡು ವರ್ಷಗಳಲ್ಲಿ ಹಿಂದೆ ಸೀತಣ್ಣ ಶೆಟ್ರು ಬಂದು ಹೇಳಿದ್ದಂತೂ ಹೌದು. ಆದರೆ ತಾವಾದರೂ ಏನು ಮಾಡಲು ಸಾಧ್ಯವಿತ್ತು ಆಗ? ಜಮಾತ್ ಅಧ್ಯಕ್ಷರಾದ ಆರಂಭದ ದಿನಗಳು ಅವು. ಮಸೀದಿಯ ಹೆಸರಲ್ಲಿದ್ದ ಮೂರೂವರೆ ಎಕರೆ ಜಾಗವನ್ನು ಶಾನುಭಾಗರಿಂದ ಅಳೆಸಿ, ಆ ಜಾಗದ ಸುತ್ತ ಕಲ್ಲಿನ ಆವರಣ ಕಟ್ಟಿಸಲು 'ಚಂದಾ...



ಚಂದಾ' ಅಂತ ಮಂಗಳೂರು – ಕಾಸರಗೋಡು ಓಡಾಡುತ್ತಿರುವ ನಡುವೆ ಕಸಾಯಿಗಲ್ಲಿ ರಿಪೇರಿಗೆ ತಲೆ ಹಾಕುವುದಾದರೂ ಹೇಗೆ? ಆ ಗಲ್ಲಿಗೆ ಕಾಲು ಹಾಕಬೇಕಾದರೆ ಮೂಗಿಗೆ ಬೂಚು ಹಾಕಿಕೊಳ್ಳಬೇಕು. ಹೋಯಿತು ಅಂತ ಇಟ್ಟುಕೊಳ್ಳುವ. ಆ ಜನರ ಹತ್ತಿರ, ನಿಮ್ಮ ಮನೆ ಸುತ್ತ ನೀರು ಹೋಗುವ ಕಣಿ ಅಗೀತೇವೆ. ಸ್ವಲ್ಪ ಜಾಗ ಕೊಡಿ ಅಂತ ಕೇಳಿದ್ರೆ ಕೊಟ್ಟುಬಿಡುತ್ತಿದ್ದರಾ? ಆ ಬಾವಾಕನ ಸೊಂಟ ಸರಿ ಇರ್ತಿದ್ರೆ ಏನಾದ್ರೂ ಪ್ರಯತ್ನ ಮಾಡಬಹುದಿತ್ತು. ಆ ಖಾದರ್‌ನ ಹತ್ರ ಮಾತನಾಡುವುದು ಯಾರು? ಇಲ್ವಾ ಆ ಉಮ್ಮರಬ್ಬ? ಅವನ ಪಟ್ಲಾಂನ ಕೇರಿಯಲ್ಲಾ! ಬೇಕಾದ್ರೆ ಮಾಡಿಸಿಕೊಳ್ಳಲಿ, ಅಂತ ನಿರುತ್ಸಾಹ ತೋರಿಸಿದ್ದು ಈಗ ತಿರುಗಿಬಿಟ್ಟಿದೆ. ಎಲ್ಲಾ ಆ ಅವುಲಿಯಾ ಮಾಡಿದ್ದು. ಕರೆದುಕೊಂಡು ಬಂದು ತಲೆ ಮೇಲೆ ಕಲ್ಲು ಇಟ್ಟ ಹಾಗೆ ಆಯ್ತು.

ಹಾಜಿಯವರ ಯೋಜನೆಗಳ ವಾಸನೆ ಹಲೀಮಮ್ಮನವರಿಗೂ ಬಡಿದಿತ್ತು; ಅವುಲಿಯಾರ ಬಗ್ಗೆ ಹಾಜಿಯವರು ಲಘುವಾಗಿ ಮಾತನಾಡುವುದು ಅವರಿಗೆ ಬೇಸರ ವನ್ನುಂಟು ಮಾಡಿತ್ತು. ಮುಖಮಂಟಪದಲ್ಲಿ ಉಸ್ಮಾನ್‌ಖಾನ್‌ರ ಜತೆ ಹರಟೆ ಹೊಡೆಯು ವಾಗ ಹಾಜಿಯವರು ಅವುಲಿಯಾರ ಜತೆ ಸುತ್ತುತ್ತಿರುವ ಖಾದರ್‌ನ ಬಗ್ಗೆ ಹಲ್ಲು ಕಡಿಯುವುದು ಅವರಿಗಂತೂ ಇಷ್ಟವಾಗಿರಲಿಲ್ಲ. ಖಾದರನ ತಾಯಿ ಸಾರಮ್ಮ ಮತ್ತು ಹಲೀಮಮ್ಮ ಹೆಚ್ಚುಕಮ್ಮಿ ಒಂದೇ ವರ್ಷದಲ್ಲಿ ಮದುವೆಯಾಗಿ ಮುತ್ತುಪ್ಪಾಡಿಗೆ ಬಂದವ ರಾದರೂ, ಖಾದರ್ ಹುಟ್ಟಿದ್ದು ಹಲೀಮ್ಮನ ಮೂರನೇ ಮಗ ಹಸನ್‌ಗೆ ಸುನ್ನತ್ ಮಾಡಿದ್ದ ಮರುದಿನ.

ತಡವಾಗಿ ಹುಟ್ಟಿದ ಗಂಡು ಮಗ ಅಂತ ಬಾವಾಕ ತಲೆಯಲ್ಲಿ ಹೊತ್ತದ್ದು ಜಾಸ್ತಿ ಯಾಯಿತು. ಕೈಕಾಲು ಗಟ್ಟಿಯಾದ ಮೇಲೆ ಹುಡುಗನನ್ನು ಹಿಡಿಯುವವರೇ ಇಲ್ಲ. ಟಿಂಬರ್ ಮರ್ಚೆಂಟ್ ಉಮ್ಮರಬ್ಬನವರಿಗೆ ಇಂಥವರೇ ಬೇಕು. ಇಲ್ಲವಾದರೆ ನಾಲ್ಕು ವರ್ಷದಲ್ಲಿ ಎರಡು ಲಾರಿಯ ಧನಿ ಆಗುವುದು ಹೇಗೆ?

ಸಾರಮ್ಮಳ ಗೋಳು ಹೇಳಲಾಗದೆ ಹಲೀಮಮ್ಮ ಒಮ್ಮೆ ಗಂಡನನ್ನು ಒತ್ತಾಯಿಸಿ ಸೋತುಬಿಟ್ಟಿದ್ದರು. ಹೆಂಡತಿಯ ಹಟ ಜಾಸ್ತಿಯಾದಾಗ ಒಮ್ಮೆ ಹಾಜಿಯವರು ಮಸೀದಿಯ ಗೇಟಿನ ಹತ್ತಿರ ಖಾದರ್‌ನನ್ನು ಕರೆದು, 'ಅದು ಹಾಗಲ್ಲಪ್ಪ...ಹೀಗೆ' ಎಂದು ಹೇಳಲು ಪ್ರಯತ್ನ ಪಡುತ್ತಿರುವಾಗಲೇ ಅವನು, ಅವರ ಕಣ್ಣಿಗೆ ಕೈ ಹಾಕಿದಂತೆ, 'ನೀವೇನು ಈ ಸರ್ತಿ ಪಂಚಾಯಿತಿ ಓಟಿಗೆ ನಿಲ್ತೀರಾ?' ಎಂದು ಪ್ರಶ್ನಿಸಿ ಹೋಗಿಬಿಟ್ಟಿದ್ದ. ಆ ದಿನವಂತೂ ಹಾಜಿಯವರನ್ನು ಸಮಾಧಾನಪಡಿಸುವಷ್ಟರಲ್ಲಿ ಹಲೀಮಮ್ಮನ ಕರುಳು ಬಾಯಿಗೆ ಬಂದಿತ್ತು.

ಅಂತಹ ಸೈತಾನನನ್ನು ಆರು ತಿಂಗಳಲ್ಲಿ ಸರಿ ಮಾಡುವುದು ಚಿಲ್ಲರೆ ಪಲ್ಲರೆ

ಕರಾಮತ್ತು ಇರುವ ಅವುಲಿಯಾರಿಂದ ಸಾಧ್ಯವೇ ಇಲ್ಲದ ಮಾತು. ಎರಡು ತಿಂಗಳ ಕೆಳಗೆ ಕೈಜಮ್ಮನ ಮಗಳ ಮದುವೆಗೆ ಹೋಗಿದ್ದಾಗ ಎಲ್ಲ ಹೆಂಗಸರದ್ದು ಒಂದೇ ಮಾತು, 'ಆ ಸಾರಮ್ಮನ ಮಗ ಒಳ್ಳೇದಾದಾನು ಅಂತ ನಾನೆಣಿಸಿರಲಿಲ್ಲ'.

ಕಸಾಯಿಗಲ್ಲಿಯವಳೇ ಆದ ನಬಿಸಳ ಮಾತನ್ನಂತೂ ನಂಬಲು ಸಾಧ್ಯವಿಲ್ಲ! ಅವಳು ದೊಡ್ಡ ಗುಟ್ಟು ಅಂತಲೇ ಹೇಳಿದ್ದಳು. 'ನಿಮಗೆ ಗೊತ್ತಿಲ್ಲ ಉಮ್ಮಮ್ಮ. ಅವುಲಿಯಾ ಅವನನ್ನು ಕೆರೆಯ ಹತ್ತಿರ ಕರೆದುಕೊಂಡು ಹೋಗಿದ್ದ ಮಾರನೇ ದಿನ ಬೆಳಿಗ್ಗೆ ವಾಪಾಸು ಬಂದಿದ್ದಾಗ ಇವನು ಮಾತೇ ಆಡಲಿಲ್ಲವಂತೆ. ಅವುಲಿಯಾ ಏನೋ ಹೇಳಲು ಸುರುಮಾಡಿದಾಗ ನನ್ನ ಸುದ್ದಿಗೆ ಬಂದ್ರೆ ಕತ್ತಿಯಲ್ಲಿ ಕೊಚ್ಚಿ ಹಾಕ್ತೇನೆ' ಅಂದನಂತೆ. ಆಗ ಖಾದರ್‌ನಿಗೆ ಎರಡೂ ಕೈ ಮರಕಟ್ಟಿದಂತೆ ಆಯಿತಂತೆ. ಆ ನಂತ್ರ ಮಾತ್ರ ಅವನು ಅವುಲಿಯಾ ಹೇಳಿದಂತೆ ಕುಣಿಯಲು ಸುರು ಮಾಡಿದ್ದಂತೆ'.

ಆದರೆ ಸ್ವತಃ ಸಾರಮ್ಮನೇ ಹೇಳಿದ್ದನ್ನು ನಂಬದಿರುವುದಾದರೂ ಹೇಗೆ? ಕಳೆದ ವಾರ ಪಂಡಿತರ ಷಾಪಿನಲ್ಲಿ ಸಿಕ್ಕಿದ್ದವರು, ಕಣ್ಣುಗಳಲ್ಲಿ ನೀರು ತುಳುಕಿಸುತ್ತಾ ಹೇಳಿದ್ದರು, 'ನಿನ್ನ ಹಾಜಾರ್ರ ಕಾಲು ತೊಳೆದು ನೀರು ಕುಡಿದೇನು ಹಲೀಮಾ, ಆ ಮಿಠಾಯಿ ಅವುಲಿಯಾರವರನ್ನು ಹಾಜಾರ್ರು ನಮ್ಮ ಮನೆಗೆ ಕಳಿಸದೇ ಇದ್ದಿದ್ರೆ ನನ್ನ ಮಗ ಕೈಗೆ ಸಿಗುತ್ತಿರಲಿಲ್ಲ. ಅಲ್ಲಾನ ಆಣೆ ಹಾಕಿ ಹೇಳ್ತೇನೆ. ಈಗ ಅವನ ಎದುರು ನಿಂತು ಹಾಜಾರ್ರು 'ಕಾಲು ಹಿಡಿ' ಅಂತ ಹೇಳಿದ್ರೆ ಸಾಕು, ಡಬ್ಸ್ ಅಂತ ಬಿದ್ದಾನು ಗೊತ್ತುಂಟಾ?'

ಹಲೀಮಮ್ಮನವರಿಗೆ ನಿಜವಾಗಿ ಸಂತಸವಾಗಿತ್ತು; ಯಾರಿಗಾದ್ರೂ ಆಗ ಬೇಕಾದದ್ದೆ. ಆದರೆ ಅಂತಹ ಕರಾಮತ್ತಿನ ಅವುಲಿಯಾರ ಬಗ್ಗೆ ತಮ್ಮ ಗಂಡನಿಗೆ ಯಾಕೆ ನಂಬಿಕೆ ಇಲ್ಲಾ? ಹಾಗಾದರೆ ಅವರನ್ನು ಕರೆದುಕೊಂಡು ಬಂದದ್ದಾದರೂ ಯಾಕೆ?

ಒಮ್ಮೆ ಯಾವುದೋ ಮಾತಿನ ಸಂದರ್ಭದಲ್ಲಿ ಹಲೀಮಮ್ಮ ಸ್ವಲ್ಪ ಕಟುವಾಗಿಯೇ ಹೇಳಿಬಿಟ್ಟರು. 'ನಿಮಗೆ ಯಾವ ಅವುಲಿಯಾ ಬಗ್ಗೆಯೂ ನಂಬಿಕೆಯಿಲ್ಲದಿರಬಹುದು. ಆದರೆ ಜನ ಏನು ಹೇಳ್ತಾರೆ ಅಂತ ಗೊತ್ತುಂಟಾ? ನಮ್ಮ ಜಾತಿಯವರ ಸಂಗತಿ ಬಿಡಿ. ಆ ಕಾಫಿರರ ಜಾತಿಯವರು ಕೂಡಾ ಅವರ ಕಾಲು ತೊಳೆದು ನೀರು ಕುಡೀಲಿಕ್ಕೆ ತಯಾರಿದ್ದಾರೆ!'

'ಮೊನ್ನೆ ಬೇಸಿಗೆಯಲ್ಲಿ ಹಂಚಿನಮನೆ ಸಾವಿತ್ರಕ್ಕನ ಪುಳ್ಳಿ, ಎರಡು ವರ್ಷದ ಮಗು ಕಾರುವುದು, ಜುಲಾಬು ಹೊರಕಡೆ ನೀರು ಹೋಗುವುದು ಅಂತ ಜೀವ ಬಿಡುವ ಹತ್ರ ಹತ್ರ ಆಗಿತ್ತಂತೆ. ಯಾರೋ ಹೋಗಿ ಹೇಳಿರ್ಬೇಕು; ಆ ಅವುಲಿಯಾ ಓಡಿ ಓಡಿ ಬಂದ್ರಂತೆ, ನೀವು ಹೇಳಿದ್ರೆ ನಂಬ್ಲಿಕ್ಕಿಲ್ಲ. ಬರೀ ನೀರಿಗೆ ಉಪ್ಪು ಹಾಕಿ ಮಗುವಿಗೆ ಕುಡಿಸಿ, ಸತ್ತೇಹೋಯ್ತು ಅಂತ ಆಗಿದ್ದ ಮಗುವನ್ನು ಬದುಕಿಸಿದ್ರಂತೆ ಗೊತ್ತುಂಟಾ?'



ಹಾಜಿಯವರಿಗೆ ಇದು ಮಾತ್ರವಲ್ಲ; ಇಂತಹ ನೂರು ಸುದ್ದಿಗಳು ಬಂದು ತಲುಪಿದ್ದುಂಟು. ಬಹಳಷ್ಟು ಸುದ್ದಿಗಳನ್ನು ಉಸ್ಮಾನ್ ಖಾನರೇ ತಂದುಹಾಕುತ್ತಿದ್ದರು. ಈವತ್ತು ಅಲ್ಲಿ ಹಾಗಾಯ್ತಂತೆ. ಈವತ್ತು ಇಲ್ಲಿ ಹೀಗಾಯ್ತಂತೆ. 'ನೀವು ಬೇರೆ ಏನಾದ್ರು ಮಾತಾಡ್ತೀರಾ ಖಾನರೇ' ಎಂದು ಹಾಜಿಯವರು ನಡುನಡುವೆ ನೆನಪಿಸದೇ ಹೋಗಿರುತ್ತಿದ್ದರೆ ಇಷ್ಟು ಹೊತ್ನಲ್ಲಿ ಖಾನರೇ ಸ್ವತಃ ಅವುಲಿಯಾರ ಹಿಂದೆ ಹೋಗಿ ಬಿಡುತ್ತಿದ್ದರೇನೋ!

ಖಾನರ ಸಂಗತಿ ಹೋಗಲಿ. ಒಮ್ಮೆ ಶಾನುಭೋಗ ಅನಂತ ಪಡಿವಾಳರೇ ಗುಟ್ಟಿನಲ್ಲಿ ಕೇಳುವವರಂತೆ 'ಹೌದಾ ಹಾಜಾರ್ರೇ ನೀವು ಕರೆದುಕೊಂಡು ಬಂದ ಆ ಜನ ಅನ್ನ ನೀರು ಇಲ್ಲದೆ ವಾರಗಟ್ಟಲೆ ಇರುತ್ತಾರಂತೆ. ಹೌದಾ?'

'ಹೆ...ಹ್ಹೆ... ನಿಮಗೆ ಯಾರು ಹೇಳಿದರು ಇದನ್ನೆಲ್ಲಾ?' ಎಂದು ಅಡ್ಡ ಗೋಡೆಯ ಮೇಲೆ ದೀಪವಿಟ್ಟಿದ್ದರು ಹಾಜಿಯವರು. ಮಸೀದಿಗೆ ಹೋಗುವ ಸರದಿ ಊಟದಲ್ಲಿ ಅವುಲಿಯಾರವರ ಹೊಟ್ಟೆಯೂ ತುಂಬುತ್ತದೆ ಎಂಬುದನ್ನು ಕಾಫರನೊಬ್ಬನಿಗೆ ಹೇಳಲು ಸಾಧ್ಯವೇ ಆಗಿರಲಿಲ್ಲ.

## 3

'ಇಂತಹ ಬಹುಮಾನ್ಯರಾದ ಅವುಲಿಯಾರವರನ್ನು ನಮ್ಮ ಜವುಳಿ ಹಾಜಿಯವರು ಈ ಊರಿಗೆ ಕರೆದುಕೊಂಡು ಬರದೇ ಇರುತ್ತಿದ್ದರೆ, ನಾನಿವತ್ತು ನಿಮ್ಮ ಹಾಗೆಯೇ ಒಬ್ಬ ಮನುಷ್ಯ ಅಂತ ಆಗುತ್ತಿರಲಿಲ್ಲ'.

ಜವುಳಿ ಹಾಜಿಯವರು ತಮ್ಮ ಜಮಾತು ಅಧ್ಯಕ್ಷಗಿರಿಯನ್ನು ಮೂರು ವರ್ಷಗಳ ಕಾಲ ಯಶಸ್ವಿಯಾಗಿ ಪೂರೈಸಿದ ಬಳಿಕ ನಡೆದ ಜಮಾತಿನ ಪ್ರಥಮ ಜನರಲ್‌ಬಾಡಿ ಮೀಟಿಂಗ್‌ನಲ್ಲಿ ಖಾದರ್ ತನ್ನ ಮಾತು ಆರಂಭಿಸಿದ್ದ ರೀತಿ ಇದು.

ಜಮಾತ್‌ನ ಜನರಲ್‌ಬಾಡಿಯ ಆರಂಭದ ಕಲಾಪಗಳೆಲ್ಲವೂ ಮುಗಿದು ಹೊಸ ಸಮಿತಿಯ ಆಯ್ಕೆಯೂ ನಡೆದುಹೋಗಿತ್ತು. ಮುಂದಿನ ಸಾಲಿನ ಅಧ್ಯಕ್ಷರಾಗಿ ಜವುಳಿ ಹಾಜಿಯವರೇ ಮುಂದುವರಿಯಬೇಕು ಎಂಬ ಸೂಚನೆಯನ್ನು ಮಂಡಿಸಿದವನೂ ಅವನೇ. ಉಸ್ಮಾನ್‌ಖಾನರ ಹೆಸರೊಂದೇ ಹೊಸ ಸೇರ್ಪಡೆ. ಉಳಿದಂತೆ ಹಳೆ ಕಮಿಟಿಯೇ ಮುಂದುವರಿಯುವುದು ಎಂಬ ನಿರ್ಧಾರವಾಗಿತ್ತು.

ಇನ್ನೇನು ಸಭೆ ಬರ್ಖಾಸ್ತು ಆಗುತ್ತದೆ ಎಂದು ಎಲ್ಲರೂ ಹೊರಡುವ ಯೋಚನೆಯಲ್ಲಿದ್ದಾಗ ಖಾದರ್ ಎದ್ದು ನಿಂತು ತನಗೆ ಮಾತನಾಡಲು ಎರಡು ನಿಮಿಷದ ಅವಕಾಶ ಬೇಕು ಎಂದಿದ್ದ. 'ಓಹೋ ಅದಕ್ಕೇನಂತೆ' ಹಾಜಿಯವರು ಸಂತಸದಿಂದಲೇ ಸಮ್ಮತಿಸಿದ್ದರು. 'ಅಲ್ಲಾಹುವಿನ ಹೆಸರಲ್ಲಿ ನಮ್ಮ ಕಸಾಯಿಗಲ್ಲಿಯ ಪರವಾಗಿ ಒಂದು ಬೇಡಿಕೆಯನ್ನು ಈ ಸಭೆಯ ಮುಂದಿಡುತ್ತೇನೆ' ಬಾಯಿಪಾಠ ಒಪ್ಪಿಸುವವನಂತೆ ಖಾದರ್ ಗಂಭೀರವಾಗಿ ಹೇಳಲಾರಂಭಿಸಿದ್ದ.

'ಯಾರೂ ತಪ್ಪು ತಿಳಿಯಬಾರದು. ನಮ್ಮ ಕಸಾಯಿಗಲ್ಲಿಯಲ್ಲಿ ಪಾಯಿಖಾನೆ ಅಂತ ಇರುವುದು ನಮ್ಮ ಮನೆಯಲ್ಲಿ ಮಾತ್ರ. ಉಳಿದವರೆಲ್ಲ ಕೆರೆಯ ಬಲಕ್ಕಿರುವ ಕುಂಟಲ ಕಾಡನ್ನು ಬಳಸುವವರು. ಆದರೆ ಇತ್ತೀಚಿಗೆ ಎರಡು ತಿಂಗಳಿನಿಂದ ದೇವಸ್ಥಾನದವರು ಕುಂಟಲ ಕಾಡನ್ನು ಸವರಿ ಅಲ್ಲಿ ಒಂದು ಕಲ್ಯಾಣ ಮಂಟಪ ಕಟ್ಟಿಸಲು ಆರಂಭಿಸಿದ್ದಾರೆ. ಈಗ ಹಗಲು ಹೊತ್ತಿನಲ್ಲಿ ಯಾರೂ ಕುಂಟಲ ಕಾಡಿಗೆ ಹೋಗಲು ಸಾಧ್ಯವಿಲ್ಲ. ಮುಖ್ಯವಾಗಿ ನಮ್ಮ ಸಹೋದರಿಯರು ಹಗಲಿಡೀ ಹೊಟ್ಟೆಕಟ್ಟಿ ರಾತ್ರಿಯಾದ ಬಳಿಕವಷ್ಟೇ ಪಾಯಿಖಾನೆಗೆ ಹೋಗುವ ಸ್ಥಿತಿ ಬಂದಿದೆ. ಆದ್ದರಿಂದ ನಮ್ಮ ಗಲ್ಲಿಗೆ ತಾಗಿಕೊಂಡಿರುವ ಮಸೀದಿಯ ಜಮೀನಿನಲ್ಲಿ ಪಾಯಿಖಾನೆ ಕಟ್ಟಿಸಲು ಸ್ವಲ್ಪ...'

'ಎಂಥದ್ದು ನೀನು ಹೇಳ್ತಾ ಇರುವುದು! ಕಬರಸ್ಥಾನದ ಜಾಗದಲ್ಲಿ! ತೌಬಾ... ತೌಬಾ...!' ಹಾಜಿಯವರು ಗಾಬರಿಯಿಂದ ಹೇಳಿದ್ದರು.

'ಅವನ ಮಾತು ಪೂರ್ತಿ ಮುಗಿಯಲಿ ಹಾಜಾರ್ರೇ, ಏನು ಹೇಳ್ತಾನೋ ಪೂರ್ತಿ ಕೇಳುವ..' ಜೀನಸು ಅಂಗಡಿ ಪೊಡಿಯಬ್ಬನವರು ಜವುಳಿ ಹಾಜಿಯವರನ್ನು ತಡೆದು ಬಿಟ್ಟಿದ್ದರು! ಹಾಜಿಯವರು ಸಂಪೂರ್ಣವಾಗಿ ಕಂಗೆಟ್ಟು ಹೋದರು. ತಮ್ಮನ್ನು ಇದುವರೆಗೆ ಈ ರೀತಿ ಯಾರೂ ಮಾತನಾಡಿಸಿದವರಿಲ್ಲ. ಅದರಲ್ಲೂ ಮಾತಿಗೆ ಮೂರು ಬಾರಿ ಉಬ್ಬಸ ಎಳೆಯುವ ಎಲುಬಿನ ಗೂಡಿನಂತಹ ಪೊಡಿಯಬ್ಬ! ಅಬ್ಬಾ ಧೈರ್ಯವೆ? ಕೋಪದಿಂದ ಮಾತೇ ಹೊರಡಲಿಲ್ಲ.

ಖಾದರ್ ಮತ್ತೆ ಮುಂದುವರಿಸಿದ 'ನಮ್ಮ ಗಲ್ಲಿಯಲ್ಲಿ ಬೇರೆಲ್ಲೂ ಒಂದು ಇಂಚು ಜಾಗವಿಲ್ಲ. ಕುಂಟಲಕಾಡು ಸರಕಾರಿ ಜಾಗವಾಗಿರುತ್ತಿದ್ದರೆ ನಾವು ಪಂಚಾಯತಿನಿಂದ ಕೇಳುತ್ತಿದ್ದೆವು. ಅದು ದೇವಸ್ಥಾನದವರ ವರ್ಗಸ್ಥಳ. ನಮ್ಮದೇ ಅಂತ ಜಾಗ ಇರುವಾಗ ಅವರ ಹತ್ತಿರ ಹೋಗಿ ಬೇಡುವುದು ನ್ಯಾಯವೂ ಅಲ್ಲ...'

'ಮತ್ತೆ! ಇದು ನ್ಯಾಯವಾ?' ಬೀಡಿ ಕಂಟ್ರಾಕ್ಟರ್ ಪುತ್ತಬ್ಬನವರು ಏರು ದನಿಯಲ್ಲೇ ಪ್ರಶ್ನಿಸಿದ್ದರು. 'ಮಸೀದಿಯ ಜಾಗವನ್ನು ತುಂಡು ಮಾಡಿ ಪಾಯಿಖಾನೆ ಕಟ್ಟಿಸಲು



ಕೊಡಿ ಅಂತ ಕೇಳುವುದು ನ್ಯಾಯನಾ? ನಮ್ಮ ಆದಂ ನೆಬಿಯವರ ಕಾಲದಿಂದಲೂ ಇಂತಹ ಅತ್ರಾಣದ ಬೇಡಿಕೆಯನ್ನು ಯಾವ ಜಮಾತಿನ ಮುಂದೆಯೂ ಇಟ್ಟಿರಲಾರರು. ಅದು ಎಂತಹ ಜಾಗ! ನಮ್ಮ ಹಿರಿಯರು ತಮ್ಮ ಅಖಿರತ್ ದಿನವನ್ನು ಕಾದುಕೊಂಡು ಶಾಂತವಾಗಿ ಮಲಗಿರುವ ಆ ಪವಿತ್ರ ಜಾಗದಲ್ಲಿ ಪಾಯಿಖಾನೆ ಗುಂಡಿ ತೋಡುತ್ತಾನಂತೆ! ಇನ್ನೊಮ್ಮೆ ಅಂತಹ ಮಾತು ಹೇಳಿದ್ರೆ ನಾಲಿಗೆಯಲ್ಲಿ ಹುಳ ಆದೀತು ಗೊತ್ತುಂಟಾ! ಪಾಯಿಖಾನೆ ಅಂತೆ... ಪಾಯಿಖಾನೆ...!' ಪುತ್ತಬ್ಬನವರು ಆವೇಶದಿಂದ ನಡುಗಲಾರಂಭಿಸಿದ್ದರು.

ಖಾದರ್ ಕೂಡಾ ತನ್ನ ಮಾತು ನಿಲ್ಲಿಸಿ ಕಣ್ಣು ಪಿಳಿ ಪಿಳಿ ಮಾಡಲಾರಂಭಿಸಿದ್ದ. ಮಿಠಾಯಿ ಅವುಲಿಯಾ ಸಭೆಯಲ್ಲಿ ಇರುತ್ತಿದ್ದರೆ ಚೆನ್ನಾಗಿತ್ತು ಎನಿಸಿತ್ತು. ಆದರೆ ಅವರು ಜಮಾತಿನ ಯಾವ ಮೀಟಿಂಗಿಗೂ ಬಂದವರಲ್ಲ. ಮೀಟಿಂಗ್ ಇದ್ದ ದಿನವೆಲ್ಲ ಅವರು ಬಾವಿಕಟ್ಟೆಯ ಬಳಿ ಬಟ್ಟೆ ತೊಳೆಯುತ್ತಿರುತ್ತಾರೆ. ಅಲ್ಲಿನ ಮಾತೆಲ್ಲ ಅವರಿಗೆ ಕೇಳಿಸುತ್ತದೆ. ಆದರೆ ಎಂದೂ ಕೂಡಾ ಸಭೆಗೆ ಬಂದು ಅದು ಹಾಗಲ್ಲ ಹೀಗೆ ಎಂದವರಲ್ಲ.

ಪುತ್ತಬ್ಬನವರ ಏದುಸಿರು ಹೊರತುಪಡಿಸಿದರೆ ಮತ್ತೆಲ್ಲ ಮೌನ. ಹಾಜಿಯವರಿಗೆ ರಕ್ತ ಕುದಿಯುತ್ತಿತ್ತಾದರೂ, ರೇಗಾಡಿ ಮಾತನಾಡುವ ಅಭ್ಯಾಸವೇ ಇಲ್ಲದ್ದರಿಂದ ಕೂತಲ್ಲೇ ಚಡಪಡಿಸುತ್ತಿದ್ದರು. ಮಸೀದಿಯ ಮೂರುವರೆ ಎಕರೆ ಜಮೀನಿನ ಸುತ್ತ ಕಲ್ಲಿನ ಆವರಣ ಕಟ್ಟಿಸುವಾಗ ಪಟ್ಟ ಪಾಡು ಅವರಿಗೇ ಗೊತ್ತು. ಹಾಜಿಯವರ ಪಕ್ಕದಲ್ಲೇ ಕುಳಿತಿದ್ದ, ಅದಷ್ಟೇ ಅರ್ಧ ತಾಸಿನ ಹಿಂದೆ ಜಮಾತಿನ ಆಡಳಿತ ಕಮಿಟಿಗೆ ಹೊಸದಾಗಿ ನಾಮಕರಣಗೊಂಡಿದ್ದ ಉಸ್ಮಾನ್ ಖಾನರಿಗೆ ಹಾಜಿಯವರ ಪರವಾಗಿ ಏನನ್ನಾದರೂ ಹೇಳಬೇಕು ಅಂತ ಆಸೆಯಾದರೂ ಹೇಗೆ ಹೇಳಬೇಕು ಎಂಬುದು ಗೊತ್ತಾಗದೆ ಮೇಲೆ ಕೆಳಗೆ ನೋಡುತ್ತಿದ್ದರು.

ತುಟಿ ಎರಡು ಮಾಡದೆ ಬಲಭಾಗದ ಗೋಡೆಗೆ ಒರಗಿ ಖಾದರತ್ತ ಕಣ್ಣು ನೆಟ್ಟಿದ್ದ ಮಾಜಿ ಪ್ರೆಸಿಡೆಂಟ್ ಉಮ್ಮರಬ್ಬನವರ ಅಭಿಪ್ರಾಯ ಏನಿರಬಹುದು? ಎಂಬ ಕುತೂಹಲ ಹಾಜಿಯವರಲ್ಲಿ ಮೊಳೆಯಿತು. ಅವರತ್ತ ಮುಖ ತಿರುಗಿಸಿ ಏನನ್ನೋ ಹೇಳಬೇಕು ಅನ್ನುವಷ್ಟರಲ್ಲಿ ಖಾದರ್ ಮತ್ತೆ ಮಾತನಾಡಲಾರಂಭಿಸಿದ್ದ.

'ಇನ್ನು ಮೂರು ನಾಲ್ಕು ತಿಂಗಳ ಒಳಗೆ ಅವರು ಕುಂಟಲಕಾಡಿನ ಸುತ್ತ ಆವರಣ ಗೋಡೆ ಹಾಕ್ತಾರಂತೆ. ಆ ಬಳಿಕ ನಮ್ಮ ಗಲ್ಲಿಯ ಹೆಂಗಸರು ಏನು ಮಾಡಬೇಕು? ಗಂಡಸಾದರೆ ಇಲ್ಲಿ ಮಸೀದಿಯ ಪಾಯಿಖಾನೆಗೆ ಬಂದಾರು. ಹೆಂಗಸರು ಬರುವುದು ಹೇಗೆ?'

'ನಮಗೆ ಐದು ಸೆಂಟ್ಸು ಜಾಗ ಸಾಕು, ನಾವೇ ವಂತಿಗೆ ಹಾಕ್ಕೊಂಡು ಕೂಲಿ ಮಾಡಿ ನಾಲ್ಕು ಬಾಗಿಲಿನ ಪಾಯಿಖಾನೆ ಕಟ್ಟಿಸಿಕೊಳ್ತೇವೆ. ಪಂಚಾಯಿತಿನಿಂದಲೂ ಸ್ವಲ್ಪ ಸಹಾಯ ಕೊಟ್ಟಾರು ಅಂತ ನಂಬಿಕೆ ನನಗುಂಟು. ದಯವಿಟ್ಟು ಜಮಾತಿನವರು ನಮ್ಮ ಕಷ್ಟವನ್ನು ಅರ್ಥಮಾಡಿಕೊಂಡು ಸಹಾಯ ಮಾಡ್ಬೇಕು'.

ಹಾಜಿಯವರಿಗೆ ಏನು ಮಾಡಬೇಕೆಂದೇ ಹೊಳೆಯಲಿಲ್ಲ. ಖಾದರ್‌ನದ್ದು ತಳ್ಳಿ ಹಾಕುವಂತಹ ಬೇಡಿಕೆಯಂತೆ ಕಾಣಿಸುವುದಿಲ್ಲ. ಹಾಗಿರುತ್ತಿದ್ದರೆ ಜಮಾತಿನ ಕೆಲವರಾದರೂ ವಿರೋಧ ಹೇಳಬೇಕಿತ್ತು. ಯಾರೂ ತುಟಿ ಬಿಚ್ಚುವ ಕೆಲಸ ಮಾಡುವುದಿಲ್ಲ, ಯಾಕಿರ ಬಹುದು? ಖಾದರ್‌ನ ಭಯದಿಂದ ಇರಬಹುದೆ?

ತಾವು ಭಯಪಟ್ಟರೆ ಕೆಲಸ ಕೆಟ್ಟೀತು. ಮೊನ್ನೆ ಮೊನ್ನೆಯವರೆಗೆ ಬಚ್ಚಾಲಿಯಾಗಿ, ಕಂಡಕಂಡದರ ಜತೆ ಜಗಳಕ್ಕೆ ಕಾಲುಕೆರೆಯುತ್ತಿದ್ದ ಹುಡುಗನ ಎದುರು ಸೋತುಬಿಟ್ಟರೆ ಜನರು ತಮಗೆಷ್ಟು ಬೆಲೆ ಕಟ್ಟಿಯಾರು? ಈವತ್ತು ಇದು, ನಾಳೆ ಮತ್ತೊಂದು; ಮುಂದಿನ ವರ್ಷ ತಾನೇ ಅಧ್ಯಕ್ಷನಾಗುತ್ತೇನೆ ಎಂದಾನು. ಆಗ ಅದಕ್ಕೂ ಎಲ್ಲರಂತೆ ತಲೆಯಾಡಿಸು ವುದಾ? ಪುತ್ತಬ್ಬನೇನೋ ನಾಲ್ಕು ಮಾತು ಹೇಳಿದ. ಆದರೆ ಬಾಕಿ ಮಂದಿ ಸುಮ್ಮನಿದ್ದಾ ರಲ್ಲಾ? ಹಾಜಿಯವರು ಕುಳಿತಲ್ಲೇ ತಮ್ಮ ಶಕ್ತಿಯನ್ನು ಕಳೆದುಕೊಳ್ಳಲಾರಂಭಿಸಿದ್ದರು. ಯಾರದ್ದಾದರೂ ಸಹಾಯ ಬೇಕಿತ್ತು.

ಉಮ್ಮರಬ್ಬನವರನ್ನೇ ಚರ್ಚೆಗೆ ಎಳೆದುಕೊಂಡರೆ ಹೇಗೆ? ಖಾದರ್‌ನ ಮಾತಿಗೆ ಸುಮ್ಮನಿರುವ ಬದಲು ಮಾಜಿ ಪ್ರೆಸಿಡೆಂಟರಿಗೆ ಬಗ್ಗುವುದರಲ್ಲಿ ಮರ್ಯಾದೆ ಉಂಟು. ಹೇಗೂ ಅವರು ಖಾದರ್‌ನ ಪಾರ್ಟಿ ಅಂತ ಪ್ರಚಾರದಲ್ಲಿದೆ. ಅವರಿಬ್ಬರೂ ಸೇರಿ ಮಸೀದಿಯ ಜಾಗ ತುಂಡು ಮಾಡಿದರು; ಹಾಜಿಯವರದ್ದು ಏನೂ ತಪ್ಪಿಲ್ಲ ಅಂತ ಆದರೆ ಸಾಕು. ಇತ್ಯಾದಿ ಗುಣಿಸಿ, ಭಾಗಿಸಿ ಲೆಕ್ಕಾಚಾರ ಮಾಡಿದ ಹಾಜಿಯವರು ಉಮ್ಮರಬ್ಬರತ್ತ ತಿರುಗಿ,

'ಏನು ನೀವು ಮಾತನಾಡೋದೇ ಇಲ್ಲ! ಕಬರಸ್ಥಾನದ ಜಾಗ ತುಂಡು ಮಾಡಿ ಪಾಯಿಖಾನೆ ಕಟ್ಟಿಸಲು ಕೊಡುವುದು ನಿಮಗೆ ಸರಿ ಅಂತ ಕಾಣ್ತದಾ?' ಎಂದು ಪ್ರಶ್ನಿಸಿದರು.

ಅದುವರೆಗೆ ಬಾಯಿಗೆ ಬೀಗ ಜಡಿದು ತಮಾಷೆ ನೋಡುವವರಂತೆ ಕೂತಿದ್ದ ಉಮ್ಮರಬ್ಬನವರಿಗೆ ಒಮ್ಮೆಲೇ ಉಸಿರುಕಟ್ಟಿದಂತಾಯಿತು. ಬಾಯಿಬಿಟ್ಟು ಏನಾದರೂ ಹೇಳಲೇಬೇಕು. ಏನು ಹೇಳುವುದು? ಯಾರ ಪಾರ್ಟಿ ಸೇರಿದರೆ ಒಳ್ಳೆಯದು?

ಕಳೆದ ಏಳೆಂಟು ವರ್ಷಗಳಲ್ಲಿ ಈ ಖಾದರ್ ತಮಗೆ ಬೇಕಾಗಿ ರಾತ್ರಿ ಹಗಲು



ಒದ್ದಾಡಿದವನು. ಎರಡು ವರ್ಷದ ಹಿಂದಿನ ಮಳೆಗಾಲದಲ್ಲಿ ಖಾದರ್‌ನ ಗ್ಯಾಂಗ್ ಇಲ್ಲದೇ ಹೋಗಿದ್ದರೆ ಏನಿಲ್ಲವೆಂದರೂ ಒಂದು ಇಪ್ಪತ್ತು ಸಾವಿರದ ಸಾಗುವಾನಿ ತುಂಡುಗಳು ಯಾರ್‍ಯಾರದೋ ಹಟ್ಟಿ ಸೇರಿಹೋಗುತ್ತಿದ್ದವು. ಒಂದಲ್ಲ, ಎರಡಲ್ಲ ಅಂಥದ್ದು ಎಷ್ಟೋ ಉಂಟು. ಖಾದರ್‌ನಿಗೆ ತಾವು ಸಪೋರ್ಟ್ ಮಾಡದಿದ್ದರೆ ಬೇರೆ ಯಾರು ಮಾಡಬೇಕು?

ಹಾಗಾದರೆ ಹಾಜಿಯವರನ್ನು ಎದುರು ಹಾಕಿಕೊಳ್ಳುವುದಾ? ಎಂದಾದರೂ ಒಂದು ಐದು ಸಾವಿರ ಅರ್ಜೆಂಟು ಬೇಕು ಅಂತ ಆದರೆ ಹಾಜಿಯವರೇ ಬೇಕಾಗುತ್ತದೆ. ಖಾದರ್‌ನ ಹತ್ರ ಎಂಥ ಉಂಟು? ಅದೂ ಅಲ್ಲದೆ ಇತ್ತಿತ್ತಲಾಗೆ ಖಾದರ್‌ನ ನೀಯತ್ತೇ ಚೇಂಜ್ ಆದ ಹಾಗೆ ಕಾಣ್ತದೆ. ಹಾವಿನ ಹಾಗೆ ಸುಂಯ್‌ಗುಡುತ್ತಿದ್ದ ಹುಡುಗ 'ಒಳ್ಳೆ'ಯ ಹಾಗೆ ತಪ್ಪಿಸಿಕೊಳ್ಳಲು ನೋಡುತ್ತಿದ್ದಾನೆ. ಆ ಅವುಲಿಯಾ ಬಂದ ಬಳಿಕ ತಮ್ಮ ಮನೆಗೆ ಬರುವುದನ್ನು ಹೆಚ್ಚು ಕಮ್ಮಿ ನಿಲ್ಲಿಸಿಯೇ ಬಿಟ್ಟಿದ್ದಾನೆ. ಇನ್ನು ಅವನಿಂದ ಹೆಚ್ಚು ಲಾಭ ಕಾಣಿಸುವುದಿಲ್ಲ. ಹಾಗಾದರೆ ಖಾದರ್‌ನ ಕೈ ಬಿಟ್ಟು ಬಿಡುವುದಾ? ಅವನು ಹಗೆ ಕಟ್ಟಿ ಕೊಂಡರೆ? ಕೋಪ ಬಂದರೆ ಎದುರು ಇದ್ದವರು ಯಾರು ಅಂತ ನೋಡುವ ಜನ ಅಲ್ಲ. ಏನು ಮಾಡುವುದು?

'ಜಮಾತಿನ ಮೆಜಾರಿಟಿ ಏನು ಹೇಳುತ್ತದೋ ಹಾಗೆ ಮಾಡುವುದು ಕ್ರಮ' ಎನ್ನುತ್ತಾ ತಮ್ಮ ಅಧ್ಯಕ್ಷತನದ ಅನುಭವಗಳನ್ನು ಹೇಳುವವರಂತೆ ಉಮ್ಮರಬ್ಬನವರು, 'ಇದರಲ್ಲಿ ನಮ್ಮ ಶರೀಯತ್ತು ಏನು ಹೇಳುತ್ತದೆ ಎಂಬುದು ಬಹಳ ಮುಖ್ಯವಾಗುತ್ತದೆ. ನಮ್ಮ ಮಸೀದಿಯ ಇಮಾಂ ಇಬ್ರಾಹಿಂ ಮೌಲವಿಯವರು ಈವತ್ತು ಇರುತ್ತಿದ್ದರೆ ಅವರಲ್ಲಿ ಈ ಪ್ರಶ್ನೆ ಇಡಬಹುದಿತ್ತು. ಅವರು ರಜೆಯಲ್ಲಿ ಹೋದವರು ಹೇಗೂ ಮುಂದಿನ ಆದಿತ್ಯವಾರ ಬರ್ತಾರೆ. ನೀವು ಅವರನ್ನು ಎದುರು ಇಟ್ಟುಕೊಂಡು ಮುಂದಿನ ಶುಕ್ರವಾರ ಜಮಾತು ಸಭೆ ಕರೆದು ತೀರ್ಮಾನಿಸುವುದು ಒಳ್ಳೆಯದಲ್ಲಾ?'

ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಉತ್ಸಾಹ ಹಾಜಿಯವರಿಗೂ ಇತ್ತು. 'ಹೌದು, ಅದು ಹೌದು, ಹಾಗೆ ಮಾಡ್ವ' ಎಂದವರೇ ಸಭೆಯನ್ನು ಬರ್ಖಾಸ್ತುಗೊಳಿಸಿ 'ಯಾ ಅಲ್ಲಾ' ಎಂದು ನಿಟ್ಟುಸಿರು ಬಿಟ್ಟರು.

* * *

ರಿಟೈರ್ಡ್ ಪೋಸ್ಟ್‌ಮೇನ್ ಉಸ್ಮಾನ್‌ಖಾನರ ಜೊತೆ ನಡೆದುಕೊಂಡು ಹೋಗುವು ದೆಂದರೆ ಯಾರಿಗಾದರೂ ಉಬ್ಬಸ ಆರಂಭವಾದೀತು.

ಮುತ್ತುಪ್ಪಾಡಿ ಬಸ್‌ಸ್ಟ್ಯಾಂಡಿನಲ್ಲಿ ಕಾಸರಗೋಡಿನಿಂದ ಬಂದ ಲಾಸ್ಟು ಬಸ್ಸು

ಇಮಾಂ ಇಬ್ರಾಹಿಂ ಮೌಲವಿಯವರನ್ನು ನೆಲಕ್ಕೆ ಇಳಿಸುವಷ್ಟರಲ್ಲಿ ಖಾನರು ಅವರ ಚರ್ಮದ ಚೀಲವನ್ನು ಕಸಿದುಕೊಂಡು, 'ನೀವು ಎಲ್ಲಿಗೆ ಹೋಗುವುದಾದರೂ ಮೊದಲು ಹಾಜಿಯವರನ್ನು ಕಂಡು ಹೋಗಬೇಕಂತೆ ನಾನು ಮಧ್ಯಾಹ್ನದಿಂದ ಇಲ್ಲಿ ನಾಯಿಯ ಹಾಗೆ ಕಾಯ್ತಾ ನಿಂತಿದ್ದೇನೆ' ಎಂದು ಹೊರಡಿಸಿಬಿಟ್ಟಿದ್ದರು.

ಮೌಲವಿಯವರು ಮೊದಲ ಬಸ್ಸಲ್ಲೇ ಬರುವ ಕ್ರಮ. ಆದರೆ ಈವತ್ತು ಅವರ ಮೊಮ್ಮಗನಿಗೆ ಸುನ್ನತ್ ಇಟ್ಟುಕೊಂಡದ್ದರಿಂದ ಎಲ್ಲ ಮುಗಿಸಿಯೇ ಬಸ್ಸು ಹತ್ತಿದ್ದರು.

'ಯಾಕೆ? ಅಂಥ ಅರ್ಜೆಂಟು ಎಂಥದ್ದು ಖಾನರೇ. ನನ್ನದು ಸಂಜೆಯ ನಮಾಜು ಕೂಡಾ ಬಾಕಿ ಉಂಟು. ಎಲ್ಲ ಸೇರಿಸಿಕೊಂಡು ರಾತ್ರಿ ನಮಾಜು ಆದ ಬಳಿಕ ಬಂದ ರಾಗದೇ?' ಎಂದು ಪ್ರಶ್ನಿಸಿದ್ದರಾದರೂ ಖಾನರು ಬಿಲ್‌ಕುಲ್ ಬಿಡಲಿಲ್ಲ.

ಮೌಲವಿಯವರಿಗೆ ಬೇರೆ ದಾರಿಯೇ ಇಲ್ಲ; ಖಾನರ ಬೆನ್ನು ಹಿಡಿದು ದಾಪುಗಾಲು ಹಾಕುತ್ತಾ, 'ಸ್ವಲ್ಪ ನಿಧಾನ ನಡೀತೀರಾ? ನಿಮ್ಮ ಒಟ್ಟಿಗೆ ಬರುವುದೆಂದರೆ ಒಂದು ಶಿಕ್ಷೆಯೇ' ಎಂದರು.

'ಏನು ಮಾಡುವುದು ಮೌಲವಿಯವರೇ ನನಗೆ ಪ್ರಾಯ ಆಯ್ತಲ್ಲಾ ಇನ್ನು ಬೇಗ ಬೇಗ ಹೋಗದಿದ್ರೆ ಮುಟ್ಟುವುದು ಯಾವಾಗ?' ಎಂದು ಒಗಟಿನಂತೆ ಪ್ರಶ್ನಿಸಿದ ಖಾನರು, ಕಳೆದ ಜಮಾತು ಜನರಲ್ ಬಾಡಿಯಲ್ಲಿ ತಾವು ಕೂಡಾ ಆಡಳಿತ ಕಮಿಟಿಗೆ ಸೇರಿದ್ದನ್ನು ಒತ್ತಿ ಹೇಳುತ್ತಾ, ಅಲ್ಲಿ ನಡೆದ ಎಲ್ಲವನ್ನೂ ವಿವರಿಸುತ್ತಾ ನಿಧಾನವಾಗಿ ಹೆಜ್ಜೆ ಹಾಕಿದರು.

'ರೆಹಮಾನ್ ಮಂಜಿಲ್'ನ ಮುಖಮಂಟಪದ ಬಾಗಿಲಲ್ಲೇ ಮೌಲವಿಯವರನ್ನು ಸ್ವಾಗತಿಸಿದ ಜವುಳಿ ಹಾಜಿಯವರು, ಖಾನರತ್ತ ನೋಡುತ್ತಾ 'ಆಯಿತು ಖಾನರೇ, ನೀವು ನಾಳೆ ಬೆಳಗ್ಗೆ ಒಮ್ಮೆ ಸಿಕ್ಕಿ' ಎನ್ನುವ ಜತೆಯಲ್ಲೇ, 'ನೀವು ಹೋಗಿ' ಎನ್ನುವಂತೆ ಕಣ್ಸನ್ನೆ ಮಾಡಿದರು.

ಹಾಜಿಯವರ ಮಾತು ತೀರಾ ಅನಿರೀಕ್ಷಿತವಾಗಿಲ್ಲದೇ ಹೋದರೂ ಉಸ್ಮಾನ್ ಖಾನರ ಮುಖ ಅವಮಾನದಿಂದ ಬಣ್ಣಗೆಟ್ಟುಹೋಗಿತ್ತು. ಆದರೆ ಬೇರೇನೂ ಮಾಡು ವಂತಿರಲಿಲ್ಲ. ಭಾರವಾದ ಹೆಜ್ಜೆಗಳನ್ನು ಎತ್ತಿಕೊಂಡು ಗೇಟಿನ ಬಳಿ ಹೋದವರು, ಬೆಚ್ಚಿಬಿದ್ದವರಂತೆ ಅಲ್ಲಿಂದಲೇ ಕೂಗಿ ಹೇಳಿದರು 'ಹಾಜಾರ್ರೆ... ಅವುಲಿಯಾ ಬಂದ್ರು!'

ಖಾನರು ಗೇಟಿನ ಹೊರಗಿನಿಂದಲೇ ಕೂಗಿ ಹೇಳಿದ್ದರೂ, ಮುಖಮಂಟಪದಲ್ಲಿದ್ದ ಹಾಜಿಯವರಿಗೆ ಸಿಡಿಲು ಬಡಿದಂತಾಗಿತ್ತು! ಕಳೆದ ಒಂದು ವರ್ಷದಲ್ಲಿ ದಮ್ಮಯ್ಯ ಎಂದರೂ ಮನೆಗೆ ಬರಲು ನಿರಾಕರಿಸಿದ್ದ ಅವುಲಿಯಾರವರು, ಈವತ್ತೇನು ಆಕಾಶದಿಂದ ಬಿದ್ದವರಂತೆ ಬಂದುಬಿಟ್ಟರು! ಮೌಲವಿಯವರನ್ನು ಬಸ್‌ನಿಲ್ದಾಣದಿಂದ ನೇರವಾಗಿ



ಮನೆಗೇ ಕರೆತರಲು ಖಾನರನ್ನು ಅಟ್ಟಿದ್ದು ಇವರಿಗೆ ಹೇಗೆ ಗೊತ್ತಾಯಿತು? ಒಟ್ಟಾರೆ ತಲೆಬಿಸಿ ಮಾಡಿಕೊಂಡ ಹಾಜಿಯವರು ಮೌಲವಿಯವರನ್ನು ಮುಖ ಮಂಟಪದ ಬಾಗಿಲಲ್ಲೇ ಬಿಟ್ಟು ಗೇಟಿನ ಬಳಿಗೆ ಧಾವಿಸಿದರು.

ಅವುಲಿಯಾರಿಗೆ ವಂದಿಸುತ್ತಾ ದೊಡ್ಡ ಗೇಟು ತೆರೆದು ಸ್ವಾಗತಿಸಿದ ಹಾಜಿಯವರು 'ಬನ್ನಿ... ಬನ್ನಿ... ಮೌಲವಿಯವರು ಕೂಡಾ ಈಗ ಬಂದರು' ಎಂದರು. ಅಷ್ಟು ಹೊತ್ತಿಗೆ ಮುಖಮಂಟಪದ ಮೆಟ್ಟಿಲ ಮೇಲೆ ನಿಂತುಕೊಂಡಿದ್ದ ಮೌಲವಿ 'ಅಸ್ಸಲಾಂ ಅಲೈಕುಂ' ಎಂದು ವಂದಿಸಿದರು.

ಮಾಲವಿಯವರ ಭುಜ ಹಿಡಿದುಕೊಂಡು ನಾಲ್ಕು ಹೆಜ್ಜೆ ನಡೆಯುತ್ತಾ,

'ಮನೆಯಲ್ಲಿ ಎಲ್ಲ ಚೆನ್ನಾಗಿದ್ದೀರಾ?' ಎಂಬ ಪ್ರಶ್ನೆಯ ಜತೆ ಮೆಟ್ಟಲೇರಿದ ಅವುಲಿಯಾ ರವರು ನೇರವಾಗಿ ಒಳಕ್ಕೆ ನಡೆದು ಮುಖಮಂಟಪದ ನಡುವೆ ಇರಿಸಿದ್ದ ಕುರ್ಚಿಯಲ್ಲಿ ಕುಳಿತುಬಿಟ್ಟರು...

ಒಂದು ಬಗೆಯ ಸಂಭ್ರಮ, ಮತ್ತೊಂದು ಬಗೆಯ ಗಲಿಬಿಲಿಯಲ್ಲಿ ಹಾಜಿ ಯವರಿಗೆ ನಿಂತಲ್ಲೇ ನಿಲ್ಲಲು ಸಾಧ್ಯವಾಗಲಿಲ್ಲ. ಅವುಲಿಯಾರವರ ಅನಿರೀಕ್ಷಿತ ಆಗಮನ ದಿಂದಾಗಿ ಮುಂಜಾನೆಯಿಂದ ಹೊಂದಿಸಿದ್ದ ಲೆಖ್ಖಾಚಾರವೆಲ್ಲಾ ತಲೆಕೆಳಗಾಗಿ ಬಿಟ್ಟಿತು. ಈ ಅವುಲಿಯಾರ ಎದುರು ಮೌಲವಿಯವರಲ್ಲಿ ಏನನ್ನೂ ಸೂಚಿಸುವಂತಿರಲಿಲ್ಲ. ಅವುಲಿಯಾರವರು ಏನಿದ್ದರೂ ಖಾದರನನ್ನು ಬಿಟ್ಟುಹಾಕಲಾರರು. ಮೌಲವಿಯವರೂ ಕೂಡಾ ಅವುಲಿಯಾರವರ ಎದುರು ತಮ್ಮ ಮಾತಿಗೆ ಸಮ್ಮತಿಸಲಾರರು. ಒಟ್ಟಾರೆ ಗೋಜಲು ಗೋಜಲು. 'ಯಾಕೆ ಬರಲು ಹೇಳಿದ್ದು ಹಾಜಾರ್ರೆ?' ಎಂದು ಮೌಲವಿಯವರು ಕೇಳಿಬಿಟ್ಟರೆ ಏನೆಂದು ಉತ್ತರ ನೀಡುವುದು? ಅಥವಾ ಉಸ್ಮಾನ್‌ಖಾನರು ಈಗಾಗಲೇ ಎಲ್ಲ ಹೇಳಿರಬಹುದು. 'ಸುಮ್ಮನೇ... ಹೀಗೇ ಬಂದು ಹೋಗಲು ಹೇಳಿದೆ' ಎಂದರೆ ನಂಬಲಿಕ್ಕಿಲ್ಲ.

ಹಾಜಿಯವರ ಆತಂಕ ಮೌಲವಿಯವರಿಗೂ ಗೊತ್ತಾಗಿಬಿಟ್ಟಿತ್ತು. ಹಾಜಿಯವರು ಕರೆಸಿಕೊಂಡ ಕಾರಣದ ಬಗ್ಗೆ ಯಾವ ಅನುಮಾನವೂ ಉಳಿದಿರಲಿಲ್ಲ. ಆದರೆ ಅರ್ಥವಾಗದೇ ಇರುವುದೆಂದರೆ, ಕಳೆದ ಒಂದು ವರ್ಷದ ಅಂದಾಜಿನಲ್ಲಿ ಈ ಕಡೆ ಒಮ್ಮೆ ಕೂಡಾ ತಲೆ ಹಾಕಿರದ ಈ ಮಿಠಾಯಿ ಅವುಲಿಯಾ ಯಾಕೆ ಬಂದದ್ದಿರ ಬಹುದು?

ಕುರ್ಚಿಯಲ್ಲಿ ಕುಳಿತ ಅವುಲಿಯಾರವರು ತಮ್ಮ ಬಲಭಾಗದ ಮಂಚದ ಮೇಲೆ ಕುಳಿತು, ಬಲಗೈ ಬೆರಳುಗಳಿಂದ ಮಂಚದ ಬದಿಯನ್ನು ತಿಕ್ಕುತ್ತಾ ಅತ್ತಿತ್ತ ಕಣ್ಣು

ಹಾಯಿಸುತ್ತಿರುವ ಹಾಜಿಯವರ ಮುಖವನ್ನೇ ಎವೆಯಿಕ್ಕದೆ ದಿಟ್ಟಿಸುತ್ತಿದ್ದರು. ಮೌನ ಮೌಲವಿಯವರಿಗೂ ಅಸಹನೀಯವಾಗಲಾರಂಭಿಸಿತು.

'ಏನು ಹಾಜಾರ್ರೇ... ಸುಮ್ಮನೆ ಕೂತಿದ್ದೀರಲ್ಲಾ?' ಎಂದು ನಗುತ್ತಾ, 'ನೀವಲ್ವ ಹೇಳುತ್ತಿದ್ದದ್ದು, ಅವುಲಿಯಾರವರು ನಿಮ್ಮ ಮನೆಗೆ ಬರಲೇ ಕೇಳುವುದಿಲ್ಲ ಅಂತ? ಈಗ ಬಂದು ನಿಮ್ಮ ಎದುರೇ ಕೂತುಕೊಂಡ್ರೆ ಬಾಯಿಗೆ ಬೀಗ ಹಾಕಿಬಿಟ್ಟಿದ್ದೀರಲ್ಲಾ?' ಎಂದು ಹಾಜಿಯವರನ್ನು ಗೆಲುವಾಗಿಸಲು ಯತ್ನಿಸಿದರು. ಕಳೆದ ಒಂದು ವರ್ಷದಲ್ಲಿ ಜವುಳಿ ಹಾಜಿಯವರು ಏನಿಲ್ಲವೆಂದರೂ ಒಂದು ಡಜನ್ ಸರ್ತಿಯಾದರೂ ಮೌಲವಿಯವರ ಬಳಿ ದೂರಿಕೊಂಡದ್ದುಂಟು. 'ಇದೆಂಥದ್ದು ಮೌಲವಿಯವರೇ, ನನ್ನ ಮನೆಯೆಂದರೆ ಸೈತಾನನ ಗೂಡು ಅಂತ ತಿಳಿದುಕೊಂಡಿದ್ದಾರಾ ಈ ಮಿಠಾಯಿ ಅವುಲಿಯಾ?! ಕಾರು ಮಾಡಿಕೊಂಡು ತಂದವನು ನಾನು. ಈಗ ಊರಲ್ಲಿ ಒಬ್ಬ ಜನ ಆಗಿಬಿಟ್ಟದ್ದು ಆ ಕಸಾಯಿ. ದಿನಕ್ಕೆ ಐದು ಬಾರಿ ನಮಾಜು ಮಾಡುವ ನನಗಿಂತ ವಾರಕ್ಕೊಮ್ಮೆ 'ಜುಮ್ಮಾ'ದಲ್ಲಿ ಮಾತ್ರ 'ಅಲ್ಲಾ' ಎನ್ನುವ ಅವನು ಅವುಲಿಯಾರಿಗೆ ಹೆಚ್ಚು ಹತ್ತಿರವಾ? ನಾನು ಇವರ ಹತ್ರ ಏನಾದ್ರೂ ಮಾತಾಡ್ಲಿಕ್ಕೆ ಹೋದ್ರೆ, ಅವರು ಇಂಗ್ಲಿಷ್ ಮಾತಾಡ್ಲಿಕ್ಕೆ ಸುರು ಮಾಡ್ತಾರೆ, ಇದಕ್ಕೆಂತ ಅರ್ಥ?'

ಸುರುಸುರುವಿಗೆ ಮೌಲವಿಯವರಿಗೂ ಹಾಗೇ ಅನ್ನಿಸಿತ್ತು. ಆದರೆ ಒಂದೆರಡು ತಿಂಗಳು ಅದು ಇದು ಅಂತ ಮಾತನಾಡುವಾಗ ಈ ಅವುಲಿಯಾ ಸಾಧಾರಣ ಜನ ಮಾತ್ರ ಅಲ್ಲ ಅಂತ ಗೊತ್ತಾಗಿ ಹೋಗಿತ್ತು. ಕುರಾನಿನ ಯಾವ ಶ್ಲೋಕದ ಸಂಗತಿ ಬೇಕಾದರೆ ಇರ್ಲಿ; ಅವುಲಿಯಾರ ಹತ್ರ ಅರ್ಥ ಕೇಳುವುದು ಅಂದ್ರೆ ಒಂದು ತರಹ ಸುಖ ಸಿಗ್ತಿತ್ತು. ಪ್ರತಿಸಲವೂ ಏನನ್ನೋ ಹೊಸತು ಓದಿದಂತೆ ಆಗ್ತಿತ್ತು.

ಬರಿಯ ಮಾತು ಮಾತ್ರ ಅಲ್ಲ; ಅವರ ಕೆಲಸ ಕೂಡಾ ಹಾಗೆಯೇ. ಕಸಾಯಿಗಲ್ಲಿಯಲ್ಲಿ ಪಂಚಾಯತಿನವರು ಕಣಿ ಅಗೆದು ರಿಪೇರಿ ನಡೆಸುತ್ತಿದ್ದಾಗ ಈ ಅವುಲಿಯಾ, ಅನುಭವ ಇರುವ ಮೇಸ್ತ್ರಿಯಂತೆ ಕೆಲಸದವರ ಜತೆ 'ಅದು ಅಲ್ಲಿ ಇಡು, ಇದು ಹೀಗೆ ತಗಿ' ಅಂತ ಹೇಳುತ್ತಾ ಆ ಗಲೀಜು ಕೆಸರಲ್ಲಿ ಚಕಚಕ ಅಂತ ಓಡಾಡುತ್ತಿದ್ದುದನ್ನು ಸ್ವತಃ ಕಣ್ಣಾರೆ ಕಂಡು ದಂಗಾಗಿ ಹೊದವರು ಮೌಲವಿಯವರು. ತಾವು ಬಾಲ್ಯದಲ್ಲಿ ಕಂಡಿದ್ದ 'ತೂ... ತೂ...' ಎಂದು ನೀರು ಮಂತ್ರಿಸಿ ಕೊಡುತ್ತಿದ್ದ ಅವುಲಿಯಾರಿಗಿಂತ ಇವರು ಬೇರೆಯೇ ಆಗಿ ಕಾಣಿಸಿದ್ದರು. ಇಲ್ಲದಿದ್ರೆ ಒಬ್ಬ ಅವುಲಿಯಾ ಅಂತ ಆದಮೇಲೆ ಯಾರ್‍ಯಾರದೋ ಕಜ್ಜಿಪುಡಿಕೆ ಮಕ್ಕಳನ್ನು ಎಣ್ಣೆ ತಿಕ್ಕಿ ಸ್ನಾನ ಮಾಡಿಸಿಯಾರಾ! ಕೆಳಗಿನ ಕೆರೆಯ ಹತ್ತಿರ ತಟ್ಟಿಯ ಗೋಡೆ ಕಟ್ಟಿಸಿ, ರಾತ್ರಿ ಅಲ್ಲಿ ಲ್ಯಾಂಪು ತೂಗುಹಾಕಿ, ಕೂಲಿಗೆ ಹೋಗಿ ಬರುವ ಗಂಡಸರೆಲ್ಲ ಅಲ್ಲಿ ಸ್ನಾನ ಮಾಡಿದ ಬಳಿಕವಷ್ಟೇ ಮನೆಗೆ ಹೋಗುವಂತೆ ಆಜ್ಞೆ ಮಾಡಿಬಿಟ್ಟಿದ್ದರು. ಯಾರಾದ್ರೂ ಸ್ನಾನ ಮಾಡದೆ ಹಾಗೆ ನಿದ್ರೆ ಮಾಡಿದ್ನೋ... ಆ ರಾತ್ರಿ ಅವನಿಗೆ 'ಇಬ್ಲೀಸಿ'ನ ಭಯಂಕರ ಕನಸು ಬಿತ್ತು – ಅಂತೇ ಲೆಖ್ಖ. ಅವುಲಿಯಾರವರ ಮಾತು ಮೀರಿ ಗಂಡನಿಗೆ ಅನ್ನ ಬಡಿಸಲು ಯಾವ ಹೆಂಗಸಿಗೆ ಧೈರ್ಯ ಬಂದೀತು?



ಅಂತಹ ಅವುಲಿಯಾ ಈಗ ಎದುರೇ ಬಂದು ಕೂತಿದ್ದಾಗ ಹಾಜಿಯವರು ಬಾಯಿಯೇ ಬಿಡುವುದಿಲ್ಲವಲ್ಲಾ?!

ಹಾಜಿಯವರಿಗೂ ತಲೆಬಿಸಿ. ಏನೆಂದು ಮಾತನಾಡುವುದು? 'ಏನು ಬಂದದ್ದು?' ಎಂದು ಪ್ರಶ್ನಿಸುವುದು ಸೌಜನ್ಯವಾಗುವುದಿಲ್ಲ. 'ನೀವು ಬಂದದ್ದು ಬಹಳ ಒಳ್ಳೆಯದಾಯಿತು. ನನ್ನ ಮನೆಯ ಪುಣ್ಯ' ಇತ್ಯಾದಿ ಹೇಳುವಂತೆಯೂ ಇಲ್ಲ. ಇಂತಹ ಗಿಲೀಟು ಮಾತುಗಳನ್ನು ಅಂಗಡಿಗೆ ಬಂದ ಗಿರಾಕಿಗಳಿಗಾದರೆ ಎಗ್ಗಿಲ್ಲದೆ ಹೇಳಬಹುದು. ಯೋಚಿಸುತ್ತಾ ಹೋದಂತೆ ಹಾಜಿಯವರ ನಾಲಗೆಯ ಪಸೆ ಆರತೊಡಗಿತ್ತು.

'ಅಡಿಕೆ ತೋಟದಲ್ಲಿ ಫಸಲು ಹೇಗುಂಟು? ಹಾಜಾರ್ರೇ' ಅವುಲಿಯಾರವರು ತಮ್ಮ ಕಣ್ಣುಗಳಲ್ಲಿ ತುಂಟ ನಗು ಚಿಮ್ಮಿಸುತ್ತಾ ಪ್ರಶ್ನಿಸಿದ್ದರು. ಹಾಜಿಯವರಿಗೆ ಗಾಬರಿಯಾಯಿತು. ಈ ಕಾಲದಲ್ಲಿ ಎಂತಹ ಫಸಲು! ಹೊಳೆ ಬದಿಯ ಎರಡೆಕರೆ ತೋಟಕ್ಕೆ ಕಳೆದ ವಾರವಷ್ಟೇ ಮಣ್ಣು ಸವರಿ, ಗೊಬ್ಬರ ಹಾಕಿದ್ದಾಗಿತ್ತು. ಫಸಲು ಆರಂಭವಾಗಲು ಇನ್ನು ಏನಿಲ್ಲವೆಂದರೂ ಮೂರು ತಿಂಗಳು ಬೇಕಾದೀತು.

'ಈಗೆಲ್ಲಿ ಫಸಲು ಅವುಲಿಯಾರವರೇ, ಇನ್ನೂ ದಿನ ಉಂಟು' ಹಾಜಿಯವರು ಪ್ರಯಾಸದಿಂದ ಮಾತು ಜೋಡಿಸಿಕೊಂಡಿದ್ದರು.

'ಮತ್ತೆ! ರಾತ್ರಿಯಿಡೀ ನೀವು ತೋಟ ಕಾಯುತ್ತಿರುವುದು ಯಾಕೆ?' ಅವುಲಿಯಾರವರ ಪ್ರಶ್ನೆಗೆ ಹಾಜಿಯವರು ಬೆಚ್ಚಿಬಿದ್ದರು. ಅವುಲಿಯಾರವರು ಹೀಗೇಕೆ ಪ್ರಶ್ನಿಸುತ್ತಿದ್ದಾರೆ?

ಮೌಲವಿಯವರಿಗೂ ಅವುಲಿಯಾರವರ ಪ್ರಶ್ನೆಯ ತಲೆಬುಡ ಅರ್ಥವಾಗಲಿಲ್ಲ. ಹುಬ್ಬೇರಿಸುತ್ತಾ ಅವುಲಿಯಾರತ್ತ ಕುತೂಹಲದ ಕಣ್ಣು ನೆಟ್ಟರು.

ಹಾಜಿಯವರು ಇದ್ದಕ್ಕಿದ್ದಂತೆ ಕುಳಿತಲ್ಲಿಂದ ಎದ್ದು ಕಿಟಕಿಯ ಬಳಿಗೆ ಹೋಗಿ ನಿಂತರು. ಗಫೂರನ ಮದುವೆ ಸಮಯದಲ್ಲಿ ಹಾಕಿದ್ದ ಅಡಿಕೆ ಗಿಡಗಳು ಈಗ ಮನೆಯ ಮಾಡನ್ನು ಮೀರಿಸಿ ಬೆಳೆದು ನಿಂತಿದ್ದವು. ಬೆನ್ನ ಹಿಂದೆ ಕುಳಿತಿರುವ ಅವುಲಿಯಾರವರು ಕೂಡಾ ಅಡಿಕೆ ಮರದಂತೆ ಬೆಳೆಯುತ್ತಿದ್ದಾರೆಯೆ? ಭಯದಿಂದ ಹಾಜಿಯವರು ತಿರುಗಿ ನಿಂತರು.

ಹಾಜಿಯವರು ತಮ್ಮತ್ತ ತಿರುಗುವುದನ್ನೇ ಕಾದು ಕುಳಿತಂತಿದ್ದ ಅವುಲಿಯಾರವರು ಮೌಲವಿಯವರತ್ತ ನೊಡುತ್ತಾ ಪ್ರಶ್ನಿಸಿದರು.

'ಒಂದು ವೇಳೆ ಮಸೀದಿಯ ಕಕ್ಕಸು ಹಾಳಾಯಿತೆಂದು ಇಟ್ಟುಕೊಳ್ಳಿ ಮೌಲವಿಯವರೇ, ಆಗೇನು ಮಾಡುತ್ತೀರಿ?'

ಮೌಲವಿಯವರಿಗೆ ಅವುಲಿಯಾರ ಉದ್ದೇಶ ತಟ್ಟನೆ ಹೊಳೆದುಹೋಯಿತು. ಅವುಲಿಯಾರವರು ಬಂದಿರಬಹುದಾದ ಕಾರಣದ ಸೂಚನೆಯೂ ಸಿಕ್ಕಂತಾಯಿತು.

'ಬೇರೆ ಕಟ್ಟಿಸಬೇಕಾಗುತ್ತದೆ' ತಡವರಿಸದೇ ಉತ್ತರಿಸಿದ್ದರು.

'ಎಲ್ಲಿ ಕಟ್ಟಿಸ್ತೀರಿ ಮೌಲವಿಯವರೇ? ಮಸೀದಿಯ ಕಟ್ಟಡ ಬಿಟ್ಟರೆ ಬೇರೆಲ್ಲಾ ಕಬರಸ್ಥಾನದ ಜಾಗ ಅಲ್ವಾ?' ಅವುಲಿಯಾರವರ ಪ್ರಶ್ನೆಯಲ್ಲಿ ವ್ಯಂಗ್ಯ ತುಂಬಿಕೊಂಡಿತ್ತೆ?

'ಸಾಕು... ನಿಲ್ಸಿ ಬಿಡಿ ಅವುಲಿಯಾರವರೇ, ಸಾಕು ಮಾಡಿಬಿಡಿ' ಹಾಜಿಯವರು ನಿಂತಲ್ಲೇ ನಡುಗಲಾರಂಭಿಸಿದ್ದರು. 'ನನಗೂ ಗೊತ್ತುಂಟು ಬೇರೆ ನಿರ್ವಾಹವೇ ಇಲ್ಲ ಅಂತ ಆದಾಗ ಅಲ್ಲಿ ಪಾಯಿಖಾನೆ ಗುಂಡಿ ತೋಡಿದರೆ ಅಲ್ಲಾಹು ನನ್ನನ್ನು ನರಕಕ್ಕೆ ಹಾಕಲಿಕ್ಕಿಲ್ಲ ಅಂತ' ಎಂದು ಆರಂಭಿಸಿದ್ದ ಹಾಜಿಯವರು, ಕ್ರಮೇಣ ತಮ್ಮ ಧ್ವನಿಯಲ್ಲಿ ವಿಶ್ವಾಸವನ್ನು ತುಂಬಿಕೊಳ್ಳುತ್ತಾ ಹೇಳಿದರು. 'ನಿಮಗೆ ಹೇಳಬೇಕು ಅಂತ ಆದರೆ, ಈಗ ನಮ್ಮ ಮಸೀದಿಯಲ್ಲಿರುವ ಆರು ಬಾಗಿಲಿನ ಪಾಯಿಖಾನೆಗೆ ಗುಂಡಿ ತೆಗೆಯುವ ಸಂದರ್ಭದಲ್ಲಿ ನಾನು ಪಿಕ್ಕಾಸು ಹಿಡಿದವನು. ಆಗ ನಮ್ಮ ಇಬ್ರಾಹಿಂ ಮೌಲವಿಯವರೂ ಈ ಊರಿಗೆ ಬಂದಿರಲಿಲ್ಲ. ನಿಮಗೆ ನಿಜ ಹೇಳಬೇಕಾ? ಸುಮಾರು ಇಪ್ಪತ್ತು ವರ್ಷ ಆಯ್ತು. ಆ ದಿನ ನನ್ನ ಪಿಕ್ಕಾಸಿಗೇ ಒಂದು ಎಲುಬು ತುಂಡು ಸಿಕ್ಕಿತ್ತು ಗೊತ್ತಾ?' ಭಾರವಾಗಿಯೇ ಪ್ರಸ್ನಿಸಿದ್ದ ಹಾಜಿಯವರು ಇದ್ದಕ್ಕಿದ್ದಂತೆಯೇ ತಮ್ಮ ಧ್ವನಿಯನ್ನು ತಗ್ಗಿಸಿಕೊಂಡು 'ಈಗ ಪ್ರಶ್ನೆ ಇರುವುದು ಅದಲ್ಲ. ಆ ಖಾದರ್‌ನಿಗೆ ಜಾಗ ಬೇಕು ಅಂತ ಆಗಿದ್ರೆ ನನ್ನ ಹತ್ರ ಮೊದಲೇ ಒಂದು ಮಾತು ಹೇಳಬಹುದಿತ್ತಲ್ಲಾ! ನನಗೇನು ಅವನಲ್ಲಿ ಹಗೆ ಉಂಟಾ? ಅವೆಲ್ಲ ಬಿಟ್ಟು ಜಮಾತಿನ ಮೀಟಿಂಗ್‌ನಲ್ಲಿ ದೊಡ್ಡ ಲೀಡರ್ ಆಗಲಿಕ್ಕೆ ಹೊರಟನಲ್ಲಾ? ಹೂಂ... ನಾನೆಲ್ಲ ನಿಮಗೆ ಕಾಲಿನ ಕಸ. ನಾನು ಮಸೀದಿಗಾಗಿ ಇದುವರೆಗೆ ಏನೂ ಮಾಡಲಿಲ್ಲ ಅಲ್ವಾ?' ಹಾಜಿಯವರಿಗೆ ಗಂಟಲು ಕಟ್ಟಿದಂತಾಗಿ, ಮಾತು ನಿಲ್ಲಿಸಿ ತುಟಿ ಕಡಿಯುತ್ತಾ ಉಸಿರು ಎಳೆದುಕೊಳ್ಳಲಾರಂಭಿಸಿದರು.

ಕಸಿವಿಗೊಂಡ ಮೌಲವಿಯವರು ಬಿಡುಗಣ್ಣು ಬಿಟ್ಟು ನೋಡುತ್ತಿರುವಂತೆಯೇ ಅವುಲಿಯಾರವರು ಕುರ್ಚಿಯಿಂದ ಎದ್ದು, ನಿಧಾನವಾಗಿ ಮುಖಮಂಟಪದ



ಬಾಗಿಲ ಬಳಿಗೆ ನಡೆದು, ಹೊಸ್ತಿಲ ಮೇಲೆ ಬಾಗಿಲಿಗಡ್ಡ ನಿಂತು ರಸ್ತೆಯತ್ತ ಮುಖ ತಿರುವಿದರು.

ಮೌಲವಿಯವರಿಗೆ ಸಣ್ಣ ಅನುಮಾನ ಕೊರೆಯಲಾರಂಭಿಸಿತು. ಹಾಜಿಯವರ ಮಾತುಗಳಿಂದ ಅವುಲಿಯಾರವರಿಗೆ ಬೇಸರವಾಗಿರಬಹುದೆ? ಛೇ! ಇದ್ದಿರಲಾರದು. ಹಾಗೆಲ್ಲ ಬೇಸರಪಡುವ ಜನ ಆಗಿರುತ್ತಿದ್ದರೆ ಎಂದೋ ಮುತ್ತುಪ್ಪಾಡಿ ಬಿಟ್ಟು ಓಡಿ ಹೋಗಬೇಕಾಗಿತ್ತು. ಆ ಖಾದರ್ ಸ್ವತಃ ಇವರ ಬಗ್ಗೆ ಏನೆಲ್ಲಾ ಅಪಪ್ರಚಾರ ಮಾಡಿರಲಿಲ್ಲ! ಅಂತಹ ಖಾದರ್‌ನ ಮನೆಗೆ ಹೋಗಿ ಅವನ ಬಾಲ ಮಡಚಿದವರು ಈ ಹಾಜಿಯವರ ಬಗ್ಗೆ ಬೇಸರ ಪಡುತ್ತಾರೆಯೇ?

ಸುಮಾರು ಎರಡು ನಿಮಿಷದಷ್ಟು ಹೊತ್ತು ಹಾಗೆಯೇ ನಿಂತಿದ್ದ ಅವುಲಿಯಾರವರು, ಇದ್ದಕ್ಕಿದ್ದಂತೆ ತಿರುಗಿ ಇಬ್ಬರಿಗೂ ಅನ್ವಯಿಸುವಂತೆ ಪ್ರಶ್ನೆಯೆಸೆದು ಬಿಟ್ಟರು. 'ಒಮ್ಮೆ ಹಾಜಿಯವರ ಹೆಂಗಸರನ್ನು ಹೊರಗೆ ಕರೀಬೇಕಿತ್ತಲ್ಲಾ?'

ಮುಖಮಂಟಪದೊಳಗೆ ಗರ್ನಾಲು ಎಸೆದಂತಾಗಿತ್ತು.

ಹಾಜಿಯವರ ತುಟಿಗಳು ಅದುರಿದವು. ಹಣೆಯಲ್ಲಿ ಎದ್ದುಕಾಣುತ್ತಿದ್ದ ಪಾವಲಿಯಗಲದ ಕಪ್ಪು ಕಲೆಯ ನಡುವಿನಿಂದ ಹಾದುಹೋಗಿದ್ದ ನೀಲಿ ನರ ಉಬ್ಬಿಕೊಂಡಿತು. ಉಸಿರಾಡುವುದನ್ನೂ ಮರೆತುಬಿಟ್ಟ ಜವುಳಿ ಹಾಜಿಯವರು ಇಮಾಂ ಇಬ್ರಾಹಿಂ ಮೌಲವಿಯವರತ್ತ ಅಸಹಾಯಕ ದೃಷ್ಟಿ ಬೀರಿದರು.

ಮೌಲವಿಯವರ ಎದೆಯೂ ಧಸಕ್ಕೆಂದಿತು!

ಹಾಜಿಯವರು ಕಕ್ಕಾಬಿಕ್ಕಿಯಾಗಿ ನೋಡುತ್ತಿರುವಂತೆಯೇ ಒಳ ಪರದೆ ಸರಿಸಿಕೊಂಡು ಹಲೀಮಮ್ಮ ಹೊರಬಂದರು. ಅವರ ಬೆನ್ನಿಗಂಟಿಕೊಂಡೇ ಖಾದರ್ ಹೊರಗೆ ಕಾಲಿರಿಸಿದ್ದ!

ಜವುಳಿ ಹಾಜಿಯವರ ಮನೆಯಲ್ಲಿ ಕಸಾಯಿ ಖಾದರ್!

ತಲೆತುಂಬ ಹೊದ್ದುಕೊಂಡಿದ್ದ ಸೀರೆಯ ಸೆರಗಿನ ತುದಿಯನ್ನು ಬಾಯಿಯೊಳಗೆ ತುಂಬಿಸುತ್ತಾ, ಎರಡೂ ಕೈಗಳಿಂದ ಬಾಯಿ ಮುಚ್ಚಿಕೊಂಡು ಗೋಡೆಗೊರಗಿ ಹಾಜಿಯವರತ್ತ ನೋಡುತ್ತಿದ್ದ ಹಲೀಮಮ್ಮನವರ ಪಕ್ಕದಲ್ಲಿ ಖಾದರ್ ತಲೆತಗ್ಗಿಸಿ ನಿಂತುಬಿಟ್ಟಿದ್ದ!

ಹಾಜಿಯವರು ಕಿಟಕಿಯ ಸರಳುಗಳನ್ನು ಬಲವಾಗಿ ಹಿಡಿದುಕೊಂಡು ಏದುಸಿರು

ಬಿಡಲಾರಂಭಿಸಿದ್ದರು. ಶಕ್ತಿಹೀನವಾಗಿ ಜೋತುಬೀಳುತ್ತಿದ್ದ ಕಣ್ಣೆವೆಗಳ ನಡುವೆ ಹತಾಶೆಗೊಂಡ ಕಣ್ಣಾಲಿಗಳು ನಿಶ್ಚಲವಾಗಿದ್ದವು.

ಹಲೀಮಮ್ಮನವರತ್ತ ನೋಡಿದ ಅವುಲಿಯಾರವರು ಗಂಭೀರ ಸ್ವರದಲ್ಲಿ ಹೇಳಿದರು, 'ಈವತ್ತು ನಿಮ್ಮ ಹಾಜಾರ್ರು, ಚೆನ್ನಾಗಿ ನಿದ್ರೆ ಮಾಡ್ತಾರೆ ಆಯ್ತಾ...?'

ಮೌಲವಿಯವರ ಮುಖ ಇದ್ದಕ್ಕಿದ್ದಂತೆ ಅರಳಿತು.

ಅದುವರೆಗೂ ತಡೆಹಿಡಿದುಕೊಂಡಿದ್ದ ಅಳುವನ್ನೆಲ್ಲ ಒಮ್ಮೆಲೇ ಹರಿಯಬಿಟ್ಟವರಂತೆ ಹಲೀಮಮ್ಮ, ಬಿಕ್ಕಳಿಕೆಯ ನಡುವೆಯೇ ಹೇಳಿದರು. 'ಎರಡು ದಿನ ಆಯ್ತು, ಅನ್ನ, ನೀರು ಬಿಟ್ಟುಕೊಂಡು ರಾತ್ರಿಯೆಲ್ಲ ತೋಟದಲ್ಲಿ ಕುಳಿತುಕೊಳ್ಳುವಂಥದ್ದು ಇವರಿಗೆ ಏನಾಗಿದೆ? ಮೊನ್ನೆ ಜುಮ್ಮಾ ನಮಾಜು ಮುಗಿಸಿ ಬರುವಾಗಲೇ ಹುಚ್ಚರ ಹಾಗೆ ಆಗಿದ್ದರು. ಯಾರಿಗೆ ಯಾರು ಹಗೆಯೋ ಆ ಅಲ್ಲಾಹುವಿಗೇ ಗೊತ್ತು. ಈ ಹುಡುಗನ ಹತ್ತಿರ ಹೇಳಿದರೆ ಇವನು ಕಣ್ಣೀರು ಹಾಕ್ತಾ ಕೂತುಬಿಟ್ಟ. ನಾವು ಏನಾದ್ರೂ ಹೇಳಲಿಕ್ಕೆ ಹೋದ್ರೆ ಅದು ಹೆಂಗಸರ ಮಾತಾಗಿ ಬಿಡುತ್ತದೆ'.

ಅವುಲಿಯಾರವರು ಖಾದರ್‌ನತ್ತ ತಿರುಗಿ ಕಣ್ಣುಗಳಲ್ಲೇ ಏನನ್ನೋ ಸೂಚನೆಯಿತ್ತರು. ಅವುಲಿಯಾರವರ ಅಪ್ಪಣೆಗೇ ಕಾದು ನಿಂತಿದ್ದವನಂತೆ ಖಾದರ್ ಸರಸರನೆ ಹಾಜಿಯವರ ಬಳಿಗೆ ಹೋಗಿ, ಅವರ ಕಾಲು ಮುಟ್ಟಿ, 'ನಾನು ನಿಮಗಿಂತ ಸಣ್ಣವ, ನಿಮ್ಮ ಬಗ್ಗೆ ಈ ಹಿಂದೆ ನಾನು ಏನು ಹೇಳಿದ್ದರೂ ಮಾಫ್ ಮಾಡಬೇಕು' ಎಂದವನೇ ಮಿಂಚಿನಂತೆ ಮುಖಮಂಟಪದ ಬಾಗಿಲು ತೂರಿ ಮಾಯವಾಗಿಬಿಟ್ಟ!

ಹಾಜಿಯವರು ಮುಜುಗರದ ಮರವಾಗಿದ್ದರು.

ಮತ್ತೊಮ್ಮೆ ಬಿಕ್ಕಳಿಸಿದ ಹಲೀಮಮ್ಮ ಹೇಳಿದರು, 'ಈ ಮನೆಗೆ ಬಂದು ಯಾವ ಕಾಲವೋ ಆಗಿ ಹೋಯ್ತು. ಸೌಖ್ಯ ಉಂಟು ಅಂತ ಆದ್ರೆ ಇವರು ಒಂದು ಹೊತ್ತಿನ ನಮಾಜು ತಪ್ಪಿಸಿದ್ದನ್ನು ನಾನು ನೋಡಲಿಲ್ಲ. ಆದರೆ ಮೊನ್ನೆಯಿಂದ ಒಂದು ನಮಾಜು ಕೂಡಾ ಮಾಡಲಿಲ್ಲ. ಅಂದರೆ ನನಗೆ ಹೆದರಿಕೆಯಾಗಬೇಕಾ ಬೇಡ್ವಾ?'

'ಯಾವ ಮುಖ ಇಟ್ಟುಕೊಂಡು ನಮಾಜು ಮಾಡಬೇಕಿತ್ತು ನಾನು?' ಮುಖಮಂಟಪವನ್ನೇ ನಡುಗಿಸಿದ ಹಾಜಿಯವರ ಪ್ರಶ್ನೆಯಲ್ಲಿ ವಿಷಾದವಿರಲಿಲ್ಲ. ಬದಲಿಗೆ ರೋಷವಿತ್ತು. ಮುಖ ಗಂಟಿಕ್ಕಿಕೊಂಡೇ ಪ್ರಶ್ನಿಸಿದ್ದರು, 'ಯಾವ ನಾಲಗೆಯಲ್ಲಿ ಅಲ್ಲಾಹುವನ್ನು ಬೇಡುವುದು? ಅದು ಕೊಡು, ಇದು ಕೊಡು ಅಂತ? ನನಗೊತ್ತಿಲ್ವಾ, ಯಾರತ್ರ ಏನು ಕೇಳಬೇಕು, ಯಾವಾಗ ಕೇಳಬೇಕು ಅಂತ?'



'ಅಂ!' ಅವುಲಿಯಾರವರ ಬಾಯಿಂದ ಹೊರಬಿದ್ದ ಧ್ವನಿಗೆ ಗಾಬರಿಗೊಂಡ ಮೌಲವಿಯವರು ಅವುಲಿಯಾರವರನ್ನು ನೋಡತೊಡಗಿದರು. ಅವುಲಿಯಾರವರ ಹುಬ್ಬು ಮೇಲೇರಿತ್ತು. ತೆರೆದ ಕಣ್ಣುಗಳಲ್ಲಿ ಸಂಭ್ರಮ, ಅಚ್ಚರಿಗಳು ತುಂಬಿ ತುಳುಕುತ್ತಿದ್ದವು. ಮಾತಿಗಾಗಿ ತಡವರಿಸುತ್ತಿದ್ದಂತೆ ಕೆಳತುಟಿಯನ್ನು ಬಲವಾಗಿ ಕಡಿದ ಅವುಲಿಯಾರವರು ಹಾಜಿಯವರನ್ನು ಹೊಸದಾಗಿ ನೋಡುವವರಂತೆ ಕಣ್ತುಂಬ ದಿಟ್ಟಿಸಿ, 'ಯಾ ಸಿದ್ದೀಕ್!' ಎಂದು ಉದ್ಗರಿಸುತ್ತಾ ಎರಡೂ ಕೈಗಳನ್ನು ಬಾಯಿಗಡ್ಡ ಇಟ್ಟುಕೊಂಡರು.

ಜವುಳಿ ಹಾಜಿಯವರು ಹಾಗೆಯೇ ನಿಂತಿದ್ದರು, ಮಿನಾರಿನಂತೆ.

---

ಇಬಾದತ್ = ಉಪಾಸನೆ
ಅವುಲಿಯಾ = ಅವಧೂತ
ಕರಾಮತ್ = ಪವಾಡ
ಉಲೇಮಾ = ವಿದ್ವಾಂಸ
ಇಬ್ಲೀಸ್ = ಪಿಶಾಚಿ
ಸಿದ್ದೀಕ್ = ಕಠೋರ ಸತ್ಯವಾದಿ, ಸತ್ಯನಿಷ್ಠುರ
ಮಿನಾರು = ಗೋಪುರ

# ಆಕಾಶಕ್ಕೆ ನೀಲಿ ಪರದೆ

ತಿಂಗಳೊಂದರ ಹಿಂದೆ ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಅಡ್ಮಿಟ್ ಆಗಿದ್ದ ಗೆಳೆಯನೊಬ್ಬನನ್ನು ನೋಡಲು ಹೋಗಿದ್ದ ನನಗೆ, ಅಲ್ಲಿನ ನರ್ಸ್ ಒಬ್ಬರ ಪರಿಚಯವಾಯಿತು. ಸುಮಾರು ಐವತ್ತರ ಗಡಿ ಸಮೀಪಿಸುತ್ತಿದ್ದ ಗೋಧಿ ಬಣ್ಣದ ಆಕೆಯ ದೊಡ್ಡ ಮುಖದಲ್ಲಿ ವಿಶೇಷವಾದ ಬೆಳಕೊಂದನ್ನು ನಾನು ಕಂಡಿದ್ದೆ. ಪ್ರತಿಯೊಂದು ಪದವನ್ನೂ ತೂಗಿ ನೋಡಿ ಮಾತನಾಡುವ ಆಕೆಯ ಗಂಭೀರವಾದ ನಡವಳಿಕೆ ಎಂಥವರಲ್ಲೂ ಗೌರವದ ಭಾವನೆಯನ್ನು ಹುಟ್ಟಿಸಬಲ್ಲದು. ಗೆಳೆಯ ಮಲಗಿದ್ದ ಮಂಚದ ಪಕ್ಕದಲ್ಲಿ ಆಕೆ ನಿಂತಿರುವಷ್ಟು ಹೊತ್ತು ನನಗೆ ಕುಳಿತುಕೊಂಡು ಮಾತು ಮುಂದುವರಿಸಲು ಸಾಧ್ಯವಾಗಿರಲಿಲ್ಲ. ಆಕೆ ಕೊನೆಗೆ ಕೈ ಬೀಸಿ ನಗುತ್ತಾ ಕೋಣೆಯಿಂದ ಹೊರಟು ಹೋದಾಗ ನಾನು ನಿಜವಾಗಿಯೂ ಭಕ್ತಿಯಿಂದ ಕೈ ಮುಗಿದು ನಿಂತುಬಿಟ್ಟಿದ್ದೆ. ಅಂತಹ ತೇಜಸ್ಸು ಆಕೆಯದು.

ಮೋಟಾರು ಸೈಕಲು ಅಪಘಾತವೊಂದರಲ್ಲಿ ಕಾಲು ಮೂಳೆ ಮುರಿಸಿಕೊಂಡು ಮಲಗಿದ್ದ ನನ್ನ ಗೆಳೆಯನಿಗೂ ಆಕೆಯ ಬಗ್ಗೆ ವಿಶೇಷ ಗೌರವವಿತ್ತು. ಆತ ಆಕೆಯ ಗುಣಗಾನ ಮಾಡಿದ್ದು ಅಸಹಜವೆಂದೇನೂ ನನಗೆ ಅನ್ನಿಸಲಿಲ್ಲ. ಆಕೆ ಸ್ಪೆಶಲ್ ರೂಮಿನ ಬಾಗಿಲು ತೆರೆದು ಒಳಗೆ ಬರುವ ಕ್ರಮ, ಮಾತುಗಳಲ್ಲಿ ಸೂಸುತ್ತಿದ್ದ ಪ್ರೀತಿ, ಆಡುವ ಸಾಂತ್ವನದ ಮಾತುಗಳು, ಎಲ್ಲಕ್ಕಿಂತ ಹೆಚ್ಚಾಗಿ ಆಕೆಯ ಅದ್ಭುತ (ಗೆಳೆಯನೇ ಬಳಸಿದ್ದ ಪದ) ಮುಖ, ಎಲ್ಲವನ್ನೂ ಆತ ಹೊಗಳಿದ್ದೇ ಹೊಗಳಿದ್ದು.

ಮರುದಿನ ನಾನು ಆಸ್ಪತ್ರೆಗೆ ಹೋಗಲು ಗೆಳೆಯನ ಅನಾರೋಗ್ಯ ಬರಿಯ ನೆವ



ಮಾತ್ರ. ನನಗೆ ಆ ನರ್ಸನ್ನು ಕಂಡು ಮಾತಾಡಬೇಕು ಅನ್ನಿಸಿತು; ಆದರೆ ಆಕೆ ಅಂದು ಆಸ್ಪತ್ರೆಗೇ ಬಂದಿದ್ದಿರಲಿಲ್ಲ. ಆಕೆಯ ಹೆಸರು ಮಾತ್ರ ಗೊತ್ತಾಯಿತು.

ಮತ್ತೆರಡು ದಿನ ಬಿಟ್ಟು ಹೋಗಿದ್ದಾಗ, 'ಲಿಫ್ಟ್ ಬಳಿಯೇ ಎದುರಾದ ಆಕೆ ನನ್ನನ್ನು ಕಮಡವರೇ ಕಣ್ಣರಳಿಸಿಕೊಂಡು ನನ್ನ ಬಳಿ ಬಂದು, 'ನೀವು ನೆನ್ನೆ ನನ್ನನ್ನು ಕೇಳಿಕೊಂಡು ಬಂದಿರಂತೆ?' ಎಂದು ಏಕಾಯೇಕಿ ಪ್ರಶ್ನಿಸಿದಾಗ ಒಂದು ಕ್ಷಣ ಗಾಬರಿ ಯೆನ್ನಿಸಿದರೂ, ತಕ್ಷಣ ಸಾವರಿಸಿಕೊಂಡು ಸಂಕೋಚ ಬಿಟ್ಟು 'ಹೌದು, ನಿಮ್ಮನ್ನು ಕಂಡಾಗ ಯಾಕೋ ನಿಮ್ಮ ಜೊತೆ ಬಹಳ ಮಾತನಾಡಬೇಕು ಅನ್ನಿಸಿತ್ತು. ಅದಕ್ಕಾಗಿ ಬಂದಿದ್ದೆ' ಎಂದುಬಿಟ್ಟೆ. ನನ್ನ ಮಾತಿನ ಧಾಟಿ ಆಕೆಗೂ ಇಷ್ಟವಾದಂತಿತ್ತು. ಮುಖ ತುಂಬಾ ನಗು ಚೆಲ್ಲಿದ ಆಕೆ; 'ಹೌದಾ! ಹಾಗಾದರೆ ನನಗೂ ನಿಮ್ಮ ಜತೆ ಬಹಳ ಮಾತ ನಾಡುವುದು ಉಂಟು' ಎಂದರು. ನಾನು ನನಗರಿವಿಲ್ಲದೇ ಕೈಜೋಡಿಸಿ 'ಥ್ಯಾಂಕ್ಸ್' ಎಂದುಬಿಟ್ಟಿದ್ದೆ. ನನ್ನ ಮುಖದಲ್ಲಿ ಸಂಕೋಚದ ಗೆರೆಗಳನ್ನು ಗಮನಿಸಿದ ಆಕೆ ನನ್ನ ಭುಜ ತಟ್ಟುತ್ತಾ 'ನನಗೆ ನೀವು ತುಂಬಾ ಇಷ್ಟವಾದಿರಿ' ಎಂದಾಗ ನಾನು ಮತ್ತಷ್ಟು ಮುದುಡಿದೆ. ಆಕೆಯ ಜತೆ ಹತ್ತು ಹೆಜ್ಜೆ ಬದಲಿಸುವಷ್ಟರಲ್ಲಿ ಆಕೆಯ ಹುಟ್ಟೂರು 'ಮುತ್ತುಪ್ಪಾಡಿ' ಎಂಬುದನ್ನು ಕೇಳಿ ನಾನು ಅಚ್ಚರಿಯಿಂದ ನಿಂತು ಬಿಟ್ಟಿದ್ದೆ. ಆಕೆಗೆ ನನ್ನ ಅನಿರೀಕ್ಷಿತ ವರ್ತನೆ ಕುತೂಹಲ ಹುಟ್ಟಿಸಿದ್ದಿರಬಹುದು. 'ಯಾಕೆ ಮುತ್ತುಪ್ಪಾಡಿ ನಿಮಗೆ ಗೊತ್ತುಂಟಾ?' ಎಂದು ಪ್ರಶ್ನಿಸಿದಾಗ ನಾನು ಉತ್ಸಾಹದಿಂದ 'ಅದು ನನ್ನ ಊರು' ಎಂದಿದ್ದೆ. ಈಗ ಅಚ್ಚರಿಪಡುವ ಸರದಿ ಆಕೆಯದ್ದಾಗಿತ್ತು. ಒಂದು ಕ್ಷಣ ನನ್ನನ್ನೇ ದಿಟ್ಟಿಸಿದ ಆಕೆ ಹೇಳಿದರು, 'ಹಾಗಾದರೆ ನಾವೀಗ ಬಂಧುಗಳು ಅಲ್ವಾ?' ಆಕೆಯ ಕಣ್ಣು ಗಳಲ್ಲಿ ಸಂತಸದ ಹೊಳಪು ಎದ್ದು ಕಾಣುತ್ತಿತ್ತು.

ಅಂದು ಆಕೆಯ ಜತೆ ಹೆಚ್ಚು ಮಾತನಾಡುವುದಾಗಲಿಲ್ಲ. ವಾರ್ಡಿಗೆ ತಲುಪು ತ್ತಿದ್ದಂತೆಯೇ ಡಾಕ್ಟರರೊಬ್ಬರು ಅವರನ್ನು ಕರೆದುಕೊಂಡು ಹೋಗಿದ್ದರು. ಸುಮಾರು ಮೂವತ್ತು ವರ್ಷಗಳಿಂದ ಮುತ್ತುಪ್ಪಾಡಿಗೆ ಕಾಲಿಟ್ಟಿರದಿದ್ದ ಆಕೆಗೆ ನನ್ನಲ್ಲಿ ವಿಚಾರಿಸಿ ತಿಳಿಯಬೇಕಾದ ಸಂಗತಿಗಳು ಬಹಳವಿದ್ದಂತಿತ್ತು. ನನಗೂ ಆಕೆಯ ಬಗ್ಗೆ ನೂರಾರು ಪ್ರಶ್ನೆಗಳು ಸಾಲುಗಟ್ಟಿ ನಾಲಗೆ ತುದಿಯಲ್ಲಿ ನಿಂತಿದ್ದವು. ಮುಖ್ಯವಾಗಿ ಆಕೆ ತನ್ನ ಮನೆಯಿತ್ತು ಎಂದು ಹೇಳಿದ್ದ ಜಾಗದಲ್ಲಿ ಈಗೊಂದು ಸಿನಿಮಾ ಥಿಯೇಟರನ್ನು ಗುರುತಿಸಲು ನನಗೆ ಸಾಧ್ಯವಾಯಿತೇ ಹೊರತು ಆಕೆ ಹೇಳಿದ್ದ 'ಸರಸ್ವತೀ ಪುಸ್ತಕ ಭಂಡಾರ'ವನ್ನಲ್ಲ. ನನ್ನ ಎಲಿಮೆಂಟರಿ ಶಾಲಾ ದಿನಗಳಲ್ಲಿ ಅಂತಹ ಹೆಸರನ್ನೇ ಕೇಳಿದ ನೆನಪು ನನಗಿಲ್ಲ.

ಮತ್ತೆರಡು ದಿನ ನನಗೆ ಆಸ್ಪತ್ರೆಯ ಕಡೆಗೆ ಹೋಗಲು ಸಾಧ್ಯವಾಗಲಿಲ್ಲ. ಮೂರನೆಯ ದಿನ ಹೋಗಿದ್ದಾಗ ನನ್ನನ್ನೇ ಕಾದು ಕುಳಿತಂತಿದ್ದ ಆಕೆ, ನಾನು ಕೋಣೆಯೊಳಗೆ ಕಾಲಿಡುತ್ತಿರುವಂತೆಯೇ, 'ನೀವು ಎರಡು ದಿನ ಬರಲೇ ಇಲ್ಲ, ಹಾಗೆ ಮಾಡುವುದಾ?' ಎಂದು ಪ್ರಶ್ನಿಸಿದಾಗ ನಾನು ಅವಾಕ್ಕಾಗಿ ನಿಂತುಬಿಟ್ಟೆ. ನನ್ನ ಗಲಿಬಿಲಿಯನ್ನು ಗಮನಿಸಿದ ಆಕೆ ನನ್ನನ್ನು ಸಮಾಧಾನಪಡಿಸಲೆಂಬಂತೆ ಹತ್ತಿರ ಬಂದು ನನ್ನ ಕೈಯಲ್ಲಿದ್ದ ಕಾದಂಬರಿಯೊಂದನ್ನು ಸೆಳೆದುಕೊಂಡು ಹಿಂದೆ ಮುಂದೆ ತಿರುಗಿಸಿ ನೋಡುತ್ತಾ 'ನೀವು ತುಂಬಾ ಪುಸ್ತಕ ಓದುತ್ತೀರಾ?' ಎಂದು ಪ್ರಶ್ನಿಸಿದರು. ನಾನು ಸಾವರಿಸಿಕೊಳ್ಳುತ್ತಾ 'ಹಾಗೇನೂ ಇಲ್ಲ' ಎಂದೆ.

ಮಂಚದಲ್ಲಿ ಕಾಲು ಕಟ್ಟಿಕೊಂಡು ಮಲಗಿದ್ದ ಗೆಳೆಯ ಏನನ್ನೋ ಹೇಳಲು ತುಟಿ ಅಲುಗಿಸುತ್ತಿದ್ದಂತೆಯೇ ನಾನು ಕಣ್ಣಲ್ಲೇ ಮೌನವಾಗಿರಲು ಸೂಚಿಸಿದೆ. ಆಕೆ ಗಮನಿಸಿದಂತೆ ಕಾಣಲಿಲ್ಲ. ಪುಸ್ತಕವನ್ನು ನನ್ನತ್ತ ಚಾಚುತ್ತಾ ಇದ್ದಕ್ಕಿದ್ದಂತೆ ಶಕ್ತಿಯನ್ನೆಲ್ಲಾ ಕಳೆದುಕೊಂಡವರಂತೆ, 'ನಾನು ಹೇಳುವ ಕತೆಯನ್ನು ನೀವು ಕೇಳಿದರೆ ಮತ್ಯಾವ ಕತೆ ಪುಸ್ತಕವೂ ನಿಮಗೆ ಹಿಡಿಸಲಿಕ್ಕಿಲ್ಲ' ಎಂದರು. ಆಕೆಯ ನಿರುತ್ಸಾಹವನ್ನು ಗಮನಿಸಿದ ನಾನು ಆ ದಿನ ಹೆಚ್ಚೇನೂ ಪ್ರಶ್ನಿಸಲಿಲ್ಲವಾದರೂ 'ನೀವು ಕತೆ ಹೇಳಿದರೆ ನಾನು ಕೇಳಲು ತಯಾರು' ಎಂದಿದ್ದೆ.

ಮುಂದಿನ ನಾಲ್ಕೈದು ದಿನಗಳಲ್ಲಿ ಅವರು ನನ್ನನ್ನು ತಮ್ಮ ಸ್ಟಾಫ್ ರೂಮಿನಲ್ಲಿ ಕುಳ್ಳಿರಿಸಿಕೊಂಡು ಮಾತನಾಡಿದ್ದೇ ಮಾತನಾಡಿದ್ದು. ಆಗೊಮ್ಮೆ ಈಗೊಮ್ಮೆ ಬಂದು ಹೋಗುತ್ತಿದ್ದ ಇತರ ನರ್ಸುಗಳನ್ನು ಒಂದೆರಡು ಮಾತುಗಳಲ್ಲೇ ಸಾಗಹಾಕುತ್ತಿದ್ದ ಆಕೆ, ನಾನು ಹುಟ್ಟಿದ ದಿನಗಳ ಹಿಂದೆ – ಮುಂದೆ ಮುತ್ತುಪ್ಪಾಡಿಯಲ್ಲಿ ನಡೆದ ಒಂದು ಕತೆಯನ್ನು ಹೇಳಿದರು. ಕೆಲವೊಮ್ಮೆ ಅತಿ ಉತ್ಸಾಹದಿಂದ ಕೆಲವೊಮ್ಮೆ ಏನನ್ನೋ ಜ್ಞಾಪಿಸಿಕೊಳ್ಳುತ್ತಿರುವವರಂತೆ ಅನುಮಾನದಿಂದ ಹೇಳುತ್ತಿದ್ದುದನ್ನೆಲ್ಲಾ ಆಸಕ್ತಿಯಿಟ್ಟು ಕೇಳುತ್ತಿದ್ದ ನಾನು, ಆ ಬಳಿಕ ಕಚೇರಿಗೆ ಎರಡು ದಿನ ರಜೆ ಹಾಕಿ, ಆಕೆಯ ಮಾತುಗಳನ್ನೇ ಹಿಂದೆ ಮುಂದೆ ಜೋಡಿಸಿಕೊಂಡು ಈ ರೀತಿ ಬರೆದಿಡಲು ಯತ್ನಿಸಿದೆ...

## ಗುಜ್ಜಾನೆ ಮರಿಯ ಗರ್ಲ್ ಫ್ರೆಂಡ್

ಕುಂಞಿಪಾತುಮ್ಮಳ ಮುದ್ದಿನ ಮಗಳು 'ಮುಬೀನಾ'ಳಿಗೆ ಬೇಬಿಯೆಂದು ಹೆಸರಿಟ್ಟ ಮುಕುಂದಣ್ಣನಿಗೂ ಕುಂಞಿಪಾತುಮ್ಮಳದ್ದೆ ವಯಸ್ಸು. ಹತ್ತು ವರ್ಷಗಳಷ್ಟು ಕೆಳಗೆ ಅಣ್ಣ–ಅತ್ತಿಗೆಯ ಜತೆ ರಾಜರಸ್ತೆಯ ಪಕ್ಕದಲ್ಲಿದ್ದ ದೊಡ್ಡ ಮಾಳಿಗೆ ಮನೆಯ ಒಂದು ಭಾಗದಲ್ಲಿ ಪುಸ್ತಕ ವ್ಯಾಪಾರಕ್ಕೆ ನೆರವಾಗುತ್ತಿದ್ದ ಹುಡುಗ ಮುಕುಂದ, ಮುಂದೆ ತನ್ನ ಅಣ್ಣ, ಹೆಂಡತಿಯ ಜತೆಗೆ ಗೋವಾಕ್ಕೆ ಹೋದ ಬಳಿಕ ತಾನೊಬ್ಬನೇ ವ್ಯಾಪಾರ ಮುಂದುವರಿಸಿದವನು. ವಯಸ್ಸಿಗಿಂತ ನಾಲ್ಕು ಪಟ್ಟು ಹೆಚ್ಚು ಮಾಂಸವನ್ನು ತನ್ನ ಐದಡಿ ದೇಹದ ತುಂಬಾ ಹೊತ್ತುಕೊಂಡಿದ್ದ ಆತ ಅಂಗಡಿಯ ಮಂಚದ ಮೇಲೆ ಕೂತರೆ ಬಿಳಿಯಾನೆ ಮರಿಯಂತೆಯೇ ಕಾಣಿಸುತ್ತಿದ್ದ. ಆರನೆ ತರಗತಿ ತನಕ ಹಾಗೂ ಹೀಗೂ ಶಾಲೆಯ ಮೆಟ್ಟಿಲು ಹತ್ತಿದ್ದ ಆತನನ್ನು ಕ್ಲಾಸಿನ ಹುಡುಗರೆಲ್ಲರೂ 'ಗುಜ್ಜಾನೆಮರಿ' ಯೆಂದು ಗೇಲಿ ಮಾಡುತ್ತಿದ್ದುದರಿಂದಲೇ ಆತ ಶಾಲೆಯನ್ನು ಬಿಟ್ಟ ಎಂದು ಅವನ ಕ್ಲಾಸ್‌ಮೇಟ್ ಆಗಿದ್ದವರು ಹೇಳುತ್ತಾರೆಂಬುದು ಬೇಬಿಗೂ ಗೊತ್ತಾಗಿತ್ತು.

ಮುಬೀನಾಳ ತಾಯಿ ಕುಂಞಿಪಾತುಮ್ಮ ಹೇಳುವುದನ್ನೇ ನಂಬುವುದಾದರೆ, ಮುಕುಂದಣ್ಣ ಎಂದಾದರೂ ಯಾರೊಡನೆಯಾದರೂ ನಕ್ಕು ಮಾತನಾಡಿದ್ದರೆ ಅದು ಆಕೆಯ ಮುದ್ದಿನ ಮಗಳು ಮುಬೀನಾಳೊಂದಿಗೆ ಮಾತ್ರ. ಮುಕುಂದಣ್ಣನ ಸರಸ್ವತಿ ಪುಸ್ತಕ ಭಂಡಾರದ ಎದುರಿನ ರಾಜರಸ್ತೆಯ ಮತ್ತೊಂದು ಬದಿಯ ಪುಟ್ಟ ಗುಡಿಸಲಿನೊಳಗೆ ಬೀಡಿ ನೂಲಿನೊಂದಿಗೇ ಬದುಕು ಮುಂದುವರಿಸಿದ್ದ ಕುಂಞಿಪಾತುಮ್ಮಳ ಗಂಡನ ನೆನಪು ಮುಬೀನಾಳಿಗೆ ಇರುವುದು ಸಾಧ್ಯವಿಲ್ಲ. ಎರಡು ವರ್ಷದ ಪುಟ್ಟ ಹುಡುಗಿಯನ್ನು ಬಳುವಳಿಯಾಗಿ ಕೊಟ್ಟು, ದುಡ್ಡು ಮಾಡಿಬರಲು ಬೊಂಬಾಯಿಗೆ ಹೋಗಿದ್ದ ಗಂಡ ಮರಳಿ ಬಂದದ್ದಿಲ್ಲ. ರಾಜರಸ್ತೆಯೆದುರಿನ ಅಂಗಡಿಯಲ್ಲಿ ಬೆಳ್ಳಗೆ – ಬೆಳ್ಳಗೆ ಚಲಿಸುವ ದೊಡ್ಡ ದೇಹದ ಮುಕುಂದಣ್ಣ, ಪುಟ್ಟ ಮಗುವಿಗೆ ಅದೇಕೋ ಬಹಳ ಇಷ್ಟವಾಗಿ ಬಿಟ್ಟಿದ್ದ. ಅಂಗಡಿಗೆ ಬರುವ ಗಿರಾಕಿಗಳ ಜತೆಗೂ ಹೆಚ್ಚು ಮಾತನಾಡದ ಮುಕುಂದಣ್ಣನಿಗೆ ಸ್ನೇಹಿತರೆಂಬವರಾರೂ ಇಲ್ಲದ್ದರಿಂದಲೋ ಏನೋ–ಆತನಿಗೂ ಮುಬೀನಾಳಲ್ಲಿ ಆಸಕ್ತಿ ಮೂಡಿತ್ತು.

ಮುಕುಂದಣ್ಣನ ವಿರೋಧಿಗಳಾರಾದರೂ ಇದ್ದರೆ, ಅವರು ಕೂಡಾ ಆತನ ಸಜ್ಜನಿಕೆಯ ಬಗ್ಗೆ 'ಅಪಸ್ವರ' ಹೇಳಲಾರರು. ಆದ್ದರಿಂದಲೇ ಆತ ಪುಟ್ಟ ಮುಬೀನಾಳನ್ನು ಕರೆದುಕೊಂಡು ಹೋಗಲು ರಸ್ತೆ ದಾಟಿ ಕುಂಞಿಪಾತುಮ್ಮಳ ಮನೆಗೆ ಹೋಗಿಬರುತ್ತಿರುವುದನ್ನು ಯಾರೂ ಅನುಮಾನದಿಂದ ನೋಡಲು ಸಾಧ್ಯವಿರಲಿಲ್ಲ. ಹದಿನಾರು ಹದಿನೇಳಕ್ಕೆ ಮುಬೀನಾಳಿಗೆ ತಾಯಿಯಾಗಿದ್ದ ಕುಂಞಿಪಾತುಮ್ಮಳ ಬಸಳೆ ಬಳ್ಳಿಯಂತಹ ಶರೀರದಲ್ಲಿ, ಗುಡಾಣದಂತಹ ಮುಕುಂದಣ್ಣನಿಗೆ ಸರಿದೂಗುವ ಯಾವ ಆಕರ್ಷಕ ಸಂಗತಿಗಳೂ ಇದ್ದಿರಲಿಲ್ಲ. ಕಲ್ಲುಗುಂಡಿನಂತಹ ಗಂಡನಿಗೆ ನಾಲ್ಕು ವರ್ಷಗಳ ಕಾಲ ತನ್ನೆಲ್ಲವನ್ನೂ ಬಡಿಸಿ ಉಣ್ಣಿಸಿದ್ದ ಆಕೆಗೂ ಮುಕುಂದಣ್ಣ ಯಾವ ಆಸೆಯನ್ನೂ ಹುಟ್ಟಿಸಲಿಲ್ಲ. ಆದ್ದರಿಂದಲೇ ಕುಂಞಿಪಾತುಮ್ಮಳಿಗೆ ಮುಕುಂದಣ್ಣ, ಮುಬೀನಾಳ ಸಲುವಾಗಿ ನೀಡುತ್ತಿದ್ದ

ಯಾವುದೇ ಸಹಾಯಗಳನ್ನು ಸ್ವೀಕರಿಸಲು ಸಂಕೋಚವಾಗಲಿಲ್ಲ. ನಾಲ್ಕು ಮಂದಿಗಾಗುವಷ್ಟು ಅಡುಗೆ ಮಾಡಿ ತಾನೊಬ್ಬನೇ ಮುಕ್ಕುತ್ತಿದ್ದ ಮುಕುಂದಣ್ಣನ ಉರುಟು ಹೊಟ್ಟೆಯ ಮೇಲೆ ಜಾರು ಬಂಡೆಯಾಟವಾಡುತ್ತಾ ಹಗಲಿಡೀ ಅಂಗಡಿಯಲ್ಲಿ ಆಡುವ ಮುಬೀನಾ ಹೆಚ್ಚುಕಮ್ಮಿ ಆತನ ಮನೆಮಗುವೇ ಆಗಿದ್ದಳು.

ಆದರೆ, ಅಚ್ಚರಿಯ ಸಂಗತಿಯೆಂದರೆ ನಾಲ್ಕು ವರ್ಷಗಳಷ್ಟು ಕಾಲ ತನ್ನ ಮಡಿಲಲ್ಲೇ ಬೆಳೆದ ಮಗುವನ್ನು ಹೊಸ ಬಟ್ಟೆ ತೊಡಿಸಿ ಶಾಲೆಗೆ ಸೇರಿಸಲು ಅತಿ ಉತ್ಸಾಹದಿಂದ ಕರೆದುಕೊಂಡು ಹೋಗಿದ್ದ ಮುಕುಂದಣ್ಣನಿಗೆ ಶಾಲೆಯಲ್ಲಿ ಮಗುವಿನ ಹೆಸರೇ ಮರೆತು ಹೋದದ್ದು, ಗಲಿಬಿಲಿಗೊಂಡಿದ್ದ ಮುಕುಂದಣ್ಣ ಸ್ವತಃ ಮಗುವೇ ತನ್ನ ಹೆಸರನ್ನು ಸ್ಪಷ್ಟವಾಗಿ 'ಮುಬೀನಾ' ಎಂದು ಹೇಳುತ್ತಿದ್ದರೂ, ಗಮನಿಸದೆ 'ಬೇಬಿ ಎಂದೇ ನಾವೆಲ್ಲ ಕರೆಯುವುದು. ಹಾಗೆಯೇ ಬರೆದುಕೊಳ್ಳಿ' ಎಂದಿದ್ದ.

ಹೆಡ್‌ಮಾಸ್ತರರಿಗೆ ಮುಕುಂದಣ್ಣ ಅಪರಿಚಿತನೇನೂ ಅಲ್ಲ. ಮುಕುಂದಣ್ಣನ ತೊಡೆಯನ್ನು ತಬ್ಬಿಕೊಂಡು ಭಯದಿಂದ ಕಣ್ಣು ಪಿಳಿ ಪಿಳಿ ಮಾಡುತ್ತಿದ್ದ ಪುಟ್ಟ ಹುಡುಗಿ ಆತನ ಆಶ್ರಯದಲ್ಲೇ ಬೆಳೆಯುತ್ತಿರುವುದು ಅವರಿಗೂ ಗೊತ್ತಿರದೇ ಇಲ್ಲ. ಎಂದೂ ತನ್ನೊಡನೆ ಮಾತುಕತೆಯಾಡಿರದಿದ್ದ ಮುಕುಂದಣ್ಣನ ಈ ಬೇಡಿಕೆಯನ್ನು ಪೂರೈಸುವ ಮೂಲಕ ಮಾಸ್ತರರೂ ಧನ್ಯಭಾವ ಹೊಂದಿದ್ದಿರಬಹುದು.

ಮುಂದಿನ ಹನ್ನೆರಡು ವರ್ಷಗಳ ಇತಿಹಾಸ ತೀರಾ ಮಾಮೂಲಿಯಾದದ್ದು. ನಾಲ್ಕು ವರ್ಷಗಳ ಕೆಳಗೆ ಕುಂಞಿಪಾತುಮ್ಮಳಿಗೆ ಉಬ್ಬಸ ಅಂಟಿಕೊಂಡು ಆಕೆ ಮತ್ತಷ್ಟು ತೆಳ್ಳಗಾದದ್ದು ಮತ್ತು ಮುಕುಂದಣ್ಣ ತನ್ನ ದೇಹದ ಮಾಂಸವನ್ನು ಮತ್ತೊಂದು ಮೂವತ್ತು ಕೇಜಿ ಹೆಚ್ಚು ಮಾಡಿಕೊಂಡದ್ದು ಬಿಟ್ಟರೆ ಮತ್ತೆಲ್ಲ ಮಾಮೂಲಿ. ಬೇಬಿಯ ಬಗ್ಗೆ ಹೇಳುವುದಾದರೆ ಮುತ್ತುಪ್ಪಾಡಿಯ ಪಡ್ಡೆ ಹುಡುಗರ ಎದೆಗಳಲ್ಲಿ ಮಿಡಿನಾಗರವನ್ನು ಹರಿದಾಡಿಸಿದ ಆಕೆಯ ಬಗ್ಗೆ ಅವರಾಡುತ್ತಿದ್ದ ಮಾತನ್ನೇ ಉದಾಹರಿಸಬೇಕಾದೀತು: ಆಕೆ ಅವರೆಲ್ಲರಿಗೂ 'ಮುತ್ತುಪ್ಪಾಡಿಯ ವೈಜಯಂತಿಮಾಲಾ'.

ಆದರೂ, ಪಿ.ಯು.ಸಿ. ಓದುತ್ತಿದ್ದಾಗ ಕಾಲೇಜಿನ 'ಬ್ಯೂಟಿಕ್ವೀನ್' ಎಂದೇ ಹುಡುಗರಿಂದ 'ಸಿಳ್ಳು' ಹಾಕಿಸಿಕೊಂಡಿದ್ದ ಆಕೆಯನ್ನು ಗೆಳತಿಯರು ಛೇಡಿಸುತ್ತಿದ್ದದ್ದು 'ಗುಜ್ಜಾನೆ ಮರಿಯ ಗರ್ಲ್‌ಫ್ರೆಂಡ್' ಎಂದೇ. ಯಾರೊಂದಿಗೂ ನಿಷ್ಠುರವಾಗಿ ವರ್ತಿಸದಿದ್ದ ಹದಿನೇಳರ ದಂತದ ಗೊಂಬೆಯಂತಹ ಹುಡುಗಿ ತನ್ನನ್ನು ಗೆಳತಿಯರು ಮುಕುಂದಣ್ಣನ ಗರ್ಲ್‌ಫ್ರೆಂಡ್ ಎಂದು ತಮಾಷೆ ಮಾಡಿದಾಗಲೂ ಎದುರು ವಾದಿಸುತ್ತಿರಲಿಲ್ಲ. ತಾನು ದೇವರೆಂದೇ ಪೂಜಿಸುತ್ತಿರುವ ಮುಕುಂದಣ್ಣನಂತಹ ಮನುಷ್ಯನ ಸಜ್ಜನಿಕೆಯ ಬಗ್ಗೆ



ಹುಚ್ಚುಚ್ಚಾಗಿ ಹರಟೆ ಹೊಡೆಯುವ ಗೆಳತಿಯರ ಜತೆಗೆ ಸಮರ್ಥಿಸಬೇಕಾದ ಅಗತ್ಯವೇ ಅವಳಿಗೆ ಕಾಣಿಸುತ್ತಿರಲಿಲ್ಲ. ಒಮ್ಮೆ ಈ ವಿಷಯವನ್ನು ಮುಕುಂದಣ್ಣನಿಗೇ ತಿಳಿಸಿದಾಗ ಆತ ತೀರಾ ಸಹಜವಾಗಿ ನಗುತ್ತಾ 'ಈಗ ಅಲ್ಲ ಎಂದವರು ಯಾರು?' ಎಂದು ಬಿಟ್ಟಿದ್ದ.

## ಸರಸ್ವತೀ ಭಂಡಾರದ ಸೇಲ್ಸ್ ಗರ್ಲ್

ಎರಡು ವರ್ಷಗಳ ಕೆಳಗೆ, ಎಸ್.ಎಸ್.ಎಲ್.ಸಿ. ಫಲಿತಾಂಶ ಪ್ರಕಟವಾದ ಹತ್ತು ದಿನಗಳಲ್ಲಿ ಬೇಬಿಯ ಜೀವದ ಗೆಳತಿ ಸುಮತಿಯಿಂದ ಆಕೆಗೆ ಬಂದಿದ್ದ ಪತ್ರದ ಒಟ್ಟು ಆತಂಕ ಇಷ್ಟು. 'ನೀನು ಪಿ.ಯು.ಸಿ.ಗೆ ಸೇರಲು ಕಾಲೇಜಿಗೆ ಬರುವುದಿಲ್ಲವೆಂಬುದನ್ನು ನಾನು ನಂಬುವುದಿಲ್ಲ. ನಿನ್ನ ಅಮ್ಮ ಬೇಡವೆನ್ನುವುದಾದರೂ ಯಾಕೆ? ನಿನ್ನ ಎಲ್ಲ ಖರ್ಚುಗಳನ್ನು ನಿನ್ನ ಬಾಯ್‌ಫ್ರೆಂಡು ಕೊಡುತ್ತಿರುವಾಗ ನಿನ್ನ ತಾಯಿಯ ಗಲಾಟೆ ಯಾಕೆ? ಆಸ್ಪತ್ರೆಯಿಂದ ನಿನ್ನ ತಾಯಿ ಗುಣವಾಗಿ ಬಂದ ಬಳಿಕ ಹೇಗಾದರೂ ಮಾಡಿ ಅವರನ್ನು ಒಪ್ಪಿಸು. ನಿನ್ನ ಮುಕುಂದಣ್ಣನಂತಹ ಅಣ್ಣ ನನಗೆಲ್ಲಾದರೂ ಸಿಕ್ಕಿರುತ್ತಿದ್ದರೆ ನಾನು ಫಿಯೆಟ್ ಕಾರಿನಲ್ಲೇ ಕಾಲೇಜಿಗೆ ಬರುತ್ತಿದ್ದೆ' ಇತ್ಯಾದಿ.

ಕುಂಞಿಪಾತುಮ್ಮ ತನ್ನ ಮಗಳ ಶಾಲಾ ಬದುಕಿಗೆ ಏಕಾಯೇಕಿ ಕಡಿವಾಣ ಹಾಕಲು ನಿರ್ಧರಿಸಿದುದಕ್ಕೆ ಬಲವಾದ ಕಾರಣವೂ ಇತ್ತು. ಪಕ್ಕದ ಗಲ್ಲಿಯಲ್ಲಿನ ಗಣೇಶ ಬೀಡಿ ಕಂಟ್ರಾಕ್ಟರ್ ಮ್ಯೊದು ಬ್ಯಾರಿಯವರ ಹೆಂಡತಿ ತಮ್ಮ ದೇಹ ತುಂಬಾ ಬಂಗಾರದ ಆಭರಣಗಳನ್ನು ತೂಗಿಸಿಕೊಂಡು ಗಿಲಿಗಿಲಿಸುತ್ತಾ ನಡು ಮಧ್ಯಾಹ್ನದ ಹೊತ್ತಲ್ಲಿ ಕುಂಞಿಪಾತುಮ್ಮಳ ಗುಡಿಸಲೊಳಗೆ ಬಂದಿದ್ದವಳು, ತನ್ನ ಮಗ ಸುಲೇಮಾನ್‌ನಿಗೆ ಮುಬೀನಾಳನ್ನು ತಂದುಕೊಳ್ಳುವ ಬಗ್ಗೆ ಏಕಾಯೇಕಿ ಪ್ರಸ್ತಾಪ ಮಾಡಿದಾಗ ಕುಂಞಿಪಾತುಮ್ಮಳ ಎದೆ ತುಂಬಿದ್ದ ಕಫವೆಲ್ಲವೂ ಕರಗಿ ನೀರಾಗಿ ಹೋದದ್ದು ತೀರಾ ಸಹಜ. ಅದುವರೆಗೆ ಹೇಗಿದ್ದೀಯಾ ಎಂದೂ ವಿಚಾರಿಸಿರದಿದ್ದ ಈ ಬಂಗಾರದ ಹೆಂಗಸು ತನ್ನನ್ನು ತಮಾಷೆ ಮಾಡುತ್ತಿದ್ದಾಳೇನೋ ಎಂಬ ಅನುಮಾನವೂ ಒಂದು ಕ್ಷಣ ಇಣಿಕಿ ಹಾಕಿದರೂ ತನ್ನ ಮಗಳ ಸೌಂದರ್ಯದ ಬಗ್ಗೆ ಇದ್ದ ಭರವಸೆಯಿಂದ ಮಗಳು ದೊಡ್ಡ ಮನೆಯೊಂದರ ಸೊಸೆಯಾಗುತ್ತಿರುವುದನ್ನೇ ಕಲ್ಪಿಸಿಕೊಳ್ಳುತ್ತಾ ಸೆಟೆದು ಕುಳಿತಳು. 'ನಾನೀಗ ನನ್ನಲ್ಲಿ ಏನು ಉಂಟು ಅಂತ ಮದುವೆ ಮಾಡಿಸಲು ಹೊರಡಲಿ? ನೀವೇ ಹೇಳಿ. ನಾನು ಬರುವಾಗ ತಂದಿದ್ದ ಕಿವಿಯ ಅಲಿಖತ್ ಬಿಟ್ಟು ನನ್ನಲ್ಲಿ ಬೇರೆ ಬಂಗಾರ ಏನುಂಟು? ನಿಮ್ಮಲ್ಲಿ ನಾನು ಏನು ಅಡಗಿಸುವುದು?' ಎಂದು ನಕ್ಕು ವ್ಯವಹಾರದ ಮಾತು ಆಡಿದ್ದಳು.

ಹೈಸ್ಕೂಲು ರಸ್ತೆಯ ಬದಿಯಲ್ಲಿ ಮೆಟ್ಟಿನಂಗಡಿಯಿಟ್ಟು ಹಗಲಿಡೀ ದಾರಿ ಹೋಕರ ಕಾಲುಗಳನ್ನೇ ಲೆಕ್ಕ ಮಾಡುತ್ತಿದ್ದ ಕೋಲು ದೇಹದ ಸುಲೇಮಾನ್ ತನ್ನ ಅಂಗಡಿಯೆದುರು ದಿನಕ್ಕೆ ನಾಲ್ಕು ಬಾರಿ ಪುಸ್ತಕಗಳನ್ನು ಎದೆಗೊತ್ತಿಕೊಂಡು ತಲೆಯೆತ್ತಿ ಹೆಜ್ಜೆ ಹಾಕುತ್ತಿದ್ದ 'ವೈಜಯಂತಿಮಾಲಾ'ಳ ಬಿಳಿ ಕಾಲುಗಳ ನುಣುಪಿನಲ್ಲಿ ಜಾರಿ ಬೀಳತೊಡಗಿದವನು ತನ್ನ ತಾಯಿಗೆ ದುಂಬಾಲು ಬಿದ್ದಿದ್ದ. ದೊಡ್ಡ ಮಗನೊಬ್ಬ ಪರ ಊರಲ್ಲಿ ಅದ್ಯಾವುದೋ ಬಿಕನಾಸಿಯೊಬ್ಬಳನ್ನು ಕಟ್ಟಿಕೊಂಡು ತಾಯಿಗೆ ಮುಖವನ್ನೇ ತೋರಿಸದೇ ಇದ್ದುದರಿಂದ, ಉಳಿದಿದ್ದ ಎರಡನೆಯವನಾದರೂ ತಮ್ಮ ಕಣ್ಣೆದುರು ಸುಖವಾಗಿ ಇರಲಿ ಎಂದು ಆಸೆಪಟ್ಟಿದ್ದ ತಾಯಿ, ಗಂಡನಿಂದ ಅನುಮತಿ ಪಡೆದು ಎಲ್ಲವನ್ನೂ ನಿರ್ಧರಿಸಿಕೊಂಡೇ ಬಂದಂತಿತ್ತು.

'ನಿನ್ನಲ್ಲೇನು ನಾವು ದುಡ್ಡು ಕೇಳಿದೆವಾ? ಅಥವಾ ನೂರು ಪವನು ಹಾಕು ಎಂದೆವಾ? ನಮಗೆ ಹುಡುಗಿ ಇಷ್ಟವಾಗಿದೆ. ಈ ತಿಂಗಳಲ್ಲಿ ಮದುವೆ ಮುಗಿಸಬೇಕು ಅಂತ ಇದ್ದೇವೆ' ಎಂದ ಹೆಂಗಸು ಬಾಗಿಲ ಸಂದಿಯಿಂದಲೇ ಎದುರಿನ 'ಸರಸ್ವತೀ ಪುಸ್ತಕ ಭಂಡಾರ'ದಲ್ಲಿ ಮುಕುಂದಣ್ಣನ ಜತೆ ಏನೋ ಮಾತನಾಡಿ ನಗುತ್ತಿದ್ದ ಮುಬೀನಾಳನ್ನು ಗಮನಿಸಿ, 'ಇನ್ನು ಸ್ವಲ್ಪ ನಿನ್ನ ಮಗಳಿಗೆ ಬುದ್ಧಿ ಹೇಳು. ಮನೆಯಲ್ಲೇ ಒಂದು ನಾಲ್ಕು ದಿವಸ ಕುಳಿತುಕೊಳ್ಳಲಿ. ನನಗೇನೋ ಗೊತ್ತುಂಟು. ಅವಳು ಮುಕುಂದಣ್ಣನಿಗೆ ಮಗಳಿದ್ದ ಹಾಗೆ ಅಂತ. ಆದರೂ ಜನರ ಬಾಯಿಗೆ ಬೀಗ ಹಾಕಲು ನಮಗೆ ಸಾಧ್ಯ ಉಂಟಾ?' ಎಂದಿದ್ದಳು.

ತನ್ನ ಮಗಳ ಮದುವೆ ಬಗ್ಗೆ ಕನಸು ಕಾಣಲೂ ಹಿಂದೆ ಮುಂದೆ ನೋಡುತ್ತಿದ್ದ ಕುಂಞಿಪಾತುಮ್ಮ ಅದೇ ದಿನ ಸಂಜೆಯೇ ಮಗಳಿಗೆ ತೀರ್ಪು ನೀಡಿದ್ದಳು. 'ನಾಳೆಯಿಂದ ನೀನು ಹೊರಗೆ ಹೊಗಬೇಡ. ಮೋಳೆ, ನೀನೀಗ ಚಿಕ್ಕಮಗುವಲ್ಲ'.

'ನಾನು ಕಾಲೇಜಿಗೆ ಹೋಗುವುದು ಬೇಡವಾ ಉಮ್ಮಾ? ನೀವು ಹೇಳುತ್ತಿರು ವುದಾದರೂ ಏನು? ನನಗೆ ಓದುವುದು ಇನ್ನೂ ಬಹಳ ವರ್ಷವುಂಟು. ಎಸ್ಸೆಸ್ಸೆಲ್ಸಿ ಆದಕೂಡಲೇ ಮದುವೆಯಾದರೆ ಯಾರಾದರೂ ನಕ್ಕಾರು'. ಮುಬೀನಾಳಿಗೆ ತಾಯಿಯ ಮಾತು ತಮಾಷೆಯಂತೆ ಭಾಸವಾಗಿತ್ತು.

ಕುಂಞಿಪಾತುಮ್ಮ ಅವಾಕ್ಕಾಗಿ ಮಗಳನ್ನು ಅಳೆಯುವಂತೆ ನೋಡಿದಳು. ಉದ್ವೇಗ ಹೆಚ್ಚಾದಂತೆ ಎದೆಯೊಳಗೆ ಕಫ ಉರುಳತೊಡಗಿ ಉಸಿರು ಕಷ್ಟವಾಯಿತು.

ತಾಯಿಯ ಮೌನವನ್ನು ಸಹಿಸದ ಮುಬೀನಾ ಮತ್ತೆ ಮುಂದುವರಿಸಿದಳು. 'ಹದಿನಾರು ವರ್ಷಕ್ಕೇ ಮದುವೆಯಾದರೆ ಹಿಡಿದು ಜೈಲಿಗೆ ಹಾಕುತ್ತಾರಂತೆ ಗೊತ್ತುಂಟಾ? ಕಾನೂನಿನಂತೆ ಹದಿನೆಂಟು ವರ್ಷವಾಗುವ ಮೊದಲು ಮದುವೆಯಾಗುವುದು ತಪ್ಪು ಗೊತ್ತುಂಟಾ...? ಹಾಂ'.



ಕುಂಞಿಪಾತುಮ್ಮ ಕುಳಿತಲ್ಲೇ ನಡುಗತೊಡಗಿದ್ದಳು. ತನ್ನ ಮುದ್ದಿನ ಮಗಳು ತನ್ನ ತಾಯಿಗೆ ಕಾನೂನು ಹೇಳುತ್ತಿದ್ದಾಳೆ! ಮುಕುಂದಣ್ಣನ ಸಹವಾಸ ಇಷ್ಟು ದೂರಕ್ಕೆ ತಂದೀತೆಂದು ಆಕೆ ನಿರೀಕ್ಷಿಸಿರಲಿಲ್ಲ. ಬೆಳೆದ ಹುಡುಗಿಯನ್ನು ಮನೆಯೊಳಗೆ ಕೂಡಿ ಹಾಕಿದ್ದು ತನ್ನದೇ ತಪ್ಪು. ಶಾಲೆಗೆ ಹೋಗುವಾಗ ಬುರ್ಖಾ ಹಾಕಿಕೋ ಎಂದು ಹೇಳು ವುದಾದರೂ ಹೇಗೆ? ಎಂದು ಸುಮ್ಮನಿದ್ದದ್ದೇ ತಪ್ಪಾಯಿತು.

ಮುಕುಂದಣ್ಣ ದೇವರಂತಹ ಮನುಷ್ಯ ಎಂಬುದರಲ್ಲಿ ಕುಂಞಿಪಾತುಮ್ಮಳಿಗೂ ಅನುಮಾನವಿಲ್ಲ. ಅವನ ಸಹಾಯವಿಲ್ಲದೇ ಹೋಗಿದ್ದರೆ ಇದಿಷ್ಟು ವರ್ಷ ಬದುಕಲು ಕಷ್ಟವಾಗ್ತಿತ್ತು. ಆದರೆ ಈಗೇನು ಮಾಡುವುದು? ತನಗಿಂತ ಎತ್ತರಕ್ಕೆ ಬೆಳದಿಂಗಳ ಚೆಂಡಿನಂತೆ ಬೆಳೆದು ತನ್ನೆದುರು ಸವಾಲಿನಂತೆ ನಿಂತಿರುವ ಮಗಳನ್ನು ನೋಡುತ್ತಾ ನೋಡುತ್ತಾ ಕುಂಞಿಪಾತುಮ್ಮಳ ಕಣ್ಣುಗಳಲ್ಲಿ ಗೊಂದಲಗಳೆಲ್ಲವೂ ನೀರಾಗಿ ಮಡು ಗಟ್ಟಿದ್ದವು. ಇದ್ದಕ್ಕಿದ್ದಂತೆ ಏದುಬ್ಬಸ ಜಾಸ್ತಿಯಾದಂತಾಗಿ ಎದೆ ಹಿಡಿದುಕೊಂಡು ಅಲ್ಲೇ ಗೋಡೆಗೊರಗಿದವಳಿಗೆ ಕಣ್ಣು ಕತ್ತಲಿಟ್ಟಿತ್ತು.

ಎಚ್ಚರವಾದಾಗ ಆಕೆ ಆಸ್ಪತ್ರೆಯ ಬಿಳಿ ಮಂಚದ ಮೇಲಿದ್ದಳು. ಎದುರಿಗೆ ಮುಕುಂದಣ್ಣ: ಪಕ್ಕದಲ್ಲಿ ಮುಬೀನಾ. ಕುಂಞಿಪಾತುಮ್ಮ ಅಸಹಾಯಕತೆಯಿಂದ ನಿಟ್ಟುಸಿರಿಟ್ಟಳು.

ಎರಡು ದಿನ ಬಿಟ್ಟು ಮಧ್ಯಾಹ್ನದ ಹೊತ್ತು ಆಸ್ಪತ್ರೆಗೆ ಬಂದಿದ್ದ ಮುಕುಂದಣ್ಣ ಹೇಳಿದ್ದು ಹೀಗೆ: 'ನೀವು ಯಾವುದಕ್ಕೂ ಯೋಚನೆ ಮಾಡಬೇಡಿ. ಬೇಬಿಯನ್ನು ಚೆನ್ನಾಗಿ ಓದಿಸಿ, ಒಳ್ಳೆಯ ಗಂಡು ನೋಡಿ ಮದುವೆ ಮಾಡಿಸುವ ಜವಾಬ್ದಾರಿ ನನ್ನದು. ಆಯ್ತಲ್ಲಾ? ಈಗವಳಿಗೆ ಇನ್ನೂ ಹದಿನಾರು ತುಂಬಿಲ್ಲ. ಇಷ್ಟು ಬೇಗ ಮದುವೆ ಮಾಡಿಸಿದರೆ ನಿಮ್ಮ ಹಾಗೆ ಉಬ್ಬಸದ ರೋಗಿಯಾಗುತ್ತಾಳೆ, ಅಷ್ಟೆ. ಒಳ್ಳೆಯ ಟಿಪ್‌ಟಾಪ್ ಹುಡುಗನನ್ನು ಹುಡುಕಿ ತರುತ್ತೇನೆ. ಎಷ್ಟು ಕೊಡಬೇಕಂತೆ ವರದಕ್ಷಿಣೆ? ಎಷ್ಟು ಹಾಕ ಬೇಕಂತೆ ಬಂಗಾರ? ನನ್ನ ಮನೆ-ಅಂಗಡಿ, ಎಲ್ಲ ಮಾರಿಯಾದರೂ ಬೇಬಿಯ ಮದುವೆ ಮಾಡಿಸುತ್ತೇನೆ. ಆಯ್ತಲ್ಲಾ? ನನಗಾದರೂ ಬೇರೆ ಯಾರಿದ್ದಾರೆ?'

ಕುಂಞಿಪಾತುಮ್ಮ ನಾಲ್ಕೇ ದಿನದಲ್ಲಿ ಉಸಿರು ಸರಾಗ ಪಡಿಸಿಕೊಂಡು ಮನೆಗೆ ಮರಳಿದಳು. ಬೇಬಿ ಪಿ.ಯು.ಸಿ.ಗೆ ಸೇರಿದಳು. ಸುಲೇಮಾನ್‌ನನ್ನು ಅವನಪ್ಪ ವೀಸಾ

ಮಾಡಿಸಿ ದುಬ್ಯಾಗೆ ಸಾಗಹಾಕಿದ. ಇವರೆಲ್ಲರನ್ನೂ ಹೊತ್ತ ಭೂಮಿ ಸೂರ್ಯನಿಗೆ ಎರಡು ಪ್ರದಕ್ಷಿಣೆ ಹಾಕಿದ.

ಪಿ.ಯು.ಸಿ. ಫಲಿತಾಂಶ ಪ್ರಕಟವಾದ ಒಂದು ತಿಂಗಳ ಬಳಿಕ ಬೇಬಿ ತನ್ನ ಗೆಳತಿ ಸುಮತಿಗೆ ಬರೆದ ಆರು ಪುಟಗಳ ಪತ್ರದ ಮುಖ್ಯಾಂಶಗಳು ಇಷ್ಟು: ನಿನ್ನ ಪತ್ರ ಸಿಕ್ಕಿತು. ಅಮ್ಮ ಈಗ ಮೊದಲಿನಂತಿಲ್ಲ. ಅವಳು ಬಹಳ ಇಳಿದು ಹೋಗಿದ್ದಾಳೆ. ಹೆಚ್ಚು ಮಾತು ಕೂಡಾ ಆಡುವುದಿಲ್ಲ. ಮುಕುಂದಣ್ಣನಿಗೂ ನನ್ನನ್ನು ಕಾಲೇಜಿಗೆ ಓದಿಸಲಿಕ್ಕಾಗಿ ಮಂಗಳೂರಿಗೆ ಕಳುಹಿಸಲು ಅಷ್ಟೊಂದು ಇಷ್ಟವಿದ್ದಂತಿಲ್ಲ. ಅಲ್ಲಿ ಹಾಸ್ಟೆಲಿನಲ್ಲಿ ನಾನು ಉಳಿದರೆ ಇಲ್ಲಿ ತಾಯಿಯನ್ನು ಯಾರು ನೋಡಿಕೊಳ್ಳುವುದು? ನೀನು ನರ್ಸ್ ಟ್ರೇನಿಂಗ್‌ಗೆ ಸೇರುವುದನ್ನು ಎಣಿಸಿದಾಗ ನನಗೂ ಆಸೆಯಾಗ್ತದೆ. ಅಮ್ಮನ ಆರೋಗ್ಯ ಸರಿಯಾಗಿರುತ್ತಿದ್ದರೆ ನಾನೂ ನಿನ್ನ ಜತೆ ಬಂದು ಬಿಡುತ್ತಿದ್ದೆ. ಮುಕುಂದಣ್ಣನನ್ನು ಹೇಗಾದರೂ ಒಪ್ಪಿಸ ಬಹುದಿತ್ತು. ನನಗೆ ಆ ಅದೃಷ್ಟವಿಲ್ಲ. ಮುಕುಂದಣ್ಣ ನನಗೆ ಹೊಸ ಚೂಡಿದಾರ್ ತಂದಿದ್ದಾರೆ.

## ಮುಕುಂದಣ್ಣ ಬೇರೆ ಜಾತಿ

'ಕಾಲೇಜ್ ಡೇ'ಗೆ ತೋರಣ ಕಟ್ಟಲು ಬಣ್ಣ ಕಾಗದ ಕತ್ತರಿಸಿ ಗುಡ್ಡೆ ಹಾಕುತ್ತಿದ್ದಾಗ ಅಕಸ್ಮಾತ್ ಎಂಬಂತೆ ಗಂಟೆಗೆಂಟು ಬಾರಿ ಮೊಣಕೈಯನ್ನು ಎದೆಗೇ ಒತ್ತಲು ಪ್ರಯತ್ನಿಸುತ್ತಿದ್ದ ಕ್ಲಾಸ್‌ಮೇಟ್ ಶರತ್‌ರಾಜ. 'ಚೆನ್ನಾಗಿ ಓದಬೇಕು ಬೇಬಿ ನೀನು' ಎನ್ನುತ್ತಲೇ ಕನಿಷ್ಟ ವಾರದಲ್ಲಿ ಮೂರು ಬಾರಿಯಾದರೂ ಬೆನ್ನು ಸವರುತ್ತಿದ್ದ ಸೈನ್ಸ್ ಲೆಕ್ಚರರ್ ಶಂಕರ ಭಟ್, ಹಿಂದೆಲ್ಲ ಬೀಡಿ ಬ್ರಾಂಚ್‌ಗೆ ಹೋಗುತ್ತಿದ್ದಾಗ ಕುಂಡೆಗೇ ಚಿವುಟುತ್ತಿದ್ದ – ಫೋರ್‌ಮನ್ ಖಾದರಣ್ಣ, ತನ್ನನ್ನೇ ಮದುವೆಯಾಗಬೇಕೆಂದು ಹಠ ಹಿಡಿದು ಸೋತು ದುಬಾಯಿಗೆ ಹೋದ 'ಲಕ್ಕೀ ಸ್ಟಾರ್ ಫುಟ್‌ವೇರ್'ನ ಸುಲೇಮಾನ್ ಇವರಲ್ಲಿ ಯಾರ ಜತೆಗಿಟ್ಟು ಹೋಲಿಸಿದರೂ ಬೇರೆಯೇ ಆಗಿ ನಿಲ್ಲುತ್ತಿದ್ದ ಮುಕುಂದಣ್ಣ ಈಗೀಗ ಬೇಬಿಗೊಂದು ಒಗಟಿನ ಮೊಟ್ಟೆಯೇ ಆಗ ಕಾಣಿಸಲಾರಂಭಿಸಿದ್ದ. ತಾನೇ ಇಟ್ಟಿದ್ದ ಬೇಬಿ ಎಂಬ ಹೆಸರನ್ನು ಕೂಡಾ ಮುಕುಂದಣ್ಣ ಒಮ್ಮೆಯಾದರೂ ಪ್ರೀತಿಯಿಂದ ಉಚ್ಚರಿಸಿ ಕರೆದದ್ದು ಬೇಬಿಗೆ ನೆನಪಿಲ್ಲ.

ತಂದೆಯೊಬ್ಬನ ವಾತ್ಸಲ್ಯ, ಹಿರಿಯಣ್ಣನೊಬ್ಬನ ಅಧಿಕಾರದ ಗತ್ತು ಎರಡನ್ನೂ ತೋರಿಸುತ್ತಿದ್ದ ಮುಕುಂದಣ್ಣ, ಒಂದೇ ಒಂದು ದಿನವಾದರೂ ತನ್ನನ್ನು 'ತಂಗಿ'ಯೆಂದು ಸಂಬೋಧಿಸಿದವನೂ ಅಲ್ಲ. ಒಂದು ದಿನ ಅವನೇ ಬಾಯಿಬಿಟ್ಟು ಹೇಳಿದ್ದಿರಲಿಲ್ಲವೆ?



'ನೋಡು ಬೇಬಿ, ನೀನೇನೂ ನನ್ನ ಮಗಳೂ ಅಲ್ಲ, ಒಡ ಹುಟ್ಟಿದ ತಂಗಿಯೂ ಅಲ್ಲ. ನಮ್ಮ ಬಗ್ಗೆ ಊರೊಳಗೆ ನೂರು ತರಹ ಆಡುತ್ತಿದ್ದಾರೆಂಬುದು ನಿನ್ನ ತಾಯಿಗೆ ದೊಡ್ಡ ಚಿಂತೆಯಾಗಿದೆ. ನನ್ನದೇನು ತಪ್ಪುಂಟು? ಅವರನ್ನು ಸರಿ ಮಾಡಿಕೊಳ್ಳುವ ಕೆಲಸ ನಿನ್ನದು. ಆ ನಿನ್ನ ಬೀಡಿ ಕಂಟ್ರಾಕ್ಟರ್ ನಿನಗೊಂದೂ ಗಂಡು ಬಾರದ ಹಾಗೆ ಮಾಡಿ ಬಿಟ್ಟಿದ್ದಾನೆ. ನನ್ನ ಮಾತನ್ನು ಯಾರೂ ಗಣನೆ ಮಾಡುವುದೇ ಇಲ್ಲ. ಇವರೆಲ್ಲ ಹೀಗೆಯೇ ಯಾಕೆ ಮಾಡುತ್ತಿದ್ದಾರೆ?'

ಯಾರನ್ನೂ ಸ್ನೇಹಿತರೆಂದು ಹಚ್ಚಿಕೊಳ್ಳದಿದ್ದ ಮುಕುಂದಣ್ಣ ಬೇಬಿಗೆ ಗಂಡು ಹುಡುಕಲು ಪ್ರಯತ್ನಿಸಲಾರಂಭಿಸಿದ್ದು ಮುತ್ತುಪ್ಪಾಡಿಯ ಎಲ್ಲರಿಗೂ ತಮಾಷೆಯ ಸಂಗತಿಯಾಗಿಬಿಟ್ಟಿತ್ತು. 'ಜಾತಿಯಲ್ಲ, ನೆಂಟರಲ್ಲ, ಹಾಗಿರುವಾಗ ಆ ಹುಡುಗಿಯ ಹೆಸರಲ್ಲಿ ಇವನು ಮನೆ – ಅಂಗಡಿ ಬರೆದುಕೊಡುತ್ತೇನೆಂದು ಹೇಳಬೇಕಾದರೆ, ಅದರೊಳಗೆ ಏನೋ ಮಸಲತ್ತು ಉಂಟು ಅಂತಲೇ ಲೆಕ್ಕ'. ಇದು ಮುತ್ತುಪ್ಪಾಡಿಯ ಬಂಧುಗಳ ಒಮ್ಮತದ ಅಭಿಪ್ರಾಯ.

ಮೈದು ಬ್ಯಾರಿಯವರಂತೂ ಮತ್ತೆರಡು ಹೆಜ್ಜೆ ಮುಂದಕ್ಕೇ ಹೋಗಿದ್ದರು. 'ಆ ಕಾಟು ಕೊಂಕಣಿ ಎಷ್ಟು ಒಳ್ಳೆಯವನೂ ಆಗಿದ್ದಿರಬಹುದು. ಉಪ್ಪು–ಖಾರ ತಿನ್ನುತ್ತಾನೋ ಇಲ್ವೋ? ನಮ್ಮ ಸುಲೇಮಾನ್ ಎರಡು ವರ್ಷದ ಹಿಂದೆ ಆ ಹುಡುಗಿಯ ಬಣ್ಣ ಕಂಡೇ ಹುಚ್ಚಾಗಿ ಬಿಟ್ಟಿದ್ದ. ನನ್ನನ್ನು ಅಲ್ಲಾಹುವೇ ಬಚಾವು ಮಾಡಿಬಿಟ್ಟ. ಅವನನ್ನು ನಾನು ದುಬಾಯಿಗೆ ಪಾರ್ಸೆಲ್ ಮಾಡದೇ ಇದ್ದಿದ್ದರೆ ರಸ್ತೆಯಲ್ಲೇ ಅವಳ ಮೈಮೇಲೆ ಹಾರಲು ಹೊರಟಿದ್ದ. ಒಂದಂತೂ ನಾನೂ ಒಪ್ಪುವೆ; ಯಾರೂ ಹಾರುವ ಹಾಗೆ ಇದ್ದಾಳೆ ಅವಳು. ಹಾಗಿರುವಾಗ ಈ ಮುಕುಂದಣ್ಣ ಹಾರದೇ ಇದ್ದಾನಾ?... ಹ್ಹ...ಹ್ಹ'.

ಆದರೆ ಬೇಬಿಗೆ ಮುಕುಂದಣ್ಣನ ವರ್ತನೆಗಳೆಲ್ಲವೂ ವಿಚಿತ್ರವಾಗಿ ಕಾಣಿಸಲಾರಂಭಿಸಿವೆ. ಅವಳೇನೂ ಬೆರಳು ಚೀಪುವ ಮಗುವಲ್ಲ. ಪಿಯುಸಿಯ ಮೊದಲ ವರ್ಷದಲ್ಲಿದ್ದಾಗ ನಡೆದ ಘಟನೆಯೊಂದನ್ನು ನೆನಪಿಸಿಕೊಂಡರೆ ಈಗಲೂ ಅವಳಿಗೆ ಮೈ 'ಜುಂ' ಎನ್ನುತ್ತದೆ. ಮುಕುಂದಣ್ಣನ ಮುಖ ನೋಡಲೂ ನಾಚಿಕೆಯೆನ್ನಿಸುತ್ತದೆ. ಘಟನೆ ಬಹಳ ಸಣ್ಣದು. ಕ್ಲಾಸಿನ ಹುಡುಗಿಯೊಬ್ಬಳು ಅದೆಲ್ಲಿಯಿಂದಲೋ ಸಂಪಾದಿಸಿ ತಂದಿದ್ದ ವಿದೇಶಿ ಪೋಲಿ ಚಿತ್ರಗಳ ಪುಸ್ತಕವೊಂದನ್ನು ಹಿಂದಿ ನೋಟ್ಸಿನೊಳಗಿಟ್ಟಿದ್ದು – ಅದು ಹೇಗೋ ಮುಕುಂದಣ್ಣನ ಕೈಗೆ ಸಿಕ್ಕಿತ್ತು. ಸಂಜೆ ಶಾಲೆ ಮುಗಿಸಿಕೊಂಡು ಮರಳಿದ ಬೇಬಿ ಅಂಗಡಿಯೊಳಕ್ಕೆ ಬರುತ್ತಿರುವಂತೆಯೇ ಪುಸ್ತಕವನ್ನು ಆಕೆಯತ್ತ ಚಾಚಿದ ಮುಕುಂದಣ್ಣ 'ಇಂಥದ್ದೆಲ್ಲ ಈಗ ಶಾಲೆಯಲ್ಲೂ ಸಿಗುತ್ತದೆಯಾ?' ಎಂದಷ್ಟೇ ಪ್ರಶ್ನಿಸಿ ಅದನ್ನು ಅವಳೆದುರು

ಮೇಜಿನ ಮೇಲೆ ಎಸೆದುಬಿಟ್ಟಿದ್ದ. ನಡುರಸ್ತೆಯಲ್ಲಿ ಬೆತ್ತಲೆಯಾಗಿಸಿ ಚಪ್ಪಲಿಯಿಂದ ಹೊಡೆಸಿಕೊಂಡರೂ ಅವಳಿಗೆ ಅಷ್ಟೊಂದು ಸಂಕೋಚವಾಗುತ್ತಿರಲಿಲ್ಲ. ಆತನ ಎದುರು ನಿಲ್ಲಲಾರದೆ – ಅಲ್ಲಿಂದ ಎದ್ದು ಬೇರೆ ಕಡೆಗೆ ಹೋಗಲಾರದೆ, ಗಲಿಬಿಲಿಯಿಂದ ಕಲ್ಲಿನಂತೆ ನಿಂತುಬಿಟ್ಟದ್ದ ಆಕೆಯನ್ನು ದುರುಗುಟ್ಟಿ ನೋಡಿದ್ದ ಮುಕುಂದಣ್ಣ ಹೇಳಿದ್ದು: 'ಇನ್ನು ಮುಂದೆ ಅಂಥದ್ದು ಏನಿದ್ದರೂ ಶಾಲೆಯಲ್ಲೇ ಓದಿ ಮುಗಿಸಬೇಕು. ಇಲ್ಲಿಗೆ ತರ ಬಾರದು ಗೊತ್ತಾಯ್ತಲ್ಲಾ? ಬೇಬಿಗೆ ಮುಂದಿನೊಂದು ತಿಂಗಳು ಮುಕುಂದಣ್ಣನ ಮುಖ ನೋಡಲೂ ಸಂಕೋಚವಾಗುತ್ತಿತ್ತು. ಆದರೆ ಮುಕುಂದಣ್ಣ ಆ ವಿಷಯವನ್ನು ಅಂದಿಗೇ ಮರೆತುಬಿಟ್ಟಿದ್ದ. ಬೇಬಿಗೆ ನಿಜಕ್ಕೂ ಅರ್ಥವಾಗಿರಲಿಲ್ಲ. ದೇವರು ಇದ್ದರೆ ಹೀಗಿದ್ದಿರ ಬಹುದೇ?

ಬೇಬಿಗೊಂದು ಗಂಡು ಹುಡುಕುವುದು ಇಷ್ಟೊಂದು ಪ್ರಯಾಸದ ಕೆಲಸವಾದೀ ತೆಂಬ ಕಲ್ಪನೆಯೂ ಮುಕುಂದಣ್ಣನಿಗಿದ್ದಿರಲಿಲ್ಲ. ಯಾರ ಜತೆಗೂ ಸುಖ ದುಃಖ ವಿಚಾರಿಸಿಯೂ ಅಭ್ಯಾಸವಿರದಿದ್ದ ಮುಕುಂದಣ್ಣನಿಗೆ ಬೇಬಿಯ ಸಲುವಾಗಿ ಹುಡುಗನನ್ನು ವಿಚಾರಿಸಿದ ಕಡೆಗಳಲ್ಲೆಲ್ಲ ನಿರಾಸೆಯೇ ಆಗುತ್ತಿತ್ತು. ತಾನು ಹೋಲ್‌ಸೇಲ್‌ನಲ್ಲಿ ಪುಸ್ತಕ ಕೊಂಡುಕೊಳ್ಳುತ್ತಿದ್ದ ತಾಲ್ಲೂಕು ಕೇಂದ್ರದ ಸೊಸೈಟಿಯ ಗುಮಾಸ್ತನೊಬ್ಬನ ಬಗ್ಗೆ ಮುಕುಂದಣ್ಣನಿಗೆ ಬಹಳ ಆಸೆಯಿತ್ತು. ಆ ಹುಡುಗನೇನೂ ಖಡಾಖಂಡಿತವಾಗಿ ಬೇಡ ವೆಂದೇನೂ ಹೇಳಲಿಲ್ಲ. ಆದರೆ ಆತನ ತಾಯಿಯದ್ದೇ ತಕರಾರು. ಒಂದಕ್ಷರವೂ ಕುರಾನು ಓದದ, ಬುರ್ಕಾ ಹಾಕದ ಹುಡುಗಿಯನ್ನು ಸೊಸೆಯಾಗಿ ಸ್ವೀಕರಿಸಲು ಆಕೆ ತಯಾರಿರಲಿಲ್ಲ.

ಆರು ತಿಂಗಳ ಹುಡುಕಾಟದಲ್ಲೇ ಮುಕುಂದಣ್ಣನಿಗೆ ತನ್ನ ತಾಕತ್ತಿನ ಮಿತಿ ಅರ್ಥ ವಾಗಲಾರಂಭಿಸಿತ್ತು. ಬಹು ದೊಡ್ಡ ಅಪರಾಧ ಮಾಡಿದವನಂತೆ ತನ್ನೊಳಗೇ ಕೊರಗ ಲಾರಂಭಿಸಿದ್ದ. ಮುಕುಂದಣ್ಣ ಅಂಗಡಿ ವ್ಯಾಪಾರವನ್ನೂ ಕಡೆಗಣಿಸತೊಡಗಿದ್ದು ಬೇಬಿಗೂ ಅರಿವಾಗತೊಡಗಿತ್ತು. ಒಂದು ದಿನ ಬೇಬಿಯನ್ನು ಅನುಕಂಪದಿಂದೆಂಬಂತೆ ದಿಟ್ಟಿಸುತ್ತಾ 'ನಾನು ಸೋತುಬಿಟ್ಟೆ ಬೇಬಿ. ಇನ್ನಾರು ತಿಂಗಳು ಹೇಗಾದರೂ ಸುಧಾರಿಸು. ಮುಂದಿನ ವರ್ಷದಿಂದ ನಿನ್ನನ್ನು ಮಂಗಳೂರಿನ ಹಾಸ್ಟೆಲಿನಲ್ಲಿ ಹಾಕುತ್ತೇನೆ. ನೀನು ಕಾಲೇಜಿಗೆ ಸೇರಿಬಿಡು. ನಿನ್ನ ತಾಯಿಯನ್ನು ನಾನು ನೋಡಿಕೊಳ್ಳುತ್ತೇನೆ'.

ತನ್ನ ಮದುವೆಯ ಸಮಸ್ಯೆಯನ್ನು ಮೂರು ವರ್ಷ ಮುಂದೂಡುವ ಪ್ರಯತ್ನವಿದು ಎಂಬುದು ಬೇಬಿಗೂ ಅರ್ಥವಾಗಿತ್ತು. ಆಕೆಯಾದರೂ ಪಾಪ ಏನು ಮಾಡಿಯಾಳು? ಅದೇ ದಿನಗಳಲ್ಲಿ ಬೇಬಿ ಎಲ್ಲವನ್ನೂ ವಿವರಿಸಿ ಸುಮತಿಗೊಂದು ಪತ್ರ ಬರೆದಳು.



ಸುಮತಿಯಿಂದ ಬಂದ ಉತ್ತರ ಬೇಬಿಯ ನಿರೀಕ್ಷೆಯಂತೆಯೇ ಇತ್ತು. ಕೊನೆಯ ಸಾಲುಗಳಂತೂ ಬಲು ನೇರ ಮತ್ತು ಸ್ಪಷ್ಟ : 'ಗಂಡಸರೆಲ್ಲರೂ ಸಾಮಾನ್ಯವಾಗಿ ಒಂದೇ ಜಾತಿ ಬೇಬಿ. ನಾನಿಲ್ಲಿ ದಿನವೂ ಅನುಭವಿಸುತ್ತಿದ್ದೇನೆ. ನಾಳೆ ಸಾಯುವ ರೋಗಿಯೇ ಇರಲಿ – ನಮಗೆ ಬುದ್ಧಿವಾದ ಹೇಳುವ ಡಾಕ್ಟರೇ ಇರಲಿ – ಆತನು ಗಂಡಸು ಹೌದು ಅಂತ ಆದರೆ, ನಮ್ಮ ಮುಖ ನೋಡುವ ಮೊದಲು ಕಣ್ಣಲ್ಲೇ ನಮ್ಮ ರವಕೆ ಕಳಚಿ ಎದೆಯ ಗಾತ್ರವನ್ನು ಅಳೆದುಬಿಟ್ಟಿರುತ್ತಾನೆ. ನೀನು ಬರೆದುದನ್ನು ನೋಡು ವಾಗ ಮುಕುಂದಣ್ಣ ಈ ಜಾತಿಗೆ ಸೇರಿದವನಂತೆ ಕಾಣಿಸುವುದಿಲ್ಲ. ನಿನ್ನ ನಿರ್ಧಾರ ಸರಿಯಾದದ್ದೆ. ಇದಕ್ಕಿಂತ ಒಳ್ಳೆಯದು ನನಗೇನೂ ಹೊಳೆಯುತ್ತಿಲ್ಲ'.

ಮತ್ತೆರಡು ದಿನ ಯೋಚಿಸಿದ ಬೇಬಿ ಸಂಜೆ ಅಂಗಡಿ ಮುಚ್ಚುವ ಮೊದಲು ಕಾಗದದ ತುಂಡೊಂದರಲ್ಲಿ 'ನಾನು ಮುಂದಿನ ವರ್ಷ ಕಾಲೇಜಿಗೆ ಸೇರುವುದಿಲ್ಲ. ಬೇರೆಯವರನ್ನು ಮದುವೆಯಾಗುವುದೂ ಇಲ್ಲ. ಜೀವಮಾನ ಪೂರ್ತಿ ನಿಮ್ಮ ಜತೆಗೇ ಇರುತ್ತೇನೆ' ಎಂದು ಬರೆದು ಮುಕುಂದಣ್ಣನಿಗೆ ಕಾಣಿಸುವಂತೆ ಮೇಜಿನ ಮೇಲಿಟ್ಟು ಮನೆಗೆ ಧಾವಿಸಿದಳು. ಅಮ್ಮ ಆ ರಾತ್ರಿಯಿಡೀ ಭಯಾನಕವಾಗಿ ಕೆಮ್ಮುತ್ತಿದ್ದಳು.

## ಆಕಾಶಕ್ಕೆ ನೀಲಿ ಪರದೆ

ಮುಕುಂದಣ್ಣ ಮಾಡಿದ್ದೇ ಸರಿ – ಎಂದು ಹೇಳಬಲ್ಲ ಹುಡುಗರ ತಂಡವೊಂದು ಇದ್ದಿರುತ್ತಿದ್ದರೆ, ಆತ ಬೇಬಿಯನ್ನು ಮಂಗಳೂರಲ್ಲಿ ರಿಜಿಸ್ಟರ್ಡ್ ಮದುವೆ ಮಾಡಿಕೊಂಡು ತಂದು, ತನ್ನ ಮಾಳಿಗೆ ಮನೆಯಲ್ಲೇ ಇರಿಸಿಕೊಂಡ ಸುದ್ದಿ ಮುತ್ತುಪ್ಪಾಡಿಯನ್ನು ಖಂಡಿತವಾಗಿ ನಾಲ್ಕು ದಿನಗಳ ಕಾಲ ರಣರಂಗವಾಗಿಸಬಹುದಿತ್ತು. ಬೇಬಿಯನ್ನು ಶಾಲೆ ಕಲಿಸುವ ನೆಪದಲ್ಲಿ ಬುರ್ಕಾ ಹಾಕಿಸದೆ ರಸ್ತೆಯಲ್ಲಿ ಮುಕುಂದಣ್ಣ ಮೆರವಣಿಗೆ ಮಾಡಿಸುತ್ತಿದ್ದಾನೆ ಎಂದು ದೂರಿದವರಿಗೆ ಕೂಡಾ, ಆತ ಬೇಬಿಗೊಂದು ಗಂಡು ಹುಡುಕಲು ನಡೆಸಿದ ಪ್ರಯತ್ನದ ಪ್ರಾಮಾಣಿಕತೆಯ ಬಗ್ಗೆ ಎರಡು ಮಾತು ಹೇಳಲು ನಾಲಗೆ ಬರಲಿಕ್ಕಿಲ್ಲ. ಇದೆಲ್ಲಕ್ಕಿಂತ ಹೆಚ್ಚಾಗಿ, ಸರಕಾರೀ ಅಧಿಕಾರಿಗಳ ಎದುರು ದಸ್ಕತು ಹಾಕಿ ಮದುವೆಯಾದವರನ್ನು 'ತಲಾಕ್' ಹೇಳಿಸಿ ಬಿಡುಗಡೆ ಮಾಡಿಸಲು ಸಾಧ್ಯವಾಗುವು ದಿಲ್ಲ ಎಂಬ 'ಲಾ ಪ್ಯಾಂಟನ್ನು' ತಾಲ್ಲೂಕಾಫೀಸಿನ ಕ್ಲಾರ್ಕು ಲತೀಫ ಹೇಳಿದ್ದು ಮುತ್ತುಪ್ಪಾಡಿಯ ಬಿಸಿ ರಕ್ತದ ಹುಡುಗರಿಗೂ ಗಲಿಬಿಲಿಯನ್ನುಂಟುಮಾಡಿತ್ತು. ಮೊನ್ನೆ ಮೊನ್ನೆಯವರೆಗೂ ತಮ್ಮ ಕಣ್ಣೆದುರಲ್ಲೇ ಪುಟು ಪುಟು ಓಡಾಡುತ್ತಿದ್ದ ಹುಡುಗಿ, ನೋಡು ನೋಡುತ್ತಿರುವಂತೆಯೇ ಉರುಟುರುಟಾಗಿ ಬೆಳೆದು 'ಮುತ್ತುಪ್ಪಾಡಿಯ ವೈಜಯಂತಿ ಮಾಲಾ' ಆಗಿ ಬಿಟ್ಟವಳು, ಇದೀಗ ಇದ್ದಕ್ಕಿದ್ದ ಹಾಗೆಯೇ ಕ್ವಿಂಟಾಲು ಚೀಲದಂತಹ

ಮುಕುಂದಣ್ಣನ ಜತೆ ಹಗಲು-ರಾತ್ರಿ ಒಬ್ಬಳೇ ಇರುತ್ತಾಳೆ ಎನ್ನುವ ಯೋಚನೆಯೇ ಕೆಲವು ಯುವಕರ ನಿದ್ರೆಯನ್ನು ಹಾಳು ಮಾಡಿದ್ದಂತೂ ಸತ್ಯ. ಆದರೆ ಎಲ್ಲರೂ ಒಟ್ಟಾಗಿ ಹೋಗಿ ಆತನ ಅಂಗಡಿಯ ಎದುರು ನಿಂತು ಸಾವಿರ ಶಾಪ ಹಾಕಿದರೂ, ಅಂಗಡಿಯ ಮಂಡದ ಮೇಲೆ ನೀರಾನೆಯಂತೆ ಬಿದ್ದುಕೊಂಡಿರುವ ಆತ ಕತ್ತು ಹೊರಳಿಸಿಯೂ ನೋಡಲಾರ ಎಂಬ ಗುಟ್ಟು ಎಲ್ಲರಿಗೂ ಗೊತ್ತಿದ್ದದ್ದೆ. ಒಂದಿಬ್ಬರು ಹೆಂಗಸರು ಕುಂಞಿಪಾತುಮ್ಮಳನ್ನು ಈ ಬಗ್ಗೆ ವಿಚಾರಿಸಿಕೊಂಡು ಬರಲು ಹೋಗಿದ್ದ ರಾದರೂ ಆಕೆಯ ಏದುಬ್ಬಸದ ಯಾತನೆಯನ್ನು ಕಂಡು ಭಯದಿಂದಲೇ ಉಸಿರಡಗಿಸಿ ಕೊಂಡು ಮರಳಿದ್ದರು.

ಬೇಬಿಗೆ ನೆನಪಿರುವ ದಿನಗಳಿಂದಲೂ ಮುಕುಂದಣ್ಣ ರಾತ್ರಿ ಹೊತ್ತು ಮಲಗು ತ್ತಿದ್ದದ್ದು ಮಾಳಿಗೆಯ ಉತ್ತರ ದಿಕ್ಕಿನಲ್ಲಿದ್ದ ಪುಟ್ಟ ಕೋಣೆಯಲ್ಲಿ. ಬೇಬಿಯ ಗುಡಿಸಲಲ್ಲಿ ವಿದ್ಯುತ್ ಸೌಕರ್ಯ ಇಲ್ಲದ್ದರಿಂದ ಆಕೆ ರಾತ್ರಿ ಹೊತ್ತು ಓದಿಕೊಳ್ಳಲು ಮಾಳಿಗೆಯ ದೊಡ್ಡ ಕೋಣೆಯನ್ನೇ ಉಪಯೋಗಿಸುತ್ತಿದ್ದಳು. ಅವಳು ಪಿ.ಯು.ಸಿ ಸೇರಿದ ಬಳಿಕ ಹೊಸ ಮೇಜು – ಕುರ್ಚಿ ಮಾಡಿಸಿದ್ದ ಮುಕುಂದಣ್ಣ ಕೆಂಪು ಬಣ್ಣದ ಚಂದದ ಟೇಬಲ್ ಲ್ಯಾಂಪನ್ನೂ ತಂದಿರಿಸಿದ್ದ. ಪರೀಕ್ಷೆಯ ದಿನಗಳಲ್ಲಿ ಬೇಬಿ ರಾತ್ರಿ ಬಹಳ ಹೊತ್ತುಗಳವರೆಗೂ ಮಾಳಿಗೆಯಲ್ಲೇ ಓದುತ್ತಾ ಕುಳಿತಿರುತ್ತಿದ್ದರೆ, ಮುಕುಂದಣ್ಣ ರಾತ್ರಿ ಒಂಭತ್ತಕ್ಕೇ ಕೋಣೆ ಸೇರಿ ಗೊರಕೆ ಹೊಡೆಯಲಾರಂಭಿಸುತ್ತಿದ್ದ. ಆದರೂ ಮಗಳು ಮಾಳಿಗೆ ಮನೆಯ ದೀಪ ಆರಿಸಿ ಕೆಳಗಿಳಿದು ಹೊರಗಿನಿಂದ ಬೀಗ ಹಾಕಿಕೊಂಡು ತನ್ನ ಗುಡಿಸಲೊಳಗೆ ಕಾಲಿಡುವ ತನಕವೂ ಕುಂಞಿಪಾತುಮ್ಮ ತನ್ನ ಮನೆಯ ದೀಪ ಆರಿಸುತ್ತಿರಲಿಲ್ಲ. ರಾತ್ರಿಯ ಬಹುಪಾಲು ಸಮಯವನ್ನು ಕೆಮ್ಮುತ್ತಾ ಹಗಲು ಮಾಡುತ್ತಿದ್ದ ಅವಳ ಬಳಿಗೆ ಮಗಳು ಮನೆಗೆ ಬರುವವರೆಗೆ ನಿದ್ರೆ ಸುಳಿಯುತ್ತಿರಲೂ ಇರಲಿಲ್ಲ.

ಬೇಬಿಯನ್ನು ಮುಕುಂದಣ್ಣ ಮದುವೆ ಮಾಡಿಕೊಂಡು ಕರೆದು ತಂದ ದಿನ ಕುಂಞಿಪಾತುಮ್ಮಳಿಗೆ ತನ್ನ ಮಗಳು ಮನೆಗೆ ಇಂದು ಬರುವುದಿಲ್ಲವೆಂದು ಗೊತ್ತಿದ್ದರೂ ಮಧ್ಯರಾತ್ರಿಯವರೆಗೂ ನಿದ್ರೆ ಬಂದಿರಲಿಲ್ಲ. ಅವಳು, ಹೀಗೂ ಕೂಡಾ ಮದುವೆಯಾಗು ತ್ತದೆ ಎಂದು ಕನಸು ಕಂಡವಳೂ ಅಲ್ಲ. ಮಸೀದಿಯ ಖಾಜಿಯಾಗಲೀ, ಊರಿನ ಹಿರಿಯರಾಗಲೀ, ಯಾರೂ ಭಾಗವಹಿಸದೆ ಮದುವೆ ನಡೆಯುತ್ತದೆ ಎಂಬುದನ್ನು ನಂಬಲೂ ಅವಳಿಗೆ ಕಷ್ಟವಾಗುತ್ತಿತ್ತು. ತಾನು ಮುಕುಂದಣ್ಣನನ್ನೇ ಮದುವೆಯಾಗುವವಳಿ ದ್ದೇನೆ ಎಂದು ತಿಂಗಳೊಂದರ ಕೆಳಗೆ ಮಗಳು ಹೇಳಿದಾಗಲೂ ಕುಂಞಿಪಾತುಮ್ಮ ತನ್ನ ಮಗಳು ಸುಳ್ಳು ಹೇಳುತ್ತಿದ್ದಾಳೆಂದೇ ಸಮಾಧಾನ ಪಟ್ಟುಕೊಳ್ಳಲು ಯತ್ನಿಸಿದ್ದಳು.



ತನ್ನ ಗಂಡನ ವಯಸ್ಸಿಗೇ ಹತ್ತಿರ – ಹತ್ತಿರವಿದ್ದ ಯುವಕನೊಬ್ಬನನ್ನು ಅಳಿಯನೆಂದು ಸ್ವೀಕರಿಸಲೂ ಆಕೆಗೆ ಮುಜುಗರವಾಗುತ್ತಿತ್ತು. ಅದರಲ್ಲೂ ಬೇರೆ ಜಾತಿಯ ಯುವಕ ನೊಬ್ಬನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡಲು ಆಕೆಗೆ ಎಳ್ಳಿನಷ್ಟೂ ಮನಸ್ಸಿರಲಿಲ್ಲ. ಕುಂಞಿಪಾತುಮ್ಮಳಿಗೆ ಗೊತ್ತಿರುವಂತೆ ಈ ಮದುವೆಯ ಪ್ರಸ್ತಾಪವನ್ನು ಮೊದಲು ಎತ್ತಿದವಳು ಸಬೀನಾ. ಮುಕುಂದಣ್ಣ ಆರಂಭದಲ್ಲಿ ಬೇಬಿಯ ಮಾತನ್ನು ನಿರಾಕರಿಸ ಲಾಗದೆ ಒಪ್ಪಿದನಂತೆ. ಇದೆಲ್ಲವನ್ನೂ ಆಕೆಗೆ ಮಗಳೇ ಹೇಳಿದ್ದು. ಈ ಶಾಲೆಗೆ ಹೋದ ಹುಡುಗಿಯರೆಲ್ಲ ಹೀಗೆಯೇ ಏನೋ; ಕುಂಞಿಪಾತುಮ್ಮಳಿಗೆ ಅರ್ಥವೇ ಆಗುತ್ತಿರಲಿಲ್ಲ. ತಮ್ಮ ಮದುವೆಯ ಬಗ್ಗೆ ತಾವೇ ಅದೆಷ್ಟು ಧೈರ್ಯದಿಂದ ನಾಚಿಕೆ ಬಿಟ್ಟು ಮಾತನಾಡುತ್ತಾರೆ! ಒಂದು ರೀತಿಯಲ್ಲಿ ಕುಂಞಿಪಾತುಮ್ಮಳಿಗೆ ತನ್ನ ಮಗಳ ಧೈರ್ಯದ ಬಗ್ಗೆ ಮೆಚ್ಚುಗೆಯೇ ಉಂಟಾಗಿತ್ತು. ಬಿಳಿಯ ಕಾಗದಕ್ಕೆ ದಸ್ಕತು ಹಾಕುವ ಮೂಲಕ ಮದುವೆಯಾಗಿ ಬಂದ ಮಗಳು ಸಂಜೆಯ ಹೊತ್ತೊಮ್ಮೆ ಮನೆಗೆ ಬಂದಿದ್ದರೂ, ಹೆಚ್ಚು ಮಾತನ್ನೇನೂ ಆಡಿದ್ದಿರ ಲಿಲ್ಲ. ಕುಂಞಿಪಾತುಮ್ಮಳಿಗೂ ಮುಕುಂದಣ್ಣನ ಹೆಂಡತಿಯೊಡನೆ ಮಾತನಾಡಬಹುದಾದ ವಿಷಯಗಳೂ ಇದ್ದಿರಲಿಲ್ಲ. ಅವಳ ಯೋಚನೆಯಂತೆ ಮಗಳ ಬದುಕಿನಲ್ಲಿ ಬಹು ದೊಡ್ಡ ಬದಲಾವಣೆಯೇನೂ ಆದಂತಿಲ್ಲ. ಕಳೆದ ಹದಿನೈದು ವರ್ಷಗಳಿಂದಲೂ ಮಾಳಿಗೆ ಮನೆಯಲ್ಲಿ ಓಡಾಡುತ್ತಿದ್ದ ಹುಡುಗಿ ಇಂದು ರಾತ್ರಿ ಮಲಗಲು ಮನೆಗೆ ಬರಲಾರಳು – ಇಷ್ಟೇ ವ್ಯತ್ಯಾಸ.

ಮುಕುಂದಣ್ಣನ ಹಾಸಿಗೆ ಸಿದ್ಧಪಡಿಸುವ ತನಕವೂ ಬೇಬಿಗೆ ತಾನೊಬ್ಬಳು ಮದು ಮಗಳು ಎಂಬ ಭಾವನೆ ಬಂದಿರಲಿಲ್ಲ. ಕಳೆದ ಐದಾರು ವರ್ಷಗಳಿಂದಲೂ ಮುಕುಂದಣ್ಣನ ಬಟ್ಟೆ ಬರೆ ಒಗೆಯುವುದು, ಅಡುಗೆ ಕೆಲಸ ಮಾಡಿಡುವುದು, ಹಾಸಿಗೆ ಸರಿಪಡಿಸುವುದು – ಎಲ್ಲವನ್ನೂ ಯಾಂತ್ರಿಕವಾಗಿ ನಡೆಸಿಕೊಂಡು ಬರುತ್ತಿದ್ದ ಬೇಬಿಗೆ ಎಲ್ಲವೂ ಮಾಮೂಲಿ ಕೆಲಸಗಳೇ ಆಗಿದ್ದವು.

ಆಕೆಗೆ ತಾನಿಂದು ಮುಕುಂದಣ್ಣನ ಹೆಂಡತಿ – ಅವನ ಜತೆ ಒಂದೇ ಹಾಸಿಗೆಯಲ್ಲಿ ಮಲಗಬೇಕಾಗುತ್ತದೆ ಎಂಬ ಚಿಂತೆ ಏಕಾಏಕಿ ಎದುರಾದದ್ದು, ಮುಕುಂದಣ್ಣ ತನ್ನ ಮಲಗುವ ಮನೆಯ ಬಾಗಿಲನ್ನು ಒಳಗಡೆಯಿಂದ ಚಿಲಕ ಹಾಕಿ ಭದ್ರಪಡಿಸಿದ ಬಳಿಕವೇ. ಅದು ಅವಳಿಗೆ ತೀರಾ ಅನಿರೀಕ್ಷಿತವಾಗಿತ್ತು. ಅಡುಗೆ ಮನೆಯನ್ನು ಓರಣವಾಗಿರಿಸಿ ಮಾಳಿಗೆಗೆ ಕಾಲಿಟ್ಟವಳಿಗೆ ಮುಚ್ಚಿದ ಬಾಗಿಲನ್ನು ಕಂಡಾಗ ಸಿಡಿಲೆರಗಿದಂತಾಗಿತ್ತು. ತಾನೀಗ ಏನು ಮಾಡಬೇಕು? ಬಾಗಿಲು ತೆರೆಯುವಂತೆ ಮುಕುಂದಣ್ಣನಲ್ಲಿ ವಿನಂತಿಸ ಬೇಕೆ? ಇದ್ದಕ್ಕಿದ್ದ ಹಾಗೆ ನಾಚಿಕೆ, ಅಪಮಾನ – ಕೋಪ ಎಲ್ಲವೂ ಮೈತುಂಬಿ ಗಲಿಬಿಲಿ

ಯಾಯಿತು. ಮುಕುಂದಣ್ಣ ತನ್ನನ್ನು ಸತಾಯಿಸಲು ಬಾಗಿಲು ಹಾಕಿದ್ದು, ತಾನು ಬಾಗಿಲು ತೆರೆಯಲು ಹೇಳುವುದನ್ನು ಕೇಳಲು ಕಾತರಿಸುತ್ತಾ ಒಳಗೆ ಕುಳಿತಿರಬಹುದೆ? ಈ ಕಲ್ಪನೆಯಿಂದಾಗಿ ಒಂದು ಕ್ಷಣ ಎದೆ 'ಜುಂ' ಅಂದಿತು. ಅಥವಾ ತಾನು ಹೊರಗೆಯೇ ರಾತ್ರಿಯಿಡೀ ನಿದ್ರೆಯಿಲ್ಲದೆ ಅಳುತ್ತಿರಬೇಕೆ? ಭಯದಿಂದ ಎದೆಯೊಳಗೆ ಯಾರೋ ಕೈ ಹಾಕಿ ಕದಡಿದಂತಾಯಿತು. ತಾನೀಗ ಏನು ಮಾಡುವುದು? ಕಿಟಕಿಯ ಬಳಿಗೆ ನಡೆದವಳಿಗೆ ರಸ್ತೆಯ ಎದುರು ಭಾಗದಲ್ಲಿ ಕಾಣಿಸಿದ ಅವಳ ಗುಡಿಸಲಲ್ಲಿ ದೀಪ ಆರಿಹೋಗಿತ್ತು.

ರಾತ್ರಿಯಿಡೀ ನಿದ್ರೆಗೆಟ್ಟು ಅಳುತ್ತಾ ಕಣ್ಣು ಕೆಂಪು ಮಾಡಿಕೊಂಡು ಬೇಬಿ ಮರುದಿನ ಮುಂಜಾನೆ ಚಹ ಮಾಡಿಕೊಂಡು ಮಾಳಿಗೆ ಮೆಟ್ಟಲು ಹತ್ತುತ್ತಿರುವಾಗ ಎದೆ ನೂರು ಬಡಿಯುತ್ತಿತ್ತು. ಮುಕುಂದಣ್ಣನನ್ನು ಎದುರಿಸುವುದು ಹೇಗೆಂಬ ಯೋಚನೆ ದೇಹವನ್ನೆಲ್ಲ ಹಿಂಡಿ ಹಿಪ್ಪೆಮಾಡುತ್ತಿತ್ತು.

ಮುಕುಂದಣ್ಣ ಹೊರಗಿನ ಕುರ್ಚಿಯಲ್ಲಿ ಕೂತು ರಸ್ತೆ ನೋಡುತ್ತಿದ್ದವನು ಬೇಬಿ ಒಳಗೆ ಕಾಲಿಟ್ಟಾಗ, ಒಂದು ಕ್ಷಣ ಕತ್ತು ತಿರುವಿದವನು ಮತ್ತೆ ಹಿಂದಿನಂತೆ ರಸ್ತೆಯತ್ತ ಕಣ್ಣು ತಿರುಗಿಸಿದ್ದ. ಚಹದ ಗ್ಲಾಸನ್ನು ಅಲ್ಲಿಯೇ ಪಕ್ಕದ ಮೇಜಿನ ಮೇಲಿರಿಸಿದ ಬೇಬಿ, ಮುಂದೇನು ಮಾಡಬೇಕು ಎಂದು ತೋಚದೆ ಅಲ್ಲೇ ನಿಂತುಬಿಟ್ಟಿದ್ದಳು.

ಮುಕುಂದಣ್ಣ ಚಹದ ಗ್ಲಾಸು ಎತ್ತಿಕೊಂಡದ್ದು ಕಂಡಾಗ ಸಾವರಿಸಿಕೊಂಡ ಬೇಬಿ ಏನಾದರೂ ಮಾತನಾಡಬೇಕು ಎಂದು ನಾಲಗೆ ಸವರುವಷ್ಟರಲ್ಲಿ ಮುಕುಂದಣ್ಣನೇ ಪ್ರಶ್ನಿಸಿದ್ದ.

'ನಿಜ ಹೇಳಬೇಕು ನೀನು. ರಾತ್ರಿಯೇ ಹೇಳಬೇಕೆಂದಿದ್ದೆ. ನಿನ್ನ ಶಾಲೆಯ ಹುಡುಗಿಯರು ನನ್ನನ್ನು ಆನೆಮರಿ ಎಂದು ಹಾಸ್ಯ ಮಾಡುತ್ತಿದ್ದಾಗ ನೀನೂ ಕೂಡಾ ಅವರ ಒಟ್ಟಿಗೆ ಸೇರಿ ನಗುತ್ತಿರಲಿಲ್ಲವಾ?'

ಬೇಬಿಗೆ ನಿಂತ ನೆಲ ಕುಸಿಯತೊಡಗಿದ ಅನುಭವ. ಈ ಮುಕುಂದಣ್ಣ ಹೀಗೇಕೆ ಪ್ರಶ್ನಿಸುತ್ತಿದ್ದಾರೆ? ಈ ಪ್ರಶ್ನೆಗೆ ಏನೆಂದು ಉತ್ತರ ಹೇಳುವುದು? ಇಲ್ಲವೆಂದು ಹೇಳಿಬಿಟ್ಟರೆ ಮುಕುಂದಣ್ಣನಿಗೆ ಸಂತೋಷವಾಗುತ್ತದೆಯೊ?

'ಏನಾಗಿದೆ ನಿಮಗೆ? ಹೀಗೇಕೆ ಮಾಡುತ್ತಿದ್ದೀರಿ?' ಎಂಬೆರಡು ಪ್ರಶ್ನೆಗಳನ್ನು ಹೊಂದಿಸಿಕೊಳ್ಳುವಷ್ಟರಲ್ಲೇ ಬೇಬಿಗೆ ಅಳು ಉಕ್ಕಿಬಂತು. ಗೋಡೆಗೆ ಮುಖವಿಟ್ಟು ಅಳ ತೊಡಗಿದ್ದಳು. ಬಹಳ ಹೊತ್ತು ಬೇಬಿ ಅಳುತ್ತಲೇ ಇದ್ದಳಾದರೂ ಮುಕುಂದಣ್ಣ ಕುಳಿತ ತನ್ನ ಭಂಗಿ ಬದಲಿಸಿರಲಿಲ್ಲ. ಬೇಬಿ ತನ್ನತ್ತ ಮುಖ ತಿರುಗಿಸುವುದನ್ನೇ ಕಾದು ಕುಳಿತಂತಿದ್ದ ಆತ. ಆಕೆಯ ಕಣ್ಣುಗಳು ತನ್ನತ್ತ ಹೊರಳುತ್ತಿರುವಂತೆಯೇ ಪ್ರಶ್ನಿಸಿದ್ದ. 'ನಿಜ ಹೇಳಬೇಕು



ಬೇಬಿ. ಬೇಕಾದರೆ ನಿನ್ನ ಕಾಲು ಹಿಡಿಯುತ್ತೇನೆ. ನನ್ನನ್ನು ಕಂಡರೆ ನಿನಗೆ ಹೇಸಿಗೆಯಾಗುತ್ತದೆಯಾ?' ಮುಕುಂದಣ್ಣನ ಪ್ರಶ್ನೆಯಲ್ಲಿ ಬೆರೆತ್ತಿದ್ದ ದೈನ್ಯತೆ ಬೇಬಿಗೂ ಅಸಹ್ಯವಾಗಿತ್ತು. ಮುಕುಂದಣ್ಣ ಮೊತ್ತ ಮೊದಲ ಬಾರಿಗೆ ಅವಳಿಗೆ ಕುರೂಪಿಯಾಗಿ ಕಾಣಿಸಿದ್ದ! ಆತನ ಮುಖ ನೋಡಲೂ ಇಷ್ಟವಾಗದೆ ಮೆಟ್ಟಲಿಳಿದು ಕೆಳಗೆ ಹೋಗಿಬಿಟ್ಟಿದ್ದಳು ಅವಳು.

ಮುಂದಿನ ಹತ್ತು ಹದಿನೈದು ದಿನಗಳಲ್ಲಿ ಗಂಡಹೆಂಡಿರ ನಡುವಿನ ದಿನಚರಿಯಲ್ಲಿ ವಿಶೇಷವಾದ ಬದಲಾವಣೆಯೇನೂ ಆಗಲಿಲ್ಲ. ಬೇಬಿ ಅಂಗಡಿಗೆ ಇಳಿದು ಬರಬಾರದೆಂದು ಮುಕುಂದಣ್ಣ ಮೊದಲ ದಿನವೇ ಕಟ್ಟಪ್ಪಣೆ ಮಾಡಿದ್ದ. ಕುಂಞಿಪಾತುಮ್ಮ ದಿನಕ್ಕೊಮ್ಮೆ ಬಂದು ಮಗಳನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದಳು.

ತಾಯಿಯೊಡನೆ ತನ್ನ ಅವಸ್ಥೆಯನ್ನು ಹೇಳಲೇಬಾರದು ಎಂದು ಎಷ್ಟೇ ತಡೆದುಕೊಂಡರೂ ಮಗಳ ಬಣ್ಣಗೆಟ್ಟ ಮುಖವನ್ನು ಕಂಡು ಕುಂಞಿಪಾತುಮ್ಮಳೆ ಎಲ್ಲವನ್ನೂ ಗ್ರಹಿಸಿದಳು.

'ಗಂಡಸರದ್ದು ತಪ್ಪಿಲ್ಲ ಮೋಳೆ. ನೀನು ಇದಿಷ್ಟು ದಿನ ಹೊರಗೆ ಓಡಾಡಿದ್ದೇ ತಪ್ಪು. ನಮ್ಮ ಜಾತಿಯ ಯಾವ ಹೆಂಗಸರು ಬುರ್ಕಾ ಹಾಕದೆ ಹೊರಗೆ ಹೋಗುತ್ತಾರೆ ಹೇಳು? ಶಾಲೆಗೆ ಹೋಗುವಾಗ ನೀನು ಅಂಗಡಿಯಲ್ಲಿ ಕೂತರೆ – ಅದು ವಿಷಯ ಬೇರೆ. ಈಗ ನೀನು ಮೊದಲಿನ ಹಾಗೆ ಅಲ್ಲವಲ್ಲಾ? ಹೆಂಡತಿಯನ್ನೂ ಅಂಗಡಿಯಲ್ಲಿ ವ್ಯಾಪಾರಕ್ಕೆ ಕುಳಿತುಕೊಳ್ಳಿಸುವುದು ಗಂಡಸರಿಗೆ ಅವಮಾನವಲ್ಲವಾ? ಹೆಣ್ಣಾಗಿ ಹುಟ್ಟಿದವಳಿಗೆ ಒಬ್ಬ ಗಂಡ : ಎರಡು ಹೊತ್ತು ಅನ್ನ ಸಿಕ್ಕಿದರೆ ಅದೇ ದೊಡ್ಡ ಪುಣ್ಯ. ನಿನ್ನ ಮುಕುಂದಣ್ಣ ಕುಡುಕನಲ್ಲ. ಹೆಂಡತಿಗೆ ಬಡಿಯುವ ಜಾತಿಯವನಲ್ಲ. ಇಷ್ಟು ಅದೃಷ್ಟ ಎಷ್ಟು ಜನರಿಗೆ ಸಿಕ್ಕೀತು?' ಕುಂಞಿಪಾತುಮ್ಮ ತೀರಾ ಸರಳವಾಗಿ ಸಮಸ್ಯೆಗೆ ಪರಿಹಾರ ಹೇಳಿಬಿಟ್ಟಿದ್ದಳು. ಮುಕುಂದಣ್ಣ ಬಾಗಿಲು ಹಾಕಿ ಮಲಗಿಕೊಳ್ಳುತ್ತಿರುವುದು ಅವಳಿಗಾರು ಹೇಳುತ್ತಾರೆ?

ಬೇಬಿಗೆ ಹುಚ್ಚೇ ಹಿಡಿದಂತಾಗಿತ್ತು. ಇಂದಲ್ಲ–ನಾಳೆ ಸರಿಯಾದೀತು. ಮುಕುಂದಣ್ಣ ಖಂಡಿತವಾಗಿ ಹಿಂದಿನಂತೆ ಪ್ರೀತಿಯಿಂದ ಮಾತನಾಡಿಸಬಹುದು – ಎಂದು ಆಸೆಯಿಂದ ದಿನ ಕಳೆಯುತ್ತಿದ್ದವಳಿಗೆ ದಿನದಿಂದ ದಿನಕ್ಕೆ ನಿರಾಸೆ ಹೆಚ್ಚಾಗತೊಡಗಿತು. ಮುಕುಂದಣ್ಣ ಅವಳ ಮುಖ ನೋಡಿ ಮಾತನಾಡಿಸುವುದನ್ನು ನಿಲ್ಲಿಸಿಬಿಟ್ಟಿದ್ದ. ಆತನಿಗೆ ಪ್ರಿಯವಾದ ಎಣ್ಣೆಯಲ್ಲಿ ಕರಿದ ತಿಂಡಿಗಳನ್ನು ಮಾಡಿ ಬಡಿಸಿದಾಗಲೂ ಕಣ್ಣರಳಿಸದ ಮುಕುಂದಣ್ಣ ಎಷ್ಟೇ ಕೆಟ್ಟದಾಗಿ ಅಡಿಗೆ ಮಾಡಿದರೂ ಚಕಾರವೆತ್ತದೆ ತಿಂದು ಬಿಡುತ್ತಿದ್ದ.

ಒಂದು ದಿನ ಮಧ್ಯಾಹ್ನದ ಊಟ ಮುಗಿಸಿಕೊಂಡು ಅಂಗಡಿಗೆ ಹೊರಟು

ನಿಂತ ಮುಕುಂದಣ್ಣ ಬಾಗಿಲ ಬಳಿಗೆ ಹೋದವನು ಅಲ್ಲಿಯೇ ನಿಂತು ಹೇಳಿದ್ದ. 'ಒಂದು ವಾರದಿಂದ ನಿನಗೆ ಹೇಳಬೇಕು ಅಂತ ಯೋಚನೆ ಮಾಡುತ್ತಾ ಇದ್ದೇನೆ. ನೀನು ಮಾಳಿಗೆಯ ಕಿಟಿಕಿಯ ಹತ್ತಿರ ಇಡೀ ಊರು ಕಾಣುವಂತೆ ಪ್ರದರ್ಶನಕ್ಕೆ ಕೂತು ಕೊಳ್ಳುವುದು ನನಗೆ ಸರಿ ಕಾಣುವುದಿಲ್ಲ. ನೀನು ಸ್ವಲ್ಪ ಮರ್ಯಾದೆಯಿಂದ ಬದುಕು ವುದನ್ನು ಕಲಿಯಬೇಕು. ನಿಮ್ಮ ಜಾತಿಯವರು ನಿಮಗೆಲ್ಲ ಕಪ್ಪು ಬಟ್ಟೆ ಸುತ್ತಿ ಮೂಲೆಯಲ್ಲಿ ಬಚ್ಚಿಡುವುದು ಸುಮ್ಮನೆ ಏನೂ ಅಲ್ಲ. ಸಸಾರ ಕೊಟ್ಟರೆ ನೀವು ಮನೆಯ ಮಾಡು ಹತ್ತಿ ಬಟ್ಟೆ ಬಿಚ್ಚಿ ಕುಣೀಲಿಕ್ಕೂ ಹಿಂದೆ ಮುಂದೆ ನೋಡುವ ಜಾತಿಯಲ್ಲ'.

ಬೇಬಿಗೆ ಅಂದು ಮುಕುಂದಣ್ಣ ಮತ್ತಷ್ಟು ಕುರೂಪಿಯಾಗಿ ಕಾಣಿಸಿದ್ದ! ಆತನನ್ನು ಕೆಕ್ಕರಿಸಿ ನೋಡಲೂ ಅಸಹ್ಯವಾಗಿತ್ತು.

ಅದೇ ದಿನ ಸಂಜೆ ಎಂದಿಗಿಂತ ಬೇಗ ಅಂಗಡಿ ಬಾಗಿಲು ಹಾಕಿಕೊಂಡು ಬಂದಿದ್ದ ಮುಕುಂದಣ್ಣ ಕಿಟಿಕಿಯಿಂದ ಕಾಣಿಸುತ್ತಿದ್ದ ಆಕಾಶವನ್ನು ನೀಲಿ ಪರದೆಯಿಂದ ಮುಚ್ಚಲು ಪ್ರಾರಂಭಿಸಿದಾಗ ಬೇಬಿಗೆ ಮೈತುಂಬ ಮುಳ್ಳು ನೆಟ್ಟಂತಾಗಿತ್ತು.

ಆ ರಾತ್ರಿ ಯಥಾಪ್ರಕಾರ ಮುಕುಂದಣ್ಣ ಬಾಗಿಲು ಮುಚ್ಚಿಕೊಂಡು ನಿದ್ರೆ ಹೋದ ಬಳಿಕ ಬೇಬಿ ತನ್ನ ಗೆಳತಿ ಸುಮತಿಗೆ ಎಲ್ಲವನ್ನೂ ಬರೆಯಲಾರಂಭಿಸಿದಳು. ಎಂಟು ಪುಟದ ಆ ಪತ್ರವನ್ನು ಬೇಬಿ ಕೊನೆಗೊಳಿಸಿದ್ದು ಹೀಗೆ : 'ಈ ಮುಕುಂದಣ್ಣ ಎಲ್ಲ ಗಂಡಸರಂತೆ ಇದ್ದಿದ್ದರೇ ನಾನು ಹೆಚ್ಚು ಸಂತೋಷ ಪಡುತ್ತಿದ್ದೆ. ಈ ಕಾಗದವನ್ನು ನಿನಗೆ ಯಾವಾಗ ಪೋಸ್ಟ್ ಮಾಡುತ್ತೇನೋ ಗೊತ್ತಿಲ್ಲ. ನನ್ನ ಹತ್ತಿರ ಈಗ ಒಂದು ರೂಪಾಯಿಯೂ ಇಲ್ಲ. ಹೇಗಾದರೂ ಮಾಡಿ ಒಂದು ಹತ್ತು ರೂಪಾಯಿ ಸಿಕ್ಕಿದ ತಕ್ಷಣ ಈ ಸೆರೆಮನೆಯಿಂದ ತಪ್ಪಿಸಿಕೊಂಡು ನಿನ್ನ ಹಾಸ್ಟೆಲಿಗೆ ಬರುತ್ತೇನೆ. ನೀನು ಅವತ್ತು ಭಾಷೆ ಕೊಟ್ಟ ಹಾಗೆ ನನಗೆ ಅಲ್ಲಿ ಕೆಲಸ ಕೊಡಿಸಬೇಕು. ಅಲ್ಲಿ ಗುಡಿಸುವ ಕೆಲಸವಾದರೂ ಆದೀತು. ಆದಷ್ಟು ಬೇಗ ನನ್ನ ತಾಯಿಯನ್ನು ಈ ರಾಕ್ಷಸನ ಕಣ್ಣೆದುರಿ ನಿಂದ ತಪ್ಪಿಸಬೇಕಾಗಿದೆ'.

* * *

ಎರಡು ದಿನಗಳಲ್ಲಿ ನನ್ನಿಂದ ಬರೆಯಲು ಸಾಧ್ಯವಾದದ್ದು ಇಷ್ಟು ಮಾತ್ರ. ಮಾರನೆಯ ದಿನ ಕಚೇರಿಯಿಂದ ನೇರವಾಗಿ ಆಸ್ಪತ್ರೆಗೆ ಹೋದವನು ಬೇಬಿಯಕ್ಕನ ಜತೆ – ಆಕೆಯನ್ನು ಉಳಿದವರೆಲ್ಲ ಬೇಬಿಯಕ್ಕ ಎಂದೇ ಕರೆಯುತ್ತಿದ್ದರು– ಅದು ಇದು ಮಾತನಾಡುತ್ತಾ ನಾನು ಬರೆದ ಕತೆಯನ್ನು ಆಕೆಯತ್ತ ಚಾಚಿ, 'ನಾನೊಂದು ಕತೆ ಬರೆದಿದ್ದೇನೆ. ಓದಿ ಅಭಿಪ್ರಾಯ ಹೇಳಬೇಕು' ಎಂದೆ. ಆಕೆ ಅದನ್ನು ತೆಗೆದುಕೊಂಡು



ಪುಟ ತಿರುಗಿಸುತ್ತಾ 'ನನಗೆ ಗೊತ್ತಿತ್ತು' ಅಂದಾಗ ನನಗೆ ಅಚ್ಚರಿ, ತೊಡೆ ತನಕ ಪ್ಲಾಸ್ಟರ್ ಅಂಟಿಸಿಕೊಂಡು ಅಂಗಾತ ಮಲಗಿದ್ದ ಸ್ನೇಹಿತ ಕಣ್ಣುಗಳಲ್ಲೇ ತುಂಟ ನಗು ಚೆಲ್ಲಿದ್ದ.

ಅದರ ಮರುದಿನ ಸಂಜೆ ಹೋಗಿದ್ದಾಗ ಬೇಬಿಯಕ್ಕ ಬೇರೆ ವಾರ್ಡಿಗೆ ಹೋಗಿದ್ದ ರಿಂದ ಗೆಳೆಯನ ಜತೆ ಹರಟುತ್ತಾ ಕೂತೆ. ನಾನು ಬರೆದ ಕತೆಯ ಬಗ್ಗೆ ಆಕೆ ಈತನಲ್ಲೇನೂ ಪ್ರತಿಕ್ರಿಯೆ ಸೂಚಿಸಿದಂತೆ ಕಾಣಲಿಲ್ಲ.

ಸುಮಾರು ಆರು ಗಂಟೆಯ ಹೊತ್ತಿಗೆ ಕೋಣೆಯೊಳಗೆ ಬಂದ ಬೇಬಿಯಕ್ಕ ನನ್ನನ್ನು ಕಂಡು 'ಓಹ್! ನೀವು ಬಂದೇ ಬಿಟ್ಟಿದ್ದೀರಿ. ಒಳ್ಳೆಯದೆ ಆಯಿತು. ಇನ್ನು ಹತ್ತು ನಿಮಿಷದಲ್ಲಿ ಡ್ಯೂಟಿ ಮುಗಿಯುತ್ತದೆ. ನಿಮ್ಮ ಕತೆ ಓದಿ ಮುಗಿಸಿದ್ದೇನೆ. ಆದರೆ ಇಲ್ಲಿಗೆ ತರುವುದನ್ನು ಮರೆತೆ. ನೀವು ನನ್ನ ಜತೆ ಮನೆತನಕ ಬಂದರೆ ಕೊಡುತ್ತೇನೆ. ಬರುತ್ತೀರಾ?' ಎಂದು ಪ್ರಶ್ನಿಸಿದರು. ನಾನು ಉತ್ತರಿಸಲು ಹಿಂದೆ ಮುಂದೆ ನೋಡತೊಡಗಿದ್ದನ್ನು ಗಮನಿಸಿದ ಸ್ನೇಹಿತ ಕಣ್ಣಲ್ಲೇ ಆದೇಶ ನೀಡಿದ.

ಸುಮಾರು ಹತ್ತು ನಿಮಿಷದ ರಿಕ್ಷಾದ ದಾರಿ. ಬೇಬಿಯಕ್ಕ ರಿಕ್ಷಾದಲ್ಲಿ ಮೌನವಾಗಿಯೇ ಇದ್ದದ್ದರಿಂದ ನನ್ನ ಬರವಣಿಗೆ ಆಕೆಗೆ ಹಿಡಿಸಲಿಲ್ಲವೇನೋ ಎನ್ನುವ ಅನುಮಾನ ನನ್ನನ್ನು ಕಾಡಿತು. ರಿಕ್ಷಾ ನಿಂತಾಗ ನಾನು ರಸ್ತೆಗೆ ಕಾಲಿರಿಸಿದೆ. ರಿಕ್ಷಾದ ಬಾಡಿಗೆ ಹಣವನ್ನು ನಾನು ಕೊಡಲು ಮುಂದಾದಾಗ ಆಕೆ ತಡೆಯಬಹುದೆಂದು ಭಾವಿಸಿದ್ದೆ. ಆದರೆ ಅವರಿಗೆ ಆ ಯೋಚನೆಯೇ ಇದ್ದಂತಿರಲಿಲ್ಲ. ಅವರು ತಲೆತಗ್ಗಿಸಿ ಹೆಜ್ಜೆ ಹಾಕ ತೊಡಗಿದರು, ಯಾವುದೋ ಭಾರವಾದ ಚಿಂತೆಯನ್ನು ಹೊತ್ತುಕೊಂಡವರಂತೆ. ನಾನು ಗಾಬರಿಯಿಂದಲೇ ಅವರ ಬೆನ್ನು ಹಿಡಿದೆ. ಪುಟ್ಟ ತಾರಸಿ ಮನೆಯೊಂದರ ಗೇಟು ತೆರೆದು, ಅವರ ಬೆನ್ನಹಿಂದೆ ನಿಂತಿದ್ದ ನನಗೆ ಕಾಣಿಸಿದ್ದು ಮನೆಯ ಗೋಡೆಗಂಟಿದ್ದ ಕರಿಶಿಲೆಯಲ್ಲಿ ಬರೆದಿದ್ದ ಉರುಟು ಅಕ್ಷರಗಳು: 'ಮುಕುಂದ ನಿವಾಸ'.

ಕಿರಿದಾದ ಡ್ರಾಯಿಂಗ್ ರೂಮ್, 'ನೀವು ಕೂತಿರಿ. ಈಗ ಬಂದೆ' ಎಂದಷ್ಟೇ ಹೇಳಿದ ಬೇಬಿಯಕ್ಕ ಒಳಪರದೆಯ ಹಿಂದೆ ಮರೆಯಾದರು. ಸೋಫಾದಲ್ಲಿ ಕೂತ ನಾನು ಸುತ್ತಲೂ ಕಣ್ಣು ಹಾಯಿಸಿದೆ. ಎಲ್ಲ ಮಧ್ಯಮವರ್ಗದ ಮನೆಯಂತೆಯೇ ಇತ್ತು. ಒಂದು ಸೋಫಾ, ಎರಡು ಕುರ್ಚಿಗಳು, ಒಂದು ಟೀಪಾಯಿ, ಗೋಡೆ ಗಡಿಯಾರ – ರೇಡಿಯೋ ಎಲ್ಲ.

ಟೀಪಾಯಿ ಮೇಲಿದ್ದ ಸಿನಿಮಾ ಮ್ಯಾಗಜಿನ್ ಒಂದನ್ನು ಎತ್ತಿಕೊಳ್ಳುತ್ತಿರುವಂತೆಯೇ ಒಳಬಾಗಿಲ ಪರದೆ ಸರಿದಂತೆನಿಸಿ ತಲೆಯೆತ್ತಿದೆ; ಭೂತ ಕಂಡವನಂತೆ ಬೆಚ್ಚಿಬಿದ್ದೆ!

ರಕ್ತವೆಲ್ಲ ತಣ್ಣಗಾದಂತೆ ಭಾಸವಾಯಿತು. ಗಾಭರಿಯಿಂದ ಎದ್ದು ನಿಂತು ಬಿಟ್ಟಿದ್ದೆ. ಮೈತುಂಬ ಬಿಳಿ ಬಟ್ಟೆ ಹೊದ್ದುಕೊಂಡಿದ್ದ ಧಡೂತಿ ದೇಹವೊಂದು ಬಾಗಿಲು ದಾಟಿ ಹೊರಬಂದಿತ್ತು!

'ಕುಳಿತುಕೊಳ್ಳಿರಿ. ನಿಮಗೆ ನನ್ನ ಪರಿಚಯವಾಗಿರಬೇಕು. ನಿಮ್ಮ ಕತೆಯಲ್ಲಿನ ರಾಕ್ಷಸ ನಾನೇ' ಎನ್ನುತ್ತಲೇ ನನ್ನೆದುರು ಕುರ್ಚಿಯಲ್ಲಿ ಕೂತ ಮುದುಕನಿಗೆ ಏನಿಲ್ಲವೆಂದರೂ ಎಪ್ಪತ್ತು ದಾಟಿದ್ದಿರಬಹುದು. ಬೆಳ್ಳಿಯಂತೆ ಮಿರುಗುವ ತಲೆಕೂದಲ ರಾಶಿ. ಜೋತುಬಿದ್ದ ಕೆನ್ನೆ. ಬಿಳಿಗೆರೆಯಂತಹ ಹುಬ್ಬುಗಳ ಕೆಳಗೆ ಎರಡು ಸಣ್ಣ ಕಣ್ಣುಗಳು. ರೋಮಗಳೇ ಇಲ್ಲದ ಬಿಳಿ ತೋಳುಗಳು. ಮುದಿ ಹೆಂಗಸರಂತೆ ನೆರಿಗೆಗಳು; ನಾನು ನಿಂತೇ ಇದ್ದೆ. ಆ ಮುದುಕನ ಎದುರು ಕುಳಿತುಕೊಳ್ಳಲು ಯಾಕೋ ಇಷ್ಟವಾಗಲಿಲ್ಲ.

ಟ್ರೇಯೊಂದರಲ್ಲಿ ಚಹದ ಮೂರು ಕಪ್ಪುಗಳನ್ನಿಟ್ಟುಕೊಂಡು ಹೊರಗೆ ಬಂದ ಬೇಬಿಯಕ್ಕ, 'ನೀವಿನ್ನೂ ನಿಂತೇ ಇದ್ದೀರಾ?' ಎಂದವರು ಟ್ರೇಯನ್ನು ಟೀಪಾಯಿ ಮೇಲಿರಿಸಿ, ನನ್ನ ಭುಜ ಹಿಡಿದು ಕುಳ್ಳಿರಿಸಿ ತಾನೂ ಪಕ್ಕದಲ್ಲಿ ಕೂತರು.

'ನಿಮ್ಮ ಕತೆಗೆ ಈ ರೀತಿಯ ಕೊನೆ ಬಂದೀತೆಂದು ನೀವು ಎಣಿಸಿದ್ದಿರಲಿಕ್ಕಿಲ್ಲ ಅಲ್ವಾ?' ಬೇಬಿಯಕ್ಕನ ಪ್ರಶ್ನೆ ನನ್ನ ಯೋಚನೆಯೂ ಆಗಿತ್ತು. ಏನು ಉತ್ತರಿಸಬೇಕೆಂದೇ ಹೊಳೆಯಲಿಲ್ಲ. ಹಾಗಾದರೆ ಬೇಬಿಯಕ್ಕ ತನ್ನದೇ ಕತೆ ಹೇಳಿದರೆ? ಅಥವಾ ಹೇಳಿದ್ದೆಲ್ಲ ಬರಿ ಸುಳ್ಳಿನ ಕಂತೆಯೆ? ನನ್ನೆದುರು ಭೂತದಂತೆ ಕೂತಿರುವ ಮುದುಕ ಮುಕುಂದಣ್ಣನೆ?

'ನಿಮ್ಮ ಕತೆ ನಾನೂ ಓದಿದ್ದೇನೆ' ಮುದುಕ ತುಟಿ ಬಿಚ್ಚಿದರು. ನಾನು ಆತುರದಿಂದ ಅವರತ್ತ ನೋಡಿದೆ. 'ನನಗೆ ನಿಮ್ಮ ಕತೆಯ ಕೊನೆ ಇಷ್ಟವಾಗಲಿಲ್ಲ ಎಂದು ಹೇಳಿದರೆ ನೀವು ಕೋಪ ಮಾಡಬಾರದು. ಆ ಹುಡುಗಿ ಮಾಳಿಗೆ ಮನೆಯ ರಾಕ್ಷಸನ ಕುತ್ತಿಗೆ ಹಿಸುಕಿಕೊಂಡು ತಪ್ಪಿಸಿಕೊಂಡಳು ಎಂದು ಬರೆಯಬೇಕಿತ್ತು. ಇಲ್ಲವಾದರೆ ಅವನೇ ಅವಳನ್ನು ಕೊಂದುಬಿಡುತ್ತಿರಲಿಲ್ಲವಾ' ಎನ್ನುತ್ತಿದ್ದಂತೆ ಮುದುಕ ಗಳಗಳನೆ ಅಳಲು ಪ್ರಾರಂಭಿಸಿದ್ದ. ಮೊದಲೇ ಹಸಿಮಾಂಸದ ಮುದ್ದೆಯಂತೆ ಕಾಣಿಸುತ್ತಿದ್ದ ಮುದುಕ ಈಗ ತೀರಾ ಅಸಹ್ಯವಾಗಿ ಕಾಣಿಸಲಾರಂಭಿಸಿದ್ದ. ನಾನು ಮುಜುಗರದಿಂದ ಮುಖ ಕಿವುಚಿದೆ.

'ನೀವು ಮತ್ತೆ ನಿಮ್ಮ ಹಳೇ ರಾಗ ಸುರು ಮಾಡಿದಿರಿ!' ಎಂದು ಆಕ್ಷೇಪಿಸುವ ಸ್ವರದಲ್ಲಿ ಹೇಳಿದ ಬೇಬಿಯಕ್ಕ ಸೋಫಾದಿಂದ ಎದ್ದು ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕೂತು ಮುದುಕನ ಎಡದ ಅಂಗೈಯನ್ನು ಎತ್ತಿಕೊಂಡು ಮೃದುವಾಗಿ ಸವರಲಾರಂಭಿಸಿದರು. ನೋಡು ನೋಡುತ್ತಿದ್ದಂತೆಯೇ ನನ್ನ ಕಣ್ಣುಗಳು ನನ್ನ ಹತೋಟಿ ತಪ್ಪಿ ನೀರಾಗುವ ಮುನ್ಸೂಚನೆ ನೀಡಿದಾಗ ನನಗೆ ನಾಚಿಕೆಯಾಯಿತು.



ನಾನು ಬೇಬಿಯಕ್ಕನತ್ತ ದೃಷ್ಟಿನೆಟ್ಟು 'ನೋಡಿ ನಾನೊಂದು ಪ್ರಶ್ನೆ ಕೇಳುತ್ತೇನೆ. ಅವರು ಬೇಸರ ಪಡಬಾರದು' ಎನ್ನುತ್ತಿದ್ದಂತೆ ಬೇಬಿಯಕ್ಕ 'ಖಂಡಿತಾ ಹೇಳಿ, ಇವರು ಎಲ್ಲ ಗಂಡಸರಂತಲ್ಲ. ಹಾಗಿರುತ್ತಿದ್ದರೆ ನಾನು ಈ ಊರಿಗೆ ತಲುಪಿದ ನಾಲ್ಕು ತಿಂಗಳೊಳಗೆ ಅವರ ಮನೆ–ಅಂಗಡಿ ಎಲ್ಲ ಮಾರಿಬಿಟ್ಟು ನನ್ನ ತಾಯಿಯನ್ನು ಕರೆದುಕೊಂಡು ಇಲ್ಲಿಗೆ ಬರುತ್ತಿರಲಿಲ್ಲ' ಎಂದರು.

ನನ್ನ ಗೊಂದಲಗಳು ಮತ್ತಷ್ಟು ಗೋಜಲಾದವು. ಆದರೂ ಕುತೂಹಲ ತಡೆದು ಕೊಳ್ಳಲಾರದೆ ಪ್ರಶ್ನಿಸಿದ್ದೆ. 'ನಿಮ್ಮನ್ನು ಇಷ್ಟೊಂದು ಪ್ರೀತಿಸುವ ಈ ಮುಕುಂದಣ್ಣ ಮದುವೆ ಮಾಡಿಕೊಂಡ ದಿನಗಳಲ್ಲಿ ನಿಮಗೆ ಅಷ್ಟೆಲ್ಲ ಹಿಂಸೆ ಕೊಟ್ಟದ್ದು ಯಾಕಂತೆ?' ನನ್ನ ಪ್ರಶ್ನೆಯ ಧಾಟಿ ಸೌಜನ್ಯದ ಗಡಿ ದಾಟಿ ಬಿಟ್ಟಿತೆಂಬ ಮುಜುಗರ ನನ್ನನ್ನೇ ಕಾಡಿತ್ತು. ಬೇಬಿಯಕ್ಕ ಕೂಡಾ ಗಲಿಬಿಲಿಗೊಂಡಂತಿತ್ತು. ಅವರು ಉತ್ತರಿಸಲು ಸಾಧ್ಯವಾಗದೆ ಮೇಲೆ – ಕೆಳಗೆ ನೋಡುತ್ತಾ ತುಟಿ ಕಚ್ಚಿ ಕಣ್ಣು ಕಿರಿದು ಮಾಡುತ್ತಿದ್ದಂತೆ ಮುಕುಂದಣ್ಣ ಉಮ್ಮಳಿಸಿ ಬಂದ ಬಿಕ್ಕಳಿಕೆಯ ನಡುವೆಯೇ ಹೇಳಿದರು : 'ಕಳೆದ ಮೂವತ್ತು ವರ್ಷಗಳಲ್ಲಿ ಈ ನಿಮ್ಮ ಬೇಬಿಯಕ್ಕ ಒಮ್ಮೆಯಾದರೂ ನನ್ನೊಡನೆ ಈ ಪ್ರಶ್ನೆ ಕೇಳಿರಲಿಲ್ಲ'.

ನನ್ನ ಎದೆ ಹಿಸುಕಿದಂತಾಯಿತು. ನನ್ನೆದುರು ಕೂತಿದ್ದ ದೇವತೆಯ ಕಾಲು ಮುಟ್ಟಿ ನಮಸ್ಕರಿಸಬೇಕು ಅನ್ನಿಸಿತು.

ಅಂಕಿತ ಪುಸ್ತಕ

53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು–560 004. ಫೋನ್ : 2661 7100

## ಅಂಕಿತ ಪ್ರಕಟಣೆ – ಕಾದಂಬರಿಗಳು

| | | |
|---|---|---|
| 1. | *ಹಾತಿರಾಂ ಬಾವಾಜಿ (ಕಾದಂಬರಿ) / ಜಿ. ಹೀರಾನಾಯ್ಕ್ | 60/– |
| 2. | *1084ರ ತಾಯಿ (ಕಾದಂಬರಿ) / ಮಹಾಶ್ವೇತಾದೇವಿ, ಅನು: ಎಚ್.ಎಸ್.ಶ್ರೀಮತಿ | 60/– |
| 3. | *ರುಡಾಲಿ (ಕಾದಂಬರಿ) / ಮಹಾಶ್ವೇತಾದೇವಿ, ಅನು: ಎಚ್.ಎಸ್. ಶ್ರೀಮತಿ | 25/– |
| 4. | *ಮುಯ್ಯಿಗೆ ಮುಯ್ಯಿ (ಕಾದಂಬರಿ) / ಅನಕೃ | 40/– |
| 5. | *ಗತಿ, ಸ್ಥಿತಿ (ಕಾದಂಬರಿ) / ಗಿರಿ | 50/– |
| 6. | *ತೆಂಬರೆ (ಕಾದಂಬರಿ) / ಎಂ. ವೀರಪ್ಪ ಮೊಯಿಲಿ | 96/– |
| 7. | *ನಟಸಾರ್ವಭೌಮ (ಕಾದಂಬರಿ) / ಅನಕೃ | 200/– |
| 8. | ಗ್ರಾಮಾಯಣ (ಕಾದಂಬರಿ) / ರಾವಬಹಾದ್ದೂರ | 250/– |
| 9. | ಯಯಾತಿ (ಕಾದಂಬರಿ) ವಿ.ಎಸ್. ಖಾಂಡೇಕರ್ / ಅನು: ವಿ.ಎಂ. ಇನಾಂದಾರ್ | 350/– |
| 10. | *ಯಾಪಿಲ್ಲು (ಕಾದಂಬರಿ) / ಕುಂ. ವೀರಭದ್ರಪ್ಪ | 45/– |
| 11. | ರಂಗಣ್ಣನ ಕನಸಿನ ದಿನಗಳು (ಚಿತ್ರ ಕಾದಂಬರಿ) / ಎಂ.ಆರ್. ಶ್ರೀನಿವಾಸಮೂರ್ತಿ | 195/– |
| 12. | *ಅಡವಿ (ಕಾದಂಬರಿ) / ವಸಂತರಾವು ದೇಶಪಾಂಡೆ ಅನು: ಮಾಸ್ತಿ ಕೆ. ಆರ್. ಕೃಷ್ಣಪ್ಪ | 90/– |
| 13. | ಸ್ನಾನ (ಮೂರು ಮಿನಿ ಕಾದಂಬರಿಗಳು) / ಎಂ. ವ್ಯಾಸ | 80/– |
| 14. | ಸ್ಕಲ್‌ಮಂತ್ರ (ಕಾದಂಬರಿ) / ಎಲಿಯಟ್ ಪ್ಯಾಟಿಸನ್, ಅನು: ಬೇಳೂರು ಸುದರ್ಶನ್ | 170/– |
| 15. | ಸಂಧ್ಯಾರಾಗ (ಕಾದಂಬರಿ) / ಅ.ನ.ಕೃ | 95/– |
| 16. | ಅಭಿನವ (ಕಾದಂಬರಿ) / ಸತ್ಯಕಾಮ | 120/– |
| 17. | *ಅಶ್ವಘೋಷ (ಕಾದಂಬರಿ) / ಸತ್ಯಕಾಮ | 60/– |
| 18. | *ವಿಜ್ಞಾನ–ಭೈರವ (ಕಾದಂಬರಿ) / ಸತ್ಯಕಾಮ | 80/– |
| 19. | *ಬಾಮಣ್ (ಕಾದಂಬರಿ) / ನಾ. ಡಿಸೋಜ | 80/– |
| 20. | *ತೊಟ್ಟಿಲು (ಕಾದಂಬರಿ) / ಮೊಗಳ್ಳಿ ಗಣೇಶ್ | 120/– |
| 21. | *ಗಾನ್ ವಿತ್ ದ ವಿಂಡ್ (ಕಾದಂಬರಿ) / ಮಾರ್ಗರೆಟ್ ಮಿಶೆಲ್, ಅನು: ಶ್ಯಾಮಲಾ ಮಾಧವ | 250/– |
| 22. | ಶಬರಿ (ಕಾದಂಬರಿ) / ಬರಗೂರು ರಾಮಚಂದ್ರಪ್ಪ | 195/– |
| 23. | ಅಘೋರಿಗಳ ನಡುವೆ (ಕಾದಂಬರಿ) / ಸುರೇಶ್ ಸೋಮಪುರ, ಅನು: ಎಂ.ವಿ. ನಾಗರಾಜರಾವ್ | 120/– |

*ಪ್ರತಿಗಳು ಲಭ್ಯವಿಲ್ಲ



| | | |
|---|---|---|
| 24. | ಉದಯರಾಗ (ಕಾದಂಬರಿ) / ಅ.ನ.ಕೃ. | 80/– |
| 25. | *ಪಿಂಜರ್ (ಕಾದಂಬರಿ) / ಅಮೃತಾ ಪ್ರೀತಂ ಅನು: ಎಲ್.ಸಿ. ಸುಮಿತ್ರಾ | 60/– |
| 26. | *ಕಿರೀಟ (ಕಾದಂಬರಿ) / ಮೊಗಳ್ಳಿ ಗಣೇಶ್ | 80/– |
| 27. | ಶಿಖರಸೂರ್ಯ (ಕಾದಂಬರಿ) / ಚಂದ್ರಶೇಖರ ಕಂಬಾರ | 395/– |
| 28. | ಫ್ರಾಂಕಿನ್‌ಸ್ಟೈನ್ (ಕಾದಂಬರಿ) / ಮೇರಿಶೆಲ್ಲಿ / ಅನು: ಶಾಮಲಾ ಮಾಧವ | 95/– |
| 29. | *ಯಾಮಿನಿ (ಕಾದಂಬರಿ) / ಜೋಗಿ | 80/– |
| 30. | ಕಪಿಲಿಪಿಸಾರ (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ | 130/– |
| 31. | ಚಿಟ್ಟೆ ಹೆಜ್ಜೆ ಜಾಡು (ಕಾದಂಬರಿ) / ಜೋಗಿ | 80/– |
| 32. | *ಮಯೂರ (ಕಾದಂಬರಿ) / ದೇವುಡು | 130/– |
| 33. | *ಸಾವಿರ ಪಕ್ಷಿಗಳು (ಕಾದಂಬರಿ)/ಮೂಲ: ಯಸುನಾರಿ ಕವಬಾಟ/ಅನು: ಟಿ.ಎನ್. ಕೃಷ್ಣರಾಜು | 95/– |
| 34. | ಚಿತಾದಂತ (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ | 150/– |
| 35. | ಮಿಥ್ಯ (ಕಾದಂಬರಿ) / ಗೀತಾ ಬಿ.ಯು. | 95/– |
| 36. | *ಎಣ್ಮಕಜೆ (ಕಾದಂಬರಿ) / ಮೂಲ: ಅಂಬಿಕಾಸುತನ್ ಮಾಂಗಾಡ್ / ಅನು: ಬಾಲಕೃಷ್ಣ ಹೊಸಂಗಡಿ | 150/– |
| 37. | ಮಾಯಾ ಕಿನ್ನರಿ (ಕಾದಂಬರಿ) / ಜೋಗಿ | 70/– |
| 38. | *ನದಿಯ ನೆನಪಿನ ಹಂಗು (ಕಾದಂಬರಿ) / ಜೋಗಿ | 150/– |
| 39. | ಶೋಧ (ಕಾದಂಬರಿ) / ಸಿ.ಎನ್. ರಾಮಚಂದ್ರನ್ | 50/– |
| 40. | *ಗುಡ್ ಅರ್ತ್ (ಕಾದಂಬರಿ)/ಮೂಲ: ಪರ್ಲ್ ಎಸ್. ಬಕ್/ಪಾರ್ವತಿ ಜಿ. ಐತಾಳ್ | 195/– |
| 41. | *ಊರ್ಮಿಳಾ (ಕಾದಂಬರಿ) / ಜೋಗಿ | 95/– |
| 42. | ಎದೆಗಾರಿಕೆ (ಕಾದಂಬರಿ) / ಅಗ್ನಿ ಶ್ರೀಧರ್ | 50/– |
| 43. | *ಅಪ್ಪನ ಪರಪಂಚ (ಒಬ್ಬ ಅನಾಮಿಕ ಹಳ್ಳಿಗನ ಕಥೆ) / ಲಕ್ಷ್ಮಣ ಕೊಡಸೆ | 70/– |
| 44. | ಏಳು ರೊಟ್ಟಿಗಳು (ರೋಚಕ ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ | 95/– |
| 45. | ಸಿಂಗಾರೆವ್ವ ಮತ್ತು ಅರಮನೆ (ಕಾದಂಬರಿ) / ಚಂದ್ರಶೇಖರ ಕಂಬಾರ | 130/– |
| 46. | *ಕಾಯಕ ಕೈಲಾಸ (ಸಾಮಾಜಿಕ ಕಾದಂಬರಿ) / ಸುನಂದಾ ಬೆಳಗಾಂವಕರ | 295/– |
| 47. | ಕರಿಮಾಯಿ (ಕಾದಂಬರಿ) / ಚಂದ್ರಶೇಖರ ಕಂಬಾರ | 150/– |
| 48. | ಮೂರು ಹೆಣ್ಣು ಐದು ಜಡೆ (ಕಾದಂಬರಿ) / ಬೀchi | 120/– |
| 49. | ಕಾಮಂಣ (ಕಾದಂಬರಿ) / ಬೀchi | 150/– |
| 50. | ಐತರೇಯ ಮಹಾಪುತ್ರ (ಪೌರಾಣಿಕ ಕಾದಂಬರಿ) / ಎಂ.ಎಸ್. ತಿಮ್ಮಪ್ಪ | 150/– |
| 51. | ಪ್ರೀತಿ ಮೃತ್ಯು ಭಯ (ಕಾದಂಬರಿ) / ಯು.ಆರ್. ಅನಂತಮೂರ್ತಿ | 120/– |

52. ನಾಸು (ಸಾಮಾಜಿಕ ಕಾದಂಬರಿ) / ಸುನಂದಾ ಬೆಳಗಾಂವಕರ 250/–
53. ಗುರುವಾಯನಕೆರೆ (ಕಾದಂಬರಿ) / ಜೋಗಿ 120/–
54. ಮೂಕ ಧಾತು (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ 195/–
55. *ಅಜ್ಞಾತನೊಬ್ಬನ ಆತ್ಮಚರಿತ್ರೆ (ಕಾದಂಬರಿ) / ಕೃಷ್ಣಮೂರ್ತಿ ಹನೂರು 150/–
56. ಕನಕ ಮುಸುಕು (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ 150/–
57. *ದೇವರ ಹುಚ್ಚು (ಕಾದಂಬರಿ) / ಜೋಗಿ 95/–
58. ಚಕ್ರಾಯಣ (ಕಾದಂಬರಿ) / ಇಂದಿರಾತನಯ 150/–
59. ಮಂತ್ರಶಕ್ತಿ (ಕಾದಂಬರಿ) / ಇಂದಿರಾತನಯ 150/–
60. ಶಕ್ತಿಪೂಜೆ (ಕಾದಂಬರಿ) / ಇಂದಿರಾತನಯ 150/–
61. ಸೇಡಿನಕಿಡಿ (ಕಾದಂಬರಿ) / ಇಂದಿರಾತನಯ 150/–
62. ಪೂಜಾತಂತ್ರ (ಕಾದಂಬರಿ) / ಇಂದಿರಾತನಯ 150/–
63. ಚಿಕ್ಕಪ್ಪ (ಕಾದಂಬರಿ) / ಜೋಗಿ 120/–
64. ರಾಜಬಲಿ (ಕಾದಂಬರಿ) / ಸತ್ಯಕಾಮ 95/–
65. ಅರ್ಧದಾರಿ (ಕಾದಂಬರಿ) / ಸತ್ಯಕಾಮ 80/–
66. ಕೃಷ್ಣಾರ್ಪಣ (ಕಾದಂಬರಿ) / ಸತ್ಯಕಾಮ 80/–
67. ಕಪಿಲ ವಸ್ತು (ಕಾದಂಬರಿ) / ಸತ್ಯಕಾಮ 95/–
68. ರಾಜಕ್ರೀಡೆ (ಕಾದಂಬರಿ) / ಸತ್ಯಕಾಮ 225/–
69. ಜೀಕೆ ಮಾಸ್ತರರ ಪ್ರಣಯ ಪ್ರಸಂಗ (ಕಾದಂಬರಿ) / ಚಂದ್ರಶೇಖರ ಕಂಬಾರ 50/–
70. ದೊಡ್ಡ ಕಾಡಿನಲ್ಲಿ ಪುಟ್ಟ ಮನೆ (ಕಾದುಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 120/–
71. ಹುಲ್ಲುಗಾವಲಿನಲ್ಲಿ ಪುಟ್ಟಮನೆ (ಕಾದುಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 170/–
72. ರೈತರ ಹುಡುಗ (ಕಾದಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 170/–
73. ಪ್ಲಂ ನದಿಯ ತೀರದಲ್ಲಿ (ಕಾದಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 170/–
74. ಸಿಲ್ವರ್ ಲೇಕ್ ದಡದಲ್ಲಿ (ಕಾದುಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 170/–
75. ಚಳಿಯ ಸುಳಿಯಲ್ಲಿ (ಕಾದಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 195/–
76. ಹುಲ್ಲುಗಾವಲಿನಲ್ಲಿ ಪುಟ್ಟ ಪಟ್ಟಣ (ಕಾದುಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 170/–
77. ಆ ಸೊಗಸಿನ ಬಂಗಾರದ ದಿನಗಳು (ಕಾದಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಎಸ್. ಅನಂತನಾರಾಯಣ 195/–
78. ಮೊದಲ ನಾಲ್ಕು ವರ್ಷಗಳು (ಕಾದಂಬರಿ) / ಮೂ: ಲಾರಾ ಇಂಗಲ್ಸ್ ವೈಲ್ಡರ್/ಅನು: ಕೆ.ಪಿ. ಈಶಾನ್ಯೆ 120/–
79. ಚೈತ್ರ ವೈಶಾಖ ವಸಂತ (ಕಾದಂಬರಿ) / ಜೋಗಿ 120/–



80. ಶಿಲಾಕುಲ ವಲಸೆ (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ 225/–
81. *ತಬ್ಬಲಿಗಳು (ಕಾದಂಬರಿ) / ರಾವಬಹದ್ದೂರ 195/–
82. *ವೃಂದಾವನ (ಕಾದಂಬರಿ) / ರಾವಬಹಾದ್ದೂರ 195/–
83. ಆಡುಕಳ (ಕಾದಂಬರಿ) / ಶ್ರೀಧರ ಬಳಗಾರ 150/–
84. ತೊಟ್ಟಿಕ್ಕುತ್ತಲೇ ಇದೆ ನೆತ್ತರು / ಅಗ್ನಿ ಶ್ರೀಧರ್ 350/–
85. ದಿ ಮೂನ್ ಈಸ್ ಡೌನ್ (ಕಾದಂಬರಿ)/ಮೂಲ: ಜಾನ್ ಸ್ಟೈನ್‌ಬೆಕ್/ಅನು. ಸು. ಕೃಷ್ಣ ನೆಲ್ಲಿ 120/–
86. ಅಡಗೂಲಜ್ಜಿ (ಕಾದಂಬರಿ) / ಬರಗೂರು ರಾಮಚಂದ್ರಪ್ಪ 90/–
87. ಗಾಳಿಗೆ ಬಿದ್ದ ಚಂದ್ರನ ತುಂಡುಗಳು (ಕಾದಂಬರಿ) / ಎಸ್. ಸುರೇಂದ್ರನಾಥ್ 95/–
88. ಮನ್ವಂತರ (ಕಾದಂಬರಿ) / ವಸುಮತಿ ಉಡುಪ 225/–
89. ಕರಿನೀರು (ಕಾದಂಬರಿ) / ಡಾ. ಲತಾ ಗುತ್ತಿ 295/–
90. ಕೊನೆಯ ಕೊಡುಗೆ / ಅನು: ಎ. ನರಸಿಂಹ ಭಟ್ಟ 95/–
91. ಶಿವನ ಡಂಗುರ (ಕಾದಂಬರಿ) / ಡಾ. ಚಂದ್ರಶೇಖರ ಕಂಬಾರ 225/–
92. ವಿರಹದ ಸಂಕ್ಷಿಪ್ತ ಪದಕೋಶ (ಕಾದಂಬರಿ) / ಜೋಗಿ 95/–
93. ಪಡುಕಡಲ ತಡಿಯಲ್ಲಿ (ಕಾದಂಬರಿ) / ಡಾ। ಪಾರಂಪಳ್ಳಿ ವಿಷ್ಣುಮೂರ್ತಿ ಐತಾಳ್ 195/–
94. ಭವಾನಿಪುರ (ಕಾದಂಬರಿ) / ಮೂಲ: ಶಶಿ ದೇಶಪಾಂಡೆ / ಅನು: ವಿಜಯಾ ಕರ್ಣೇಕಲ್ 295/–
95. ಡ್ರಾಕುಲ (ಕಾದಂಬರಿ) / ಮೂಲ: ಬ್ರಾಮ್ ಸ್ಟೋಕರ್/ಅನು: ವಾಸುದೇವರಾವ್ 295/–
96. ಇಷ್ಟಕಾಮ್ಯ (ಕಾದಂಬರಿ) / ದೊಡ್ಡೇರಿ ವೆಂಕಟಗಿರಿರಾವ್ 150/–
97. ಬೆಂಗಳೂರು (ಕಾದಂಬರಿ) / ಜೋಗಿ 130/–
98. ಗಾಡ್ ಫಾದರ್ (ಕಾದಂಬರಿ) / ಮೂ: ಮಾರಿಯೋ ಪುಂಜೋ/ಅನು: ಎಂ.ವಿ. ನಾಗರಾಜರಾವ್ 250/–
99. ನಾಲ್ವರ ಸಂಕೇತ (ಕಾದಂಬರಿ) / ಮೂ: ಸರ್ ಆರ್ಥರ್ ಕಾನನ್ ಡಾಯ್ಲ್ / ಅನು: ವಾಸುದೇವರಾವ್ 150/–
100. ದಿ ಫಾಕ್ಸ್ (ಗುಳ್ಳೆನರಿ) (ಕಾದಂಬರಿ) / ಮೂ: ಡಿ.ಎಚ್. ಲಾರೆನ್ಸ್ / ಅನು: ಜಿ.ಎನ್. ರಂಗನಾಥ ರಾವ್ 120/–
101. *ವಿಕಲ್ಪ (ಎರಡು ಕಿರು ಕಾದಂಬರಿಗಳು) / ಕೆ. ಸತ್ಯನಾರಾಯಣ 95/–
102. ತೆಂಕನಿಡಿಯೂರಿನ ಕುಳುವಾರಿಗಳು (ಕಾದಂಬರಿ) / ಡಾ। ವ್ಯಾಸರಾವ್ ನಿಂಜೂರ್ 225/–
103. ವೈವಸ್ವತ (ಕಾದಂಬರಿ) / ರೇಖಾ ಕಾಖಂಡಕಿ 350/–
104. ಬಳ್ಳಿಕಾಳ ಬೆಳ್ಳಿ (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ 225/–
105. ನೀನಂದ್ರೆ ಇಷ್ಟ ಕಣೋ.. (ಹಾಸ್ಯ ಕಾದಂಬರಿ) / ಎಂ.ಎಸ್. ನರಸಿಂಹಮೂರ್ತಿ 225/–
106. ಕೆಂಪು ಕಳವೆ (ಕಾದಂಬರಿ) / ಕೆ.ಟಿ. ಗಟ್ಟಿ 325/–
107. ಗೌತಮ ಬುದ್ಧ (ಚಾರಿತ್ರಿಕ ಕಾದಂಬರಿ) / ಸು. ರುದ್ರಮೂರ್ತಿ ಶಾಸ್ತ್ರಿ 395/–

| | | |
|---|---|---|
| 108. | ಅವದಾನ (ಕಾದಂಬರಿ) / ದೊಡ್ಡೇರಿ ವೆಂಕಟಗಿರಿರಾವ್ | 150/– |
| 109. | ಸಂಪ್ರದಾನ (ಕಾದಂಬರಿ) / ದೊಡ್ಡೇರಿ ವೆಂಕಟಗಿರಿರಾವ್ | 150/– |
| 110. | ದೃಷ್ಟಿದಾನ (ಕಾದಂಬರಿ) / ದೊಡ್ಡೇರಿ ವೆಂಕಟಗಿರಿರಾವ್ | 150/– |
| 111. | ಹಿಜಾಬ್ (ಕಾದಂಬರಿ) / ಗುರುಪ್ರಸಾದ ಕಾಗಿನೆಲೆ | 295/– |
| 112. | ಕುಡ್ವಲ್ ಭೂತ (ಕಾದಂಬರಿ) / ಅನು ಬೆಳ್ಳೆ | 150/– |
| 113. | ಕಲ್ಲು ಕಂಬವೇರಿದ ಹುಂಬ (ಮಿನಿ ಕಾದಂಬರಿ) / ಬಿ. ಜನಾರ್ದನ ಭಟ್ | 95/– |
| 114. | ಶ್ರೀ ಚಾಮುಂಡೇಶ್ವರಿ ಭವನ (ಕಾದಂಬರಿ) ಡಾ. ವ್ಯಾಸರಾವ್ ನಿಂಜೂರ್ | 295/– |
| 115. | ಮುಕ್ಕು ಚಿಕ್ಕಿಯ ಕಾಳು (ಕಾದಂಬರಿ) / ಜಯಲಕ್ಷ್ಮಿ ಪಾಟೀಲ್ | 130/– |
| 116. | ಯಾತ್ರೆ (ಕಾದಂಬರಿ) / ಶೂದ್ರ ಶ್ರೀನಿವಾಸ್ | 295/– |
| 117. | ಸಲಾಮ್ ಬೆಂಗಳೂರು (ಕಾದಂಬರಿ) / ಜೋಗಿ | 120/– |
| 118. | ರಕ್ತ ಸಿಕ್ತ ರತ್ನ (ಕಾದಂಬರಿ) / ಡಾ. ಕೆ.ಎನ್. ಗಣೇಶಯ್ಯ | 350/– |
| 119. | ಪುನರ್ವಸು (ಕಾದಂಬರಿ) / ಡಾ। ಗಜಾನನ ಶರ್ಮಾ | 450/– |
| 120. | ಸಂಧಿಕಾಲ (ಕಾದಂಬರಿ) / ವಸುಮತಿ ಉಡುಪ | 170/– |
| 121. | ಕರ್ಮಣ್ಯೇವಾಧಿಕಾರಸ್ತೇ (ಕಾದಂಬರಿ) / ಕೆ.ಟಿ. ಗಟ್ಟಿ | 150/– |
| 122. | ಎಂಟೆಬೆ (ಕಾದಂಬರಿ) / ಸಂತೋಷಕುಮಾರ ಮೆಹೆಂದಳೆ | 195/– |
| 123. | ಅಬ್ರಾಹ್ಮಣ (ಕಾದಂಬರಿ) / ಕೆ.ಟಿ. ಗಟ್ಟಿ | 250/– |
| 124. | ಇತಿಹಾಸದ ಮೊಗಸಾಲೆಯಲ್ಲಿ (ಕಾದಂಬರಿ) / ಕೆ.ಟಿ. ಗಟ್ಟಿ | 195/– |
| 125. | ಗೆರೆ (ಕಾದಂಬರಿ) / ಡಾ॥ ನಾ. ದಾಮೋದರ ಶೆಟ್ಟಿ | 150/– |
| 126. | ವಿಳಾಸ ಬದಲಾಗುತ್ತಿದೆ (ಕಾದಂಬರಿ) / ವಸುಮತಿ ಉಡುಪ | 95/– |
| 127. | ಬೂಬರಾಜ ಸಾಮ್ರಾಜ್ಯ (ಕಾದಂಬರಿ) / ಬಿ. ಜನಾರ್ದನ ಭಟ್ | 250/– |
| 128. | ಕಾಲಯಾನ (ಕಾದಂಬರಿ) / ಕೃಷ್ಣಮೂರ್ತಿ ಹನೂರು | 120/– |
| 129. | ಪುಚ್ಚೆ (ಕಾದಂಬರಿ) / ಜೋಗಿ | 120/ |
| 130. | ವೆನಿಸ್ಸಿನಲ್ಲಿ ಸಾವು (ಕಾದಂಬರಿ) / ಮೂ: ಥಾಮಸ್‌ಮಾನ್/ಅನು: ಎಸ್. ದಿವಾಕರ್ | 95/– |
| 131. | ಚೆನ್ನಭೈರಾದೇವಿ (ಕಾದಂಬರಿ) / ಡಾ। ಗಜಾನನ ಶರ್ಮ | 395/– |
| 132. | ಕಾಲಕೋಶ (ಕಾದಂಬರಿ) / ಶಶಿಧರ ಹಾಲಾಡಿ | 160/– |
| 133. | ಅಣು (ಕಾದಂಬರಿ) / ಕೇಶವರೆಡ್ಡಿ ಹಂದ್ರಾಳ | 120/– |
| 134. | ಕಾಯ (ಕಾದಂಬರಿ) / ಗುರುಪ್ರಸಾದ ಕಾಗಿನೆಲೆ | 330/– |
| 135. | ಅಕ್ಕಮಹಾದೇವಿ (ಕಾದಂಬರಿ) / ಸು. ರುದ್ರಮೂರ್ತಿ ಶಾಸ್ತ್ರಿ | 150/– |